ಶುಕ್ರವಾರ, ನವೆಂಬರ್ 17, 2023 | ₹ 7.00

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ

ವಾರಾಣಸಿಯಲ್ಲಿ ನಡೆದ ಮ್ಯೂಸಿಕ್ ಆಲ್ಬಮ್‌ನ ಪ್ರಚಾರ ಕಾರ್ಯಕ್ರಮದಲ್ಲಿ ನಟ ಸನ್ನಿ ಲಿಯೋನ್ ಪಾಲ್ಗೊಂಡಿದ್ದರು

नैनं छिन्दन्ति शस्त्राणि नैनं दहति पावकः ।
न चैनं क्लेदयन्त्यापो न शोषयति मारुतः ॥

~ Endless Inspiration. Matchless legacy ~

Hon'ble Saharasri Ji

(1948 – 2023)

Sahara India Pariwar expresses its collective sense of grief at the loss of its beloved Chief Guardian, Hon'ble 'Saharasri' Ji, who left for his heavenly abode on 14th November, 2023.

The strength of his character, the influence of his personality and the power of his presence have all left a lasting memory. As he passes from the turmoil of life to eternal tranquillity, he leaves behind a legacy that remains as a profound and precious imprint in the hearts of billions to whom his life brought hope and encouragement.

The man who enlightened us to the supremacy of human emotions over business interests, will continue to guide us, inspire us to new frontiers, for he exemplified human spirit in its true essence - unconquerable and supremely courageous.

SAHARA INDIA PARIWAR

WhatsApp number : +91 98399 90501 | Email Id : contact@sahara.in

CHHABI 202311-01/Si-En

HEARZAP™
Festive Season
is here with
BEST
HEARING
HEALTH
FOR ALL!
ಚಿಂತೆ ಮುಕ್ತ ಶ್ರವಣ ಸಾಧನ ಪ್ರಯೋಗ
ಖಾತರಿಪಡಿಸಿದ ರಿಯಾಯಿತಿ
ಹೆಚ್ಚಿನ ವಾರಂಟಿ
HUGE DISCOUNTS
USE COUPON CODE:
DIWALI
PHILIPS
Authorized dealer
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ
PHILIPS
PHILIPS
ಅತ್ಯಾಧುನಿಕ ಶ್ರವಣ ಸಾಧನಗಳು ಲಭ್ಯವಿದೆ
PHILIPS
REXTON
ತಕ್ಷಣ ನಿಮ್ಮ ಮನೆಯಲ್ಲಿ ಶ್ರವಣ
ಪರೀಕ್ಷೆಗಾಗಿ ಬುಕ್ ಮಾಡಿ
9659 455 455
ಬೆಂಗಳೂರಿನಲ್ಲಿ ನಮ್ಮ ಶಾಖೆಗಳು
ಎಚ್‌ಎಸ್‌ಆರ್ ಲೇಔಟ್ • ಇಂದಿರಾ ನಗರ • ಜಯ ನಗರ • ಕಲ್ಯಾಣ ನಗರ
ನಾಗರಬಾವಿ • ಆರ್‌ಆರ್ ನಗರ • ಸದಾಶಿವ ನಗರ
Google Play
App Store
ಕರ್ನಾಟಕ | ಮಹಾರಾಷ್ಟ್ರ | ಕೇರಳ | ತಮಿಳುನಾಡು | ಆಂಧ್ರ ಪ್ರದೇಶ | ತೆಲಂಗಾಣ | ಪಶ್ಚಿಮ ಬಂಗಾಳ | ಬಿಹಾರ | ಜಾರ್ಖಂಡ್

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಧರ್ಮಣ್ಣನಿಗೆ ರಾಜಯೋಗ
ನಟ ಧರ್ಮಣ್ಣ ಕಡೂರು ಸಂದರ್ಶನ

ಆಳ-ಅಗಲ
ಪ್ರಯಾಣಿಕರಿದ್ದಾರೆ, ಬಸ್ಸೇ ಇಲ್ಲ

ಇಂದು ವಿರೋಧ ಪಕ್ಷದ ನಾಯಕನ ಆಯ್ಕೆ 8

ಮೃತ ವ್ಯಕ್ತಿಯಿಂದ ಸಾಲ ವಸೂಲಿಗೆ ಅರ್ಜಿ! 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,982 ▲	19,765 ▲	₹62,280 (ಬೆಂಗಳೂರು) ▼	₹74,200 (ಬೆಂಗಳೂರು) ▲	83.23 ▼

UNIVERSAL COACHING CENTRE
VIJAYANAGAR, BENGALURU
KAS
PRELIMS BATCH
STARTS SOON
NOTIFICATION COMING SHORTLY
HURRY UP REGISTER NOW
CONTACT:
9686664983/6366816611

ಒಳ ಪುಟ
‘ವಿಜಯೇಂದ್ರಗೆ ಕಾಲವೇ ಉತ್ತರ ಕೊಡಲಿದೆ’ 8

ಪಡಿತರ ಚೀಟಿ: ಸಂಖ್ಯೆ ಹೆಚ್ಚುವಂತಿಲ್ಲ, ಹಳೆಯದು ರದ್ದಾದರಷ್ಟೇ ಹೊಸದು

• ಬಸವರಾಜ ಹವಾಲ್ದಾರ

ಬಾಗಲಕೋಟೆ: ‘ಹೊಸ ಪಡಿತರ ಚೀಟಿಗಳನ್ನು ವಿತರಿಸಿದಷ್ಟೇ ಪ್ರಮಾಣದಲ್ಲಿ ಹಳೆಯ ಪಡಿತರ ಚೀಟಿಗಳನ್ನು ರದ್ದುಪಡಿಸಬೇಕು. ಒಟ್ಟಾರೆ ಈಗಿರುವ ಪಡಿತರ ಚೀಟಿಗಳ ಸಂಖ್ಯೆ ಹೆಚ್ಚಿಸುವಂತಿಲ್ಲ’ ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಆದೇಶವು ಅಧಿಕಾರಿಗಳನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ರಾಜ್ಯದಲ್ಲಿ 10.88 ಲಕ್ಷ ಅಂತ್ಯೋದಯ ಮತ್ತು 1.16 ಕೋಟಿ ಬಿಪಿಎಲ್ ಕಾರ್ಡ್‌ದಾರರು ಇದ್ದಾರೆ. ‘ಹೊಸ ಬಿಪಿಎಲ್ ಪಡಿತರ ಚೀಟಿಗಾಗಿ 2.95 ಲಕ್ಷ ಅರ್ಜಿಗಳು ಸಲ್ಲಿಕೆಯಾಗಿವೆ’ ಎಂದು ಸಚಿವ ಕೆ.ಎಚ್. ಮುನಿಯಪ್ಪ ಹೇಳಿಕೆ ನೀಡಿದ ಬೆನ್ನಲ್ಲೇ ಇಲಾಖೆಯ ಆದೇಶ ಹೊರಬಂದಿದೆ.

ಒಟ್ಟು 2.95 ಲಕ್ಷ ಪೈಕಿ 2.78 ಲಕ್ಷ ಅರ್ಜಿಗಳ ಸ್ಥಳ ಪರಿಶೀಲನೆ ನಡೆದಿದೆ. 2.28 ಲಕ್ಷ ಅರ್ಜಿಗಳು ಅರ್ಹವೆಂದು ಕಂಡು ಬಂದಿವೆ. ಬೆಳಗಾವಿ ಜಿಲ್ಲೆಯಲ್ಲಿ ಅತಿ ಹೆಚ್ಚು 27,486 ಅರ್ಜಿ ಸಲ್ಲಿಕೆಯಾಗಿವೆ.

ತಹಶೀಲ್ದಾರರಿಂದ ಖುದ್ದು ಪರಿಶೀಲನೆ

ಆರು ತಿಂಗಳಿನಿಂದ ಪಡಿತರ ಪಡೆಯದಿರುವ ಕಾರಣಕ್ಕೆ ಒಂದು ವೇಳೆ ಪಡಿತರ ಚೀಟಿ ರದ್ದಾದರೆ, ಅದನ್ನು ಮರುಪರಿಶೀಲಿಸುವಂತೆ ಚೀಟಿದಾರರು ಅರ್ಜಿ ಸಲ್ಲಿಸಬಹುದು. ಅರ್ಜಿದಾರನ ಮನೆಗೆ ತಹಶೀಲ್ದಾರ್ ಖುದ್ದು ಭೇಟಿ ನೀಡಿ, ಪರಿಶೀಲಿಸಬೇಕು. ಅವರು ಸಲ್ಲಿಸುವ ವರದಿ ಆಧಾರದ ಮೇಲೆ ಪಡಿತರ ಚೀಟಿ ಮರಳಿ ಪಡೆಯಬಹುದು.

ಯಾರದ್ದು ರದ್ದು: ಸತತ 6 ತಿಂಗಳಿನಿಂದ ಪಡಿತರ ಪಡೆಯದ ಅಂತ್ಯೋದಯ ಹಾಗೂ ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸಲು ಆದ್ಯತೆ ಮೇರೆಗೆ ಸೂಚಿಸಲಾಗಿದೆ. ಅನರ್ಹರೂ ಪಡಿತರ ಚೀಟಿಗಳನ್ನು ಪಡೆದ ಬಗ್ಗೆ ದೂರುಗಳಿದ್ದು, ಪರಿಶೀಲಿಸಿ ಅಂತಹವರ ಕಾರ್ಡ್‌ಗಳನ್ನು ರದ್ದುಪಡಿಸಲು ತಿಳಿಸಲಾಗಿದೆ.

ರಾಜ್ಯದಲ್ಲಿರುವ ಒಟ್ಟು ಪಡಿತರ ಚೀಟಿದಾರರ ಪೈಕಿ 14,826 ಅಂತ್ಯೋದಯ ಮತ್ತು 3.32 ಲಕ್ಷ ಬಿಪಿಎಲ್ ಕಾರ್ಡ್ ಹೊಂದಿದವರು ಸತತ 6 ತಿಂಗಳಿಂದ ಆಹಾರ ಧಾನ್ಯ ಪಡೆಯದಿರುವುದು ಗೊತ್ತಾಗಿದೆ. ಬೆಳಗಾವಿ ಜಿಲ್ಲೆಯೊಂದರಲ್ಲಿಯೇ ಪಡಿತರ ಪಡೆಯದಿರುವವರ ಸಂಖ್ಯೆ 37,880 ಇದೆ.

ಬಿಪಿಎಲ್ ಹಾಗೂ ಅಂತ್ಯೋದಯ ಪಡಿತರ ಚೀಟಿಗಳ ಆಧಾರದ ಮೇಲೆಯೇ ಗೃಹಲಕ್ಷ್ಮಿ, ಆಯುಷ್ಮಾನ್ ಆರೋಗ್ಯ ಚಿಕಿತ್ಸೆಯ ₹5 ಲಕ್ಷ ವೆಚ್ಚ, ವಿವಿಧ ಇಲಾಖೆ, ನಿಗಮಗಳ ಫಲಾನುಭವಿಗಳ ಆಯ್ಕೆ, ಸಾಲ ಸೌಲಭ್ಯ ನೀಡಲಾಗುತ್ತದೆ. ಪಡಿತರ ಚೀಟಿ ಸಂಖ್ಯೆ ಹೆಚ್ಚಳವಾದರೆ, ಸರ್ಕಾರಕ್ಕೂ ಹೊರೆಯಾಗುವ ಕಾರಣ ಪಡಿತರ ಕಾರ್ಡ್‌ಗಳ ಸಂಖ್ಯೆ ಹೆಚ್ಚಳವಾಗದಂತೆ ನೋಡಿಕೊಳ್ಳಲು ಸೂಚಿಸಲಾಗಿದೆ.

‘6 ತಿಂಗಳಿನಿಂದ ಪಡಿತರ ಪಡೆಯದ ಅಂತ್ಯೋದಯ ಮತ್ತು ಬಿಪಿಎಲ್ ಪಡಿತರ ಚೀಟಿಗಳನ್ನು ರದ್ದುಗೊಳಿಸುವ ಬಗ್ಗೆ ಚಿಂತನೆ ನಡೆದಿದೆ’ ಎಂದು ಆಹಾರ, ನಾಗರಿಕ ಪೂರೈಕೆ ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಜಂಟಿ ನಿರ್ದೇಶಕ ಚನ್ನಬಸಪ್ಪ ಕೊಡ್ಲಿ ತಿಳಿಸಿದರು.

ಯತೀಂದ್ರ ವಿಡಿಯೊ ರಹಸ್ಯ?

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮಗ, ಮಾಜಿ ಶಾಸಕ ಡಾ. ಯತೀಂದ್ರ ಅವರು ವರುಣ ವಿಧಾನಸಭಾ ಕ್ಷೇತ್ರದ ಚಟ್ನಹಳ್ಳಿಯಲ್ಲಿ ಮಾತನಾಡುತ್ತಿರುವ ವಿಡಿಯೊ ರಾಜಕೀಯ ವಾಕ್ಸಮರಕ್ಕೆ ಕಾರಣವಾಗಿದೆ. ವಿಡಿಯೊವನ್ನು ಗುರುವಾರ ಬೆಳಿಗ್ಗೆ ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ, ‘ವರ್ಗಾವಣೆ ದಂಧೆಗೆ ಇದಕ್ಕಿಂತ ಸಾಕ್ಷ್ಯ ಬೇಕೇ’ ಎಂದು ಕೆಣಕಿದ್ದರು. ಕೆಲ ಹೊತ್ತಿನಲ್ಲಿ ಸಿದ್ದರಾಮಯ್ಯ ಸ್ಪಷ್ಟನೆಯನ್ನೂ ನೀಡಿದ್ದರು. ಸಚಿವರು ತಮ್ಮ ನಾಯಕನ ಬೆಂಬಲಕ್ಕೆ ನಿಂತಿದ್ದರೆ, ವಿರೋಧ ಪಕ್ಷಗಳ ನಾಯಕರು ಯತೀಂದ್ರ ಮೇಲೆ ಮುಗಿಬಿದ್ದಿದ್ದಾರೆ

ವರ್ಗಾವಣೆ ದಂಧೆಗೆ ಸಾಕ್ಷ್ಯ ಬೇಕಾ: ಕುಮಾರಸ್ವಾಮಿ

ಬೆಂಗಳೂರು: ‘ತಮ್ಮ ಮತ್ತು ಪುತ್ರ ಯತೀಂದ್ರ ಅವರ ನಡುವಣ ಸಂಭಾಷಣೆ ಕುರಿತು ಸಿದ್ದರಾಮಯ್ಯ ತನಿಖೆಗೆ ಆದೇಶಿಸಿ, ಪ್ರಾಮಾಣಿಕರು ಎನ್ನುವುದನ್ನು ಸಾಬೀತು ಮಾಡಲಿ, ಇಲ್ಲವೇ ರಾಜೀನಾಮೆ ನೀಡಲಿ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದರು.

‘ಅಪ್ಪ–ಮಕ್ಕಳ ಸಂಭಾಷಣೆಯಲ್ಲಿ ಪ್ರಸ್ತಾಪ ಮಾಡಿರುವ ಮುಖ್ಯಮಂತ್ರಿ ವಿಶೇಷ ಕರ್ತವ್ಯಾಧಿಕಾರಿ ಮಹದೇವ್ ಸೇರಿದಂತೆ ಕೆಲವರನ್ನು ಎತ್ತುವಳಿಗಾಗಿಯೇ ನೇಮಿಸಿಕೊಳ್ಳಲಾಗಿದೆ. ಅವರಿಗೂ ಮುಖ್ಯಮಂತ್ರಿ ಕುಟುಂಬಕ್ಕೂ ಏನು ಸಂಬಂಧ? ತಕ್ಷಣ ಅವರನ್ನೆಲ್ಲ ವಜಾ ಮಾಡಬೇಕು’ ಎಂದು ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

‘ತಮ್ಮ ನಡುವೆ ನಡೆದಿರುವುದು ಶಾಲೆಗಳ ಸಿಎಸ್ಆರ್ ನಿಧಿಯ ಹಂಚಿಕೆಯ ಸಂಭಾಷಣೆ ಅಷ್ಟೆ. ವ್ಯವಹಾರದ ಮಾತು ಎನ್ನುವುದನ್ನು ಸಾಬೀತು ಮಾಡಿದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ’ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಆತ್ಮಸಾಕ್ಷಿ ಇದ್ದರೆ ತಕ್ಷಣ ತನಿಖೆ ಮಾಡಿಸಬೇಕು, ಸತ್ಯವನ್ನು ಸಾರ್ವಜನಿಕರ ಮುಂದೆ ತೆರೆದಿಡಬೇಕು’ ಎಂದು ಸಲಹೆ ನೀಡಿದರು.

8ನೇ ಪುಟ ನೋಡಿ

ಕುಮಾರಸ್ವಾಮಿ ತಾನು ಕಳ್ಳ ಪರರ ನಂಬ: ಸಿದ್ದರಾಮಯ್ಯ

‘ಸುಳ್ಳುಕೋರರ ನಂಜಿನ ಆರೋಪಗಳಿಗೆ ವಿವರಣೆ ನೀಡಬೇಕಾದ ಅಗತ್ಯ ಖಂಡಿತ ಇಲ್ಲ. ತಾನು ಕಳ್ಳ, ಪರರ ನಂಬ ಎಂಬಂತೆ, ನಾನು ಸ್ಪಷ್ಟನೆ ನೀಡಿದ ನಂತರವೂ ಕುಮಾರಸ್ವಾಮಿ ತಮ್ಮ ನಾಲಿಗೆ ಹರಿಯಬಿಟ್ಟಿದ್ದಾರೆ’ ಎಂದು ಸಿದ್ದರಾಮಯ್ಯ ಟೀಕಿಸಿದ್ದಾರೆ.

ತಮ್ಮ ಹಾಗೂ ಯತೀಂದ್ರ ನಡುವಣ ಸಂಭಾಷಣೆಗೆ ಸಂಬಂಧಿಸಿ ವರುಣ ಕ್ಷೇತ್ರದ ಐದು ಶಾಲೆಗಳ ಪಟ್ಟಿಯೊಂದನ್ನು ಸಾಮಾಜಿಕ ಜಾಲತಾಣಗಳ ಖಾತೆಗಳಲ್ಲಿ ಹಂಚಿಕೊಂಡಿರುವ ಅವರು, ‘ವರುಣ ಕ್ಷೇತ್ರಕ್ಕೆ ಸಂಬಂಧಿಸಿ ಅಲ್ಲಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾರೋಹಳ್ಳಿ, ಕೀಳನಪುರ, ದೇವಲಾಪುರ ಗ್ರಾಮ ಪಂಚಾಯಿತಿಗಳ ಐದು ಶಾಲೆಗಳ ದುರಸ್ತಿ ಆಗಬೇಕಾದ ಕೊಠಡಿಗಳ ವಿವರದ ಪಟ್ಟಿಯನ್ನು ನನ್ನ ಕಚೇರಿಯ ಜಂಟಿ ಕಾರ್ಯದರ್ಶಿಗೆ ಕಳುಹಿಸಿದ್ದರು. ಅದರ ಬಗ್ಗೆಯೇ ಯತೀಂದ್ರ ನನ್ನ ಜೊತೆ ಮಾತನಾಡಿದ್ದಾರೆ’ ಎಂದು ಸ್ಪಷ್ಟನೆ ನೀಡಿದ್ದಾರೆ.

‘ಕುಮಾರಸ್ವಾಮಿ ಅವರು ಅಕ್ರಮ ವಿದ್ಯುತ್ ಕಳ್ಳತನ ಪ್ರಕರಣದಿಂದ ಗಮನವನ್ನು ಬೇರೆಡೆಗೆ ಸೆಳೆಯಲು ಈ ರೀತಿಯ ಆರೋಪ ಮಾಡುತ್ತಿದ್ದಾರೆ. ನಾನು 1984ರಲ್ಲಿ ಮೊದಲ ಬಾರಿ ಸಚಿವನಾದೆ. ಅಲ್ಲಿಂದ ಈವರೆಗೆ ದುಡ್ಡು ಪಡೆದು ಯಾರನ್ನಾದರೂ ವರ್ಗಾವಣೆ ಮಾಡಿರುವುದನ್ನು ಸಾಬೀತುಪಡಿಸಿದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ’ ಎಂದೂ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.

8ನೇ ಪುಟ ನೋಡಿ

ಹಲೋ ಅಪ್ಪ. . . ಯತೀಂದ್ರ

ಅಹವಾಲು ಸ್ವೀಕರಿಸುವುದರ ಮಧ್ಯೆ ತಮ್ಮ ಮೊಬೈಲಿನಿಂದ ಕರೆ ಮಾಡಿದ ಡಾ. ಯತೀಂದ್ರ

ಹಲೋ ಅಪ್ಪ...
(ಅತ್ತಲಿನಿಂದ ಮಾತು ಕೇಳಿಸಿದ ಬಳಿಕ) ವಿವೇಕಾನಂದನಾ? ಎಲ್ಲಿಗೆ...?
(ಸ್ವಲ್ಪ ಹೊತ್ತು ಮಾತು ಕೇಳಿಸಿಕೊಂಡು) ಇಲ್ಲಪ್ಪ...
ಇದ್ಯಾವುದೂ ಕೊಟ್ಟಿಲ್ಲ. ಯಾರು ಆ ಮಹದೇವ್. ಕೊಡಿ ಅವನಿಗೆ. ಅದಕ್ಕೆ ಹೇಳಿದ್ದು... ಕೊಡಿ ಆ ಮಹದೇವ್‌ಗೆ... ನಾನು ಕೊಟ್ಟಿರೋದೆ ಐದು ಅಲ್ಲಿ. ಕೊಡಿ ಮಹದೇವ್‌ಗೆ.

8ನೇ ಪುಟ ನೋಡಿ

ಯತೀಂದ್ರ ವರುಣದ ಉಸ್ತುವಾರಿ ವಹಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಅವರಿಬ್ಬರ (ಸಿದ್ದರಾಮಯ್ಯ–ಯತೀಂದ್ರ) ಸಂಭಾಷಣೆಗೆ, ಸಣ್ಣ ಪುಟ್ಟ ವಿಷಯಗಳಿಗೆ ಬೇರೆ ಅರ್ಥ ಕಲ್ಪಿಸಬಾರದು

ಎಚ್.ಡಿ. ರೇವಣ್ಣ, ಜೆಡಿಎಸ್ ಶಾಸಕ

ಅಪಾಯಕಾರಿ ಪ್ರಯಾಣ

ಛತ್ ಪೂಜೆಯ ಅಂಗವಾಗಿ ಬಿಹಾರದ ಪಟ್ನಾ ರೈಲುನಿಲ್ದಾಣದಿಂದ ತಮ್ಮ ಊರುಗಳಿಗೆ ತೆರಳಲು ಜನರು ಗುರುವಾರ ರೈಲಿನಲ್ಲಿ ಕಿಕ್ಕಿರಿದು ಪ್ರಯಾಣಿಸಿದರು –ಪಿಟಿಐ ಚಿತ್ರ

ವಿರೋಧ ಪಕ್ಷಗಳ ವಿರುದ್ಧ ‘ಅಸ್ತ್ರ’: ಸಂಪುಟ ನಿರ್ಧಾರ

ಗಣಿ ಅಕ್ರಮ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ಮೇಲೆ ಇರುವ ಪ್ರಕರಣವೂ ಸೇರಿ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದ ಎಲ್ಲ ಪ್ರಕರಣಗಳ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅವಧಿಯನ್ನು 2024ರ ಜೂನ್ 30ರ ವರೆಗೆ ವಿಸ್ತರಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ತನಿಖೆಯ ಪ್ರಗತಿಯನ್ನು ಕಾಲ ಕಾಲಕ್ಕೆ ಪರಿಶೀಲನೆ ನಡೆಸುತ್ತಾರೆ. ಒಟ್ಟು ಎಂಟು ತಿಂಗಳು ವಿಸ್ತರಿಸಿದಂತಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ಅವರು ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಗಣಿಗಾರಿಕೆಯಲ್ಲಿ ನಡೆದ ಅಕ್ರಮಗಳ ತನಿಖೆಗಾಗಿ ಲೋಕಾಯುಕ್ತದಲ್ಲಿ ವಿಶೇಷ ತನಿಖಾ ತಂಡವನ್ನು ರಚಿಸಲಾಗಿತ್ತು. ಇದು ನಿಷ್ಕ್ರಿಯವಾಗಿತ್ತು. ಈ ಬಗ್ಗೆ ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಿತು. ಐದು ವರ್ಷಗಳಲ್ಲಿ 172 ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ತನಿಖೆಯೂ ನಡೆದಿಲ್ಲ. 10 ಕ್ರಿಮಿನಲ್ ಪ್ರಕರಣಗಳು ಬಾಕಿ ಉಳಿದಿವೆ. ಎಂಟು ವರ್ಷಗಳಾದರೂ ಒಂದು ಇಂಚೂ ಮುಂದಕ್ಕೆ ಹೋಗಿಲ್ಲ. ಅದಿರು ಮೌಲ್ಯಮಾಪನ ವರದಿ ಸಲ್ಲಿಸಲಿಲ್ಲ. ದೋಷಾರೋಪಣೆ ಪಟ್ಟಿಯನ್ನೂ ಹಾಕಿಲ್ಲ. ಇವೆಲ್ಲವುಗಳ ಬಗ್ಗೆ ಶೀಘ್ರ ಕ್ರಮವಹಿಸಲು ತೀರ್ಮಾನಿಸಲಾಯಿತು ಎಂದರು.

ಹಿಂದಿನ ಐದು ವರ್ಷದಲ್ಲಿ ಆಡಳಿತಾತ್ಮಕ ಇಚ್ಛಾಶಕ್ತಿ ಇರಲಿಲ್ಲ. ಆದ್ದರಿಂದಲೇ ತನಿಖೆ ನಿಂತು ಹೋಗಿದೆ. ಸಿದ್ದರಾಮಯ್ಯ ಅವರ ಮೊದಲ ಅವಧಿಯಲ್ಲಿ ಸಿಬಿಐ ಏನೂ ಮಾಡದ ಕಾರಣ ಸಿಬಿಐ ಜತೆಗೂ ಸಂಘರ್ಷವಾಗಿತ್ತು. ಸುಮಾರು 50 ಸಾವಿರ ಟನ್ ಅಕ್ರಮ ಗಣಿಗಾರಿಕೆ ಪ್ರಕರಣಗಳನ್ನು ಸಿಬಿಐಗೆ ವಹಿಸಲಾಗಿತ್ತು. ಕೆಲವನ್ನು ನೋಂದಣಿ ಮಾಡಲು ಸಾಧ್ಯವಿಲ್ಲ ಎಂದು ಸಿಬಿಐ ಹೇಳಿತ್ತು. ಆ ಪ್ರಕರಣಗಳನ್ನು ಈಗ ಮರು ಪರಿಶೀಲಿಸಲಾಗುವುದು ಎಂದು ಪಾಟೀಲ ತಿಳಿಸಿದರು.

ಎಚ್‌ಡಿಕೆ ಪ್ರಕರಣವೇನು?: ಶ್ರೀಸಾಯಿ ವೆಂಕಟೇಶ್ವರ ಮಿನರಲ್ಸ್ ಕಂಪನಿಗೆ ಗಣಿಗಾರಿಕೆ ಗುತ್ತಿಗೆ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ 2015ರಲ್ಲಿ ಕುಮಾರಸ್ವಾಮಿ ಅವರನ್ನು ಎಸ್‌ಐಟಿ ವಿಚಾರಣೆ ನಡೆಸಿ ಬಳಿಕ ನಿರೀಕ್ಷಣಾ ಜಾಮೀನಿನ ಮೇಲೆ ಬಿಡುಗಡೆಗೊಳಿಸಿತು. 2007ರಲ್ಲಿ ಮುಖ್ಯಮಂತ್ರಿ ಆಗಿದ್ದ ಕುಮಾರಸ್ವಾಮಿ ನಿಯಮಗಳನ್ನು ಉಲ್ಲಂಘಿಸಿ ಗುತ್ತಿಗೆ ನೀಡಿದ್ದರು ಎಂದು ಆರೋಪಿಸಲಾಗಿತ್ತು.

ಇನ್ನೊಂದು ಸುದ್ದಿ 8

ನೆರವಿಗೆ ಬಾರದ ಕೇಂದ್ರ: ಚರ್ಚೆ

ಬರ ಪರಿಹಾರಕ್ಕೆ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡದಿರುವ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಗಂಭೀರ ಚರ್ಚೆ ನಡೆಯಿತು ಎಂದು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ನೆರವು ಕೊಡುವ ವಿಷಯದಲ್ಲಿ ಕೇಂದ್ರ ಸರ್ಕಾರ ರಾಜಕೀಯ ಮಾಡುತ್ತಿದೆ. ಮುಖ್ಯಮಂತ್ರಿಯವರ ಮನವಿ ಪತ್ರಗಳಿಗೂ ಕೇಂದ್ರ ಸ್ಪಂದಿಸುತ್ತಿಲ್ಲ. ಬಿಜೆಪಿಯ ಸಂಸದರು ಹಣ ಬಿಡುಗಡೆಗೆ ಪ್ರಯತ್ನಿಸದೇ ಬರ ಅಧ್ಯಯನಕ್ಕೆ ಹೋಗಿರುವುದು ವಿಪರ್ಯಾಸ ಎಂಬ ಬಗ್ಗೆಯೂ ಚರ್ಚಿಸಲಾಯಿತು ಎಂದರು.

ವಿ.ವಿ.ಸಾಗರದ ಹಿನ್ನೀರಿನ ನಡುಗಡ್ಡೆಯಲ್ಲಿ ನಿರ್ಮಿಸಿದ ಕೌಶಲಾಭಿವೃದ್ಧಿ ಕೇಂದ್ರದ ಕಟ್ಟಡ

ಸಂಪರ್ಕ ವ್ಯವಸ್ಥೆಯಿಲ್ಲದ ನಡುಗಡ್ಡೆಯಲ್ಲಿ ಕಟ್ಟಡ

• ಜಿ.ಬಿ.ನಾಗರಾಜ್

ಚಿತ್ರದುರ್ಗ: ವಾಣಿವಿಲಾಸ ಸಾಗರ ಜಲಾಶಯ (ವಿ.ವಿ. ಸಾಗರ) ಭರ್ತಿಯಾದರೆ ಹಿಂಭಾಗದಲ್ಲಿರುವ ನಡುಗಡ್ಡೆಯು ಸಂಪರ್ಕ ಕಳೆದುಕೊಳ್ಳಲಿದೆ ಎಂಬ ವಿಷಯ ಗೊತ್ತಿದ್ದರೂ ₹2.70 ಕೋಟಿ ವೆಚ್ಚದಲ್ಲಿ ಕೌಶಲಾಭಿವೃದ್ಧಿ ಕೇಂದ್ರಕ್ಕಾಗಿ ಕಟ್ಟಡ ನಿರ್ಮಿಸಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಈ ಕಟ್ಟಡವನ್ನು ಯಾವ ಉದ್ದೇಶಕ್ಕೆ ಕಟ್ಟಲಾಗಿದೆ ಎಂಬ ಕುರಿತು ಜಿಜ್ಞಾಸೆ ಶುರುವಾಗಿದ್ದು, ಜನವಸತಿ ಪ್ರದೇಶದಿಂದ ಬಹುದೂರದಲ್ಲಿ ಕಟ್ಟಡ ನಿರ್ಮಿಸಿ ಅನುದಾನ ಪೋಲು ಮಾಡಲಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಹೊಸದುರ್ಗ ತಾಲ್ಲೂಕಿನ ತಿಮ್ಮಯ್ಯನಹಟ್ಟಿ ವ್ಯಾಪ್ತಿಯ ಮುಳುಗಡೆ ಪ್ರದೇಶದಲ್ಲಿ ಕೌಶಲಾಭಿವೃದ್ಧಿ ಕೇಂದ್ರದ ಕಟ್ಟಡವನ್ನು ಜಿಲ್ಲಾ ಖನಿಜ ನಿಧಿಯಿಂದ (ಡಿಎಂಎಫ್) ₹1.80 ಕೋಟಿ ಹಾಗೂ ಶಾಸಕರಾಗಿದ್ದ ಗೂಳಿಹಟ್ಟಿ ಶೇಖರ್ ಅವರ ಪ್ರದೇಶಾಭಿವೃದ್ಧಿ ನಿಧಿಯಿಂದ ₹90 ಲಕ್ಷ ವಿನಿಯೋಗಿಸಿ ಕಟ್ಟಲಾಗಿದೆ. ಕಾಮಗಾರಿ ಪೂರ್ಣಗೊಳ್ಳುವ ಮೊದಲೇ ವಿ.ವಿ. ಸಾಗರದ ನೀರಿನ ಮಟ್ಟ ಹೆಚ್ಚಾಗಿದ್ದರಿಂದ ನಡುಗಡ್ಡೆ ಜಲಾವೃತವಾಗಿದ್ದು, ಕಟ್ಟಡದ ಸಂಪರ್ಕ ಕಡಿತಗೊಂಡಿದೆ.

ತಿಮ್ಮಯ್ಯನಹಟ್ಟಿಯಿಂದ 3 ಕಿ.ಮೀ ದೂರದಲ್ಲಿ, ವಿ.ವಿ. ಸಾಗರದ ಹಿನ್ನೀರಿನಲ್ಲಿ 2021ರಲ್ಲಿ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಳ್ಳಲಾಗಿತ್ತು.

8ನೇ ಪುಟ ನೋಡಿ

ಜಾಮೀನು: ಶಿವಮೂರ್ತಿ ಶರಣರ ಬಿಡುಗಡೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಪೋಕ್ಸೊ ಪ್ರಕರಣದಲ್ಲಿ ಬಂಧನಕ್ಕೊಳಗಾಗಿದ್ದ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರು ಷರತ್ತುಬದ್ಧ ಜಾಮೀನಿನ ಮೇಲೆ ಜಿಲ್ಲಾ ಕಾರಾಗೃಹದಿಂದ ಗುರುವಾರ ಬಿಡುಗಡೆಯಾದರು.

ಕಾರಾಗೃಹದಿಂದ ಹೊರಬಂದ ಶರಣರನ್ನು ಕಂಡ ಭಕ್ತರು ಜಯಘೋಷ ಕೂಗಿದರು. ಜನರತ್ತ ಕೈಮುಗಿಯುತ್ತ ಕಾರು ಏರಿದ ಶರಣರು, ದಾವಣಗೆರೆಗೆ ತೆರಳಿದರು.

ಪ್ರೌಢಶಾಲೆಯ ಇಬ್ಬರು ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಡಿ ದಾಖಲಾದ ಪ್ರಕರಣದಲ್ಲಿ ಶಿವಮೂರ್ತಿ ಶರಣರಿಗೆ ಹೈಕೋರ್ಟ್ ಇದೇ 8ರಂದು ಜಾಮೀನು ನೀಡಿತ್ತು. ಜಾಮೀನು ಆಧರಿಸಿ ಇಲ್ಲಿನ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಬುಧವಾರ ಬಿಡುಗಡೆ ಆದೇಶ ಹೊರಡಿಸಿತ್ತು.

4ನೇ ಪುಟ ನೋಡಿ

‘ಶಾಲಾ ಮಕ್ಕಳಿಗೆ ರಾಗಿ ಮಾಲ್ಟ್’

ಬೆಂಗಳೂರು: ‘ಮುಂದಿನ ತಿಂಗಳಿನಿಂದ ಶಾಲೆಗಳಲ್ಲಿ ಹಾಲಿನ ಜೊತೆ ರಾಗಿ ಮಾಲ್ಟ್ ವಿತರಿಸಲಾಗುವುದು’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು. 4

ಸಿ.ಎಂ ಚೌಹಾಣ್ ವಿರೋಧಿ ಅಲೆಯೇ ಬಲ 9
ನಾವು ಒಗ್ಗೂಡಿದ್ದೇವೆ: ರಾಹುಲ್ ಗಾಂಧಿ 9

ಚಿನಕುರಳಿ

ಪ್ರಕಾಶ್ ಶೆಟ್ಟಿ

ಫೈನಲ್‌ಗೆ ಆಸ್ಟ್ರೇಲಿಯಾ

ಕೋಲ್ಕತ್ತ: ಈಡನ್‌ಗಾರ್ಡನ್ ಕ್ರೀಡಾಂಗಣದಲ್ಲಿ ಉತ್ತಮ ಹೋರಾಟ ಕಂಡ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡ ಮೂರು ವಿಕೆಟ್‌ಗಳಿಂದ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿ ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್‌ಗೆ ಮುನ್ನಡೆಯಿತು.

ಆಸ್ಟ್ರೇಲಿಯಾ ಫೈನಲ್ ತಲುಪಿರುವುದು ಇದು ಎಂಟನೇ ಬಾರಿ. ಆಸ್ಟ್ರೇಲಿಯಾ ಫೈನಲ್‌ನಲ್ಲಿ ಆತಿಥೇಯ ಭಾರತ ತಂಡವನ್ನು ಎದುರಿಸಲಿದೆ. ನವೆಂಬರ್ 19ರಂದು ಅಹಮದಾಬಾದ್‌ನಲ್ಲಿ ಫೈನಲ್ ನಡೆಯಲಿದೆ. 12

INDIA GARAGE BANGALORE – MAGDI ROAD, MISSION ROAD, CHIKABALAPURA, LALBHAG ROAD, PENNYA, NELMANGALA – **9785513333; PPS MOTORS BANGALORE** – KENGERI, KANAKAPURA TOWN, DEVANAHALLI, CHINTAMANI, HBR LAYOUT, KANAKAPURA ROAD: **9154702237; ANANTH CARS** – MYSORE ROAD, KR PURAM, RAMNAGAR, MALUR, H CROSS, HUNSMARANAHALLI : **9900077177, 9108444914; SIDDHANTH MOTORS –** GARVEBHIPALYA, SINGASANDRA, YESHWANTPUR, ANEKAL, HOSKOTE, BANGARPET, ATTIBELLE, DABASPET - **9513777010.**

ಕನ್ನಡ ಸಾಹಿತ್ಯ ಪರಿಷತ್ತು ನಗರದಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಕೇಂದ್ರಿಯ ಬುಡಕಟ್ಟು ವಿಶ್ವವಿದ್ಯಾಲಯದ ಕುಲಪತಿ ತೇಜಸ್ವಿ ಕಟ್ಟೀಮನಿ ಅವರಿಗೆ 'ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ, ಡಿ.ಆರ್. ಪಾಟೀಲ, ನ್ಯಾ.ಬಿ. ಶಿವಲಿಂಗೇಗೌಡ ಹಾಗೂ ಅಜಯ್ ಕುಮಾರ್ ಸಿಂಗ್ ಇದ್ದಾರೆ –ಪ್ರಜಾವಾಣಿ ಚಿತ್ರ

ವಿಚಾರಗೋಷ್ಠಿ ನಾಳೆ

ಬೆಂಗಳೂರು: ಸಮುದಾಯ ಕರ್ನಾಟಕದ ವತಿಯಿಂದ 'ಘನತೆಯ ಬದುಕು–ಸಾಂಸ್ಕೃತಿಕ ಮಧ್ಯಪ್ರವೇಶ' ಎಂಬ ವಿಚಾರಗೋಷ್ಠಿಯು ಇದೇ 18ರಂದು ಸುಬ್ಬಯ್ಯ ವೃತ್ತದ ಬಳಿಯ ಮಿಷನ್ ರಸ್ತೆಯಲ್ಲಿರುವ ಸಿ.ಎಸ್.ಐನ ಸೌಹಾರ್ದ ಸಭಾಂಗಣದಲ್ಲಿ ನಡೆಯಲಿದೆ.

ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಅವರು ವಿಚಾರಗೋಷ್ಠಿಯನ್ನು ಉದ್ಘಾಟಿಸಲಿದ್ದಾರೆ. ಚಲನಚಿತ್ರ ನಿರ್ದೇಶಕ ಬಿ. ಸುರೇಶ ವಿಷಯ ಮಂಡನೆ ಮಾಡಲಿದ್ದು, ಸಾಹಿತಿ ಜಿ. ರಾಮಕೃಷ್ಣ ಅಧ್ಯಕ್ಷತೆ ವಹಿಸಲಿದ್ದಾರೆ. ಕನ್ನಡ, ಉರ್ದು, ಹಿಂದಿ ಮತ್ತು ಮಲಯಾಳಂ ಭಾಷೆಗಳಲ್ಲಿ ಕವಿಗೋಷ್ಠಿಯು ನಡೆಯಲಿದೆ.

ಇದೇ ಸಂದರ್ಭದಲ್ಲಿ ಡಿಸೆಂಬರ್ 16 ಮತ್ತು 17ರಂದು ಕುಂದಾಪುರದಲ್ಲಿ ನಡೆಯುವ ಸಮುದಾಯ ಕರ್ನಾಟಕದ ರಾಜ್ಯ ಸಮ್ಮೇಳನದ ಲಾಂಛನವನ್ನು ಸಮುದಾಯ ಕರ್ನಾಟಕದ ಅಧ್ಯಕ್ಷ ಅಚ್ಯುತ, ವಿಮರ್ಶಕ ಅಗ್ರಹಾರ ಕೃಷ್ಣಮೂರ್ತಿ, ಸಿ.ಕೆ. ಗುಂಡಣ್ಣ, ಮಂಜುಳಾ, ಸುಕನ್ಯಾ ಕೆ., ಲಕ್ಷ್ಮಿ ಚಂದ್ರಶೇಖರ ಬಿಡುಗಡೆಗೊಳಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ: 94486 74453/98457 13310ಗೆ ಸಂಪರ್ಕಿಸಿ.

ನೈಋತ್ಯ ರೈಲ್ವೆ G20

ಇ–ಟೆಂಡರ್ ಸೂಚನೆ ಸಂ. CAO/CN/BNC/161/2023 ದಿನಾಂಕ: 22.03.2023 ತಿದ್ದುಪಡಿ–4

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಇಪಿಸಿ ಮೋಡ್‌ನಲ್ಲಿ ಸಿಗ್ನಲಿಂಗ್, ಟೆಲಿಕಮ್ಯುನಿಕೇಶನ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳು ಸೇರಿದಂತೆ ಗಿಣಿಗೇರಾ–ರಾಯಚೂರು ಹೊಸ ಮಾರ್ಗ ಯೋಜನೆ (165.57 ಕಿಮೀ) ಅಡಿಯಲ್ಲಿ ಸಿಂಧನೂರು (ಹೊರತುಪಡಿಸಿ) (84820) ಮತ್ತು ಹಿರೇಕೋಟಂಗಲ್ (ಸೇರಿದಂತೆ) (115500) (30.68 ಕಿಮೀ) ನಡುವೆ ಹೊಸ ಬ್ರಾಡ್ ಗೇಜ್ ಲೈನ್ ಟ್ರ್ಯಾಕ್ ನಿರ್ಮಾಣ. (ಟೆಂಡರ್ ಉಲ್ಲೇಖ ಸಂಖ್ಯೆ: ಸಿಂಧನೂರು–ಹಿರೇಕೋಟಂಗಲ್)	ರೂ. 631,76,59,793/-

ಮುಕ್ತಾಯದ ದಿನಾಂಕ

ಅಸ್ತಿತ್ವದಲ್ಲಿರುವ	ಪರಿಷ್ಕರಿಸಲಾದ
25.11.2023 (11:00 ಗಂಟೆಗೆ)	20.12.2023 (11:00 ಗಂಟೆಗೆ)

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿಗಳು ಬೆಂಗಳೂರು ಕಂಟೋನ್ಮೆಂಟ್

PUB/496/AAV/PRB/SWR/2023-24

South Western Railway-SWR @SWRRLY SWRRLY

Sir M. Visweswaraya Layout Welfare Association (R) (1-9 BLOCKS)
536, 3rd Block, Sir M.Visweswaraya Layout, Ullalu Main Road, Bangalore-56.

ARCHITECTURAL, ENGINEERING AND ALLIED SERVICES

Inviting expression of interest from registered and experienced professional consultancy firms for providing comprehensive "ARCHITECTURAL, ENGINEERING AND ALLIED SERVICES" for the proposed SIRMVN RECREATION CENTRE (SOCIAL, CULTURAL & SPORTS) IN OUR RESIDENTIAL LAYOUT.

Area of Site : 6007.73 sqm (1.5 Acre)
Budget : Rs. 10 to 15 Cr.
Duration : 3 years

Interested professional firms are requested to send their profile, experience, professional charges, and other particulars within 14 days of this notification.

Details of the project requirements may be accessed from our website : https://sirmvnrecreation.com
Email: contactus@sirmvnrecreation.com

Bangalore Date : 17-11-2023

PUBLIC NOTICE

We are instructed by our clients to investigate the title of its current owner Mr. Dhirisala Bhaskar Reddy S/o Late D. V. Ramannaand Smt. V. Anuradha Reddy with respect to Survey No. 34 measuring 0 Acre 39 Guntas and 1 Guntas of kharaband Survey No. 35 measuring 2 Acre 20 Guntas and 1 Guntas of kharabtotally measuring 3 Acres 19 Guntasand 2 Guntas Kharabwhich is situated atAcharlahalli Village, TubagereHobli, Doddaballapura Taluk, Bangalore Rural, the said land parcelis provided in the schedule belowand shall hereinafter referred to as the "**Schedule Property**".

If any person has any right, title, interest, claim, objection, share, benefit or demand in relation to or against the Schedule Property or any part/ portion thereof or, has executed any transactions or documents (whether registered or unregistered) with the owners or predecessors in title of the Schedule Property, by way of sale, transfer, assignment, exchange, right, title, interest, share, benefit, lease, sub-lease, tenancy, sub-tenancy, license, lien, mortgage, charge, encumbrance, occupation, care-taker basis, covenant, trust, easement, gift, inheritance, bequest, maintenance, possession, development rights, right of way, reservation, family arrangement/ settlement, agreement, lis-pendens, decree or order of any court of law, partnership or allotment or otherwise howsoever and of whatsoever nature and having the effect of creating an encumbrance thereon, are called upon to submit their statements, objections or claims in writing, along with documentary evidence in support thereof, with the undersigned, within 7 (seven) days from the date of publication of this notice. If no objections are received, we would conclusively presume that no person has any right, title, interest, claim, demand, charge or encumbrance whatsoever existing on the Schedule Property or any part thereof and we will issue our opinion confirming that the current owners have title in respect of the Schedule Property.

SCHEDULE PROPERTY

All that piece and parcel of convertedland bearing Survey No. 34 measuring 0 Acre 39 Guntas and 1 Guntas of kharab and Survey No. 35 measuring 2 Acre 20 Guntas and 1 Guntas of kharab totally measuring 3 Acres 19 Guntasand 2 Guntas Kharab, situated atAcharlahalli Village, TubagereHobli, Doddaballapura Taluk, Bangalore Rural, and both bounded as follows: East by : Sy.No.35; West by : Survey No.32 and 33; North by : Survey No.25 (Lake) and South by : Survey No. 33, 36 and Gulyanandigundha Village boundary.

Mrs. Rashmi Pavan, Advocate
No.40/1, Vittal Mallya Road, Shanthala Nagar, Bangalore-560 001.
Ph. 8073578405
Place: Bangalore
Date: 15.11.2023

ಬಳ್ಳಾರಿ ರಸ್ತೆಯಲ್ಲಿ ಹೆಚ್ಚಿರುವ ಪಾದಚಾರಿಗಳ ಓಡಾಟ ● ಎಲ್ಲೆಂದರಲ್ಲಿ ಕಸದ ರಾಶಿ ● ಲಿಫ್ಟ್ ಇಲ್ಲದೇ ಪರದಾಟ

ನಿರ್ವಹಣೆ ಕೊರತೆ; ಸ್ಕೈವಾಕ್‌ಗೆ ತುಕ್ಕು

● ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ತುಕ್ಕು ಹಿಡಿಯುತ್ತಿರುವ ಕಬ್ಬಿಣ. ಲಿಫ್ಟ್ ಇಲ್ಲದಿದ್ದರಿಂದ ಹತ್ತಿ ಇಳಿಯಲು ಕಷ್ಟ ಪಡುತ್ತಿರುವ ವೃದ್ಧರು. ಭದ್ರತಾ ಸಿಬ್ಬಂದಿ ಇಲ್ಲದೇ ಆತಂಕದಲ್ಲಿ ಸಂಚರಿಸುವ ಪಾದಚಾರಿಗಳು. ಅಲ್ಲಲ್ಲಿ ಬಿರುಕು ಬಿಟ್ಟು ಕಳಚಿ ಬೀಳುವಂತಹ ಸ್ಥಿತಿಯಲ್ಲಿರುವ ತಗಡಿನ ಶೀಟ್‌ಗಳು...

ಸದಾ ವಾಹನಗಳ ದಟ್ಟಣೆ ಕಂಡುಬರುವ ಬಳ್ಳಾರಿ ರಸ್ತೆಯ (ರಾಷ್ಟ್ರೀಯ ಹೆದ್ದಾರಿ–44) ಎಸ್ಟೀಮ್ ಮಾಲ್–ಮಿಲಿಟರಿ ಡೇರಿ ಫಾರ್ಮ್ ಬಸ್ ತಂಗುದಾಣ ನಡುವೆ ಇರುವ ಸ್ಕೈವಾಕ್ ಸ್ಥಿತಿ ಇದು. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ನಿರ್ಮಿಸಿರುವ ಸ್ಕೈವಾಕ್, ನಿರ್ವಹಣೆ ಕೊರತೆಯಿಂದ ದಿನದಿಂದ ದಿನಕ್ಕೆ ಹಾಳಾಗುತ್ತಿದೆ.

ಮಣಿಪಾಲ್ ಆಸ್ಪತ್ರೆ, ಮಿಲಿಟರಿ ಡೇರಿ ಫಾರ್ಮ್, ಎಸ್ಟೀಮ್ ಮಾಲ್, ಪ್ರೆಸಿಡೆನ್ಸಿ ಕಾಲೇಜು, ಎಂಬೆಸ್ಸಿ ಅಪಾರ್ಟ್‌ಮೆಂಟ್ ಸಮುಚ್ಚಯ ಸೇರಿದಂತೆ ಹಲವು ಸ್ಥಳಗಳು ಸ್ಕೈವಾಕ್‌ನ ಅಕ್ಕ–ಪಕ್ಕದಲ್ಲಿವೆ. ಪ್ರತಿದಿನ 30 ಸಾವಿರಕ್ಕೂ ಹೆಚ್ಚು ಪಾದಚಾರಿಗಳು ಸ್ಕೈವಾಕ್ ಬಳಸುತ್ತಿದ್ದಾರೆ.

ಇದು ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿರುವುದರಿಂದ ನಿತ್ಯವೂ ಸಾವಿರಾರು ವಾಹನಗಳ ಸಂಚಾರವಿರುತ್ತದೆ. ಹೆಬ್ಬಾಳ ಕೆಂಪಾಪುರದ ಚಿರಂಜೀವಿ ಬಡಾವಣೆಯಲ್ಲಿರುವ ಈ ರಸ್ತೆಯಲ್ಲಿ ಪಾದಚಾರಿಗಳ ಅನುಕೂಲಕ್ಕೆಂದು ಸ್ಕೈವಾಕ್ ನಿರ್ಮಿಸಲಾಗಿದೆ. ಸ್ಕೈವಾಕ್ ಬಳಸುವವರ ಸಂಖ್ಯೆಯೂ ಹೆಚ್ಚಿದ್ದು, ಅವ್ಯವಸ್ಥೆಯಿಂದಾಗಿ ಅವರೆಲ್ಲರೂ ಆತಂಕದಲ್ಲಿ ಓಡಾಡುತ್ತಿದ್ದಾರೆ.

ಈಡೇರದ ಲಿಫ್ಟ್ ಭರವಸೆ: 'ಅಪಘಾತಗಳ ವೃತ್ತವೆಂದು ಗುರುತಿಸಿಕೊಂಡಿದ್ದ ಎಸ್ಟೀಮ್ ಮಾಲ್ ವೃತ್ತದಲ್ಲಿ 2017ರಲ್ಲಿ ಲಿಫ್ಟ್ ಅಳವಡಿಸದೇ ಸ್ಕೈವಾಕ್ ನಿರ್ಮಿಸಲಾಗಿದೆ. ಲಿಫ್ಟ್ ಅಳವಡಿಸುವಂತೆ ಸ್ಥಳೀಯರು ಹಲವು ವರ್ಷಗಳಿಂದ ಒತ್ತಾಯಿಸುತ್ತಿದ್ದಾರೆ. 'ಲಿಫ್ಟ್ ಅಳವಡಿಸುವುದಾಗಿ ಎನ್‌ಎಚ್‌ಎಐ ಹಲವು ವರ್ಷಗಳಿಂದ ಹೇಳುತ್ತಲೇ ಬಂದಿದೆ. ಅದು ಕೇವಲ ಭರವಸೆಯಾಗಿಯೇ ಉಳಿದಿದೆ. ಹೀಗಾಗಿ ಸ್ಕೈವಾಕ್ ಹತ್ತಿ ಇಳಿಯಲು ವೃದ್ಧರು, ಮಕ್ಕಳು ಕಷ್ಟಪಡುತ್ತಿದ್ದಾರೆ' ಎಂದು ಕೆಂಪಾಪುರ ನಿವಾಸಿ ವಿಘ್ನೇಶ್ ಹೇಳಿದರು.

ಹೆಬ್ಬಾಳದ ಎಸ್ಟೀಮ್ ಮಾಲ್ ಬಳಿಯ ಸ್ಕೈವಾಕ್‌ನಲ್ಲಿ ಹೆಜ್ಜೆ ಹಾಕಿದ ಪಾದಚಾರಿಗಳು – ಪ್ರಜಾವಾಣಿ ಚಿತ್ರಗಳು / ಕೃಷ್ಣಕುಮಾರ್ ಪಿ.ಎಸ್



ಕಬ್ಬಿಣದ ಕಂಬಿಯ ಆಸರೆಯೊಂದಿಗೆ ಕಷ್ಟಪಟ್ಟು ಮೆಟ್ಟಿಲು ಏರುತ್ತಿರುವ ದೃಶ್ಯ



ಸ್ಕೈವಾಕ್ ನಿರ್ಮಿಸಿದರೆ ಸಾಲದು. ಇದರ ನಿರ್ವಹಣೆಗೂ ಎನ್‌ಎಚ್‌ಎಐ ಅಧಿಕಾರಿಗಳು ಹೆಚ್ಚಿನ ಒತ್ತು ನೀಡಬೇಕು
ಪದ್ಮನಾಭನ್, ಪಾದಚಾರಿ

ಕಾಲೇಜು ವಿದ್ಯಾರ್ಥಿನಿಯರು ಹಾಗೂ ಉದ್ಯೋಗಸ್ಥ ಮಹಿಳೆಯರು ಹೆಚ್ಚಾಗಿ ಸ್ಕೈವಾಕ್ ಬಳಸುತ್ತಾರೆ. ಇವರ ಸುರಕ್ಷತೆಗೆ ಮೊದಲ ಆದ್ಯತೆ ನೀಡಿ, ಭದ್ರತೆಗೆ ಸಿಬ್ಬಂದಿ ನಿಯೋಜಿಸಬೇಕು
ಮುರುಳಿ, ಸ್ಥಳೀಯ ನಿವಾಸಿ

ರಾಜಧಾನಿ ಜನರ ಧ್ವನಿ

'ದಿನದ 24 ಗಂಟೆಯೂ ವಾಹನಗಳ ದಟ್ಟಣೆ ಇರುತ್ತದೆ. ದಟ್ಟಣೆ ನಡುವೆ ರಸ್ತೆ ದಾಟಲು ಸಾಧ್ಯವೇ ಇಲ್ಲ. ಎಲ್ಲರೂ ಸ್ಕೈವಾಕ್ ಬಳಸುತ್ತಿದ್ದಾರೆ. ಬಳಕೆದಾರರ ಅನುಕೂಲಕ್ಕೆ ಲಿಫ್ಟ್ ನಿರ್ಮಿಸಬೇಕು' ಎಂದು ಅವರು ಆಗ್ರಹಿಸಿದರು.

ತುಕ್ಕು ಹಿಡಿಯುತ್ತಿರುವ ಕಬ್ಬಿಣ: 'ಪೂರ್ಣ ಕಬ್ಬಿಣದಿಂದ ಸ್ಕೈವಾಕ್ ನಿರ್ಮಿಸಿದ್ದು, ನಿರ್ವಹಣೆ ಕೊರತೆಯಿಂದಾಗಿ ಹಲವು ಸ್ಥಳಗಳಲ್ಲಿ ತುಕ್ಕು ಹಿಡಿಯುತ್ತಿದೆ. ಸ್ಕೈವಾಕ್‌ನ ಎರಡೂ ಬದಿಗಳಲ್ಲಿ ತಗಡಿನ ಶೀಟ್‌ಗಳನ್ನು ಹಾಕಲಾಗಿದೆ. ಇವು ಸಹ ತುಕ್ಕು ಹಿಡಿದು ಅಲ್ಲಲ್ಲಿ ರಂಧ್ರಗಳಾಗಿದ್ದು, ಕಳಚಿ ಬೀಳುವ ಆತಂಕವೂ ಇದೆ' ಎಂದು ಕಂಪನಿಯೊಂದರ ಉದ್ಯೋಗಿ ರಾಜೇಶ್ ಹೇಳಿದರು.

'ನಿತ್ಯವೂ ಬೆಳಿಗ್ಗೆ ಹಾಗೂ ಸಂಜೆ ಸ್ಕೈವಾಕ್ ಬಳಸುತ್ತೇನೆ. ಕಬ್ಬಿಣದ ಭಾಗಗಳು ಪಾದಚಾರಿಗಳ ಕಾಲಿಗೆ ತಾಗಿ ರಕ್ತ ಬಂದಿರುವ ಘಟನೆಗಳೂ ನಡೆದಿವೆ. ಸ್ಕೈವಾಕ್ ಸಮಸ್ಯೆಗಳ ಬಗ್ಗೆ ಯಾರಿಗೆ ದೂರು ನೀಡಬೇಕು ಎಂಬ ಫಲಕವೂ ಇಲ್ಲಿಲ್ಲ. ಹೀಗಾಗಿ, ಪಾದಚಾರಿಗಳು ಏನು ಮಾಡಬೇಕೆಂದು ತಿಳಿಯದೇ ಸುಮ್ಮನಿದ್ದಾರೆ' ಎಂದು ಅವರು ತಿಳಿಸಿದರು.

ಭದ್ರತೆ, ಸ್ವಚ್ಛತೆ ಇಲ್ಲದ ಸ್ಥಳ: 'ನಗರದ ಹಲವು ಕಡೆ ಸ್ಕೈವಾಕ್‌ಗಳಲ್ಲಿ ಭದ್ರತೆಗೆಂದು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಆದರೆ, ಇಲ್ಲಿ ಅಂಥ ವ್ಯವಸ್ಥೆ ಇಲ್ಲ. ಸ್ಕೈವಾಕ್ ಬಳಿ ಕೆಲವರು ಕಸ ಸುರಿದು ಹೋಗುತ್ತಿದ್ದು, ಸ್ವಚ್ಛತೆಯೂ ಇಲ್ಲದಂತಾಗಿದೆ' ಎಂದು ಸ್ಥಳೀಯ ಕಾಲೇಜು ವಿದ್ಯಾರ್ಥಿ ಆರ್. ಸೌಮ್ಯಾ ಹೇಳಿದರು.

'ಸ್ಕೈವಾಕ್ ಹತ್ತುವ ಹಾಗೂ ಇಳಿಯುವ ಮೆಟ್ಟಿಲುಗಳ ಕೆಳ ಭಾಗದಲ್ಲಿ ಖಾಲಿ ಜಾಗವಿದೆ. ಕೆಲವರು ಅಲ್ಲಿಯೇ ಕಸ ಎಸೆದು ಹೋಗುತ್ತಾರೆ. ಇನ್ನು ಹಲವರು, ಮೆಟ್ಟಿಲುಗಳ ಮೇಲೆ ಕುಳಿತು ಸಿಗರೇಟ್ ಸೇದುತ್ತಾರೆ. ಗುಟ್ಕಾ ತಿಂದು, ಸ್ಕೈವಾಕ್ ಮೇಲೆಯೇ ಉಗುಳುತ್ತಾರೆ' ಎಂದು ದೂರಿದರು.



ಹೆಬ್ಬಾಳದ ಎಸ್ಟೀಮ್ ಮಾಲ್ ಬಳಿಯ ಸ್ಕೈವಾಕ್‌ನ ಕಬ್ಬಿಣ ತುಕ್ಕು ಹಿಡಿದಿರುವುದು

ಬಸ್‌ಗಳ ನಿಲುಗಡೆ: 'ಹೊರ ರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ಬರುವ ವಾಹನಗಳು, ಎಸ್ಟೀಮ್ ಮಾಲ್ ಬಳಿ ಪ್ರಯಾಣಿಕರನ್ನು ಇಳಿಸುತ್ತವೆ. ಜೊತೆಗೆ, ಪ್ರಯಾಣಿಕರು ಹತ್ತುವ ಸ್ಥಳವೂ ಇದಾಗಿದೆ. ಹೀಗಾಗಿ, ನಿತ್ಯವೂ ಪ್ರಯಾಣಿಕರ ಸಂಖ್ಯೆಯೂ ಹೆಚ್ಚಿರುತ್ತದೆ' ಎಂದು ಸ್ಥಳೀಯರು ಹೇಳಿದರು.

'ಒಂದು ಬಸ್‌ನಿಂದ ಇಳಿದು ಮತ್ತೊಂದು ಬಸ್ ಹತ್ತಲು ಪ್ರಯಾಣಿಕರು, ಸ್ಕೈವಾಕ್ ಮೂಲಕ ರಸ್ತೆ ದಾಟುತ್ತಾರೆ. ಅಶುಚಿತ್ವ, ಅಭದ್ರತೆಯಂತಹ ಸಮಸ್ಯೆಗಳನ್ನು ಪ್ರಯಾಣಿಕರು ಎದುರಿಸುತ್ತಾರೆ' ಎಂದರು.

'ರಾತ್ರಿ ವೇಳೆ ಸ್ಕೈವಾಕ್‌ನಲ್ಲಿ ಓಡಾಡುವುದು ಅಪಾಯಕಾರಿ ಎನ್ನುವ ಸ್ಥಿತಿ ಇದೆ. ಕೆಲವರು ರಾತ್ರಿ ಸ್ಕೈವಾಕ್‌ನಲ್ಲಿ ಕುಳಿತುಕೊಂಡು ಪಾದಚಾರಿಗಳನ್ನು ಬೆದರಿಸುತ್ತಿದ್ದಾರೆ. ಮಹಿಳೆಯರು ಓಡಾಡುವಾಗ ಕಿಡಿಗೇಡಿಗಳು ಚುಡಾಯಿಸುತ್ತಿರುವ ಘಟನೆಗಳೂ ನಡೆದಿವೆ' ಎಂದು ಸ್ಥಳೀಯರು ದೂರಿದರು.

'ತುರ್ತಾಗಿ ಲಿಫ್ಟ್ ಅಳವಡಿಸಬೇಕು. ಭದ್ರತೆಗೆ ಸಿಬ್ಬಂದಿ ನಿಯೋಜಿಸಬೇಕು. ತುಕ್ಕು ಹಿಡಿದಿರುವ ಕಬ್ಬಿಣವನ್ನು ಬದಲಾಯಿಸಬೇಕು' ಎಂದು ಅವರು ಆಗ್ರಹಿಸಿದರು.

ನಿಮ್ಮಲ್ಲೂ ಸ್ಕೈವಾಕ್ ಸಮಸ್ಯೆಗಳಿದ್ದರೆ ಬರೆದು ಕಳಿಸಿ
9606038256

'ವಿದ್ಯಾರ್ಥಿನಿ ಸಾವು ಖಂಡಿಸಿ ನಡೆದಿದ್ದ ಹೋರಾಟ'

'2017ಕ್ಕೂ ಮುನ್ನ ಎಸ್ಟೀಮ್ ಮಾಲ್ ಬಳಿ ಸಿಗ್ನಲ್ ಅಳವಡಿಸಲಾಗಿತ್ತು. ಸಿಗ್ನಲ್‌ಗಳಿಗೆ ಅನುಸಾರವಾಗಿ ಪಾದಚಾರಿಗಳು ರಸ್ತೆ ದಾಟುತ್ತಿದ್ದರು. 2015ರ ಫೆಬ್ರುವರಿ 26ರಂದು ಸಂಚಾರ ಸಿಗ್ನಲ್ ಜಂಪ್ ಮಾಡಿದ್ದ ತೈಲ ಸಾಗಣೆ ಟ್ಯಾಂಕರ್, ರಸ್ತೆ ದಾಟುತ್ತಿದ್ದ 19 ವರ್ಷದ ವಿದ್ಯಾರ್ಥಿನಿಗೆ ಡಿಕ್ಕಿ ಹೊಡೆದಿತ್ತು' ಎಂದು ಸ್ಥಳೀಯರು ಹೇಳಿದರು.

'ವಿದ್ಯಾರ್ಥಿನಿ ಸಾವು ಖಂಡಿಸಿದ್ದ ಸಹಪಾಠಿಗಳು ಹಾಗೂ ಸ್ಥಳೀಯರು, ವಾಹನಗಳನ್ನು ಅಡ್ಡಗಟ್ಟಿ ಪ್ರತಿಭಟನೆ ನಡೆಸಿದ್ದರು. ಇದೇ ಪ್ರತಿಭಟನೆ, ಹೋರಾಟದ ಸ್ವರೂಪ ಪಡೆದುಕೊಂಡಿತ್ತು. ನಗರದ ಹಲವು ಕಡೆ ಪ್ರತಿಭಟನೆಗಳು ನಡೆದಿದ್ದವು. ಇದರಿಂದ ಎಚ್ಚೆತ್ತ ಎನ್‌ಎಚ್‌ಎಐ, ಸ್ಕೈವಾಕ್ ನಿರ್ಮಾಣಕ್ಕೆ ಯೋಜನೆ ರೂಪಿಸಿತ್ತು. 2017ರಲ್ಲಿ ಸ್ಕೈವಾಕ್ ನಿರ್ಮಾಣ ಪೂರ್ಣಗೊಂಡು ಬಳಕೆಗೆ ಲಭ್ಯವಾಯಿತು' ಎಂದು ತಿಳಿಸಿದರು.

SELECTION CENTRE SOUTH, BANGALORE
ALLOTMENT OF REGIMENTAL SHOPS
NOTICE INVITING TENDER

Sealed tenders are invited from interested War Widow/ Widows of defence personnel killed while on duty/ Disabled Soldiers/ Ex-servicemen & Spouses/ Widows of Ex-servicemen subject to license period of one year (extendable to five years) with a three years cooling off/ break period for running Regimental Shops at Selection Centre South, Bangalore-560042.

S. No.	Name of Shop	No of Shops	EMD Money
(a)	Regimental Cafeteria, Photo Studio cum Rail & Flight Reservation Centre, Tele Booth & Photocopier facilities	One	2,000/-

2. Application forms and instructions for applicants can be collected by interested persons/ parties/ firms from Q Br Office, Selection Centre South, Bangalore-560042 within 10 days from the date of publication of Tender Notice in Newspaper, Queries be clarified on **Mob No 9812762496** and Email **cubbang@nic.in**. Last Date for receipt of Tender/ appl is 1200 Hr on 25 Nov 2023. For details contact

Published by
Additional Officer Selection Centre South, Bangalore-560042, Cubbon Road 'Q' Clk
Mob No-8950717969, Email-cubbang@nic.in

AstraZeneca
ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್
(CIN: L24231KA1979PLC003563)
ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045
ಈಮೇಲ್: comp.secy@astrazeneca.com, ವೆಬ್: www.astrazeneca.com/india
ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರಗಳು ಕಳೆದಿರುವ ಬಗ್ಗೆ ಸೂಚನೆ

ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರ ಕಳೆದಿವೆ ಎಂದು ಷೇರುದಾರ ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/– ರಂತೆ ಹೊಸ ಷೇರು ಪ್ರಮಾಣಪತ್ರ ನೀಡುವಂತೆ ಷೇರುದಾರ ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.2)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರು
		ಷೇರುಗಳ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
M001426	250	1643	14229076 - 14229325	1) ಮುಕ್ತಿ ಬಸು 2) ಬಿಸ್ವನಾಥ್ ಮುಖರ್ಜಿ (ಮೃತ)

ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಸ್ವೀಕರಿಸದಿದ್ದಲ್ಲಿ, ಕಂಪನಿಯು ದಿನಾಂಕ 25ನೇ ಜನವರಿ 2022ರ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB/P/CIR/2022/8ರಂತೆ ದೃಢೀಕರಣ ಪತ್ರವನ್ನು ನೀಡಲು ಮುಂದುವರೆಯುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ
ಸ್ಥಳ: ಬೆಂಗಳೂರು
ದಿನಾಂಕ: 16.11.2023
ಮಾನಸ. ಆರ್
ಕಂಪನಿ ಸೆಕ್ರೆಟರಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪದ್ಮನಾಭನಗರ ವಿಭಾಗ, ಕುಮಾರಸ್ವಾಮಿ ಲೇಔಟ್, ಸಾಗರ್ ಆಸ್ಪತ್ರೆ ಎದುರು, ಬೆಂಗಳೂರು – 560 078.

ಸಂ: ಕಾಪಾಅ(ಪನ)/ಟೆಂಡರ್/09/2023–24 ದಿನಾಂಕ: 16.11.2023

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಏಕ ಲಕೋಟೆ ಪದ್ಧತಿ) (ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಪದ್ಮನಾಭನಗರ ವಿಭಾಗ, ಬೃಬೆಂಮಪಾ, ಬೆಂಗಳೂರು, ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಗೆ ವಿವರಿಸಿರುವ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ಹೆಸರು	ಅಂದಾಜು ವೆಚ್ಚ (ರೂ.ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1	ಕುಮಾರಸ್ವಾಮಿ ಲೇಔಟ್, ವಾರ್ಡ್ ನಂ.181ರಲ್ಲಿ ಮೊದಲನೆದಾಗಿ ಬೀದಿಯಲ್ಲಿ ಗುಡಿಸಿದ ಕಸ, ಮನೆಮನೆಗಳಿಂದ ಶೇಖರಿಸಿದ ವಿಂಗಡಿಸಿದ ಹಸಿ ಮತ್ತು ಒಣ ತ್ಯಾಜ್ಯಾಗಳನ್ನು ಸಾಗಿಸುವುದು ಎರಡನೇದಾಗಿ ಹಸಿ ಮತ್ತು ಬೀದಿಯಲ್ಲಿ ಗುಡಿಸಿದ ಕಸಗಳನ್ನು ವಿಂಗಡಿಸಿ ಸಾಗಿಸುವುದು.	41.32	82,640/-

ಕಾಮಗಾರಿ ಪೂರ್ಣಗೊಳಿಸುವ ಅವಧಿ (ಮಳೆಗಾಲ ಸೇರಿದಂತೆ) : 02 ತಿಂಗಳು

ಟೆಂಡರ್ ವೇಳಾಪಟ್ಟಿ : (1) ಟೆಂಡರ್‌ಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಇ–ಸಂಗ್ರಹಣಾ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸುವ ದಿನಾಂಕ: **23.11.2023ರ ಸಂಜೆ 4.00 ಗಂಟೆಗೆ ಅಥವಾ ಮುಂಚಿತವಾಗಿ.** **(2) ಬಿಡ್‌ಗಳನ್ನು ತೆರೆಯುವ ದಿನಾಂಕ: 24.11.2023ರಂದು ಸಂಜೆ 4.05 ಗಂಟೆಗೆ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಎಲ್ಲಾ ಕೆಲಸದ ದಿವಸಗಳಂದು ಅಥವಾ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in**ನಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ಪದ್ಮನಾಭನಗರ ವಿಭಾಗ, ಬೃಬೆಂಮಪಾ

ಪುನೀತ್ ರಾಜ್‌ಕುಮಾರ್ ಪ್ರಶಸ್ತಿ ಪ್ರದಾನ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ನೌಕರರ ಕನ್ನಡ ಸಂಘದ ವತಿಯಿಂದ ನ.18ರಂದು ಆಯೋಜಿಸಿರುವ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ 'ಕರ್ನಾಟಕ ರತ್ನ ಡಾ. ಪುನೀತ್ ರಾಜ್‌ಕುಮಾರ್ ಪ್ರಶಸ್ತಿ' ಪ್ರದಾನ ಮಾಡಲಾಗುತ್ತದೆ.

ಬಿಬಿಎಂಪಿಯ 20 ನೌಕರರು ಹಾಗೂ ವಿವಿಧ ಕ್ಷೇತ್ರಗಳ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎ.ಅಮೃತ್ ರಾಜ್ ತಿಳಿಸಿದರು.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಸಂಜೆ 5ಕ್ಕೆ ನಡೆಯುವ ಕಾರ್ಯಕ್ರಮವನ್ನು ಆಡಳಿತಾಧಿಕಾರಿ ರಾಕೇಶ್ ಸಿಂಗ್ ಉದ್ಘಾಟಿಸಲಿದ್ದು, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ನಟ ರಮೇಶ್ ಅರವಿಂದ್, ನಟಿಯರಾದ ಭವ್ಯಾ, ಭಾವನಾ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

'ರಾಜ್ಯದಲ್ಲಿ ಪ್ರಥಮವಾಗಿ 'ಕರ್ನಾಟಕ ರತ್ನ ಡಾ.ಪುನೀತ್ ರಾಜ್‌ಕುಮಾರ್ ಕಂಚಿನ ಪ್ರತಿಮೆ' ಯನ್ನು ಬಿಬಿಎಂಪಿ ಆವರಣದಲ್ಲಿ ಸ್ಥಾಪನೆ ಮಾಡಲಾಗಿದ್ದು, ಕಳೆದ ವರ್ಷದಿಂದ ಅವರ ಹೆಸರಿನಲ್ಲಿ ಪ್ರಶಸ್ತಿ ನೀಡಲಾಗುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ವಿಕಾಸ ವೇದಿಕೆ ಅಧ್ಯಕ್ಷರಾದ ಪಾಲನೇತ್ರ, ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಗುರುದತ್ತ, ಚಲನಚಿತ್ರರಂಗದ ಸುಂದರ್ ರಾಜ್, ಪ್ರಮಿಳಾ ಜೋಷಾಯ್, ಶಿವಕುಮಾರ್, ರಿಷಿಗೌಡ, ಪ್ರೇಮಗೌಡ, ರಕ್ಷಾ ಅಪೂರ್ವ, ಪ್ರತಿಭಾ, ರಕ್ಷಾ, ಮಾಧ್ಯಮ ಕ್ಷೇತ್ರದ ರಕ್ಷಾ, ಮಾಲತೇಶ್, ವಸಂತ್ ಕುಮಾರ್, ಸ್ಮಿತಾ ರಂಗನಾಥ್, ಶೀತಲ್ ಶೆಟ್ಟಿ, ಮಂಜುನಾಥ್, ಅಲ್ಲಾವುದ್ದಿನ್, ಪುರುಷೋತ್ತಮ್, ಕೊಂಡಯ್ಯ, ಪುಟ್ಟರಾಜು, ಪಿ.ಆರ್.ಓ. ಸುಚಿತ್ರಾ ಮತ್ತು ಡೊಳ್ಳು ಕುಣಿತ ಕಲಾವಿದ ಡೊಳ್ಳು ಚಂದ್ರು, ಯೋಗ ಕ್ರೀಡಾ ಸಂಘದ ಅಧ್ಯಕ್ಷ ಕೃಷ್ಣಮೂರ್ತಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಅಮೃತರಾಜ್ ಮಾಹಿತಿ ನೀಡಿದರು.

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಬೆಂಗಳೂರು ನಗರ ಜಿಲ್ಲೆ.
ಹಳೇ ಟಿ.ಬಿ ಆಸ್ಪತ್ರೆ ಆವರಣ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು –560038.

ಸಂಖ್ಯೆ: ಡಿಹೆಚ್‌ಎಸ್/ಬೆಂ.ನ.ಜಿ./ಎನ್‌ಯುಹೆಚ್‌ಎಂ/ಗುಸಿ/03/2023–24 ದಿನಾಂಕ : 13–11–2023

ನೇಮಕಾತಿ ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆಗೆ **PM-ABHIM** ಯೋಜನೆಯಡಿ ನಮ್ಮ ಕ್ಲಿನಿಕ್‌ಗೆ ಹೊಸದಾಗಿ ಅನುಮೋದನೆಯಾಗಿರುವ ವಿವಿಧ ವೃಂದದ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ನಿಯಾಮಾನುಸಾರ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳನ್ನು ನೇರ ಸಂದರ್ಶನಕ್ಕೆ ಆಹ್ವಾನಿಸಲಾಗಿದೆ. ಹುದ್ದೆಗಳ ಮಾಹಿತಿ ಹಾಗೂ ರೋಸ್ಟರ್ ವಿವರ ಈ ಕೆಳಕಂಡಂತೆ ವಿವರಿಸಲಾಗಿದೆ.

ಕ್ರಸ	ಹುದ್ದೆಗಳ ವಿವರ	ವಿದ್ಯಾರ್ಹತೆ	ಮಾಸಿಕ ಸಂಚಿತ ವೇತನ	ಒಟ್ಟು ಹುದ್ದೆಗಳ ಸಂಖ್ಯೆ	ಅಭ್ಯರ್ಥಿ ವಯೋಮಿತಿ	ಕಾರ್ಯ ನಿರ್ವಹಿಸಬೇಕಾಗಿರುವ ಸ್ಥಳ
1	ವೈದ್ಯಾಧಿಕಾರಿಗಳು	ಎಂ.ಬಿ.ಬಿ.ಎಸ್ ಉತ್ತೀರ್ಣರಾಗಿ ಕಡ್ಡಾಯವಾಗಿ Internship ಪೂರೈಸಿ ಕೆ.ಎಂ.ಸಿ ನೋಂದಣಿ ಹೊಂದಿರಬೇಕು	43,141	09 SC Other-1 GM WM-1 ST Rur-1 GM PH-1 Cat (1) WM-1GM Rur-12(A) Oth-1 GM WM-1 SC Rur-1	60 ವರ್ಷ ಒಳಗಿರತಕ್ಕದ್ದು	ಹೆಬ್ಬಗೋಡಿ ಅತ್ತಿಬೆಲೆ ಬೊಮ್ಮಸಂದ್ರ ಚಂದಾಪುರ ಜಿಗಣಿ
2	ಪ್ರಯೋಗಶಾಲಾ ತಂತ್ರಜ್ಞರು	DMLT ಪದವಿಯೊಂದಿಗೆ ಕಡ್ಡಾಯವಾಗಿ ಕರ್ನಾಟಕ ರಾಜ್ಯ ಅರೆ ವೈದ್ಯಕೀಯ ಮಂಡಳಿಯಲ್ಲಿ ನೋಂದಣಿಯನ್ನು ಹೊಂದಿ ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು.	19,056	09 SC Other-1, GM WM-1 ST Rur-1, GM PH-1 Cat (1) WM-1 GM Rur-1 2(A) Oth-1 GM WM-1 SC Rur-1	40 ವರ್ಷ ಒಳಗಿರತಕ್ಕದ್ದು	
3	ಶುಶ್ರೂಷಕ ಅಧಿಕಾರಿಗಳು	ಮಾನ್ಯತೆ ಪಡೆದ ನರ್ಸಿಂಗ್ ಶಾಲೆಯಲ್ಲಿ ಬಿಎಸ್‌ಸಿ / ಜಿಎನ್‌ಎಂ ತರಬೇತಿ ಹಾಗೂ ಕೆಎನ್‌ಸಿ ನೋಂದಣಿ ಹೊಂದಿ ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು.	18,714	09 SC Other-1 GM WM-1 ST Rur-1 GM PH-1 Cat (1) WM-1 GM Rur-1 2(A) Oth-1 GM WM-1 SC Rur-1	40 ವರ್ಷ ಒಳಗಿರತಕ್ಕದ್ದು	

• ಈ ಆಯ್ಕೆಯು / ನೇಮಕಾತಿಯು ಎನ್‌ಯುಹೆಚ್‌ಎಂ ಮಾರ್ಗಸೂಚಿಗಳಂತೆ ರೋಸ್ಟರ್ ಕಮ್ ಮೆರಿಟ್ ಅನ್ವಯ ನೇಮಕಾತಿ ಮಾಡಿಕೊಳ್ಳಲಾಗುವುದು, ಈ ಗುತ್ತಿಗೆ ನೇಮಕಾತಿ ಪ್ರಕ್ರಿಯೆಯಲ್ಲಿ ಅರ್ಹ ಮೀಸಲಾತಿ ಅಭ್ಯರ್ಥಿಗಳು ದೊರೆಯದೇ ಇರುವ ಸಂದರ್ಭದಲ್ಲಿ ಮಾತ್ರ ಸಾಮಾನ್ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುವುದು (ಸುತ್ತೋಲೆ ಸಂಖ್ಯೆ:ಆಕುಕ 25 ಎಂಎಸ್‌ಎನ್ 2016 ದಿನಾಂಕ : 14–03–2016), ಈ ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಯಾದರೂ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

• ಈ ಮೇಲಿನ ಹುದ್ದೆಗಳಿಗೆ ನಿಯಮಾನುಸಾರ ಕಂಪ್ಯೂಟರ್‌ನ ಸಾಕ್ಷರತೆಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು, ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಮಾಣ ಪತ್ರ ಹೊಂದಿರಬೇಕು. (ವೈದ್ಯಾಧಿಕಾರಿಗಳನ್ನು ಹೊರತುಪಡಿಸಿ).

• ಈ ನೇಮಕಾತಿ ಪ್ರಕಟಣೆಯು ರೋಲಿಂಗ್ ಪ್ರಕಟಣೆ ಆಗಿರುವುದರಿಂದ ನಿಗದಿಪಡಿಸಿರುವ ನೇರ ಸಂದರ್ಶನದ ದಿನಾಂಕದಂದು ಭರ್ತಿ ಆಗದೆ ಇರುವ ಹುದ್ದೆಗಳನ್ನು ನಂತರ ಅರ್ಜಿ ಸಲ್ಲಿಸಿ ಸಂದರ್ಶನದ ಮುಖಾಂತರ ಹುದ್ದೆಗಳನ್ನು ಆಯ್ಕೆ ಮಾಡಲಾಗುವುದು, ಇದರ ಅವಧಿಯು ದಿ:31–03–2024ರ ವರೆಗೆ ಇರುತ್ತದೆ.

ಆಸಕ್ತಿಯುಳ್ಳ ಅಭ್ಯರ್ಥಿಗಳು ದಿನಾಂಕ : 22–11–2023 ಬೆಳಿಗ್ಗೆ 11:00 ಗಂಟೆಗೆ ನೇರ ಸಂದರ್ಶನಕ್ಕೆ ತಮ್ಮ ಮೂಲ ದಾಖಲೆಗಳೊಂದಿಗೆ 1 ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಛೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ಆವರಣ, ಹಳೇ ಟಿ.ಬಿ ಆಸ್ಪತ್ರೆ, ಹಳೇ ಮದ್ರಾಸ್ ರಸ್ತೆ, ಸ್ವಾಮಿ ವಿವೇಕಾನಂದ ಮೆಟ್ರೋ ನಿಲ್ದಾಣದ ಹತ್ತಿರ, ಇಂದಿರಾನಗರ, ಬೆಂಗಳೂರು–38 ಇಲ್ಲಿಗೆ ಹಾಜರಾಗುವುದು.

ಸಹಿ/–
ಸದಸ್ಯ ಕಾರ್ಯದರ್ಶಿಗಳು, ಜಿಲ್ಲಾ ಆರೋಗ್ಯ ಮತ್ತು ಕು.ಕ ಸಂಘ, ಬೆಂಗಳೂರು ನಗರ ಜಿಲ್ಲೆ.

DIPR/CP/2119/Zen/2023-24

ಸಂಕ್ಷಿಪ್ತ ಸುದ್ದಿ

ಬೆಂಗಳೂರು ರಿಯಲ್ ಎಸ್ಟೇಟ್‌ಗೆ ನವೀನ್ಸ್ ಕಂಪನಿ

ಬೆಂಗಳೂರು: ತಮಿಳುನಾಡಿನ ರಿಯಲ್ ಎಸ್ಟೇಟ್ ಕಂಪನಿ ನವೀನ್ಸ್, ಆರಂಭಿಕ ₹250 ಕೋಟಿ ಹೂಡಿಕೆಯೊಂದಿಗೆ ಬೆಂಗಳೂರು ಮಾರುಕಟ್ಟೆಯನ್ನು ಪ್ರವೇಶಿಸಿದೆ.

ಇನ್‌ಫ್ಯಾಂಟ್ರಿ ರಸ್ತೆಯ ಬಳಿ ಹೊಸ ಕಚೇರಿಯನ್ನು ಕಂಪನಿಯು ಗುರುವಾರ ಉದ್ಘಾಟನೆ ಮಾಡಿದೆ. ಜೆಪಿ ನಗರದ ನಾಲ್ಕನೇ ಹಂತದಲ್ಲಿ ತನ್ನ ಮೊದಲ ಐಷಾರಾಮಿ ಅಪಾರ್ಟ್‌ಮೆಂಟ್ ಯೋಜನೆ ಆರಂಭಿಸುವುದಾಗಿ ಇದೇ ವೇಳೆ ಕಂಪನಿಯು ಘೋಷಿಸಿದೆ.

ನಾವೀನ್ಯ, ಅಪೂರ್ವ ಮತ್ತು ಪ್ರೀಮಿಯಂ ವಿನ್ಯಾಸದ ಹಾಗೂ ವಿಸ್ತಾರವಾದ ಮನೆಗಳನ್ನು ಬೆಂಗಳೂರಿನ ಜನರು ಇಷ್ಟಪಡುವ ನಂಬಿಕೆ ಇದೆ ಎಂದು ಕಂಪನಿಯ ಸಂಸ್ಥಾಪಕ ಮತ್ತು ಅಧ್ಯಕ್ಷ ಆರ್. ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಮಾ ಕಂಪನಿ ಹೆಗಲಿಗೆ ಪರಿಹಾರ ಪಾವತಿ ಹೊಣೆ

ಬೆಂಗಳೂರು: ಬಸ್‌ನ ಫುಟ್‌ಬೋರ್ಡ್‌ನಿಂದ ಕೆಳಗೆ ಬಿದ್ದು ಕ್ಲೀನರ್ ಸಾವನ್ನಪ್ಪಿದ್ದ ಪ್ರಕರಣವೊಂದರಲ್ಲಿ ಪರಿಹಾರ ಪಾವತಿ ಹೊಣೆಯನ್ನು ಬಸ್ ಮಾಲೀಕರಿಂದ ವಿಮಾ ಕಂಪನಿಯ ಹೆಗಲಿಗೆ ಹೊರಿಸಿ ಹೈಕೋರ್ಟ್ ಆದೇಶ ನೀಡಿದೆ.

ಈ ಸಂಬಂಧ ಖಾಸಗಿ ಬಸ್ ಮಾಲೀಕ ಟಿ.ಶಾಂತಕುಮಾರ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಸೋಮಶೇಖರ್ ಮತ್ತು ನ್ಯಾಯಮೂರ್ತಿ ಉಮೇಶ್ ಎಂ.ಅಡಿಗ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಮೃತಪಟ್ಟ ವ್ಯಕ್ತಿ ಬಸ್ ಕ್ಲೀನರ್ ಆಗಿದ್ದು, ಅವರು ವಿಮಾ ಪಾಲಿಸಿ ವ್ಯಾಪ್ತಿಗೆ ಒಳಪಡುವುದಿಲ್ಲ' ಎಂಬ ವಿಮಾ ಕಂಪನಿ ವಾದವನ್ನು ತಿರಸ್ಕರಿಸಿದೆ.

'ಅಪಘಾತ ನಡೆದ ದಿನ ಮೃತ ಕ್ಲೀನರ್, ನಿರ್ವಾಹಕರಾಗಿಯೂ ಕೆಲಸ ನಿರ್ವಹಿಸಿರುವುದು ಸಾಕ್ಷ್ಯಧಾರಗಳಿಂದ ಸಾಬೀತಾಗಿದೆ' ಎಂದು ತೀರ್ಮಾನಿಸಿದೆ.

₹ 8.58 ಲಕ್ಷ ಪರಿಹಾರ ಪಾವತಿಯ ಹೊಣೆಯನ್ನು ಬಸ್ ಮಾಲೀಕರಿಗೆ ಹೊರಿಸಿದ್ದ ವಿಚಾರಣಾ ನ್ಯಾಯಾಲಯದ ಆದೇಶ ರದ್ದುಪಡಿಸಿರುವ ನ್ಯಾಯಪೀಠ, 'ಮೃತರ ಕುಟುಂಬದವರಿಗೆ ವಿಮಾ ಕಂಪನಿಯೇ ಪರಿಹಾರ ಪಾವತಿಸಬೇಕು. ಪರಿಹಾರದ ಮೊತ್ತವನ್ನು ಎಂಟು ವಾರಗಳಲ್ಲಿ ಠೇವಣಿ ಇರಿಸಬೇಕು. ನಂತರ ಈ ಮೊತ್ತವನ್ನು ನ್ಯಾಯಮಂಡಳಿ ಮೃತರ ಕುಟುಂಬದವರಿಗೆ ಬಿಡುಗಡೆ ಮಾಡಬೇಕು' ಎಂದು ಆದೇಶಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ • ವಿವಿಧ ಕ್ಷೇತ್ರಗಳ ಸಾಧಕರಿಗೆ 'ರಮಣಶ್ರೀ ಶರಣ ಪ್ರಶಸ್ತಿ' ಪ್ರದಾನ

'ಸಂವಿಧಾನ ವಿರೋಧಿಗಳು ಶರಣ ಸಾಹಿತ್ಯ ಒಪ್ಪಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನ ವಿರೋಧಿಗಳು ಶರಣ ಸಾಹಿತ್ಯವನ್ನೂ ಒಪ್ಪುವುದಿಲ್ಲ. ಇಂತಹ ಸಂವಿಧಾನ ವಿರೋಧಿಗಳನ್ನು ನಾವು ದೂರ ಇಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ರಮಣಶ್ರೀ ಪ್ರತಿಷ್ಠಾನ ಜಂಟಿಯಾಗಿ ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳ ಸಾಧಕರಿಗೆ 'ರಮಣಶ್ರೀ ಶರಣ ಪ್ರಶಸ್ತಿ' ಪ್ರದಾನ ಮಾಡಿ, ಎಸ್. ಷಡಕ್ಷರಿ ಅವರ 'ಕ್ಷಣ ಹೊತ್ತು ಅಣಿಮುತ್ತು' ಭಾಗ 12 ಮತ್ತು ಭಾಗ 13 ಬಿಡುಗಡೆ ಮಾಡಿದರು. ಈ ವೇಳೆ ಮಾತನಾಡಿದ ಅವರು, 'ಸಂವಿಧಾನ ಮತ್ತು ಶರಣ ಸಾಹಿತ್ಯದ ಆಶಯ ಒಂದೇ ಆಗಿದೆ. ಜಾತಿ ತಾರತಮ್ಯ ಇಲ್ಲದ ಸಮಾಜ ನಿರ್ಮಾಣ ಇವೆರಡರ ಗುರಿ' ಎಂದು ತಿಳಿಸಿದರು.

'ಸಮಾಜದ ಋಣ ನಮ್ಮ ಮೇಲಿದೆ. ಆ ಋಣವನ್ನು ತೀರಿಸುವ ಮೂಲಕ ಬಸವಾದಿ ಶರಣರ ಆಶಯದ ಸಮಾಜ ನಿರ್ಮಾಣ ಮಾಡಬೇಕು. ನಾವು ವಿಶ್ವಮಾನವ ಆಗದಿದ್ದರೂ ಅಲ್ಪ ಮಾನವ ಆಗಬಾರದು. ಅಲ್ಪ ಮಾನವನಾದರೆ ನಮ್ಮ ಬದುಕು ವ್ಯರ್ಥ ಆಗುತ್ತದೆ' ಎಂದರು.

ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ, 'ಶರಣ ಸಾಹಿತ್ಯ ವಚನ ರೂಪದಲ್ಲಿ ಬರೆದಿದ್ದರೆ ಕನ್ನಡ ನಾಡು ಬಡವಾಗುತ್ತಿತ್ತು. ಶುದ್ಧ ಸಾಹಿತ್ಯದ ವಚನಗಳು ಶಾಶ್ವತ ರಚನೆಯಾಗಿವೆ. ಬದುಕಿನ ಪ್ರಶ್ನೆಗಳಿಗೆ ವಚನದಲ್ಲಿ ಉತ್ತರಗಳಿವೆ. ದೇವರು ಮತ್ತು ಮನುಷ್ಯರ ನಡುವಿನ ಮಧ್ಯವರ್ತಿಯನ್ನು ಬಸವಣ್ಣ ತೆಗೆದು ಹಾಕಿದರು' ಎಂದು ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಅಪ್ಪಾರಾವ್ ಅಕ್ಕೋಣೆ, 'ನಮ್ಮ ಪರಿಷತ್ತು ಲಿಂಗಾಯತರಿಗೆ ಮಾತ್ರ ಸಂಬಂಧಿಸಿದ್ದಲ್ಲ. ಇದರಲ್ಲಿ ಎಲ್ಲ ಜಾತಿಯವರು ಇದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ವಿದ್ಯಾವರ್ಧಕ ಸಂಘದ ಮಾದರಿಯಲ್ಲಿ ನಮ್ಮ ಪರಿಷತ್ತಿಗೂ ಸರ್ಕಾರ ಶಾಶ್ವತ ಅನುದಾನ ಒದಗಿಸಬೇಕು' ಎಂದು ಮನವಿ ಮಾಡಿದರು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ ಸಿದ್ದರಾಮಯ್ಯ, 'ಶಾಶ್ವತ ಅನುದಾನಕ್ಕೆ ಸಂಬಂಧಿಸಿದಂತೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ (ಕುಳಿತವರು ಎಡದಿಂದ) ಎನ್. ತಿಮ್ಮಪ್ಪ, ಓಂಕಾರ್‌ನಾಥ್ ಹವಾಲ್ದಾರ್, ಬಸವರಾಜ ಸಾದರ, ಎ.ಜಿ. ಶಿವಕುಮಾರ್, ದೇವರಾಜು ಪಿ. ಚಿಕ್ಕಹಳ್ಳಿ, ಡಾ.ವಿಜಯಲಕ್ಷ್ಮಿ ಬಾಳೇಕುಂದ್ರಿ, ಜೆ.ಎಸ್. ಖಂಡೇರಾವ್, ವೀಣಾ ಬನ್ನಂಜೆ, ಕುಮಾರ ಕಣವಿ ಮತ್ತು ಸ್ನೇಹಾ ಕಪ್ಪಣ್ಣ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್, ಕರ್ನಾಟಕ ಗಡಿ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ನಿಕಟಪೂರ್ವ ಅಧ್ಯಕ್ಷ ಸಿ. ಸೋಮಶೇಖರ್, ಕನ್ನಡಪ್ರಭದ ಪ್ರಧಾನ ಸಂಪಾದಕ ರವಿ ಹೆಗಡೆ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ವಿ. ಸೋಮಣ್ಣ, ಬಸವರಾಜ ಬೊಮ್ಮಾಯಿ, ರಮಣಶ್ರೀ ಪ್ರತಿಷ್ಠಾನದ ಅಧ್ಯಕ್ಷ ಎಸ್. ಷಡಕ್ಷರಿ, ಅಪ್ಪಾರಾವ್ ಅಕ್ಕೋಣೆ, ವೀರೇಂದ್ರ ಷಡಕ್ಷರಿ ಇದ್ದಾರೆ —ಪ್ರಜಾವಾಣಿ ಚಿತ್ರ

10 ಮಂದಿಗೆ ಪ್ರಶಸ್ತಿ ಪ್ರದಾನ

ಕಾರ್ಯಕ್ರಮದಲ್ಲಿ ಡಾ. ವಿಜಯಲಕ್ಷ್ಮಿ ಬಾಳೇಕುಂದ್ರಿ ಅವರಿಗೆ 'ರಮಣಶ್ರೀ ಶರಣ ಜೀವಮಾನ ಸಾಧನೆ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಇದು ₹ 50 ಸಾವಿರ ನಗದು ಒಳಗೊಂಡಿದೆ. ವೀಣಾ ಬನ್ನಂಜೆ, ಬಸವರಾಜ ಸಾದರ, ಎನ್. ತಿಮ್ಮಪ್ಪ ಹಾಗೂ ಓಂಕಾರ್‌ನಾಥ್ ಹವಾಲ್ದಾರ್ ಅವರಿಗೆ 'ರಮಣಶ್ರೀ ಶರಣ ಹಿರಿಯ ಶ್ರೇಣಿ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಈ ಪ್ರಶಸ್ತಿ ತಲಾ ₹ 40 ಸಾವಿರ ನಗದು ಒಳಗೊಂಡಿದೆ. ಎ.ಜಿ. ಶಿವಕುಮಾರ, ದೇವರಾಜ ಪಿ. ಚಿಕ್ಕಹಳ್ಳಿ, ಕುಮಾರ ಕಣವಿ ಹಾಗೂ ಜೆ.ಎಸ್. ಖಂಡೇರಾವ ಅವರಿಗೆ 'ರಮಣಶ್ರೀ ಶರಣ ಉತ್ತೇಜನ ಶ್ರೇಣಿ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಇದು ತಲಾ ₹ 20 ಸಾವಿರ ನಗದು ಒಳಗೊಂಡಿದೆ. ಸ್ನೇಹಾ ಕಪ್ಪಣ್ಣ ಅವರಿಗೆ 'ರಮಣಶ್ರೀ ಶರಣ ವಿಶೇಷ ಪುರಸ್ಕಾರ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ವಿಜಯಲಕ್ಷ್ಮಿ ಬಾಳೇಕುಂದ್ರಿ ಅವರು ಪ್ರಶಸ್ತಿಯ ನಗದು ಹಾಗೂ ₹ 501 ಮೊತ್ತವನ್ನು ಪ್ರತಿಷ್ಠಾನಕ್ಕೆ ನೀಡಿದರು. 'ಮುಂದಿನ ವರ್ಷದಿಂದ ವಚನ ಸಾಹಿತ್ಯ ಕ್ಷೇತ್ರದಲ್ಲಿ ಮಕ್ಕಳನ್ನೂ ಗುರುತಿಸಿ, ಗೌರವಿಸುವ ಕಾರ್ಯಕ್ಕೆ ಈ ಹಣವನ್ನು ಬಳಸಿಕೊಳ್ಳುವಂತೆ' ಮನವಿ ಮಾಡಿಕೊಂಡರು.

ಅದ್ಭುತ ಬ್ಯಾಟ್ಸ್‌ಮನ್ ತನ್ನ 50 ನೇ ಓಡಿಐ ಶತಕ ಬಾರಿಸಿದರು!

ಕೃಷಿ ಮೇಳ ಇಂದಿನಿಂದ

ಪ್ರಜಾವಾಣಿ ವಾರ್ತೆ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಬೆಂಗಳೂರು: ನಗರದ ಕೃಷಿ ವಿಶ್ವ ವಿದ್ಯಾಲಯದಲ್ಲಿ ಇಂದಿನಿಂದ (ಶುಕ್ರವಾರ) ನಾಲ್ಕು ದಿನ ನಡೆಯಲಿರುವ ಕೃಷಿ ಮೇಳವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಲಿದ್ದು, ಐವರು ಸಾಧಕ ರೈತರಿಗೆ ರಾಜ್ಯಮಟ್ಟದ 'ಕೃಷಿ ಪ್ರಶಸ್ತಿ'ಗಳನ್ನು ಪ್ರದಾನ ಮಾಡಲಿದ್ದಾರೆ.

ಇದೇ ದಿನ ಮಧ್ಯಾಹ್ನ 2.30ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ಬೆಂಗಳೂರು ನಗರ, ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಜಿಲ್ಲಾಮಟ್ಟದ ಮತ್ತು ತಾಲ್ಲೂಕು ಮಟ್ಟದ ಪ್ರಗತಿಪರ ರೈತ, ಮಹಿಳಾ ರೈತರಿಗೆ ಗೃಹ ಸಚಿವ ಜಿ. ಪರಮೇಶ್ವರ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಕೃಷಿ ಮೇಳಕ್ಕೆ ಬರುವವರಿಗೆ ಪ್ರವೇಶ ಉಚಿತವಾಗಿದೆ. ಜಿಕೆವಿಕೆಯ ಮಹಾದ್ವಾರದಿಂದ ಕೃಷಿ ಮೇಳದ ಸಭಾಂಗಣಕ್ಕೆ ತಲುಪಲು ಉಚಿತ ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ರಿಯಾಯಿತಿ ದರದಲ್ಲಿ ಊಟದ ವ್ಯವಸ್ಥೆ ಇರುತ್ತದೆ. ಪ್ರತ್ಯೇಕ ನಿಲುಗಡೆ ವ್ಯವಸ್ಥೆ, ಕುಡಿಯುವ ನೀರು, ಶೌಚಾಲಯದ ವ್ಯವಸ್ಥೆ ಮಾಡಲಾಗಿದೆ.

ಕೃಷಿ ಮೇಳದ ಬಗ್ಗೆ ಸಂಪೂರ್ಣ ಮಾಹಿತಿ ನೀಡಲು ಪ್ರತ್ಯೇಕ ಆ್ಯಪ್ ಸಿದ್ಧಪಡಿಸಲಾಗಿದ್ದು, ಇದು ಅಂತರ್ಜಾಲದ ಸಂಪರ್ಕವಿಲ್ಲದೇ ಕಾರ್ಯನಿರ್ವಹಿಸುತ್ತದೆ. ಈ ಆ್ಯಪ್ ಅನ್ನು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ವಿ.ವಿ ವಿಸ್ತರಣಾ ನಿರ್ದೇಶಕ ವಿ.ಎಲ್. ಮಧುಪ್ರಸಾದ್ ತಿಳಿಸಿದ್ದಾರೆ.

ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಎನ್. ಚಲುವರಾಯಸ್ವಾಮಿ, ಕೃಷ್ಣ ಬೈರೇಗೌಡ, ಸಂಸದ ಡಿ.ವಿ. ಸದಾನಂದಗೌಡ, ಶಾಸಕ ಶರತ್ ಬಚ್ಚೇಗೌಡ, ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಭಾಗವಹಿಸಲಿದ್ದಾರೆ.

ಸಾರಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ದೋಷ

ವಾಹನ ನೋಂದಣಿ ಸ್ಥಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ತಾಂತ್ರಿಕ ಸಮಸ್ಯೆ ಉಂಟಾಗಿರುವುದರಿಂದ ಕೆಲವು ದಿನಗಳಿಂದ ವಾಹನ ನೋಂದಣಿ ಸ್ಥಗಿತಗೊಂಡಿದೆ.

ಸೋಮವಾರದಿಂದಲೇ ತಾಂತ್ರಿಕ ಸಮಸ್ಯೆ ಕಾಣಿಸಿಕೊಂಡಿದ್ದು, ದೀಪಾವಳಿ ಹಬ್ಬದ ಸಮಯದಲ್ಲಿ ಹೊಸ ವಾಹನ ನೋಂದಣಿ ಮಾಡಲು ಉತ್ಸಾಹ ತೋರಿದವರಿಗೆ ನಿರಾಸೆ ಉಂಟಾಗಿದೆ. ರಾಜ್ಯದ ವಾಹನ ವಿತರಕರು ನಾಲ್ಕು ದಿನಗಳಿಂದ ಪ್ರಯತ್ನಿಸುತ್ತಿದ್ದಾರೆ.

'ವಾಹನ ಖರೀದಿಗೆ ಹಬ್ಬದ ದಿನಗಳು ಮಂಗಳಕರ ಎಂದು ತಿಳಿದು ವಾಹನ ಖರೀದಿಗೆ ಮುಂದಾಗಿದ್ದ ನಮ್ಮ ಅನೇಕ ಗ್ರಾಹಕರಿಗೆ ನಿರಾಸೆಯಾಗಿದೆ. ನೋಂದಣಿ ಮಾಡದೇ ವಿತರಣೆ ಮಾಡಲು ಸಾಧ್ಯವಿಲ್ಲ. ನೋಂದಣಿಗಿಂತ ಮೊದಲೇ ವಿತರಿಸಿದರೆ ಸಮಸ್ಯೆಗಳು ಎದುರಾಗುತ್ತವೆ' ಎಂದು ನಗರದ ಯಮಹಾ ಡೀಲರ್ ವಿಲ್ಸನ್ ಪ್ರಭು ಟಿ.ಎಂ. ತಿಳಿಸಿದರು.

ಪ್ರತಿವರ್ಷ ಹಬ್ಬದ ಸಮಯದಲ್ಲಿ ವಾಹನಗಳ ಮಾರಾಟ ಗರಿಷ್ಠ ಮಟ್ಟಕ್ಕೆ ತಲುಪುತ್ತಿತ್ತು. ದಿನಕ್ಕೆ ಸರಾಸರಿ 15 ವಾಹನಗಳು ಮಾರಾಟವಾಗುತ್ತಿದ್ದವು. ಈ ವರ್ಷ ವೆಬ್‌ಸೈಟ್ ಸಮಸ್ಯೆಯಿಂದಾಗಿ ಹೊಡೆತ ಬಿದ್ದಿದೆ. ಸದ್ಯ 50 ವಾಹನಗಳ ನೋಂದಣಿ ಬಾಕಿ ಇದ್ದು, ಶೇ 10ರಷ್ಟು ಗ್ರಾಹಕರು ಬುಕ್ಕಿಂಗ್ ರದ್ದುಗೊಳಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಹಬ್ಬಗಳ ಸಮಯದಲ್ಲಿ ರಾಜ್ಯದಾದ್ಯಂತ ನಿತ್ಯ ಕನಿಷ್ಠ 750 ವಾಹನಗಳು ನೋಂದಣಿಯಾಗುತ್ತಿದ್ದವು. ಅದರಲ್ಲಿ 500ರಷ್ಟು ಕಾರುಗಳೇ ಇರುತ್ತಿದ್ದವು. ಈ ಬಾರಿ ಸುಮಾರು 2,000 ವಾಹನಗಳ ನೋಂದಣಿ ಬಾಕಿ ಉಳಿದಿದೆ ಎಂದು ಕಾರು ಡೀಲರ್ ಸಂಸ್ಥೆಯ ನಿರ್ದೇಶಕರೊಬ್ಬರು ಮಾಹಿತಿ ನೀಡಿದರು.

ಮತದಾರರ ಕರಡು ಪಟ್ಟಿ ವಿಶೇಷ ಅಭಿಯಾನ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭೆ ಕ್ಷೇತ್ರಗಳ ಮತದಾರರ ಕರಡು ಪಟ್ಟಿ ಪ್ರಕಟಿಸಲಾಗಿದ್ದು, ಆಕ್ಷೇಪಣೆ ಸಲ್ಲಿಸಲು ನಾಲ್ಕು ದಿನ ವಿಶೇಷ ಅಭಿಯಾನ ಆಯೋಜಿಸಲಾಗಿದೆ.

ಕರಡು ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು, ತಿದ್ದುಪಡಿ, ಹೊಸದಾಗಿ ಸೇರಿಸಲು ಡಿ.9ರವರೆಗೆ ಅವಕಾಶವಿದೆ. ವಾರ್ಡ್ ಕಚೇರಿಗಳು, ಮತಗಟ್ಟೆಗಳಲ್ಲಿ ನ.18,19, ಡಿ.2, 3ರಂದು ಅಭಿಯಾನ ಆಯೋಜಿಸಲಾಗಿದೆ ಎಂದು ಚುನಾವಣಾ ವಿಭಾಗದ ವಿಶೇಷ ಆಯುಕ್ತ ಆರ್. ರಾಮಚಂದ್ರನ್ ತಿಳಿಸಿದ್ದಾರೆ.

ಎನ್‌ಐವಿಗೆ ರಕ್ತದ ಮಾದರಿ

ಚಿಕ್ಕಬಳ್ಳಾಪುರ: ಮುಂದಿನ 2 ತಿಂಗಳ ವರೆಗೂ ತಲಕಾಯಲಬೆಟ್ಟ ಗ್ರಾಮ ಹಾಗೂ ಸುತ್ತಲಿನ 5 ಕಿ.ಮೀ ವ್ಯಾಪ್ತಿಯ ಗ್ರಾಮಗಳಲ್ಲಿ ಜ್ವರಪೀಡಿತರು, ಗರ್ಭಿಣಿಯರ ರಕ್ತದ ಮಾದರಿಯನ್ನು ಸಂಗ್ರಹಿಸಿ ಪುಣೆಯ ಎನ್‌ಐವಿಗೆ ಕಳುಹಿಸಲಾಗುವುದು' ಎಂದು ಡಿಎಚ್‌ಒ ಮಹೇಶ್ ಕುಮಾರ್ ತಿಳಿಸಿದರು.

ಆಹಾರ ಉತ್ಪಾದನಾ ಘಟಕಗಳ ಮೇಲೆ ಐಟಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೆರಿಗೆ ವಂಚನೆ ಆರೋಪದಡಿ ನಗರದ ಕೆಲ ಡ್ರೈಫ್ರೂಟ್ಸ್ ಮಾರಾಟ ಮಳಿಗೆಗಳು ಹಾಗೂ ಆಹಾರ ಉತ್ಪಾದನಾ ಘಟಕಗಳ ಮೇಲೆ ಗುರುವಾರ ದಾಳಿ ಮಾಡಿದ್ದ ಆದಾಯ ತೆರಿಗೆ ಇಲಾಖೆ (ಐಟಿ) ಅಧಿಕಾರಿಗಳು, ದಾಖಲೆಗಳ ಪರಿಶೀಲನೆ ನಡೆಸಿದರು.

ದೀಪಾವಳಿ ಹಬ್ಬದ ಅಂಗವಾಗಿ ಡ್ರೈಫ್ರೂಟ್ಸ್ ಹಾಗೂ ಇತರೆ ಆಹಾರಗಳ ಮಾರಾಟ ಪ್ರಮಾಣ ಹೆಚ್ಚಾಗಿದೆ. ಕೆಲ ವ್ಯಾಪಾರಿಗಳು, ಸುಳ್ಳು ಲೆಕ್ಕ ತೋರಿಸಿ ಸರ್ಕಾರಕ್ಕೆ ತೆರಿಗೆ ವಂಚಿಸಲು ಮುಂದಾಗಿದ್ದರು. ಈ ಬಗ್ಗೆ ಮಾಹಿತಿ ಕಲೆ ಹಾಕಿದ್ದ ಐಟಿ ಅಧಿಕಾರಿಗಳು, 10 ವಿಶೇಷ ತಂಡಗಳ ಮೂಲಕ ಈ ದಾಳಿ ಮಾಡಿದರು.

ರಾಜಾಜಿನಗರದಲ್ಲಿರುವ ಆಹಾರ ಉತ್ಪಾದನಾ ಘಟಕ ಹಾಗೂ ಚಿಕ್ಕಪೇಟೆಯಲ್ಲಿರುವ ಡ್ರೈಫ್ರೂಟ್ಸ್ ಮಳಿಗೆಗಳಲ್ಲಿ ಅಧಿಕಾರಿಗಳು ಶೋಧ ನಡೆಸಿದರು. ಮಳಿಗೆ ಹಾಗೂ ಘಟಕದ ಮಾಲೀಕರ ಮನೆಗಳ ಮೇಲೆ ದಾಳಿ ಮಾಡಿದ ಅಧಿಕಾರಿಗಳು, ನಗದು ಹಾಗೂ ಇತರೆ ವಸ್ತುಗಳನ್ನು ಜಪ್ತಿ ಮಾಡಿರುವುದಾಗಿ ಗೊತ್ತಾಗಿದೆ.

ಗುರುವಾರ ಬೆಳಿಗ್ಗೆಯಿಂದ ಆರಂಭವಾದ ಅಧಿಕಾರಿಗಳ ಶೋಧ ರಾತ್ರಿಯೂ ಮುಂದುವರಿದಿತ್ತು.

'ಖಚಿತ ಮಾಹಿತಿಯಂತೆ ಪ್ರತ್ಯೇಕ ತಂಡಗಳನ್ನು ರಚಿಸಿ ದಾಳಿ ಮಾಡಲಾಗಿದೆ. ಶೋಧ ಪ್ರಕ್ರಿಯೆ ಸಂಪೂರ್ಣವಾಗಿ ಮುಗಿದ ನಂತರವೇ ವಂಚನೆ ಬಗ್ಗೆ ನಿಖರ ಮಾಹಿತಿ ತಿಳಿಯಲಿದೆ' ಎಂದು ಮೂಲಗಳು ಹೇಳಿವೆ.

ದೊಡ್ಡೇಗೌಡ, ನಾಗರಾಜಯ್ಯಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಗೆಳೆಯರ ಬಳಗ ನೀಡುವ 'ಕನ್ನಡ ಅರವಿಂದ ಪ್ರಶಸ್ತಿ'ಗೆ ಆರ್. ದೊಡ್ಡೇಗೌಡ ಹಾಗೂ 'ಕನ್ನಡ ಚಿರಂಜೀವಿ ಪ್ರಶಸ್ತಿ'ಗೆ ನಾ. ನಾಗರಾಜಯ್ಯ ಆಯ್ಕೆಯಾಗಿದ್ದಾರೆ.

ದೊಡ್ಡೇಗೌಡ ಕರ್ನಾಟಕ ಕನ್ನಡ ಬರಹಗಾರರ ಹಾಗೂ ಪ್ರಕಾಶಕರ ಸಂಘದ ಕಾರ್ಯದರ್ಶಿಯಾಗಿದ್ದಾರೆ. ಕನ್ನಡ ಪರ ಹೋರಾಟಗಾರ ನಾ. ನಾಗರಾಜಯ್ಯ ರಾಜ್ಯದ ವಿವಿಧ ಭಾಗಗಳಲ್ಲಿ ನಡೆದ ಕನ್ನಡ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ.

ನಗರದ ನಯನ ಸಭಾಂಗಣದಲ್ಲಿ ಡಿ.12ರಂದು ನಡೆಯಲಿರುವ ಪುಸ್ತಕ ಬಹುಮಾನ, ಕನ್ನಡ ಕನ್ನಡ ಚಿಂತನೆ ಸಮಾರಂಭದಲ್ಲಿ ವಾರ್ಷಿಕ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುವುದು ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

ಬೆಂಗಳೂರು ಹಬ್ಬ: 300ಕ್ಕೂ ಹೆಚ್ಚು ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.1ರಿಂದ 11ರವರೆಗೆ ನಡೆಯುವ ಬೆಂಗಳೂರು ಹಬ್ಬದ ಅಂಗವಾಗಿ ನಗರದ 45 ಕಡೆ 300ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಮುಖ್ಯಮಂತ್ರಿ ಗೃಹ ಕಚೇರಿ ಕೃಷ್ಣಾದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಬೆಂಗಳೂರು ಹಬ್ಬ ಘೋಷಣೆ ಮತ್ತು 'ಅನ್ ಬಾಕ್ಸಿಂಗ್ ಬೆಂಗಳೂರು' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ರತಿ ವರ್ಷದಂತೆ ಈ ಬಾರಿಯೂ ಕಲೆ, ಸಂಸ್ಕೃತಿ, ಸಾಹಿತ್ಯ, ಪರಂಪರೆ, ತಂತ್ರಜ್ಞಾನ, ಪರಿಸರ, ನೃತ್ಯ, ಸಂಗೀತ, ರಂಗಭೂಮಿ ಸೇರಿದಂತೆ 12 ವಿವಿಧ ಕ್ಷೇತ್ರಗಳಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ಕರಗ, ಕಡಲೇಕಾಯಿ ಪರಿಷೆ ಸೇರಿದಂತೆ ಹಲವು ವಿಶಿಷ್ಟ ಆಚರಣೆ, ತನ್ನದೇ ವಿಶೇಷ ಹೊಂದಿರುವ ಸಂಸ್ಕೃತಿ ಉಳಿಸಿ, ಬೆಳೆಸುವ ಕೆಲಸವನ್ನು ಬೆಂಗಳೂರು ಹಬ್ಬದ ಮೂಲಕ ಮಾಡಲಾಗುತ್ತಿದೆ ಎಂದರು.

ಹಬ್ಬದ ಯೋಜನೆಗೆ ನೂರಕ್ಕೂ ಹೆಚ್ಚು ಸಂಘ-ಸಂಸ್ಥೆಗಳು ಕೈಜೋಡಿಸುತ್ತಿವೆ. ಪೊಲೀಸ್ ಇಲಾಖೆ, ಮೆಟ್ರೊ, ಬಿಎಂಟಿಸಿ ಹಬ್ಬಕ್ಕೆ ಅನುಕೂಲವಾಗುವಂತಹ ಕಾರ್ಯಕ್ರಮ ರೂಪಿಸುತ್ತಿವೆ. ವ್ಯಾಪಾರ, ವಹಿವಾಟು, ಪ್ರವಾಸೋದ್ಯಮ ಚಟುವಟಿಕೆ ಮೂಲಕ ರಾಜ್ಯದ ಆರ್ಥಿಕತೆಗೆ ಉತ್ತೇಜನ ನೀಡಲಾಗುವುದು. ಬೆಂಗಳೂರಿನ ಬ್ರ್ಯಾಂಡ್‌ಗೆ ಜಾಗತಿಕ ಮನ್ನಣೆ ದೊರಕಿಸಲಾಗುವುದು ಎಂದು ಹೇಳಿದರು.

ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಅನ್ ಬಾಕ್ಸಿಂಗ್ ಬೆಂಗಳೂರು ಫೌಂಡೇಶನ್ ಸಹ ಸಂಸ್ಥಾಪಕ ಪ್ರಶಾಂತ್ ಪ್ರಕಾಶ್, ಮಾಲಿನಿ ಗೋಯಲ್, ಬೆಂಗಳೂರು ಹಬ್ಬದ ನಿರ್ದೇಶಕ ವಿ.ರವಿಚಂದರ್ ಇದ್ದರು.

ರಸ್ತೆಯಲ್ಲಿದ್ದ 104 ತಳ್ಳುವ ಗಾಡಿ ಜಪ್ತಿ

ಪಾದಚಾರಿ ಮಾರ್ಗ ಒತ್ತುವರಿ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಪೂರ್ವ, ಪಶ್ಚಿಮ, ಯಲಹಂಕ ಹಾಗೂ ದಕ್ಷಿಣ ವಲಯ ವ್ಯಾಪ್ತಿಯಲ್ಲಿಯ ಪಾದಚಾರಿ ಮಾರ್ಗದಲ್ಲಿನ ಒತ್ತುವರಿಯನ್ನು ಗುರುವಾರ ತೆರವುಗೊಳಿಸಲಾಗಿದೆ.

ಪೂರ್ವ ವಲಯ ವ್ಯಾಪ್ತಿಯ ಶಾಂತಿನಗರ, ಶಿವಾಜಿನಗರ, ಸಿ.ವಿ. ರಾಮನ್‌ನಗರ, ಪುಲಕೇಶಿನಗರ, ಸರ್ವಜ್ಞನಗರ ಮತ್ತು ಹೆಬ್ಬಾಳ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಪಾದಚಾರಿ ಮಾರ್ಗಗಳಲ್ಲಿ ಅಳವಡಿಸಿದ್ದ ಒಎಫ್‌ಸಿ ಕೇಬಲ್‌ಗಳನ್ನು ತೆರವುಗೊಳಿಸಲಾಗಿದೆ. ಅಂಗಡಿ ಮಳಿಗೆಗಳ ಚಾವಣಿ, ತಳ್ಳುವ ಗಾಡಿಗಳನ್ನು ತೆರವು ಮಾಡಲಾಗಿದೆ.

13 ಕಿ.ಮೀ ವ್ಯಾಪ್ತಿಯ ರಸ್ತೆಯಲ್ಲಿ 104 ತಳ್ಳುವ ಗಾಡಿ ಜಪ್ತಿ ಮಾಡಲಾಗಿದೆ. 19 ಅನಧಿಕೃತ ನಾಮಫಲಕಗಳು, 7,000 ಮೀಟರ್ ಒಎಫ್‌ಸಿ ಕೇಬಲ್ ಹಾಗೂ 5 ಅನಧಿಕೃತ ಪೆಟ್ಟಿಗೆ ಅಂಗಡಿಗಳನ್ನು ತೆರವುಗೊಳಿಸಲಾಗಿದೆ.

ಪಶ್ಚಿಮ ವಲಯದ ಮಹಾಲಕ್ಷ್ಮೀಪುರ ವಿಭಾಗದ ನಾಗಪುರ ವಾರ್ಡ್ 1ನೇ ಬ್ಲಾಕ್ ರಾಜಾಜಿನಗರ, 10ನೇ ಅಡ್ಡರಸ್ತೆ ಹಾಗೂ 19ನೇ ಮುಖ್ಯರಸ್ತೆ ಸೇರಿ 1.20 ಕಿ.ಮೀ ಒಎಫ್‌ಸಿ ಕೇಬಲ್, ಅಂಗಡಿಗಳನ್ನು ತೆರವುಗೊಳಿಸಲಾಗಿದೆ.

ಪಶ್ಚಿಮ ವಲಯ ಚಾಮರಾಜಪೇಟೆ ವಾರ್ಡ್ 5ನೇ ಮುಖ್ಯರಸ್ತೆ, 6ನೇ ಅಡ್ಡರಸ್ತೆಯಿಂದ 9ನೇ ಅಡ್ಡರಸ್ತೆಯವರೆಗೆ ಒಟ್ಟು 0.80 ಕಿ.ಮೀ. ಪಾದಚಾರಿ ಮಾರ್ಗದಲ್ಲಿ ಅಂಗಡಿಗಳನ್ನು ತೆರವು ಮಾಡಲಾಗಿದೆ.

ಯಲಹಂಕ ವಲಯ ವ್ಯಾಪ್ತಿಯ ರೈತರ ಸಂತೆ, ಸಹಕಾರನಗರ ಮುಖ್ಯ ರಸ್ತೆ, ಕೊಡಿಗೇಹಳ್ಳಿ ಮುಖ್ಯ ರಸ್ತೆ, ಅಟ್ಟೂರು ಲೇಔಟ್ ಮುಖ್ಯ ರಸ್ತೆ, ಬಿ.ಇ.ಎಲ್ ಲೇಔಟ್ ವಿದ್ಯಾರಣ್ಯಪುರ ಹಾಗೂ ಎನ್.ಟಿ.ಐ ಲೇಔಟ್ ಹಾಗೂ ದಕ್ಷಿಣ ವಲಯದ ಪದ್ಮನಾಭನಗರ ವ್ಯಾಪ್ತಿಯ ಬನಶಂಕರಿ ಉಪವಿಭಾಗದ ಗಣೇಶ ಮಂದಿರ, ಬಿ.ಡಿ.ಎ ಕಾಂಪ್ಲೆಕ್ಸ್ ಸುತ್ತಮುತ್ತಲಿನ 24ನೇ ಅಡ್ಡರಸ್ತೆ, 21, 17ನೇ ಮುಖ್ಯರಸ್ತೆ, 22ನೇ ಅಡ್ಡರಸ್ತೆ ಮತ್ತು 23ನೇ ಅಡ್ಡರಸ್ತೆಯಲ್ಲಿದ್ದ ಎಂಟು ತಳ್ಳುವ ಗಾಡಿ, ಎರಡು ಕೇಬಲ್, 10 ಆಟೋ ಕ್ರೇಟ್, ಒಂದು ಜಾಹಿರಾತು ಫಲಕ, ಎರಡು ಶೆಡ್ ಹಾಗೂ ಎರಡು ಬ್ಯಾರಿಕೇಡ್ ತೆರವುಗೊಳಿಸಲಾಯಿತು ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಪಾದಚಾರಿ ಮಾರ್ಗದಲ್ಲಿನ ಒತ್ತುವರಿಯನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು

ಭಾರತ 2023 INDIA
INCOME TAX DEPARTMENT
ಆದಾಯ ತೆರಿಗೆ ಇಲಾಖೆ
ಕೇಂದ್ರ ನೇರ ತೆರಿಗೆಗಳ ಮಂಡಳಿ
Azadi Ka Amrit Mahotsav
ತೆರಿಗೆದಾತರೇ ಗಮನಿಸಿ
e-ಪರಿಶೀಲನಾ ಯೋಜನೆ, 2021
ಎಐಎಸ್‌ನಲ್ಲಿ ಉಲ್ಲೇಖಿತ ಹಣಕಾಸು ವ್ಯವಹಾರಗಳ ಬಗ್ಗೆ ಆಕ್ಷೇಪಣೆ ಇದೆಯೆ?
ಅದನ್ನು ನಾವು ಮೂಲದಿಂದಲೇ ಪರಿಶೀಲಿಸುತ್ತೇವೆ



• www.incometax.gov.in ವೆಬ್‌ಸೈಟ್‌ನಲ್ಲಿರುವ ನಿಮ್ಮ ಆದಾಯ ತೆರಿಗೆ ಖಾತೆಯ ಎಐಎಸ್ ಟ್ಯಾಬ್‌ನಲ್ಲಿ ಲಭ್ಯವಿರುವ ಹಣಕಾಸು ವ್ಯವಹಾರಗಳ ತಪಾಸಣೆ ಮಾಡಿರಿ.
• ಒಂದು ವೇಳೆ ಅವೆಲ್ಲ ಸರಿ ಎನಿಸದಿದ್ದಲ್ಲಿ, ಆಕ್ಷೇಪಣೆ ಸಲ್ಲಿಸಿ. ನಾವು ಮೂಲದಿಂದಲೇ ತಪಾಸಣೆ ಕೈಗೊಳ್ಳುತ್ತೇವೆ.

1. ಐಟಿಆರ್'ನಲ್ಲಿನ ಮಾಹಿತಿಯು ಹೊಂದಾಣಿಕೆ ಇಲ್ಲದೆಯೆ ಮುಂದುವರಿದಲ್ಲಿ, ಇ-ಪರಿಶೀಲನಾ ಯೋಜನೆ ಅಡಿಯಲ್ಲಿ ನೋಟಿಸ್ ಹೊರಡಿಸಬಹುದಾಗಿರುತ್ತದೆ.
2. ಪರಿಶೀಲನಾ ಯೋಜನೆ, 2021ರ ಅಡಿಯಲ್ಲಿ ಎಲ್ಲಾ ಪ್ರಕ್ರಿಯೆಗಳನ್ನು ವಿದ್ಯುನ್ಮಾನ ವಿಧಾನದಲ್ಲಿ ಕೈಗೊಳ್ಳಲಾಗುತ್ತದೆ.
3. ಅಂತಹ ಸಂದರ್ಭಗಳಲ್ಲಿ, ಅರ್ಹತೆಯ ನಿಬಂಧನೆಗೊಳಪಟ್ಟು, ಆದಾಯ ತೆರಿಗೆ ಕಾಯ್ದೆ, 1961ರ ಸೆಕ್ಷನ್ 139(8ಎ) ಅಡಿಯಲ್ಲಿ, ಆದಾಯದ ರಿಟರ್ನ್ ಅಪ್‌ಡೇಟ್ ಮಾಡಬಹುದು.
4. ಪರಿಶಿಲನಾ ಯೋಜನೆ ಅಡಿಯಲ್ಲಿ ಹೊರಡಿಸಲಾದ ನೋಟಿಸ್‌ಗೆ, ನೀವು ನೀಡುವ ಪ್ರತಿಕ್ರಿಯೆಯು ವಿಷಯವನ್ನು ಇತ್ಯರ್ಥಪಡಿಸುವಲ್ಲಿ ನೆರವಾಗುತ್ತದೆ.

ಸ್ವಯಂಪ್ರೇರಿತ ತೆರಿಗೆ ಅನುಸರಣಾ ಉತ್ತೇಜನಕ್ಕಾಗಿ

e-ಬ್ರೊಷರ್‌ಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ
ಸಹಾಯವಾಣಿ 18001034215
e-ಪರಿಶೀಲನಾ ಯೋಜನೆ, 2021ರ ಪ್ರಶ್ನಾವಳಿಗಳು {www.incometax.gov.in ಮತ್ತು ಕ್ಯೂಆರ್ ಕೋಡ್‌ನಲ್ಲಿ ಲಭ್ಯ}
ಮಾಹಿತಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ
@IncomeTaxIndia @IncomeTaxIndia.Official @IncomeTaxIndiaOfficial @Income Tax India Incometaxindia.gov.in
cbc 15401/13/0016/2324

ಅವಧಿ ಮೀರಿ ಪಟಾಕಿ ಬಳಕೆ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಗದಿತ ಅವಧಿ ಮೀರಿ ಪಟಾಕಿ ಸಿಡಿಸಿದ್ದ 305 ಮಂದಿ ವಿರುದ್ಧ ನಗರದ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿರ್ದೇಶನದಂತೆ ರಾತ್ರಿ 8 ಗಂಟೆಯಿಂದ 10 ಗಂಟೆಯವರೆಗೆ ಮಾತ್ರ ಪಟಾಕಿ ಸಿಡಿಸಲು ಅವಕಾಶವಿದೆ’ ಎಂದು ನಗರ ಪೊಲೀಸ್ ಕಮಿಷನರ್ ಬಿ. ದಯಾನಂದ್ ಅವರು ಹೇಳಿದ್ದರು. ಜೊತೆಗೆ, ನಿಯಮ ಜಾರಿಗಾಗಿ ವಿಶೇಷ ಕಾರ್ಯಪಡೆ ಸಹ ರಚಿಸಿದ್ದರು.

‘ದೀಪಾವಳಿ ಹಬ್ಬದಂದು ಪಟಾಕಿಯಿಂದ ಉಂಟಾಗುವ ಅವಘಡಗಳನ್ನು ತಡೆಯಲು ಸಾಕಷ್ಟು ಕ್ರಮಗಳನ್ನು ಕೈಗೊಳ್ಳಲಾಗಿತ್ತು. ನ. 10ರಿಂದ 14ರವರೆಗೆ ನಗರದಲ್ಲಿ ಹಲವೆಡೆ ಎಸಿಪಿ ನೇತೃತ್ವದ ಕಾರ್ಯಪಡೆ ಸಂಚರಿಸಿತ್ತು. ಅವಧಿ ಮೀರಿ ಪಟಾಕಿ ಸಿಡಿಸಿದ್ದವರ ವಿರುದ್ಧ ಕ್ರಮ ಜರುಗಿಸಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

9 ಕಡೆ ಅಕ್ರಮ ಮಾರಾಟ: ‘ಪರವಾನಗಿ ಇಲ್ಲದೇ ನಗರದ 9 ಕಡೆಗಳಲ್ಲಿ ಪಟಾಕಿಗಳನ್ನು ಅಕ್ರಮವಾಗಿ ಮಾರಲಾಗುತ್ತಿತ್ತು. ಇಂಥ ಸ್ಥಳಗಳ ಮೇಲೆ ದಾಳಿ ಮಾಡಿ, ಪಟಾಕಿ ಜಪ್ತಿ ಮಾಡಲಾಗಿದೆ. ಜೊತೆಗೆ, ಪಟಾಕಿ ಮಾರುತ್ತಿದ್ದವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಇನ್‌ಸ್ಪೆಕ್ಟರ್ ಅಮಾನತು

ಬೆಂಗಳೂರು: ಪಟಾಕಿ ಅಕ್ರಮ ಮಾರಾಟ ತಡೆಯದೇ ಕರ್ತವ್ಯಲೋಪ ಎಸಗಿದ್ದ ಆರೋಪದಡಿ ಜೀವನ್‌ಬಿಮಾನಗರ ಠಾಣೆಯ ಇನ್‌ಸ್ಪೆಕ್ಟರ್ ಬಸವರಾಜ್ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

‘ನಗರದಲ್ಲಿ ಪಟಾಕಿ ಅವಘಡಗಳು ಸಂಭವಿಸದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಪಟಾಕಿ ಅಕ್ರಮ ಮಾರಾಟ ಕಂಡುಬಂದರೆ, ಸಂಬಂಧಪಟ್ಟವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಬೇಕು’ ಎಂದು ಕಮಿಷನರ್ ಬಿ.ದಯಾನಂದ್ ಎಲ್ಲ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಜೀವನ್‌ಬಿಮಾನಗರ ಠಾಣೆ ವ್ಯಾಪ್ತಿಯಲ್ಲಿ ಕೆಲವರು ಪಟಾಕಿಗಳನ್ನು ಅಕ್ರಮವಾಗಿ ಮಾರುತ್ತಿದ್ದರು. ಈ ಬಗ್ಗೆ ಇನ್‌ಸ್ಪೆಕ್ಟರ್ ಕ್ರಮ ಕೈಗೊಂಡಿರಲಿಲ್ಲ. ಎಸಿಪಿ ನೇತೃತ್ವದ ಕಾರ್ಯಪಡೆ, ದಾಳಿ ಮಾಡಿ ಪಟಾಕಿ ಅಕ್ರಮ ಮಾರಾಟದ ವಿರುದ್ಧ ಪ್ರಕರಣ ದಾಖಲಿಸಿತ್ತು.

‘ಇನ್‌ಸ್ಪೆಕ್ಟರ್ ಬಸವರಾಜ್ ಅವರು ಪಟಾಕಿ ಅಕ್ರಮ ಮಾರಾಟ ತಡೆಯದೇ ಕರ್ತವ್ಯ ಲೋಪ ಎಸಗಿದ್ದ ಆರೋಪ ಕೇಳಿಬಂದಿತ್ತು. ಪ್ರಾಥಮಿಕ ತನಿಖೆ ನಡೆಸಿದ್ದ ಕಮಿಷನರ್, ಇನ್‌ಸ್ಪೆಕ್ಟರ್ ಬಸವರಾಜ್ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ. ಆದೇಶ ಪ್ರತಿ ಇನ್‌ಸ್ಪೆಕ್ಟರ್ ಅವರಿಗೆ ಸದ್ಯದಲ್ಲೇ ತಲುಪಲಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ವಕೀಲ ಅಮಿತ್ ಕೊಲೆ ಅಪರಾಧಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲಮಂಗಲದ ವಕೀಲ ಕೇಶವಮೂರ್ತಿ ಅವರ ಪುತ್ರ ವಕೀಲ ಅಮಿತ್ ಕೇಶವಮೂರ್ತಿ ಕೊಲೆ ಪ್ರಕರಣದಲ್ಲಿ, ರಾಜೇಶ್ ಗೌಡ ಅವರಿಗೆ ಜೀವಾವಧಿ ಶಿಕ್ಷೆ, ₹ 1 ಲಕ್ಷ ದಂಡ ವಿಧಿಸಲಾಗಿದೆ.

ಬುಧವಾರ (ನ.15) ರಾಜೇಶ್ ಗೌಡ ದೋಷಿ ಎಂದು ತೀರ್ಮಾನಿಸಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ನ್ಯಾಯಾಧೀಶ ಹೊಸಮನಿ ಪುಂಡಲೀಕ ಅವರು ಗುರುವಾರ ಶಿಕ್ಷೆಯ ಪ್ರಮಾಣ ಪ್ರಕಟಿಸಿದರು.

ಭಾರತೀಯ ದಂಡ ಸಂಹಿತೆ-1860ರ ಕಲಂ 302ರ ಅಡಿಯಲ್ಲಿ ಜೀವಾವಧಿ ಮತ್ತು ಭಾರತೀಯ ಶಸ್ತ್ರಾಸ್ತ್ರ ಕಾಯ್ದೆ ಕಲಂ 30ರ ಅಡಿಯಲ್ಲಿ 4 ತಿಂಗಳ ಸಾಧಾರಣ ಜೈಲು ಶಿಕ್ಷೆ ಹಾಗೂ ₹ 2 ಸಾವಿರ ದಂಡ ವಿಧಿಸಲಾಗಿದೆ. ₹ 1 ಲಕ್ಷ ದಂಡ ಪಾವತಿಸಲು ತಪ್ಪಿದಲ್ಲಿ 1 ವರ್ಷ ಸಾಧಾರಣ ಜೈಲು ಶಿಕ್ಷೆ ಅನುಭವಿಸುವಂತೆ ಆದೇಶಿಸಲಾಗಿದೆ.

ತನಿಖೆನಡೆಸಿದ್ದಸರ್ಕಲ್‌ಇನ್ಸ್‌ಪೆಕ್ಟರ್ ಜಿ. ಪ್ರವೀಣ್ ಬಾಬು ಆರೋಪ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರ ಹಿರಿಯ ವಕೀಲ ಸಿ.ಎಚ್. ಹನುಮಂತ ರಾಯ ವಾದ ಮಂಡಿಸಿದ್ದರು.

ಏನಿದು ಘಟನೆ?: ‘ಸೋಲದೇವನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಆಚಾರ್ಯ ಎಂಜಿನಿಯರಿಂಗ್ ಕಾಲೇಜು ಬಳಿ 2017ರ ಜನವರಿ 13ರಂದು ಮಧ್ಯಾಹ್ನ 3.15ರ ಸಮಯದಲ್ಲಿ ಅಮಿತ್ ಕೇಶವಮೂರ್ತಿ ಅವರು ರಾಜೇಶ್ ಅವರ ಪತ್ನಿ ಪಿಡಿಒ ಶ್ರುತಿಗೌಡ ಜೊತೆ ಸ್ವಿಫ್ಟ್ ಕಾರಿನಲ್ಲಿ ಕುಳಿತಿದ್ದರು. ಶ್ರುತಿ ಗೌಡ ಅವರಿಗೆ ಸೇರಿದ ಈ ಕಾರನ್ನು ಹಿಂಬಾಲಿಸಿಕೊಂಡು ಬಂದಿದ್ದ ರಾಜೇಶ್, ಕಾರಿನ ಬಾಗಿಲು ತೆರೆದು ತಮ್ಮ ಬಳಿ ಇದ್ದ ಪಿಸ್ತೂಲಿನಿಂದ ಅಮಿತ್ ಮೇಲೆ ಏಕಾಏಕಿ ಗುಂಡು ಹಾರಿಸಿ ಕೊಂದಿದ್ದರು. ಶ್ರುತಿ ಗೌಡ ಅವರ ನಡೆ ಮತ್ತು ಚಟುವಟಿಕೆಗಳ ಮೇಲೆ ಸದಾ ಸಂಶಯ ವ್ಯಕ್ತಪಡಿಸುತ್ತಿದ್ದ ರಾಜೇಶ್, ಶ್ರುತಿ ಬಳಸುವ ಕಾರಿಗೆ ಜಿಪಿಎಸ್ ಅಳವಡಿಸಿ ಅದರ ಮುಖಾಂತರ ಅವರಿದ್ದ ಸ್ಥಳಕ್ಕೆ ಹಿಂಬಾಲಿಸಿಕೊಂಡು ಬಂದಿದ್ದರು. ಅಮಿತ್ ಮೃತಪಟ್ಟ ಸುದ್ದಿ ತಿಳಿದ ನಂತರ ಶ್ರುತಿಗೌಡ ಲಾಡ್ಜ್‌ನಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದರು’ ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ. ಮತ್ತೊಬ್ಬ ಆರೋಪಿ, ರಾಜೇಶ್‌ನ ತಂದೆ ಗೋಪಾಲಕೃಷ್ಣ (82) ವಿಚಾರಣೆಗೆ ಮುನ್ನವೇ ಮೃತಪಟ್ಟಿದ್ದರು. ಅಮಿತ್ ಅಮೆರಿಕದಲ್ಲಿ ಎಲ್‌ಎಲ್‌ಎಂ ಸ್ನಾತಕೋತ್ತರ ಪದವಿ ಪಡೆದಿದ್ದರು. ವಕೀಲಿಕೆ ನಡೆಸುತ್ತಿದ್ದರು.

ಅಪರಾಧ ಸುದ್ದಿ

‘ಕೆಪಿಎಸ್‌ಸಿ ಹೆಸರಿನಲ್ಲಿ ನಕಲಿ ನೇಮಕಾತಿ ಆದೇಶ’

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಹೆಸರಿನಲ್ಲಿ ರಾಜ್ಯದ 10 ಅಭ್ಯರ್ಥಿಗಳಿಗೆ ನಕಲಿ ನೇಮಕಾತಿ ಆದೇಶ ಕಳುಹಿಸಲಾಗಿದ್ದು, ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೆಪಿಎಸ್‌ಸಿ ಸಹಾಯಕ ಕಾರ್ಯದರ್ಶಿ ಜೆ. ರಾಘವೇಂದ್ರ ಅವರು ನಕಲಿ ನೇಮಕಾತಿ ಆದೇಶದ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ಹೆಸರಿನಲ್ಲಿ ನಕಲಿ ಸಹಿ ಮಾಡಿ, ನಕಲಿ ನೇಮಕಾತಿ ಆದೇಶ ಪ್ರತಿ ಸೃಷ್ಟಿಸಲಾಗಿದೆ. ಅದೇ ಪ್ರತಿಗಳನ್ನು ಅಂಚೆ ಲಕೋಟೆಯಲ್ಲಿ ಇಟ್ಟು, 10 ಅಭ್ಯರ್ಥಿಗಳ ವಿಳಾಸಕ್ಕೆ ಕಳುಹಿಸಲಾಗಿತ್ತು.'

'ಲಕೋಟೆ ಪರಿಶೀಲಿಸಿದ್ದ ಅಂಚೆ ಸಿಬ್ಬಂದಿ, ಕೆಪಿಎಸ್‌ಸಿ ಹೆಸರಿನ ಸೀಲ್ ನೋಡಿ ಅನುಮಾನ ವ್ಯಕ್ತಪಡಿಸಿದ್ದರು. ನಂತರ, ಎಲ್ಲ ಲಕೋಟೆಗಳನ್ನು ಕೆಪಿಎಸ್‌ಸಿ ಕಚೇರಿಗೆ ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ಅಭ್ಯರ್ಥಿಗಳನ್ನು ವಂಚಿಸುವ ಉದ್ದೇಶದಿಂದ ಈ ನಕಲಿ ನೇಮಕಾತಿ ಪತ್ರಗಳನ್ನು ಸೃಷ್ಟಿಸಿರುವುದು ಗೊತ್ತಾಗಿದೆ. ಈ ಪತ್ರ ಸಿದ್ಧಪಡಿಸಿರುವುದು ಯಾರು ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಪೊಲೀಸರು ತಿಳಿಸಿದರು.

ಬಸ್ ಡಿಕ್ಕಿ: ಮಹಿಳೆ ಸಾವು

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಹೆಸರಿನಲ್ಲಿ ರಾಜ್ಯದ 10 ಅಭ್ಯರ್ಥಿಗಳಿಗೆ ನಕಲಿ ನೇಮಕಾತಿ ಆದೇಶ ಕಳುಹಿಸಲಾಗಿದ್ದು, ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕೆಪಿಎಸ್‌ಸಿ ಸಹಾಯಕ ಕಾರ್ಯದರ್ಶಿ ಜೆ. ರಾಘವೇಂದ್ರ ಅವರು ನಕಲಿ ನೇಮಕಾತಿ ಆದೇಶದ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ತಿಳಿಸಿದರು.

'ಕಾರ್ಯದರ್ಶಿ ಕೆ.ಎಸ್. ಲತಾಕುಮಾರಿ ಹೆಸರಿನಲ್ಲಿ ನಕಲಿ ಸಹಿ ಮಾಡಿ, ನಕಲಿ ನೇಮಕಾತಿ ಆದೇಶ ಪ್ರತಿ ಸೃಷ್ಟಿಸಲಾಗಿದೆ. ಅದೇ ಪ್ರತಿಗಳನ್ನು ಅಂಚೆ ಲಕೋಟೆಯಲ್ಲಿ ಇಟ್ಟು, 10 ಅಭ್ಯರ್ಥಿಗಳ ವಿಳಾಸಕ್ಕೆ ಕಳುಹಿಸಲಾಗಿತ್ತು.'

'ಲಕೋಟೆ ಪರಿಶೀಲಿಸಿದ್ದ ಅಂಚೆ ಸಿಬ್ಬಂದಿ, ಕೆಪಿಎಸ್‌ಸಿ ಹೆಸರಿನ ಸೀಲ್ ನೋಡಿ ಅನುಮಾನ ವ್ಯಕ್ತಪಡಿಸಿದ್ದರು. ನಂತರ, ಎಲ್ಲ ಲಕೋಟೆಗಳನ್ನು ಕೆಪಿಎಸ್‌ಸಿ ಕಚೇರಿಗೆ ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ಅಭ್ಯರ್ಥಿಗಳನ್ನು ವಂಚಿಸುವ ಉದ್ದೇಶದಿಂದ ಈ ನಕಲಿ ನೇಮಕಾತಿ ಪತ್ರಗಳನ್ನು ಸೃಷ್ಟಿಸಿರುವುದು ಗೊತ್ತಾಗಿದೆ. ಈ ಪತ್ರ ಸಿದ್ಧಪಡಿಸಿರುವುದು ಯಾರು ಎಂಬುದು ತನಿಖೆಯಿಂದ ತಿಳಿಯಬೇಕಿದೆ' ಎಂದು ಪೊಲೀಸರು ತಿಳಿಸಿದರು.

ಅಪಘಾತ: ಪತ್ರಿಕಾ ವಿತರಕ ಸಾವು

ಬಿ.ಸಿ. ಪ್ರಸನ್ನ

ಬೆಂಗಳೂರು: ನೈಸ್ ರಸ್ತೆಯಲ್ಲಿ ಬುಧವಾರ ರಾತ್ರಿ ಅಪಘಾತ ಸಂಭವಿಸಿದ್ದು, ಬೈಕ್ ಸವಾರ ಬಿ.ಸಿ. ಪ್ರಸನ್ನ (37) ಮೃತಪಟ್ಟಿದ್ದಾರೆ.

ಎಚ್‌ಎಸ್‌ಆರ್ ಲೇಔಟ್ ನಿವಾಸಿ ಪ್ರಸನ್ನ, ಪತ್ರಿಕಾ ವಿತರಕರಾಗಿದ್ದರು. ಅವರಿಗೆ ಪತ್ನಿ ಹಾಗೂ ಒಂದೂವರೆ ವರ್ಷದ ಮಗು ಇದೆ.

‘ಪ್ರಸನ್ನ ಅವರು ತುಮಕೂರು ಕಡೆಯಿಂದ ಹೊಸೂರು ರಸ್ತೆ ಕಡೆಗೆ ಬೈಕ್‌ನಲ್ಲಿ ಹೊರಟಿದ್ದಾಗ ಅಪಘಾತ ಸಂಭವಿಸಿದೆ’ ಎಂದು ಕೆಂಗೇರಿ ಸಂಚಾರ ಠಾಣೆ ಪೊಲೀಸರು ಹೇಳಿದರು.

‘ಗಾಯತ್ರಿ ಕ್ರಷರ್ ಬಳಿ ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದಿತ್ತು. ಬೈಕ್ ಸಮೇತ ಬಿದ್ದಿದ್ದ ಪ್ರಸನ್ನ ಅವರ ಮೈ ಮೇಲೆ ವಾಹನದ ಚಕ್ರ ಹರಿದಿತ್ತು. ತೀವ್ರ ಗಾಯಗೊಂಡು ಪ್ರಸನ್ನ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಪಘಾತದ ಬಳಿಕ ವಾಹನ ಸಮೇತ ಚಾಲಕ ಪರಾರಿಯಾಗಿದ್ದಾನೆ. ಅತೀ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆ ಆರೋಪದಡಿ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಸರ್ಕಾರಿ ಕೆಲಸದ ಹೆಸರಲ್ಲಿ ವಂಚನೆ: ಸೆರೆ

ಬೆಂಗಳೂರು: ಸರ್ಕಾರಿ ಕೆಲಸ ಕೊಡಿಸುವ ಹಾಗೂ ಕೇಳಿದೆಡೆ ವರ್ಗಾವಣೆ ಮಾಡಿಸುವ ಭರವಸೆ ನೀಡಿ ಹಣ ಪಡೆದು ವಂಚಿಸುತ್ತಿದ್ದ ಆರೋಪಿಯನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಮಹಾಲಕ್ಷ್ಮಿ ಲೇಔಟ್ ನಿವಾಸಿ ಮೋಹನ್ ಕುಮಾರ್ (53), ಹಲವರಿಂದ ಹಣ ಪಡೆದು ಮೋಜು–ಮಸ್ತಿಗೆಂದು ಬ್ಯಾಂಕಾಕ್‌ಗೆ ಹೋಗಿದ್ದ. ಬೆಂಗಳೂರಿಗೆ ವಾಪಸು ಬರುತ್ತಿದ್ದಂತೆ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಈತನನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಿಧಾನಸೌಧ ಬಳಿ ಸುತ್ತಾಡುತ್ತಿದ್ದ ಆರೋಪಿ, ‘ನನಗೆ ರಾಜಕೀಯ ಮುಖಂಡರು, ಅಧಿಕಾರಿಗಳು ಪರಿಚಯ’ ಎಂದು ಹೇಳಿಕೊಳ್ಳುತ್ತಿದ್ದ. ಪದವೀಧರ ಯುವತಿಯರನ್ನು ಪರಿಚಯ ಮಾಡಿಕೊಂಡು ಕೆಲಸದ ಆಮಿಷವೊಡ್ಡಿ ವಂಚಿಸುತ್ತಿದ್ದನೆಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ಯುವತಿಯೊಬ್ಬರಿಂದ ಆರೋಪಿ, ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ) ಹುದ್ದೆ ಕೊಡಿಸುವುದಾಗಿ ಹೇಳಿ ₹ 2.50 ಲಕ್ಷ ಪಡೆದಿದ್ದ. ಕೆಲಸ ಕೊಡಿಸಿರಲಿಲ್ಲ. ಹಣವನ್ನೂ ವಾಪಸು ನೀಡಿರಲಿಲ್ಲ. ನೊಂದ ಯುವತಿ, ಠಾಣೆಗೆ ದೂರು ನೀಡಿದ್ದರು. ಆ ಪ್ರಕರಣದಲ್ಲಿ ಇದೀಗ ಸೆರೆ ಹಿಡಿಯಲಾಗಿದೆ’ ಎಂದು ಮೂಲಗಳು ಹೇಳಿವೆ.

‘ಇನ್ನೊಬ್ಬ ಯುವತಿ ಬಳಿಯೂ ಆರೋಪಿ ₹ 12 ಲಕ್ಷ ಪಡೆದುಕೊಂಡಿದ್ದಾನೆ. ಜೊತೆಗೆ, ಸರ್ಕಾರಿ ನೌಕರರೊಬ್ಬರಿಗೆ ವರ್ಗಾವಣೆ ಆಮಿಷವೊಡ್ಡಿ ಹಣ ಪಡೆದಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ತಿಳಿಸಿವೆ.

‘ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ. ಈತನಿಂದ ಯಾರಿಗಾದರೂ ವಂಚನೆ ಆಗಿದ್ದರೆ, ಠಾಣೆಗೆ ದೂರು ನೀಡಬಹುದು’ ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಚಕ್ರವರ್ತಿ ಸೂಲಿಬೆಲೆ ವಿರುದ್ಧದ ಎಫ್‌ಐಆರ್‌ಗೆ ಹೈಕೋರ್ಟ್ ತಡೆ

ಬೆಂಗಳೂರು: ‘ಸಿದ್ದರಾಮಯ್ಯ ಯಾವಾಗ ಅಧಿಕಾರಕ್ಕೆ ಬರುತ್ತಾರೋ ಆಗೆಲ್ಲಾ ಹಿಂದೂಗಳು ಬದುಕುವುದು ಕಷ್ಟ’ ಎಂಬ ಹೇಳಿಕೆ ನೀಡಿದ್ದ ಹಿನ್ನೆಲೆಯಲ್ಲಿ ಕೋಮು ದ್ವೇಷ ಹರಡಿದ ಆರೋಪದಡಿ ‘ಯುವ ಬ್ರಿಗೇಡ್’ ಸಂಸ್ಥಾಪಕ ಚಕ್ರವರ್ತಿ ಸೂಲಿಬೆಲೆ ವಿರುದ್ಧ ದಾಖಲಾಗಿದ್ದ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ.

ಪ್ರಕರಣ ರದ್ದು ಕೋರಿ ಚಕ್ರವರ್ತಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಧಾರವಾಡದ ಏಕಸದಸ್ಯ ನ್ಯಾಯಪೀಠದ ನ್ಯಾಯಮೂರ್ತಿ ಶಿವಶಂಕರ ಅಮರಣ್ಣವರ ಈ ಕುರಿತಂತೆ ಆದೇಶಿಸಿದ್ದಾರೆ.

ಪ್ರಕರಣವೇನು?: ಕಾರವಾರ ತಾಲ್ಲೂಕಿನ ಕಡವಾಡ ಭೋವಿವಾಡದಲ್ಲಿರುವ ಆದಿಮಾಯಿ ದೇವಸ್ಥಾನಕ್ಕೆ 2023ರ ಅ.3ರಂದು ಭೇಟಿ ನೀಡಿದ್ದ ಚಕ್ರವರ್ತಿ ಅಲ್ಲಿ ಮಾಧ್ಯಮ ಗೋಷ್ಠಿ ನಡೆಸಿದ್ದರು.

‘ಗೋಷ್ಠಿಯಲ್ಲಿ ಹಿಂದೂ ಹಾಗೂ ಮುಸ್ಲಿಂ ಧರ್ಮಗಳ ಮಧ್ಯೆ ಕೋಮು ದ್ವೇಷ ಹರಡಲು ಪ್ರಯತ್ನಿಸಿದ್ದಾರೆ’ ಎಂಬ ಆರೋಪದಡಿ ಕಾರವಾರ ಗ್ರಾಮಾಂತರ ಠಾಣಾ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

17 ವಾಹನಗಳ ಗಾಜು ಒಡೆದಿದ್ದವರ ಬಂಧನ

ಬೆಂಗಳೂರು: ಲಗ್ಗೆರೆ ಹಾಗೂ ಸುತ್ತಮುತ್ತ ಜನರನ್ನು ಭಯಪಡಿಸಲೆಂದು 17 ವಾಹನಗಳ ಗಾಜು ಒಡೆದಿದ್ದ ಐವರು ಆರೋಪಿಗಳನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಲಗ್ಗೆರೆ ಲವಕುಶ ನಗರದ ಮಣಿಕಂಠ ಅಲಿಯಾಸ್ ಕಳ್ಳ ಮಣಿ (22), ಚೌಡೇಶ್ವರಿನಗರದ ಸೋಮಶೇಖರ್ ಅಲಿಯಾಸ್ ಕಳ್ಳ ಸೋಮ (19), ಕಮಲಾನಗರದ ನಿತಿನ್ ಡ್ಯಾನಿಯಲ್ (20), ಐ.ಪಿ ನಗರದ ಲೋಕೇಶ್ (20) ಹಾಗೂ ಕುರುಬರಹಳ್ಳಿ ಕಾವೇರಿ ನಗರದ ಕಾರ್ತಿಕ್ (19) ಬಂಧಿತರು.

‘ಅಪರಾಧ ಹಿನ್ನೆಲೆಯುಳ್ಳ ಆರೋಪಿಗಳು, ಅಪರಾಧ ಕೃತ್ಯಗಳನ್ನು ಎಸಗಿ ಸ್ಥಳೀಯರಲ್ಲಿ ಭಯವನ್ನುಂಟು ಮಾಡುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಲಗ್ಗೆರೆಯ ರಾಜೀವ್ ಗಾಂಧಿನಗರದಲ್ಲಿ ನ. 10ರಂದು ತಡರಾತ್ರಿ ಆರೋಪಿಗಳು ಮುಖಕ್ಕೆ ಮಾಸ್ಕ್ ಹಾಕಿಕೊಂಡು ಲಾಂಗ್ ಹಾಗೂ ಕಬ್ಬಿಣದ ರಾಡ್ ಹಿಡಿದು ಸುತ್ತಾಡಿದ್ದರು. ರಸ್ತೆಬದಿಯಲ್ಲಿ ನಿಲ್ಲಿಸಿದ್ದ 14 ಕಾರುಗಳು, 2 ಆಟೊ ರಿಕ್ಷಾ ಹಾಗೂ ಕ್ಯಾಂಟರ್ ಗಾಜು ಒಡೆದು ಆರೋಪಿಗಳು ಪರಾರಿಯಾಗಿದ್ದರು’ ಎಂದು ತಿಳಿಸಿವೆ.

‘ಘಟನೆ ಸಂಬಂಧ 5 ಪ್ರತ್ಯೇಕ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿತ್ತು. ತನಿಖೆ ಕೈಗೊಂಡು ಐವರು ಆರೋಪಿಗಳನ್ನು ಸೆರೆ ಹಿಡಿಯಲಾಗಿತ್ತು’ ಎಂದು ಮೂಲಗಳು ಹೇಳಿವೆ.

ಜೈಲಿಗೆ ಹೋಗಿ ಬಂದಿದ್ದ: ‘ಆರೋಪಿ ಮಣಿಕಂಠ್, ಪೀಣ್ಯ, ಗಂಗಮ್ಮನಗುಡಿ ಹಾಗೂ ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಈತನನ್ನು ಬಂಧಿಸಿದ್ದ ಪೊಲೀಸರು ಜೈಲಿಗೆ ಕಳುಹಿಸಿದ್ದರು. ಜಾಮೀನು ಮೇಲೆ ಹೊರಬಂದಿದ್ದ ಈತ, ತನ್ನದೇ ತಂಡ ಕಟ್ಟಿಕೊಂಡು ಅಪರಾಧ ಕೃತ್ಯ ಎಸಗುತ್ತಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

MEN WOMEN Garments Shoes Accessories Export Surplus Discount Business B2B-B2C Retail. Requires Experienced BUSINESS HEAD To Handle Procurement And Sales Independently WhatsApp-6366936485

MANAGERS, SUPERVISORS, SALESMAN, ACCOUNTANT Experienced In Export Surplus And Discount Sales Exhibition Counters- All Over Bangalore WhatsApp- 6366936485

Multiple Vacancy

MANUFACTURING COMPANY requires Accounts, HR, office assistant and packing. Walk in interview on 18-11-2023 at Shakthinagar Mangalore. Between 8:30 am to 6 pm. (Female preferred) Contact on 9483700605 for Location and Address. Call 08242214160

Part-Time Jobs

TOP MNC Com. Licensed By Central Govt. Retired/ VRS Persons 2nd Career Opporty Age Above 45 Years 35K To 40K: 7019215243/ 9886641282

Security & Detectives

URGENTLY REQUIRED The U/M Candidates for reputed Security Guard Providing Company. 1. AGM (SALES and OPERATION), 2. SECURITY FIELD OFFICER. Experience five+ years. Salary no bar for eligible candidate, Interested Contact: 84848-23167/ 98226-58553/ Send resume: careers@Perfectprotectionindia.com

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

BUSINESS

Business Offers

Finance

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

PUBLIC NOTICE

PUBLIC NOTICE

The General Public is Hereby Informed that my Client (Mohammmed Nasir) is intending to Purchase the Below mentioned Schedule of Property from its owner Viz., Mrs. Bharathi Residing at No.711 Mochi Street Hunsur Town Mysore Karnataka-571105

If any body is having any objection, claims, interest dispute for above intended sale transaction he/she/they may contact the undersigned with documentary proof substanding his/her/their objections details of the dispute within seven (7) days from the date of this publication failing which my client wil proceed to complete the sale Transaction with above owner as if there are no third party claims/ objection/ dispute in respect of the schedule Property and thereafter no claims/ objections/ dispute will be entertained

SCHEDULE PROPERTY

ALL THAT PIECE AND PARCEL OF PROPERTY BEARING NO 40 in Katha No. 917 HOUSE LIST NO 952 Situated at NAGAWARA VILLAGE NAGAWARA GROUP PANCHAYATH< KASABA HOBLI BNTQ Measuring East TO WEST 30 Feet and North 40 Feet and bounded on East By Proeprty No. 39 Belongs to Saraswathi West Property No 41 North By Road, South by Property No. 45.

Sd/- SATISH PRASAD R Advocate,
Office No. 68, 7th. Cross, 5th Main, N.B. Layout. Lingarajapuram, St Thomas Town
BANGALORE: 560 084
Mobile: 892346567, 8951763121

PUBLIC NOTICE

The General public are hereby notified that my client is proposing to develop and sell the property described in the Schedule herein on Joint Development basis with its owners 1. Sri. Mahadevappa @ Mahadevaiah S/o. Nanjundappa 2. Sri. Basavaiah S/o. Katte Basavaiah and 3. Sri. Shivamma D/o. Madappa.

Any person or persons objecting for the proposed development and sale or ascertaining any right, title, Interest or claim /charge/lien over the Schedule Property or any part thereof, and in any manner whatsoever against the Schedule Property based on the documents pertaining to the Schedule Property or otherwise has any lawful objection for the development of the Schedule Property, should write to the undersigned within Seven Days from the date of issuance of this notice with all documentary proof on which they are basing and ascertaining their rights with regard to the Schedule Property or any part thereof and objections and/or claims received thereafter will not be binding on my client and my client will proceed to develop and sell the below mentioned property by entering into Joint Development Agreement with the owners as if there are no claimants/objections with regard to the Schedule Property.

SCHEDULE PROPERTY

ALL THAT PIECE AND PARCEL OF THE Agricultural Land bearing Sy.No.67 totally measuring 6 Acres, situated at Kuthaganahalli Village, Sarjapura Hobli, Anekal Taluk, Bengaluru Urban District and bounded on the;

East by	:	Land bearing Sy.No.67;
West by	:	Land bearing Sy.No.69;
North by	:	Private Property;
South by	:	Private Property.

Sd/- ROOPA SHETTY, Advocate
Lex Situs, No.810, ‘BILWAPRIYA PLATINA’, 2nd Floor, 27th Main Road, HSR Layout, Sector 1, Bangalore - 560102.
Phone: 080-22583563, 080-25723339, 9880499177
Email:info@lexsitus.com

REAL ESTATE SELLING

Commerical

Mysore Road

MYSORE ROAD
Kumbalgodu Prime Industrial Hub 13200 sqft Commercial Shed, 3 Side Road, Corner property available for RENT (Rs 25/- per sqft) or for SALE (Cost 4.5 cr). Contact : owner 9844027560.

Sites

Gnanabharathi

DIRECT OWNER 30x50 Jnanabharathi BDA 2nd Block, 30X40 Railway Layout 1st Stage. Near Ring-road. 9886634578

Kanakapura Road

BDA SITE Sale 2400sqft 2Min drive from Vajrahalli Metro, 10 Min. to Jayanagar Shopping Complex, VajramuniNagar, Contact: NarasimhaMurthy: 9449350101

Vishweshwariah Layout

DIRECT OWNER 30x40, 40x60 Vishveswaraiah Layout 1st Block, Behind 100ft Road, Beautiful Location. SREENIDHI. 9742681666

RENTAL PROPERTIES

Accommodation Available

Commercial

COMMERCIAL SPACE FOR RENT 6000 sft customizable, ground & 1st floor, previously Shanti Sagar restaurant, on CMH Road. Indiranagar. Mobile: 8970851585

PERSONAL

Change of Name

I, **Mamatha K W/o. Muniraju** Residing at No.138, Gangabhavani Street , Kodigehalli, Sahakaranagar Post, Bangalore-560092 have changed my minor son's name from **AYAAN** to **AYAAN M** (Muniraju) vide affidavit dated 15.11.2023 Sworn before notary: K.V.Nanjaiah, Bangalore

I, MURALIDHARA KATTE SHAMANNA S/o.Late.K.S. Shamanna R/a#124,Behind Kirloskar Layout, 4th`Cross, Bhoomica Layout, Hesaraghatta Road, Chikkabanavara Post,Bangalore-560090 have`changed my_Name_from MURAWIDHARA KATTE SHMANNA_to MURALIDHARA KATTE SHAMANNA vide`affidavit dated:13.11.2023 sworn`before Notary Chandrashekaraiah. S. Banglalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds
More value, more impact
ಪ್ರಜಾವಾಣಿ
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com
BOOK NOW
Book your ad with us now! For more details contact:
+91 9886213331 | +91 9901641752 | +91 9845114560 | +91 9900428036 | +91 9731810277 | 080- 45557163/164

ಆರೋಪಿ ಮೇಲೆ ಹಲ್ಲೆಗೆ ಯತ್ನ

ಉಡುಪಿ: ನಾಲ್ವರ ಕೊಲೆ ಪ್ರಕರಣ • ಗುಂಪು ಚದುರಿಸಲು ಲಾಠಿ ಪ್ರಹಾರ

ಪ್ರಜಾವಾಣಿ ವಾರ್ತೆ

ಉಡುಪಿ: ತಾಯಿ ಹಾಗೂ ಮೂವರು ಮಕ್ಕಳ ಕೊಲೆ ಪ್ರಕರಣದ ಆರೋಪಿ ಪ್ರವೀಣ್ ಅರುಣ್ ಚೌಗಲೆಯನ್ನು ಗುರುವಾರ ಸಂಜೆ ಸ್ಥಳಕ್ಕೆ ಮಹಜರು ಪ್ರಕ್ರಿಯೆಗೆ ಕರೆತಂದಿದ್ದ ವೇಳೆ ಉದ್ರಿಕ್ತ ಗುಂಪು ಏಕಾಏಕಿ ಆರೋಪಿ ಮೇಲೆ ದಾಳಿಗೆ ಮುಂದಾಗಿದ್ದು, ಕೆಲಕಾಲ ಗೊಂದಲದ ಸ್ಥಿತಿ ನಿರ್ಮಾಣವಾಗಿತ್ತು.

ನೇಜಾರಿನ ತೃಪ್ತಿ ಲೇಔಟ್‌ನಲ್ಲಿ ಕೊಲೆ ನಡೆದ ಸ್ಥಳ ಮಹಜರು ಮುಗಿಸಿ ಪೊಲೀಸರು ಆರೋಪಿಯನ್ನು ವಾಪಸ್ ಕರೆದೊಯ್ಯುವಾಗ ನೂರಾರು ಪ್ರತಿಭಟನಾಕಾರರು ಬ್ಯಾರಿಕೇಡ್‌ಗಳನ್ನು ಸರಿಸಿ ಆರೋಪಿಯ ಮೇಲೆ ಹಲ್ಲೆಗೆ ಮುಂದಾದರು. ಈ ಸಂದರ್ಭ ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಿಸಲು ಲಾಠಿ ಪ್ರಹಾರ ನಡೆಸಿದರು. ಘಟನೆಯಲ್ಲಿ ಹಲವು ಮಂದಿ ಗಾಯಗೊಂಡರು.

ಆರೋಪಿ ಇದ್ದ ವಾಹನವನ್ನು ಬಿಗಿ ಭದ್ರತೆಯಲ್ಲಿ ಕೊಂಡೊಯ್ಯಲಾಯಿತು.

ಬಳಿಕ ಪೊಲೀಸರ ಲಾಠಿ ಪ್ರಹಾರ ಖಂಡಿಸಿ ಪ್ರತಿಭಟನಾಕಾರರು ಕೆಲಕಾಲ ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು. ನಾಲ್ವರನ್ನು ಅಮಾನುಷವಾಗಿ ಕೊಂದಿರುವ ಆರೋಪಿಗೆ ಗಲ್ಲು ಶಿಕ್ಷೆ ನೀಡಬೇಕು ಎಂದು ಘೋಷಣೆ ಕೂಗಿದರು.

ತಾಯಿ ಹಾಗೂ ಮೂವರು ಮಕ್ಕಳ ಕೊಲೆ ಪ್ರಕರಣದ ಆರೋಪಿ ಪ್ರವೀಣ್ ಅರುಣ್ ಚೌಗಲೆಯನ್ನು ಗುರುವಾರ ಸಂಜೆ ಸ್ಥಳಕ್ಕೆ ಮಹಜರು ಪ್ರಕ್ರಿಯೆಗೆ ಕರೆತಂದಿದ್ದ ವೇಳೆ ಉದ್ರಿಕ್ತ ಗುಂಪು ಏಕಾಏಕಿ ಆರೋಪಿ ಮೇಲೆ ದಾಳಿಗೆ ಮುಂದಾದಾಗ ಪೊಲೀಸರು ಲಾಠಿ ಚಾರ್ಜ್ ಮಾಡಿ ಗುಂಪು ಚದುರಿಸಿದರು

ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬರಬೇಕು ಎಂದು ಪಟ್ಟುಹಿಡಿದು ರಸ್ತೆ ಮೇಲೆ ಪ್ರತಿಭಟನೆ ನಡೆಸಿದ ಪರಿಣಾಮ ಒಂದೂವರೆ ತಾಸಿಗೂ ಹೆಚ್ಚುಕಾಲ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಪ್ರಕರಣದ ವಿಚಾರಣೆಗೆ ಅಡ್ಡಿಪಡಿಸಬಾರದು, ಆರೋಪಿಗೆ ಗರಿಷ್ಠ ಪ್ರಮಾಣದ ಶಿಕ್ಷೆಯಾಗಲಿದೆ ಎಂದು ಪೊಲೀಸ್ ಅಧಿಕಾರಿಗಳು ಭರವಸೆ ನೀಡಿದ ಬಳಿಕ ಪ್ರತಿಭಟನೆ ಕೈಬಿಡಲಾಯಿತು.

ಆರೋಪಿ ಪರ ಸಂದೇಶ, ಪ್ರಕರಣ ದಾಖಲು: ಒಂದೇ ಕುಟುಂಬದ ನಾಲ್ವರ ಹತ್ಯೆ ಪ್ರಕರಣ ಸಂಬಂಧ ಆರೋಪಿಯ ಪರವಾಗಿ ಪೋಸ್ಟ್ ಹಾಕಿದ ಆರೋಪದ ಮೇಲೆ ಸೆನ್ ಠಾಣೆ ಪೊಲೀಸರು ‘ಹಿಂದು ಮಂತ್ರ’ ಪೇಜ್ ವಿರುದ್ಧ ಪ್ರಕರಣ ದಾಖಲಿಕೊಂಡಿದ್ದಾರೆ.

‘15 ನಿಮಿಷಗಳಲ್ಲಿ ನಾಲ್ವರು ಮುಸ್ಲಿಮರನ್ನು ಕೊಂದು ವಿಶ್ವದಾಖಲೆ ನಿರ್ಮಿಸಿದ್ದಾನೆ’ ಎಂದು ಪೋಸ್ಟ್ ಮಾಡಲಾಗಿತ್ತು ಎಂದು ಪೊಲೀಸರು ಹೇಳಿದ್ದಾರೆ.

ಅಸೂಯೆ, ಹಗೆತನ ಕೊಲೆಗೆ ಕಾರಣ: ಎಸ್‌ಪಿ

ಉಡುಪಿ: ಒಂದೇ ಕುಟುಂಬದ ನಾಲ್ವರನ್ನು ಕೊಲೆ ಪ್ರಕರಣದ ಆರೋಪಿ ಪ್ರವೀಣ್ ಅರುಣ್ ಚೌಗಲೆ ಅಸೂಯೆ, ಹಗೆತನದಿಂದ ಕೊಲೆ ಮಾಡಿರುವುದು ಪ್ರಾಥಮಿಕ ತನಿಖೆಯಲ್ಲಿ ತಿಳಿದು ಬಂದಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಅರುಣ್ ತಿಳಿಸಿದ್ದಾರೆ.

ಪರಿಸ್ಥಿತಿ ಶಾಂತ: ಗುರುವಾರ ಮಹಜರು ಪ್ರಕ್ರಿಯೆಗೆ ಆರೋಪಿಯನ್ನು ಕರೆದೊಯ್ದಿದ್ದ ವೇಳೆ ಮೃತರ ಸಂಬಂಧಿಗಳು, ಸ್ನೇಹಿತರು ಆರೋಪಿಯ ವಿರುದ್ಧ ಘೋಷಣೆ ಕೂಗಿ ಪೊಲೀಸ್ ವಾಹನ ತಡೆದು ನಿಲ್ಲಿಸುವ ಪ್ರಯತ್ನ ಮಾಡಿದ್ದು, ಲಘು ಲಾಠಿ ಪ್ರಹಾರ ಮಾಡಿ ಜನರನ್ನು ಚದುರಿಸಲಾಗಿದೆ. ಆರೋಪಿಯನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಗಿದ್ದು ಪ್ರಸ್ತುತ ಪರಿಸ್ಥಿತಿ ಶಾಂತವಾಗಿದೆ ಎಂದು ಎಸ್‌ಪಿ ತಿಳಿಸಿದ್ದಾರೆ.

ಅಂತ್ಯಕ್ರಿಯೆಗೆ ಹೂವು ತರಲು ಹೋಗಿದ್ದಾಗ ಅಪಘಾತ: ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ದ್ವಿಚಕ್ರ ವಾಹನಕ್ಕೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದು ಮಹಿಳೆಯೊಬ್ಬರು ಬುಧವಾರ ಮೃತಪಟ್ಟಿದ್ದಾರೆ. ಬೆಂಗಳೂರಿನ ನ್ಯೂ ತಿಪ್ಪಸಂದ್ರದ ಬಾಲರತ್ನಮ್ಮ(59) ಮೃತರು.

ಬಾಲರತ್ನಮ್ಮ ಅವರ ಸಂಬಂಧಿಕರೊಬ್ಬರು ದೊಮ್ಮಸಂದ್ರ ಸಮೀಪದ ಹೆಗ್ಗೊಂಡನಹಳ್ಳಿಯಲ್ಲಿ ಮೃತಪಟ್ಟಿದ್ದರು. ಅವರ ಶವಕ್ಕೆ ಹೂವು ತರಲು ಪುತ್ರನೊಂದಿಗೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ಈ ವೇಳೆ ಟ್ರ್ಯಾಕ್ಟರ್ ಡಿಕ್ಕಿ ಹೊಡೆದು ಗಾಯಗೊಂಡಿದ್ದರು. ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಸಾವನ್ನಪ್ಪಿದ್ದಾರೆ.

ಸರ್ಜಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪಘಾತದಿಂದ ಪಾದಚಾರಿ ಸಾವು: ಆರು ತಿಂಗಳು ಸಜೆ

ಬೆಂಗಳೂರು: ಅತಿವೇಗ ಮತ್ತು ನಿರ್ಲಕ್ಷ್ಯದ ವಾಹನ ಚಾಲನೆಯಿಂದ ಪಾದಚಾರಿ ಸಾವಿಗೆ ಕಾರಣವಾದ ಪ್ರಕರಣವೊಂದರಲ್ಲಿ ವ್ಯಕ್ತಿಯೊಬ್ಬರಿಗೆ ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಆರು ತಿಂಗಳ ಕಠಿಣ ಜೈಲು ಶಿಕ್ಷೆ ಮತ್ತು ₹ 5 ಸಾವಿರ ದಂಡವನ್ನು ಹೈಕೋರ್ಟ್ ಕಾಯಂಗೊಳಿಸಿದೆ.

ವಿಚಾರಣಾ ನ್ಯಾಯಾಲಯದ ಆದೇಶದ ರದ್ದು ಕೋರಿ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಚಿನ್ನಹಳ್ಳಿಯ ಹನುಮಂತರಾಯಪ್ಪ ಸಲ್ಲಿಸಿದ್ದ ಕ್ರಿಮಿನಲ್ ಮರು ಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ಟಿ. ವೆಂಕಟೇಶ್ ನಾಯ್ಕ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

‘ಅಧಿಕೃತ ಚಾಲನಾ ಪರವಾನಗಿ ಮತ್ತು ವಿಮಾ ಪಾಲಿಸಿ ಹೊಂದಿರದ ಯುವಕರು ಉತ್ಸಾಹ, ಸಾಹಸ ಮನೋಭಾವದಿಂದ ವಾಹನ ಚಲಾಯಿಸಿ ಅಪಘಾತ ನಡೆಸುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ’ ಎಂದು ಕಳವಳ ವ್ಯಕ್ತಪಡಿಸಿರುವ ನ್ಯಾಯಪೀಠ, ‘ಇಂತಹ ವರ್ತನೆಗೆ ಕಡಿವಾಣ ಹಾಕುವ ಅಗತ್ಯವಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಸಿಗದ ಸುಳಿವು, ಮುಂದುವರಿದ ಶೋಧ

ಮಡಿಕೇರಿ: ಕೊಡಗು ಜಿಲ್ಲೆಯ ಕೇರಳ ಗಡಿಯಲ್ಲಿ ರಾಜ್ಯ ನಕ್ಸಲ್ ನಿಗ್ರಹ ಪಡೆ ಬಿರುಸಿನ ಶೋಧ ಗುರುವಾರವೂ ಮುಂದುವರಿದಿದೆ. ಆದರೆ, ನಕ್ಸಲರ ಕುರಿತು ಸುಳಿವು ಪತ್ತೆಯಾಗಿಲ್ಲ.

8 ತಂಡಗಳು ಶೋಧ ಕಾರ್ಯದಲ್ಲಿ ತೊಡಗಿವೆ. 3ರಿಂದ 4 ತಂಡಗಳು ನಿರಂತರ ಕಾಡಿನಲ್ಲಿ ಇರುವಂತೆ ನೋಡಿಕೊಂಡಿದ್ದು, ಕಣ್ಗಾವಲು ಇರಿಸಲಾಗಿದೆ ಎಂದು ಕಾರ್ಯಾಚರಣೆಯಲ್ಲಿದ್ದ ಸಿಬ್ಬಂದಿಯೊಬ್ಬರು ತಿಳಿಸಿದರು.

ಈ ವೇಳೆ ದಕ್ಷಿಣಕನ್ನಡ ಜಿಲ್ಲೆಯ ಸುಂದರಿ (42) ಹಾಗೂ ಚಿಕ್ಕಮಗಳೂರು ಜಿಲ್ಲೆಯ ಲತಾ (43) ಎಂಬ ಇಬ್ಬರು ಶಂಕಿತ ನಕ್ಸಲ್ ಮಹಿಳೆಯರ ವಿರುದ್ಧ ಕಣ್ಣೂರು ಠಾಣೆಯಿಂದ ‘ಲುಕ್ ಔಟ್’ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ವಿದ್ಯುತ್ ಕಳ್ಳತನ ಸರಿಯಲ್ಲ: ಕೆಆರ್‌ಎಸ್‌ಪಿ

ಬೆಂಗಳೂರು: ‘ಜೆಡಿಎಸ್ ಮುಖಂಡ ಎಚ್.ಡಿ. ಕುಮಾರಸ್ವಾಮಿ ತಮ್ಮ ಮನೆ ಅಲಂಕಾರಕ್ಕೆ ವಿದ್ಯುತ್ ಕಳ್ಳತನ ಮಾಡಿರುವುದು ಮತ್ತು ಅದಕ್ಕೆ ಸಮರ್ಥನೆ ನೀಡಿರುವುದು ಸರಿಯಲ್ಲ’ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ (ಕೆಆರ್‌ಎಸ್‌ಪಿ) ರಾಜ್ಯ ಕಾರ್ಯದರ್ಶಿ ಬಿ. ಎಸ್. ಮಲ್ಲಿಕಾಜುನಯ್ಯ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಅವರು, ‘ತಾವು ರಾಜ್ಯ ಲೂಟಿ ಮಾಡಿಲ್ಲ, ಕಂಡವರ ಭೂಮಿಗೆ ಬೇಲಿ ಹಾಕಿಲ್ಲ ಎಂದು ಸಮರ್ಥನೆ ಮಾಡಿಕೊಳ್ಳುವುದು ಸರಿಯಲ್ಲ. ಇವರು, ಇವರ ಕುಟುಂಬದವರು ಎಲ್ಲೆಲ್ಲಿ ಎಷ್ಟೆಷ್ಟು ಭೂಮಿಗೆ ಬೇಲಿ ಹಾಕಿಕೊಂಡು ಸರ್ಕಾರಿ ಕಡತಗಳು ಕಾಣೆಯಾಗಿವೆ ಎಂಬುದು ಮುಂದೆ ರಾಜ್ಯದ ಜನತೆಗೆ ತಿಳಿಯಲಿದೆ’ ಎಂದರು.

‘ಬಸವಕಲ್ಯಾಣ ವಿಧಾನಸಭೆ ಕ್ಷೇತ್ರದ ಶಾಸಕ ಶರಣು ಸಲಗರ ಅವರು ಹಣ ಪಡೆದು ಕೆಲಸ ಮಾಡಿಕೊಡುವ ಮಾತು ನಾಚಿಕೆಗೇಡಿನ ಸಂಗತಿ’ ಎಂದರು.

ಚಿಕ್ಕಬೆಳ್ಳಂದೂರು ಕೆರೆಯ 8 ಎಕರೆಗೆ ಮಣ್ಣು ● ದೂರು ನೀಡಿದರೂ ಕ್ರಮ ಕೈಗೊಳ್ಳದ ಬಿಬಿಎಂಪಿ

ಕಲ್ಲು–ಮಣ್ಣು, ತ್ಯಾಜ್ಯ ತುಂಬಿ ಕೆರೆ ಕಬಳಿಕೆ!

ಆರ್. ಮಂಜುನಾಥ್

ಮುಖ್ಯಾಂಶಗಳು

- ಮುಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆ ಒತ್ತುವರಿ
- ಬಿಬಿಎಂಪಿ ಸುತ್ತ ಹಾಕಿದ್ದ ಬೇಲಿ ತೆರವು
- ಕಣ್ಣಮುಂದೆ ಅತಿಕ್ರಮ, ಕ್ರಮಕ್ಕೆ ಮುಂದಾಗದ ಅಧಿಕಾರಿಗಳು

ಬೆಂಗಳೂರು: ಆ ಭಾಗದ ಕೆರೆ ಪ್ರದೇಶ ಬಿಬಿಎಂಪಿ ವ್ಯಾಪ್ತಿಗೆ ಸೇರುವುದಿಲ್ಲ ಎಂದು ಅಭಿವೃದ್ಧಿ ಕಾರ್ಯ ಕೈಬಿಟ್ಟಿರುವುದರಿಂದ ಚಿಕ್ಕಬೆಳ್ಳಂದೂರು ಕೆರೆಯ 8 ಎಕರೆ ಪ್ರದೇಶವನ್ನು ಕಟ್ಟಡ ತ್ಯಾಜ್ಯ, ವೈದ್ಯಕೀಯ ತ್ಯಾಜ್ಯದಿಂದ ಮುಚ್ಚಲಾಗುತ್ತಿದೆ.

ಮಹದೇವಪುರ ವಲಯ ವ್ಯಾಪ್ತಿಯಲ್ಲಿರುವ ಚಿಕ್ಕಬೆಳ್ಳಂದೂರು ಕೆರೆಯನ್ನು ಬಿಬಿಎಂಪಿ ಅಭಿವೃದ್ಧಿ ಮಾಡುವ ಪಟ್ಟಿಯಲ್ಲಿರಿಸಿಕೊಂಡು, ಬೇಲಿ ಹಾಕಿದೆ. ಆದರೆ ಆ ಬೇಲಿಯನ್ನೂ ತೆರವು ಮಾಡಿ, ಕಲ್ಲು–ಮಣ್ಣು ತುಂಬಿ ಕೆರೆಯನ್ನು ನಾಶಪಡಿಸಲಾಗುತ್ತಿದೆ.

ಮುಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆ ಪ್ರದೇಶ ಬಹುತೇಕ ಒತ್ತುವರಿಯಾಗಿದೆ. ಕಳೆದ ಕೆಲವು ತಿಂಗಳಿಂದ ಅತಿಕ್ರಮವಾಗುತ್ತಿದ್ದರೂ ಬಿಬಿಎಂಪಿ ಅಥವಾ ಮುಳ್ಳೂರು ಗ್ರಾಮ ಪಂಚಾಯಿತಿ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಕೆರೆಗಳ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಲ್ಲೋಟ್ ಅವರಿಗೆ ಲಿಖಿತ ದೂರು ನೀಡಿ ವಾರಗಳೇ ಕಳೆದಿದ್ದರೂ ಕ್ರಮ ಕೈಗೊಂಡಿಲ್ಲ.

ಚಿಕ್ಕಬೆಳ್ಳಂದೂರು ಕೆರೆ ಒಟ್ಟು 75 ಎಕರೆ 21 ಗುಂಟೆ ವಿಸ್ತೀರ್ಣವಿದೆ. ಇದರಲ್ಲಿ ಚಿಕ್ಕಬೆಳ್ಳಂದೂರು ಗ್ರಾಮದ ಸರ್ವೆ ನಂ. 9ರಲ್ಲಿ 67 ಎಕರೆ 14 ಗುಂಟೆ, ಮುಳ್ಳೂರು ಗ್ರಾಮ ಸರ್ವೆ ನಂ. 63ರಲ್ಲಿ 8 ಎಕರೆ 7 ಗುಂಟೆ ಇದೆ. ಬಿಬಿಎಂಪಿ ಈ ಕೆರೆ ಅಭಿವೃದ್ಧಿಪಡಿಸಲು ತೆಗೆದುಕೊಂಡಿದ್ದು, ಪೂರ್ಣ ಪ್ರದೇಶಕ್ಕೂ ಬೇಲಿ ಹಾಕಿದೆ. ಆದರೆ, ಮುಳ್ಳೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆರೆ ಪ್ರದೇಶದಲ್ಲಿ ಬೇಲಿಯನ್ನು ಕಿತ್ತು ಹಾಕಿ ತ್ಯಾಜ್ಯ, ಕಲ್ಲು–ಮಣ್ಣು ತುಂಬಲಾಗುತ್ತಿದೆ.

‘ಕೆರೆ ಪ್ರದೇಶದಲ್ಲಿ ನೀರಿರುವ ಕಡೆಯೂ ಸುಮಾರು 15 ಅಡಿ ಎತ್ತರದಷ್ಟು ಕಲ್ಲು–ಮಣ್ಣು ತುಂಬಲಾಗಿದೆ. ದಿನರಾತ್ರಿ ಮಣ್ಣು ತುಂಬುವ ಕೆಲಸವಾಗುತ್ತಿದೆ. ಕೆರೆಯ ಒಳಹರಿವು ಮತ್ತು ಹೊರಹರಿವು ಪ್ರದೇಶಕ್ಕೂ ಮಣ್ಣು ತುಂಬಲಾಗುತ್ತಿದೆ. ಹೀಗೆಯೇ ಬಿಟ್ಟರೆ ಕೆರೆ ಪೂರ್ಣ ನಾಶವಾಗುತ್ತದೆ’ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದರು.

ಚಿಕ್ಕಬೆಳ್ಳಂದೂರು ಕೆರೆಗೆ ಕಟ್ಟಡ ತ್ಯಾಜ್ಯ ತುಂಬುತ್ತಿರುವುದು

‘ಬೇಲಿಯನ್ನು ತೆಗೆದು ಹಾಕಿದ್ದು, ವೈದ್ಯಕೀಯ ತ್ಯಾಜ್ಯ, ಕಲ್ಲು–ಮಣ್ಣು ಕೆರೆ ಸೇರುತ್ತಿದೆ. ಸದ್ಯದ ಮಟ್ಟಿಗೆ ನಾಲ್ಕಾರು ಎಕರೆ ಪ್ರದೇಶದಲ್ಲಿ ನೀರಿದ್ದರೂ ಅದನ್ನು ವ್ಯವಸ್ಥಿತವಾಗಿ ಮುಚ್ಚಲಾಗಿದೆ. ಈ ಕುರಿತು ಪ್ರಶ್ನಿಸಿದರೆ, ಒಬ್ಬೊಬ್ಬರ ಹೆಸರು ಹೇಳಿ ಓಡಿಹೋಗುತ್ತಾರೆ. ರಾತ್ರಿ ವೇಳೆ ಹೆಚ್ಚಾಗಿ ವಾಹನಗಳು ಬಂದು ಕಸ ಸುರಿಯುತ್ತವೆ’ ಎಂದು ನಿವಾಸಿ ರಾಜೇಂದ್ರನಾಥ್ ಮಾಹಿತಿ ನೀಡಿದರು.

ಚಿಕ್ಕಬೆಳ್ಳಂದೂರು ಕೆರೆಯ ಎರಡು ಭಾಗದಲ್ಲಿ ರಸ್ತೆ ನಿರ್ಮಾಣ ಸೇರಿದಂತೆ ಇತರೆ ಅತಿಕ್ರಮಗಳಿಂದ 3 ಎಕರೆ 18 ಗುಂಟೆ ಒತ್ತುವರಿಯಾಗಿದೆ ಎಂದು 2015ರಲ್ಲಿ ಕಂದಾಯ ಇಲಾಖೆಯ ಸರ್ವೆ ದಾಖಲೆಗಳಲ್ಲಿದೆ. ಅದನ್ನು ಈವರೆಗೂ ತೆರವು ಮಾಡಿಲ್ಲ. ಈಗ ಮತ್ತಷ್ಟು ಎಕರೆ ಒತ್ತುವರಿಯಾಗುತ್ತಿದ್ದರೂ ಕಂದಾಯ ಇಲಾಖೆ ಸೇರಿದಂತೆ ಇಲಾಖೆಗಳ ಅಧಿಕಾರಿಗಳು ಇತ್ತ ಸುಳಿಯುತ್ತಿಲ್ಲ. ಈ ಬಗ್ಗೆ ಸರ್ಕಾರದ ಹಿರಿಯ ಅಧಿಕಾರಿಗಳು ಕೂಡಲೇ ಗಮನಹರಿಸಬೇಕು ಎಂದು ಸ್ಥಳೀಯರು ಆಗ್ರಹಿಸಿದರು.

ಒಟ್ಟಾರೆ ಅಭಿವೃದ್ಧಿ ಮಾಡಿ...

‘ಚಿಕ್ಕಬೆಳ್ಳಂದೂರು ಕೆರೆಗೆ ಕಟ್ಟಡ ತ್ಯಾಜ್ಯ ಸುರಿಯಲಾಗುತ್ತಿದೆ. ಕಲ್ಲು ಮಣ್ಣು ತುಂಬಿ ಮಟ್ಟ ಮಾಡಲಾಗುತ್ತಿದೆ. 75 ಎಕರೆಯಲ್ಲಿ 8 ಎಕರೆ ತಮ್ಮ ವ್ಯಾಪ್ತಿಗೆ ಸೇರುವುದಿಲ್ಲ ಎಂದು ಬಿಬಿಎಂಪಿ ಸುಮ್ಮನಿರುವುದರಿಂದಲೇ ಕೆರೆ ಒತ್ತುವರಿಯಾಗುತ್ತಿದೆ. ಒಂದು ಕೆರೆಯನ್ನು ಅಭಿವೃದ್ಧಿಗೆ ತೆಗೆದುಕೊಡಾಗ, ಪೂರ್ಣವಾಗಿ ಕಾಮಗಾರಿ ಮಾಡಬೇಕು. ಒಂದು ಭಾಗ ಬರುವುದಿಲ್ಲ ಎಂದು ಹೇಳಿದರೆ ಅದು ಒತ್ತುವರಿದಾರರಿಗೆ ಅವಕಾಶ ಮಾಡಿಕೊಟ್ಟಂತೆ. ಹೀಗಾಗಿ ಬಿಬಿಎಂಪಿ ಒಟ್ಟಾರೆ ಅಭಿವೃದ್ಧಿ ಮಾಡಬೇಕು. ಮರು ಸರ್ವೆ ಮಾಡಿ ಎಲ್ಲ ಒತ್ತುವರಿಯನ್ನು ತೆರವುಗೊಳಿಸಬೇಕು’ ಎಂದು ಫ್ರೆಂಡ್ಸ್ ಆಫ್ ಲೇಕ್ಸ್‌ನ ರಾಮ್‌ಪ್ರಸಾದ್ ಆಗ್ರಹಿಸಿದರು.

‘ಪರಿಶೀಲನೆಗೆ ಸೂಚನೆ’

‘ಚಿಕ್ಕಬೆಳ್ಳಂದೂರು ಕೆರೆ ಅಭಿವೃದ್ಧಿ ಕಾಮಗಾರಿಯನ್ನು ಆರಂಭಿಸಬೇಕಿದೆ. ಪ್ರಾರಂಭಿಕ ಕೆಲಸಗಳಾಗಿವೆ. ಕೆರೆ ಒತ್ತುವರಿ ಬಗ್ಗೆ ದೂರು ಬಂದಿದೆ. ಅದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಸ್ಥಳೀಯ ಕಾರ್ಯಪಾಲಕ ಎಂಜಿನಿಯರ್‌ಗೆ ಸೂಚಿಸಲಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರುವ ಕೆರೆಯ ಅಭಿವೃದ್ಧಿ ಬಗ್ಗೆ ಹಿರಿಯ ಅಧಿಕಾರಿಗಳ ಆದೇಶದಂತೆ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯಕುಮಾರ್ ಹರಿದಾಸ್ ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಅಧಿಕಾರಿಗಳು ಪಿಕೋರಿಯಸ್ ಬಯೋ ಫರ್ಟಿಲೈಸರ್ಸ್ ಕಂಪನಿಗೆ ಬೀಗ ಜಡಿದರು.

ದುರ್ವಾಸನೆ: ಕಂಪನಿಗೆ ಬೀಗ ಹಾಕಿದ ಅಧಿಕಾರಿಗಳು

ದಾಬಸ್ ಪೇಟೆ: ಸೋಂಪುರ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತಿರುವ ಪೆಮ್ಮನಹಳ್ಳಿ ಬಳಿ ಪಿಕೋರಿಯಸ್ ಬಯೋ ಫರ್ಟಿಲೈಸರ್ಸ್ ಕಂಪನಿ ತ್ಯಾಜ್ಯ ನಿರ್ವಹಣೆಯಲ್ಲಿ ವಿಫಲವಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅಧಿಕಾರಿಗಳು ಕಂಪನಿಗೆ ನೋಟಿಸ್ ನೀಡಿ ಬೀಗ ಹಾಕಿದ್ದಾರೆ.

ಕಂಪನಿಯಿಂದ ಹೊರ ಬರುತ್ತಿರುವ ತ್ಯಾಜ್ಯದ ನೀರು ದುರ್ವಾಸನೆ ಬೀರುತ್ತಿದ್ದು, ಸುತ್ತಮುತ್ತಲಿನಲ್ಲಿರುವವರು ವಾಸಿಸಲು ಸಾಧ್ಯವಾಗದ ಪರಿಸ್ಥಿತಿ ಇದೆ ಎಂದು ಸಾರ್ವಜನಿಕರು ದೂರು ನೀಡಿದ್ದರು. ಶಾಸಕರ ಸೂಚನೆ ಮೇರೆಗೆ, ಅಧಿಕಾರಿಗಳು ಈ ಕ್ರಮ ಕೈಗೊಂಡಿದ್ದಾರೆ.

ಒಂದು ವರ್ಷದಿಂದ ಈ ಕಂಪನಿ ರಾತ್ರಿ ವೇಳೆ ಕೋಳಿ ತ್ಯಾಜ್ಯವನ್ನು ಸಂಸ್ಕರಿಸಿ, ಮೀನಿನ ಆಹಾರ ತಯಾರಿಸುತ್ತಿತ್ತು. ಈ ಪ್ರಕ್ರಿಯೆಯಲ್ಲಿ ಹೊರಬರುತ್ತಿದ್ದ ತ್ಯಾಜ್ಯದ ನೀರನ್ನು ಸಂಸ್ಕರಿಸದೆ ಹೊರಬಿಡಲಾಗುತ್ತಿತ್ತು. ಇದರಿಂದ ಪೆಮ್ಮನಹಳ್ಳಿ, ನಿಡವಂದ, ತಿಮ್ಮನಾಯಕನಹಳ್ಳಿ, ನಿಡವಂದ ಕಾಲೊನಿ ಹಾಗೂ ದಾಬಸ್‌ಪೇಟೆ ಸುತ್ತಮುತ್ತ ದುರ್ವಾಸನೆ ಬೀರುತ್ತಿತ್ತು. ಜನರು ಮೂಗು ಮುಚ್ಚಿಕೊಂಡು ಓಡಾಡುವ ದುಃಸ್ಥಿತಿ ನಿರ್ಮಾಣವಾಗಿತ್ತು ಎಂದು ಇಲ್ಲಿನ ಜನರು ದೂರಿದ್ದರು.

ನೆಲಮಂಗಲ ಶಾಸಕ ಎನ್. ಶ್ರೀನಿವಾಸ್ ಇತ್ತೀಚೆಗೆ ಕಾಮಗಾರಿ ಶಂಕುಸ್ಥಾಪನೆಗಾಗಿ ಪೆಮ್ಮನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಸ್ಥಳೀಯರು ತ್ಯಾಜ್ಯ ದುರ್ವಾಸನೆ ಬೀರುತ್ತಿರುವ ವಿಚಾರವನ್ನು ಅವರ ಗಮನಕ್ಕೆ ತಂದಿದ್ದರು. ಕಂಪನಿ ವಿರುದ್ಧ ಕಾನೂನು ರೀತಿಯಲ್ಲಿ ಕ್ರಮ ಕೈಗೊಳ್ಳುವಂತೆ ಶಾಸಕರು ಸೂಚಿಸಿದ್ದರು.

ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ನ.19ರವರೆಗೆ ಪ್ರದರ್ಶನ

‘ಜೋಶಾ’ ಚಿತ್ರಕಲಾ ಪ್ರದರ್ಶನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಾವಿದರಾದ ಶಾಂತಿ ಸೂರಜ್ ಮತ್ತು ಜೋಶೀಲಾ ಎಸ್.ವಿ. ಅವರ ‘ಜೋಶಾ’ – ಮೈಸೂರು ಸಾಂಪ್ರದಾಯಿಕ ವರ್ಣಚಿತ್ರಗಳ ಪ್ರದರ್ಶನ ನಗರದ ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಗುರುವಾರ ಆರಂಭಗೊಂಡಿದೆ.

ಪ್ರದರ್ಶನದಲ್ಲಿ 50ಕ್ಕೂ ಹೆಚ್ಚು ಕಲಾಕೃತಿಗಳಿವೆ. ಪ್ರತಿ ಕಲಾಕೃತಿಯೂ ಭಾರತೀಯ ಪ್ರಾಚೀನ ಸಂಸ್ಕೃತಿಯನ್ನು ಬಿಂಬಿಸುತ್ತಿವೆ.

ವಾಟರ್ ಕಲರ್ ಮತ್ತು ಪೋಸ್ಟರ್ ಕಲರ್ ಬಳಸಿಕೊಂಡು ಬಹುತೇಕ ಕಲಾಕೃತಿಗಳನ್ನು ರಚಿಸಲಾಗಿದೆ.

ಸಿದ್ಧಿವಿನಾಯಕ, ನೃತ್ಯ ಗಣಪತಿ, ವಿಜಯ ಗಣಪತಿ, ವರ ಗಣಪತಿ, ಗಣೇಶ, ಶ್ರೀಕೃಷ್ಣ, ನವನೀತ ಕೃಷ್ಣ, ಯಶೋದಾ–ಕೃಷ್ಣ, ಕೃಷ್ಣ ಪಾರಿಜಾತ, ಕೃಷ್ಣ ತುಲಾಭಾರ, ವೇಣುಗೋಪಾಲ, ಶ್ರೀರಾಮ ಪಟ್ಟಾಭಿಷೇಕ, ಕೋದಂಡರಾಮ ಮತ್ತು ದಶಾವತಾರ, ಚಿನ್ನದ ಜಿಂಕೆಯನ್ನು ಬಯಸುವ ಸೀತೆ, ಲವ–ಕುಶ, ಗಿರಿಜಾ ಕಲ್ಯಾಣ.. ಹೀಗೆ ಅನೇಕ ಪುರಾಣಪಾತ್ರಗಳು ಕಲಾರೂಪದಲ್ಲಿ ಇಲ್ಲಿ ಅನಾವರಣಗೊಂಡಿವೆ.

ಕಲಾವಿದೆಯರಾದ ಶಾಂತಿ ಸೂರಜ್ ಮತ್ತು ಜೋಶೀಲಾ ಎಸ್.ವಿ. ರಚಿಸಿರುವ ಮೈಸೂರು ಸಾಂಪ್ರದಾಯಿಕ ಕಲಾಕೃತಿಗಳ ಪ್ರದರ್ಶನ ‘ಜೋಶಾ’ವನ್ನು ಕಲಾ ಮಂದಿರದ ನಿವೃತ್ತ ಪ್ರಾಂಶುಪಾಲ ಗೋವಿಂದರಾಜು ಜೇಯರ್, ಆಕಾಂಕ್ಷ ಗ್ರೂಪ್ ಸಂಸ್ಥಾಪಕಿ ಶ್ಯಾಮಲಾ ರಮಾನಂದ್, ಕರ್ನಾಟಕ ಚಿತ್ರಕಲಾ ಪರಿಷತ್ತಿನ ಮಾಜಿ ಕಾರ್ಯದರ್ಶಿ ಎಂ.ಜೆ. ಕಮಲಾಕ್ಷಿ ವೀಕ್ಷಿಸಿದರು ಪ್ರಜಾವಾಣಿ ಚಿತ್ರ

ನ.19ರ ವರೆಗೆ ಪ್ರತಿದಿನ ಬೆಳಿಗ್ಗೆ 10.30ರಿಂದ ಸಂಜೆ 5.30ರವರೆಗೆ ಚಿತ್ರಕಲಾ ಪ್ರದರ್ಶನ ನಡೆಯಲಿದೆ. ಸಾರ್ವಜನಿಕರಿಗೆ ಪ್ರವೇಶ ಉಚಿತ.

‘ನಿಸಾರ್’ ಉಪಗ್ರಹ 2024ರಲ್ಲಿ ಉಡಾವಣೆ

ಬೆಂಗಳೂರು: ನಾಸಾ–ಇಸ್ರೊ ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಸಿಂಥೆಟಿಕ್ ಅಪರ್ಚರ್ ರೆಡಾರ್ (ನಿಸಾರ್) ಉಪಗ್ರಹವನ್ನು 2024 ರಲ್ಲಿ ಉಡಾವಣೆ ಮಾಡಲಾಗುವುದು ಎಂದು ನಾಸಾ ಅಧಿಕಾರಿಗಳು ತಿಳಿಸಿದ್ದಾರೆ.

ಮಂಗಳವಾರ ಮಾತನಾಡಿದ ನಾಸಾದ ನಿಸಾರ್ ಯೋಜನೆಯ ವ್ಯವಸ್ಥಾಪಕ ಫಿಲ್ ಬರೆಲಾ ಅವರು, ಮುಂದಿನ ವರ್ಷದ ಮೊದಲ ಮೂರು ತಿಂಗಳೊಳಗೆ ಉಪಗ್ರಹದ ಉಡಾವಣೆ ಸಾಧ್ಯ. ಇದಕ್ಕೆ ಸಂಬಂಧಿಸಿದಂತೆ ಪ್ರಮುಖ ಪರೀಕ್ಷೆಗಳು ಬಾಕಿ ಉಳಿದಿವೆ ಎಂದು ಇಸ್ರೊ ಹೇಳಿದೆ ಎಂದರು.

ಜಿಎಸ್‌ಎಲ್‌ವಿ ಮಾರ್ಕ್–2 ರಾಕೆಟ್ ಮೂಲಕ ಶ್ರೀಹರಿಕೋಟದಿಂದ ಉಡಾವಣೆಗೊಳ್ಳಲಿದೆ. ಈ ಉಪಗ್ರಹವು ಮೂರು ವರ್ಷ ಕಾರ್ಯ ನಿರ್ವಹಿಸಲಿದ್ದು, ಭೂಭಾಗ, ಹಿಮ ಆವೃತ ಪ್ರದೇಶಗಳ ಮೇಲ್ಮೈಯ ಬದಲಾವಣೆಗಳನ್ನು ಪ್ರತಿ 12 ದಿನಗಳಿಗೊಮ್ಮೆ ಸಮೀಕ್ಷೆ ಮಾಡಲಿದೆ. ಉಪಗ್ರಹ ಕಾರ್ಯಾರಂಭ ಮಾಡಿದ 90 ದಿನಗಳ ಬಳಿಕ ಸಮೀಕ್ಷೆಯನ್ನು ಆರಂಭಿಸುತ್ತದೆ.

‘ಬಾಕಿ ಪರೀಕ್ಷೆಗಳ ಪೈಕಿ ಕಂಪನ ಪರೀಕ್ಷೆ ಈಗ ನಡೆದಿದೆ. ಕಾರ್ಯಕ್ಷಮತೆಯ ಪರೀಕ್ಷೆಗಳ ಸರಣಿ ನಡೆಸಬೇಕಾಗಿದೆ. ಬ್ಯಾಟರಿ ಮತ್ತು ಸಿಮ್ಯುಲೇಷನ್ ಪರೀಕ್ಷೆ ನಡೆಸಲಾಗಿದೆ’ ಎಂದು ಬರೇಲಾ ತಿಳಿಸಿದ್ದಾರೆ.

ನಾಸಾದ ಜೆಟ್ ಪ್ರೊಪೆಲ್ಷನ್ ಲ್ಯಾಬೊರೇಟರಿಯ ನಿರ್ದೇಶಕಿ ಡಾ.ಲೂರಿ ಲೆಶಿನ್ ಮಾತನಾಡಿ, ನಿಸಾರ್ ಉತ್ತಮವಾಗಿ ಕಾರ್ಯ-ನಿರ್ವಹಿಸಿದರೆ, ಭೂಮಿಯಲ್ಲಿ ಆಗುವ ಬದಲಾವಣೆಗಳನ್ನು ಬಹು ವರ್ಷಗಳ ಕಾಲಮಾಪಕದಲ್ಲಿ ಗಮನಿಸಬಹುದು ಎಂದರು.

ನಿಸಾರ್ ಉಪಗ್ರಹವು ಭೂ ವ್ಯವಸ್ಥೆ, ಹಿಮ ಪ್ರದೇಶ, ಸಸ್ಯ ಸಂಪತ್ತು, ಸಮುದ್ರದ ನೀರಿನ ಮಟ್ಟ ಏರಿಕೆ, ಅಂತರ್ಜಲ, ಎಲ್ಲ ಬಗೆಯ ನೈಸರ್ಗಿಕ ದುರಂತಗಳ ನಿಯಮಿತ ದತ್ತಾಂಶವನ್ನು ಪ್ರಾದೇಶಿಕವಾಗಿ ಮತ್ತು ತಾತ್ಕಾಲಿಕವಾಗಿ ಒದಗಿಸುವ ಕಾರ್ಯ ನಿರ್ವಹಿಸುತ್ತದೆ.

ಅಯೋಧ್ಯೆಯ ಶ್ರೀರಾಮನ ವಿಗ್ರಹದ ಪ್ರಾಣ ಪ್ರತಿಷ್ಠೆ ಜ.22ಕ್ಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರದ ಪ್ರತಿಷ್ಠಾ ಬ್ರಹ್ಮಕಲಶೋತ್ಸವ 2024ರ ಜನವರಿ 22ರಿಂದ ಮಾರ್ಚ್ 10ರವರೆಗೆ ಜರುಗಲಿದೆ ಎಂದು ಶ್ರೀರಾಮ ಮಂದಿರದ ವಿಶ್ವಸ್ಥರೂ ಆಗಿರುವ ಉಡುಪಿ ಪೇಜಾವರ ಮಠಾಧೀಶ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಜ.22ರಂದು ಶ್ರೀರಾಮನ ಶಿಲಾ ಮೂರ್ತಿಯ ಪ್ರಾಣ ಪ್ರತಿಷ್ಠೆ ನೆರವೇರಲಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಶ್ರೀರಾಮ ಮಂದಿರವನ್ನು ಉದ್ಘಾಟಿಸಲಿದ್ದಾರೆ. ಆ ದಿನ ಸೀಮಿತ ಜನರಿಗೆ ಪ್ರವೇಶ ಇರಲಿದೆ. ಕಾರ್ಯಕ್ರಮದ ನೇರ ಪ್ರಸಾರ ಇರಲಿದ್ದು, ಸಾರ್ವಜನಿಕರು ತಮ್ಮ ಊರಿನ ದೇವಾಲಯಗಳಲ್ಲಿ ಅಪೂರ್ವ ಕ್ಷಣಗಳನ್ನು ಪರದೆಯಲ್ಲಿ ವೀಕ್ಷಿಸಬಹುದು’ ಎಂದರು.



ಪೇಜಾವರ ಶ್ರೀ

ಈ ವೇಳೆ ದೇವಾಲಯಗಳಲ್ಲಿ ವಿಶೇಷ ಪೂಜೆ, ಭಜನೆ ನಡೆಯುತ್ತದೆ. ಐದು ಶತಮಾನಗಳ ಸಂಕೇತವಾಗಿ ಸಂಜೆ ಐದು ದೀಪಗಳನ್ನು ಪ್ರತಿ ಮನೆಯಲ್ಲಿ ಬೆಳಗಿ, ಇದನ್ನು ದೀಪೋತ್ಸವವಾಗಿ ಆಚರಿಸಬೇಕು. ಜ.23ರಿಂದ 48 ದಿನಗಳವರೆಗೆ ಮಂಡಲೋತ್ಸವ ನಡೆಯುತ್ತದೆ. ಈ ಉತ್ಸವದಲ್ಲಿ ದೇಶದ ಎಲ್ಲ ಜನರು ಪಾಲ್ಗೊಳ್ಳಬೇಕು ಎಂದರು.

ಮಿಜೋರಾಂ ಪ್ರವೇಶಿಸಿದ ಮ್ಯಾನ್ಮಾರ್‌ನ 29 ಸೈನಿಕರು

ಐಜ್ವಾಲ್ (ಪಿಟಿಐ): ಗಡಿಯಲ್ಲಿನ ತನ್ನ ಶಿಬಿರವನ್ನು ಜುಂಟಾ ವಿರೋಧಿ ಗುಂಪುಗಳು ಅತಿಕ್ರಮಿಸಿದ್ದರಿಂದ 29ಕ್ಕೂ ಹೆಚ್ಚು ಮ್ಯಾನ್ಮಾರ್ ಸೈನಿಕರು ಗುರುವಾರ ಮಿಜೋರಾಂ ಪ್ರವೇಶಿಸಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಮ್ಯಾನ್ಮಾರ್‌ನ 29 ಸೈನಿಕರು ಭಾರತ ಮತ್ತು ಮ್ಯಾನ್ಮಾರ್ ನಡುವಿನ ಗಡಿಯಲ್ಲಿ, ಪೊಲೀಸರು ಮತ್ತು ಅಸ್ಸಾಂ ರೈಫಲ್ಸ್ ಅನ್ನು ಗುರುವಾರ ಸಂಪರ್ಕಿಸಿದ್ದಾರೆ. ಈ ಸೈನಿಕರನ್ನು ಅವರ ದೇಶಕ್ಕೆ ಕಳುಹಿಸಬೇಕಿದೆ’ ಎಂದು ಪೊಲೀಸ್ ಮಹಾ ನಿರೀಕ್ಷಕ (ಹೆಡ್‌ಕ್ವಾರ್ಟರ್ಸ್) ಲಾಲ್ಬಿ ಯಾಕ್ತಂಗಾ ಖಿಯಾಂಗ್ಟೆ ಹೇಳಿದ್ದಾರೆ.

ಮ್ಯಾನ್ಮಾರ್‌ನ ಚಿನ್ ರಾಜ್ಯದ ಎರಡು ಸೇನಾ ನೆಲೆಗಳನ್ನು ಪೀಪಲ್ಸ್ ಡಿಫೆನ್ಸ್ ಫೋರ್ಸ್ (ಪಿಡಿಎಫ್) ಆಕ್ರಮಿಸಿದ ಬಳಿಕ, ಮಿಜೋರಾಂ ಪ್ರವೇಶಿಸಿದ್ದ ಮಾಡಿದ್ದ 45 ಸೈನಿಕರನ್ನು ಮಂಗಳವಾರ ಮ್ಯಾನ್ಮಾರ್‌ನ ಮಿಲಿಟರಿ ಸರ್ಕಾರಕ್ಕೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇಂಡೊ–ಮ್ಯಾನ್ಮಾರ್‌ನ ಗಡಿ ಬಳಿ ಮ್ಯಾನ್ಮಾರ್‌ನ ಮಿಲಿ ಟರಿ ಮತ್ತು ಜುಂಟಾ ವಿರೋಧಿ ಗುಂಪುಗಳ ನಡುವಿನ ಹೋರಾಟವನ್ನು ನಿಲ್ಲಿಸುವಂತೆ ಭಾರತ ಗುರುವಾರ ಕರೆ ನೀಡಿದೆ. ಈ ಹೋರಾಟದಿಂದಾಗಿ ಮ್ಯಾನ್ಮಾರ್‌ನ ನಿರಾಶ್ರಿತರು ಮಿಜೋರಾಂನತ್ತ ಬರುತ್ತಿದ್ದಾರೆ ಎಂದು ಭಾರತ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

ಪುಸ್ತಕ ಪಟ್ಟಿ ಕೊನೆಗೂ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಯು 2020ನೇ ಸಾಲಿನ ಪುಸ್ತಕಗಳ ಪಟ್ಟಿಯನ್ನು ಕಡೆಗೂ ಬಿಡುಗಡೆ ಮಾಡಿದೆ.

ಇಲಾಖೆಯ ಏಕಗವಾಕ್ಷಿ ಯೋಜನೆಯಡಿ ಸಾಹಿತಿ ದೊಡ್ಡರಂಗೇಗೌಡ ಅವರ ಅಧ್ಯಕ್ಷತೆಯ ಈ ಹಿಂದಿನ ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯು ಎರಡು ವರ್ಷಗಳ ಹಿಂದೆಯೇ 2020ನೇ ಸಾಲಿನ ಪುಸ್ತಕಗಳ ಪಟ್ಟಿಯನ್ನು ಸಿದ್ಧಪಡಿಸಿತ್ತು. ಆದರೆ, ಸರ್ಕಾರದ ಅನುಮೋದನೆ ದೊರೆತಿರಲಿಲ್ಲ. ಕಳೆದ ಬಜೆಟ್‌ನಲ್ಲಿ ₹ 10 ಕೋಟಿ ಅನುದಾನ ಘೋಷಿಸಿದ್ದ ಕಾಂಗ್ರೆಸ್ ಸರ್ಕಾರ, ರಾಜ್ಯಮಟ್ಟದ ಪುಸ್ತಕ ಆಯ್ಕೆ ಸಮಿತಿಯನ್ನು ಪುನರ್ ರಚಿಸಿತ್ತು. ಸಾಹಿತಿ ಕರೀಗೌಡ ಬೀಚನಹಳ್ಳಿ ಅವರ ಅಧ್ಯಕ್ಷತೆಯ ನೂತನ ಸಮಿತಿಯು ಇಲಾಖೆಯ ಸೂಚನೆ ಮೇರೆಗೆ ಅಂತಿಮಗೊಂಡಿದ್ದ ಪುಸ್ತಕಗಳ ಪಟ್ಟಿಯನ್ನು ಮರುಪರಿಶೀಲನೆ ನಡೆಸಿತ್ತು.

ಈ ಬಗ್ಗೆ ‘ಪ್ರಜಾವಾಣಿ’ಯಲ್ಲಿ ಅ.3ರಂದು ‘ಖರೀದಿಯಾಗದ ಮೂರು ವರ್ಷಗಳ ಪುಸ್ತಕ’ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು. ಅಂತಿಮಗೊಂಡ 2020ನೇ ಸಾಲಿನ ಪುಸ್ತಕ ಪಟ್ಟಿಗೆ ಅನುಮೋದನೆ ನೀಡಿ, ಖರೀದಿ ಪ್ರಕ್ರಿಯೆ ನಡೆಸುವಂತೆ ಸರ್ಕಾರಕ್ಕೆ ಪ್ರಕಾಶಕರು ಮತ್ತು ಸಾಹಿತಿಗಳೂ ಮನವಿ ಮಾಡಿಕೊಂಡಿದ್ದರು. ಆ ಪಟ್ಟಿಗೆ ಈಗ ಸರ್ಕಾರದ ಅನುಮೋದನೆ ದೊರೆತಿದೆ.

ಅನುಮೋದನೆಗೊಂಡ 2020ನೇ ಸಾಲಿನ ಪುಸ್ತಕ ಪಟ್ಟಿಯು 436 ಪುಟಗಳನ್ನು ಒಳಗೊಂಡಿದೆ. ಈ ಪಟ್ಟಿಯಲ್ಲಿ 4,791 ಪುಸ್ತಕಗಳು ಸ್ಥಾನ ಪಡೆದಿದ್ದು, ದೊಡ್ಡರಂಗೇಗೌಡ ಹಾಗೂ ಕರೀಗೌಡ ಬೀಚನಹಳ್ಳಿ ಅವರ ಸಹಿ ಇದೆ. ಆದರೆ, ಇಷ್ಟು ಪುಸ್ತಕಗಳ ಖರೀದಿಗೆ ಅಗತ್ಯವಿರುವ ಅನುದಾನಕ್ಕೆ ಅನುಮೋದನೆ ದೊರೆತಿಲ್ಲ. ಇದು ಪ್ರಕಾಶಕರು ಹಾಗೂ ಸಾಹಿತಿಗಳ ಅಸಮಾಧಾನಕ್ಕೆ ಕಾರಣವಾಗಿದೆ.

ಆಯ್ಕೆಯಾದ ಪುಸ್ತಕಗಳ ಪಟ್ಟಿಯ ಪಿಡಿಎಫ್‌ನಲ್ಲಿ ಎಎಸ್‌ಸಿಐಐ ತಂತ್ರಾಂಶ ಬಳಸಿಕೊಳ್ಳಲಾಗಿದೆ. ಇದರಿಂದ ಸಾಹಿತಿಗಳು ಹಾಗೂ ಪ್ರಕಾಶಕರಿಗೆ ತಮ್ಮ ಪುಸ್ತಕಗಳು ಆಯ್ಕೆಯಾಗಿವೆಯೇ ಎಂದು ಖಚಿತಪಡಿಸಿಕೊಳ್ಳುವುದು ಕಷ್ಟವಾಗಿದೆ. ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿಯೂ ಅಸಮಾಧಾನ ವ್ಯಕ್ತವಾಗಿದ್ದು, ಯೂನಿಕೋಡ್ ತಂತ್ರಾಂಶ ಅಳವಡಿಸಿಕೊಳ್ಳುವ ಬಗ್ಗೆ ಸಲಹೆಗಳು ವ್ಯಕ್ತವಾಗಿವೆ.

ಜಾತಿ ಗಣತಿ ಅರೆಬೆಂದ ವರದಿ: ವಿಜಯೇಂದ್ರ

ಚಿತ್ರದುರ್ಗ: ಜಾತಿ ಗಣತಿಗೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜ ಅವರು ಸಲ್ಲಿಸಿರುವುದು ಅರೆಬೆಂದ ವರದಿ. ಸಿದ್ದರಾಮಯ್ಯ ಅವರು ಮನಸಿಗೆ ಬಂದ ಹಾಗೆ ವರದಿ ಬರೆಸಿಕೊಂಡಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.

‘ಸಿದ್ದರಾಮಯ್ಯ ಕಳೆದ ಬಾರಿ ಸಿಎಂ ಆಗಿದ್ದ ಅವಧಿಯಲ್ಲಿ ಈ ವರದಿ ಸಲ್ಲಿಸಲಾಗಿತ್ತು. ಸರ್ಕಾರದ ಸುಮಾರು ₹150 ಕೋಟಿ ಖರ್ಚು ಮಾಡ ಲಾಗಿದೆ. ಜನರ ಮನೆಗೆ ಭೇಟಿ ನೀಡದೇ ಹವಾನಿಯಂತ್ರಿತ ಕೊಠಡಿಯಲ್ಲಿ ಕುಳಿತು ವರದಿ ಸಿದ್ಧಪಡಿಸಲಾಗಿದೆ. ವೀರಶೈವ–ಲಿಂಗಾಯತ ಎಂಬ ಭೇದ ಮಾಡಿ ಸಮುದಾಯ ಒಡೆಯುವ ಹುನ್ನಾರಕ್ಕೆ ಕೈಹಾಕಿ ಸಿದ್ದರಾಮಯ್ಯ ವಿಫಲರಾಗಿದ್ದರು. ಈಗ ಜಾತಿ ಗಣತಿ ವರದಿ ಮೂಲಕ ಮತ್ತೆ ಅದೇ ಕೆಲಸ ಮಾಡುತ್ತಿದ್ದಾರೆ ಎಂದರು.

ದಲಿತರ ಶೃಂಗಸಭೆಯಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ

ಸಮಾನತೆಗೆ ಬೇಕು ಸೈದ್ಧಾಂತಿಕ ಅನುಸಂಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ, ಆರ್ಥಿಕ, ರಾಜಕೀಯ ಅಸಮಾನತೆಯ ನಿವಾರಣೆಗಾಗಿ ಶೋಷಿತ ಸಮುದಾಯಗಳ ನಡುವೆ ಸೈದ್ಧಾಂತಿಕ ಅನುಸಂಧಾನದ ಅಗತ್ಯವಿದೆ ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಹೇಳಿದರು.

ದಲಿತರ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ದಿಕ್ಕು ದೆಸೆ ಕುರಿತು ಗುರುವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಶೃಂಗ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

ಜಾತಿ, ವರ್ಗದ ಕಾರಣಕ್ಕಾಗಿ ಸೃಷ್ಟಿಯಾಗಿರುವ ಅಸಮಾನತೆ ಹೋಗಲಾಡಿಸಲು ಸೂಕ್ತವಾದ ಸೈದ್ಧಾಂತಿಕ ದಿಕ್ಕುದಿಸೆ ಕಂಡುಕೊಳ್ಳಬೇಕು. ಮೂಲ ಆಶಯಗಳಿಗೆ ಧಕ್ಕೆಯಾಗದಂತೆ ಸಂಕುಚಿತತೆ ತೊರೆಯಬೇಕು. ಅಲೆಮಾರಿ, ಆದಿವಾಸಿ, ಬುಡಕಟ್ಟು ಸಮುದಾಯ ಸೇರಿದಂತೆ ಎಲ್ಲ ಶೋಷಿತರನ್ನೂ ಒಳಗೊಂಡು ಒಗ್ಗಟ್ಟು ಸಾಧಿಸಬೇಕು. ಜಾತಿ, ವರ್ಗದ ಒಳಗಿನ ಸವಾಲುಗಳನ್ನೂ ಮೆಟ್ಟಿನಿಲ್ಲಬೇಕು ಎಂದು ಸಲಹೆ ನೀಡಿದರು.

ಒಬ್ಬ–ಮತ್ತೊಬ್ಬ ಮನುಷ್ಯರ ನಡುವಿನ ಅಂತರವು ಯಾರು ಎಷ್ಟು ದೂರ ಎನ್ನುವುದರ ಪ್ರತೀಕ. ದೂರ ಎನ್ನುವುದು ದೇಶದ ಇಂದಿನ ಮಾನದಂಡವೂ ಆಗಿರುವುದು ವಿಪರ್ಯಾಸ. ಇಂತಹ ಅಂತರ ಕಡಿಮೆ ಮಾಡಲು ಶೋಷಿತರ ಏಕತೆ ಅಗತ್ಯ. ಬುದ್ಧ, ಬಸವ, ಗಾಂಧಿ ಮೊದಲಾದವರು ಸಮಾಜದ ಲೋಪಗಳಿಂದ ಬೇಸತ್ತು ಅನುಭವಿಸಿದ ಪಾಪಪ್ರಜ್ಞೆ, ಹುಟ್ಟಿನಿಂದಲೇ ಶೋಷಣೆಗೆ ಒಳಗಾಗಿ ಅಂಬೇಡ್ಕರ್ ಅಂಥವರು ಕಂಡುಕೊಂಡ ಜಾಗೃತ ಪ್ರಜ್ಞೆಗಳು ಮಿಳಿತವಾಗಬೇಕು. ಶೋಷಣೆ, ಅಸಮಾನತೆಯ ವಿರೋಧವು ಚಾರಿತ್ರಿಕ ಮತ್ತು ಸಮಕಾಲೀನ ಪ್ರಜ್ಞೆಯ ಜತೆ ಸಾಗಬೇಕು. ಆಗ ಮಾತ್ರ ಮತೀಯತೆ ಜಾಗದಲ್ಲಿ ಮಾನವೀಯತೆ ನೆಲೆಸಲು ಸಾಧ್ಯ ಎಂದರು.

ಬೆಂಗಳೂರಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ದಲಿತರ ಶೃಂಗ ಸಭೆಯಲ್ಲಿ (ಎಡದಿಂದ) ಸಿದ್ದನಗೌಡ ಪಾಟೀಲ, ಬರಗೂರು ರಾಮಚಂದ್ರಪ್ಪ, ಎ.ಬಿ. ರಾಮಮೂರ್ತಿ, ಮಲ್ಲಪಲ್ಲಿ ಲಕ್ಷ್ಮಣಯ್ಯ, ಗೋಪಾಲಕೃಷ್ಣ ಹರಳಹಳ್ಳಿ, ಮಾವಳ್ಳಿ ಶಂಕರ್ ಇದ್ದಾರೆ –ಪ್ರಜಾವಾಣಿ ಚಿತ್ರ

ಶೃಂಗಸಭೆಯ ಸಂಚಾಲಕ ಮಹೇಶ್‌ಕುಮಾರ ರಾಠೋಡ ಪ್ರಾಸ್ತಾವಿಕವಾಗಿ ಮಾತನಾಡಿದರು. ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್, ಹೈದರಾಬಾದ್‌ನ ದಲಿತ ಅಧ್ಯಯನ ಕೇಂದ್ರದ ಮುಖ್ಯಸ್ಥ ಮಲ್ಲಪಲ್ಲಿ ಲಕ್ಷ್ಮಯ್ಯ, ಅಖಿಲ ಭಾರತ ಕೃಷಿ ಕೂಲಿ ಕಾರ್ಮಿಕರ ಸಂಘದ ಬಿ.ವೆಂಕಟ್, ಅಖಿಲ ಭಾರತ ದಲಿತ ಮುಖಂಡ ಎ.ಬಿ. ರಾಮಮೂರ್ತಿ, ಸಾಮಾಜಿಕ ಚಿಂತಕ ಸಿದ್ದನಗೌಡ ಪಾಟೀಲ, ದೇವದಾಸಿ ಮಹಿಳಾ ವಿಮೋಚನಾ ಸಂಘದ ಪ್ರಮುಖರಾದ ರೇಣುಕಮ್ಮ, ಬಿ.ಮಾಳಮ್ಮ, ದಲಿತ ಸಂಘಟನೆಯ ಮುಖಂಡರಾದ ಮಾವಳ್ಳಿ ಶಂಕರ್, ಗೋಪಾಲ ಕೃಷ್ಣ ಹರಳಹಳ್ಳಿ, ಬಾಲ ಸುಂದರಂ, ರಾಜಶೇಖರ ಮೂರ್ತಿ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

‘ಕನ್ನಡ ಕಲಾ ಕೌಸ್ತುಭ’ ಕರ್ನಾಟಕ ರಾಜ್ಯೋತ್ಸವ: ಅತಿಥಿಗಳು: ಹೊ.ನ. ನೀಲಕಂಠೇಗೌಡ, ರಿಜಿ ಜೇಕಬ್, ರಿನ್ಸನ್ ಜಾರ್ಜ್, ಸೀಮಾ ಆರ್. ಶೆಟ್ಟಿ, ಸಿಜೋ, ಆಯೋಜನೆ ಮತ್ತು ಸ್ಥಳ: ಕಾರ್ಮೆಲ್ ಅಕಾಡೆಮಿ, ಗೊಟ್ಟಿಗೆರೆ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 9

‘ವಿಶ್ವ ಮಧುಮೇಹ ದಿನ’ದ ಅಂಗವಾಗಿ ವಾಕಥಾನ್: ಅತಿಥಿಗಳು: ಡಾ. ಚಿಕ್ಕ ಮೊಗ, ಎಸ್. ಸಿದ್ಧರಾಜು, ರಜಿನಿ ರಾಜ್, ಎಸ್.ಸಿ. ಚಂದ್ರಶೇಖರ್, ಆಯೋಜನೆ ಮತ್ತು ಸ್ಥಳ: ವಾಸನ್ ಐ ಕೇರ್, ಜಯನಗರ, ಬೆಳಿಗ್ಗೆ 10ರಿಂದ

ಕರ್ನಾಟಕ ರಾಜ್ಯೋತ್ಸವ: ಅತಿಥಿಗಳು: ವಿ. ಮನೋಹರ್, ಸಂಜಯ್ ಕುಮಾರ್ ಸಿಂಗ್, ಆಯೋಜನೆ: ಕನ್ನಡ ಕ್ರಿಯಾ ಸಮಿತಿ, ಸ್ಥಳ: ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಹೆಸರಘಟ್ಟ, ಬೆಳಿಗ್ಗೆ 10

‘ಸ್ಪರ್ಶ ವಚನ–2023’ ಮಕ್ಕಳಿಗೆ ಉಚಿತ ಚಿಕಿತ್ಸೆ: ಅತಿಥಿಗಳು: ಡಾ. ಶರಣ್ ಎಸ್. ಪಾಟೀಲ್, ಐಶಾನಿ ಶೆಟ್ಟಿ, ಆಯೋಜನೆ ಮತ್ತು ಸ್ಥಳ: ಸ್ಪರ್ಶ ಫೌಂಡೇಷನ್, ಸ್ಥಳ: ಸ್ಪರ್ಶ ಆಸ್ಪತ್ರೆ, ಇನ್ಫೆಂಟ್ರಿ ರಸ್ತೆ, ಬೆಳಿಗ್ಗೆ 10

ಕರ್ನಾಟಕ ಸುವರ್ಣ ಮಹೋತ್ಸವ: ಉದ್ಘಾಟನೆ: ಎಂ. ಕೃಷ್ಣಪ್ಪ, ಅತಿಥಿಗಳು: ಮಹಾಂತೇಶ ಬಿರಾದಾರ್, ಗುಂಡೀಗೆರೆ ವಿಶ್ವನಾಥ್, ಕಡಬಗೆರೆ ಮುನಿರಾಜು, ಅಧ್ಯಕ್ಷತೆ: ವೈ. ವೆಂಕಟೇಶಪ್ಪ, ಉಪಸ್ಥಿತಿ: ಕೆ. ಭೈರಪ್ಪ, ಆಯೋಜನೆ ಮತ್ತು ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಳಿಗ್ಗೆ 10ರಿಂದ

‘ಗಾಡ್ಸ್ ವೈಫ್ಸ್ ಮೆನ್ಸ್ ಸ್ಲೇವ್ಸ್’ ಸಾಕ್ಷ್ಯಚಿತ್ರ ಪ್ರದರ್ಶನ: ಉಪಸ್ಥಿತಿ: ನಾಗಣ್ಣಗೌಡ, ಪುಷ್ಪ ರಾಯರ್, ವಾಸುದೇವ ಶರ್ಮ ಎನ್.ವಿ., ಪೂರ್ಣಿಮಾ ರವಿ, ಆಯೋಜನೆ ಮತ್ತು ಸ್ಥಳ: ಚೈಲ್ಡ್ ರೈಟ್ಸ್ ಟ್ರಸ್ಟ್, ಅರಮನೆ ರಸ್ತೆ, ಬೆಳಿಗ್ಗೆ 10.30

ಗಣೇಶ್ ಭಟ್ಟ ಹೋಬಳಿ ಅವರ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

‘ಶ್ರೀಲಲಿತಾನಾಮವೈಭವ’ ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಬ್ರಹ್ಮಾನಂದಭಾರತೀ ಸ್ವಾಮೀಜಿ, ಎಸ್. ಆರ್. ರಾಮಸ್ವಾಮಿ, ಕೃಷ್ಣ ಎಸ್. ದೀಕ್ಷಿತ್, ಕೆ.ಎಸ್. ಸತೀಶ ಭಟ್ಟ, ಜಿ.ಬಿ. ಹರೀಶ್, ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ 8ನೇ ಬಡಾವಣೆ, ಸಂಜೆ 5.45

‘ವಿದ್ಯಾಶಂಕರ ಪ್ರಶಸ್ತಿ, ಪುರಸ್ಕಾರ’ ಪ್ರದಾನ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ: ಕೆ. ಮರುಳಸಿದ್ದಪ್ಪ, ಅಧ್ಯಕ್ಷತೆ: ನಲ್ಲೂರು ಪ್ರಸಾದ್ ಆರ್.ಕೆ., ಪ್ರಶಸ್ತಿ ಪ್ರದಾನ: ಹಂ.ಪ. ನಾಗರಾಜಯ್ಯ, ಜಿ.ಎಸ್. ಸಿದ್ಧಲಿಂಗಯ್ಯ, ಪ್ರಶಸ್ತಿ ಪುರಸ್ಕೃತರು: ಬಿ.ವ್ಹಿ. ಶಿರೂರ, ಪ್ರಕಾಶ ಗಿರಿಮಲ್ಲನವರ, ಅತಿಥಿಗಳು: ಡಿ.ವಿ. ಪರಮಶಿವಮೂರ್ತಿ, ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಎಸ್. ವಿದ್ಯಾಶಂಕರ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 6

ಮರುಳಸಿದ್ದಪ್ಪ

‘ಏಕಲವ್ಯ’ ನಾಟಕ ಪ್ರದರ್ಶನ: ನಿರ್ದೇಶನ: ಬಾಲಕೃಷ್ಣೇಗೌಡ, ಉಪಸ್ಥಿತಿ: ರಾಘವೇಂದ್ರ, ನವೀನ್, ರಾಜೇಶ್, ರವೀಂದ್ರ, ಆಯೋಜನೆ: ಪಾಪು ಕಲಾವಿದರ ಸಂಘ, ಸ್ಥಳ: ಲಾಸ್ಯ ರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6

ಕರ್ನಾಟಕ ರಾಜ್ಯೋತ್ಸವ, ದತ್ತಿ ಉಪನ್ಯಾಸ: ಉದ್ಘಾಟನೆ: ದಿಬ್ಬೂರು ಸಿದ್ದಲಿಂಗಪ್ಪ, ‘ಕರ್ನಾಟಕಕ್ಕೆ ನಮ್ಮ ಶರಣರ ಕೊಡುಗೆ’ ಉಪನ್ಯಾಸ: ಎ.ಆರ್. ಶಿವಕುಮಾರ್, ಅತಿಥಿಗಳು: ಗೀತಾ ಜಯಂತ್, ಎನ್. ಕೇಶವಕುಮಾರ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ದಿಬ್ಬೂರು ವೀರಪ್ಪ ನಂಜಮ್ಮ ಎಂಡೋಮೆಂಟ್ ಟ್ರಸ್ಟ್, ಸ್ಥಳ: ಜೆ.ಎಸ್.ಎಸ್. ಪದವಿಪೂರ್ವ ಕಾಲೇಜಿನ ಸಭಾಂಗಣ, ಜಯನಗರ, ಸಂಜೆ 6

‘ಸಂಸ್ಕೃತಿ ಸಿರಿ–2023’ ಪ್ರಶಸ್ತಿ ಪ್ರದಾನ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಹಂಸಲೇಖ, ಪ್ರಶಸ್ತಿ ಪುರಸ್ಕೃತರು: ಗೊ.ರು. ಚನ್ನಬಸಪ್ಪ, ಕಮಲಾ ಹಂಪನಾ, ಎಚ್.ಆರ್. ಲೀಲಾವತಿ, ಕರೀಗೌಡ ಬೀಚನಹಳ್ಳಿ, ಜಿ. ಕೃಷ್ಣಪ್ಪ, ಮುದ್ದುಮೋಹನ್, ಪ್ರಾಸ್ತಾವಿಕ ನುಡಿ: ಹಿ.ಚಿ. ಬೋರಲಿಂಗಯ್ಯ, ಉಪಸ್ಥಿತಿ: ವೇಮಗಲ್ ನಾರಾಯಣಸ್ವಾಮಿ, ಆಯೋಜನೆ: ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಕಮಲಾ ಹಂಪನಾ

ಯುಗಳ ಪಿಟೀಲು: ಯಶಸ್ವಿ ಸುಬ್ಬರಾವ್, ಮೃದಂಗ: ಎಸ್.ಪಿ. ನಾಗೇಂದ್ರ ಪ್ರಸಾದ್, ಘಟ: ಎ. ಸೋಮಶೇಖರ್, ಆಯೋಜನೆ: ನಾದಜ್ಯೋತಿ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6

‘ಹನ್ನೆರಡು ಮೈನಸ್ ಒಂದು’ ನಾಟಕ ಪ್ರದರ್ಶನ: ನಿರ್ದೇಶನ: ಶ್ರೀನಿಧಿ ಬೆಂಗಳೂರು, ಆಯೋಜನೆ: ಅನೇಕ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

aspire SYSTEMS
attention. always.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಆಸ್ಪೈರ್ ಸಿಸ್ಟಮ್ಸ್ ಎಂಬುದು, ಒಂದು ಮಾಹಿತಿ ತಂತ್ರಜ್ಞಾನ ಸೇವೆಗಳ ಮತ್ತು ಸಾಫ್ಟ್‌ವೇರ್ ಅಭಿವೃದ್ಧಿಪಡಿಸುವ ಕಂಪನಿಯಾಗಿದ್ದು, ಇದು ಭಾರತದ ಚೆನ್ನೈ, ಕೊಚ್ಚಿ, ಹೈದರಾಬಾದ್ ಮತ್ತು ಬೆಂಗಳೂರು ನಗರಗಳಲ್ಲಿ ಹಾಗೂ ವಿಶ್ವದ ಇನ್ನಿತರ ಭಾಗಗಳಲ್ಲಿ ಕೂಡ ತನ್ನ ಅಸ್ತಿತ್ವವನ್ನು ಹೊಂದಿದೆ. ಇದೀಗ ನಾವು ಬ್ಯಾಂಕಿಂಗ್, ಇನ್ಶೂರನ್ಸ್, ರಿಟೇಲ್ ಮತ್ತು ಸಾಫ್ಟ್‌ವೇರ್ ಉತ್ಪನ್ನ ಕಂಪನಿಗಳಿಗೆ ಸಾಫ್ಟ್‌ವೇರ್ ಸೇವೆಗಳನ್ನು ಪೂರೈಸುತ್ತಿದ್ದೇವೆ.

ಇತ್ತೀಚೆಗೆ, ಬೇರೊಂದು ಕಂಪನಿ ಅಥವಾ ವ್ಯಕ್ತಿಗಳ ಗುಂಪು ಆಸ್ಪೈರ್ ಸಿಸ್ಟಮ್ಸ್‌ನ ರೀತಿಯಲ್ಲಿಯೇ www.aspiresys.xyz. ಎಂಬ ವೆಬ್‌ಸೈಟ್ ಬಳಸಿಕೊಂಡು ಹಣಕಾಸು ಸೇವೆಗಳನ್ನು ಒದಗಿಸುತ್ತಿರುವುದು ನಮ್ಮ ಗಮನಕ್ಕೆ ಬಂದಿರುತ್ತದೆ. ನಮ್ಮ ಅಧಿಕೃತ ವೆಬ್‌ಸೈಟ್ www.aspiresys.com ಆಗಿದ್ದು, ನಾವು ಯಾವುದೇ ಹಣಕಾಸು ಅಥವಾ ಲೇವಾದೇವಿ ವ್ಯವಹಾರಗಳನ್ನು ಮಾಡುತ್ತಿರುವುದಿಲ್ಲ. ಹೀಗಿರುವಾಗ, ಯಾರಾದರೂ ಈ ಕಂಪನಿಯ ಜೊತೆಗಾಗಲಿ ಅಥವಾ ವ್ಯಕ್ತಿಗಳ ಜೊತೆಗಾಗಲಿ ವ್ಯವಹರಿಸಿದ್ದಲ್ಲಿ, ಅದಕ್ಕೆ ಅವರೇ ಹೊಣೆಗಾರರಾಗಿರುತ್ತಾರೆ ಹೊರತು, ಆಸ್ಪೈರ್ ಸಿಸ್ಟಮ್ಸ್ ಯಾವುದೇ ರೀತಿಯಲ್ಲಿ ಜವಾಬ್ದಾರಿಯಾಗಿರುವುದಿಲ್ಲ ಹಾಗೂ ಆ ಕಂಪನಿಯೊಂದಿಗಿನ ಯಾವುದೇ ವ್ಯವಹಾರಕ್ಕೆ ಹೊಣೆಯಾಗಿರುವುದಿಲ್ಲ. ವಿಚಾರಣೆಗಳಿಗಾಗಿ ದಯವಿಟ್ಟು ಸಂಪರ್ಕಿಸಿ cybersecurity.nsa@aspiresys.com

PMKVY PRADHAN MANTRI KAUSHAL VIKAS YOJANA | MINISTRY OF SKILL DEVELOPMENT & ENTREPRENEURSHIP GOVERNMENT OF INDIA | Skill India कौशल भारत-कुशल भारत | N·S·D·C RE-IMAGINE FUTURE

ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆ 4.0 (2023–24) ಅಡಿಯಲ್ಲಿ ತರಬೇತಿಗಾಗಿ ಆಸಕ್ತಿಯುಳ್ಳ ಸಂಸ್ಥೆಗಳಿಂದ ಪ್ರಸ್ತಾವಣೆಗೆ ಮನವಿ

ಪ್ರಧಾನ ಮಂತ್ರಿ ಕೌಶಲ ವಿಕಾಸ ಯೋಜನೆ (ಪಿಎಂಕೆವಿವೈ) ಎಂಬ ಯೋಜನೆಯು ಭಾರತ ಸರ್ಕಾರದ ಒಂದು ಪ್ರಮುಖ ಕೌಶಲ ಅಭಿವೃದ್ಧಿ ಯೋಜನೆಯಾಗಿದ್ದು, ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ ನೇತೃತ್ವದಲ್ಲಿ ಮುಂದುವರಿಯುತ್ತಲಿದೆ.

ಈ ಯೋಜನೆಯ ಸಂಸ್ಥಾಪನಾ ಸಂಸ್ಥೆಯಾದ ನ್ಯಾಷನಲ್ ಸ್ಕಿಲ್ ಡೆವಲಪ್‌ಮೆಂಟ್ ಕಾರ್ಪೊರೇಶನ್ (ಎನ್‌ಎಸ್‌ಡಿಸಿ) ಸಂಸ್ಥೆಯು, ಪಿಎಂಕೆವಿವೈ 4.0 (2023–24) ಅಡಿಯಲ್ಲಿ, ಕೌಶಲ ಅಭಿವೃದ್ಧಿ ತರಬೇತಿಗಾಗಿ ಕೈಗಾರಿಕೆಗಳು, ಕೈಗಾರಿಕಾ ಸಹವರ್ತಿ ಸಂಸ್ಥೆಗಳು, ಸಮುದಾಯ ಆಧಾರಿತ ಸಂಸ್ಥೆಗಳು, ಸ್ಟಾರ್ಟ್‌ಅಪ್‌ಗಳು ಸೇರಿದಂತೆ ವಿವಿಧ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು www.nsdcindia.org ಅಥವಾ www.pmkvyofficial.org ವೆಬ್‌ಸೈಟ್‌ನ ನೋಟಿಸ್ ಸೆಕ್ಷನ್ ಪರಿಶೀಲಿಸಿರಿ.

CBC 63113/12/0001/2324

'ರಾಜಭವನ, ಅಧಿಕಾರಿಗಳ ದುರ್ಬಳಕೆ'

ಪ್ರಜಾವಾಣಿ ವಾರ್ತೆ

ಮೈಸೂರು: 'ಕೇಂದ್ರ ಸರ್ಕಾರ ರಾಜಭವನ, ಐಪಿಎಸ್ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದ್ದು, ರಾಷ್ಟ್ರಪತಿಗಳು ಮಧ್ಯ ಪ್ರವೇಶ ಮಾಡಬೇಕು' ಎಂದು ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ ಒತ್ತಾಯಿಸಿದರು.

'ಮೈಸೂರಿನಲ್ಲಿ ಬುಧವಾರ ಬಿರ್ಸಾ ಮುಂಡ ಜಯಂತಿ, ಜನ ಜಾತೀಯ ಗೌರವ ದಿವಸ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಪಾಲ್ಗೊಂಡಿದ್ದರು. ಆದರೆ ಆ ಬಗ್ಗೆ ರಾಜ್ಯ ಸರ್ಕಾರಕ್ಕಾಗಲೀ, ಜಿಲ್ಲಾಡಳಿತಕ್ಕಾಗಲೀ ಮಾಹಿತಿ ನೀಡದೆ ಶಿಷ್ಟಾಚಾರ ಗಾಳಿಗೆ ತೂರಲಾಗಿದೆ. ಇಡೀ ಕಾರ್ಯಕ್ರಮವನ್ನು ಪ್ರಧಾನಿ, ಬಿಜೆಪಿ ಸಾಧನೆಗಳ ಪ್ರಚಾರಕ್ಕಾಗಿ ಬಳಸಲಾಗಿದೆ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

> ವರ್ಗಾವಣೆ ಮುಖ್ಯಮಂತ್ರಿಗಳ ಪರಮೋಚ್ಚ ಅಧಿಕಾರ. ಯಾರೂ ಯಾರು ತೂರಿಸುವಂತಿಲ್ಲ. ಡಾ.ಯತೀಂದ್ರ–ಸಿಎಂ ಸಂಭಾಷಣೆಯ ವಿಡಿಯೊ ನಾನು ನೋಡಿಲ್ಲ.
> **ಡಾ.ಎಚ್.ಸಿ.ಮಹದೇವಪ್ಪ,** ಸಮಾಜ ಕಲ್ಯಾಣ ಸಚಿವ

ರಾಜ್ಯಪಾಲರು ಸಂವಿಧಾನದ ರಕ್ಷಕರಾಗಿದ್ದು, ನಿಷ್ಪಕ್ಷಪಾತವಾಗಿ ಕಾರ್ಯ ನಿರ್ವಹಿಸಬೇಕು' ಎಂದು ಕೋರಿದರು. 'ರಾಜಭವನ ದುರ್ಬಳಕೆ ಕುರಿತು ಈಚೆಗೆ 'ಸುಪ್ರೀಂ' ಕಳವಳ ವ್ಯಕ್ತಪಡಿಸಿತ್ತು.

₹ 2,500 ಕೋಟಿ ವೆಚ್ಚದಲ್ಲಿ 3 ಸಾವಿರ ಪಬ್ಲಿಕ್ ಶಾಲೆ– ಸಚಿವ ಮಧು ಬಂಗಾರಪ್ಪ

'ಶಾಲಾ ಮಕ್ಕಳಿಗೆ ರಾಗಿ ಮಾಲ್ಟ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಂದಿನ ತಿಂಗಳಿನಿಂದ ಶಾಲೆಗಳಲ್ಲಿ ಹಾಲಿನ ಜೊತೆ ರಾಗಿ ಮಾಲ್ಟ್ ವಿತರಿಸಲಾಗುವುದು' ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಇಲಾಖೆ ಜಿಲ್ಲಾ ಉಪ ನಿರ್ದೇಶಕರ ಜೊತೆ ಗುರುವಾರ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸರ್ಕಾರೇತರ ಸಂಸ್ಥೆಯೊಂದು ಎರಡು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಈ ಯೋಜನೆಯನ್ನು ಜಾರಿಗೊಳಿಸಿತ್ತು. ಅದು ಯಶಸ್ವಿಯಾಗಿದೆ. ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಬೇಕೆಂಬ ಉದ್ದೇಶದಿಂದ ಈ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ' ಎಂದರು.

3 ಸಾವಿರ ಕೆಪಿಎಸ್: 'ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೆಳೆಯುವ ಉದ್ದೇಶದಿಂದ ಗ್ರಾಮೀಣ ಪ್ರದೇಶಗಳಲ್ಲಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು (ಕೆಪಿಎಸ್) ತೆರೆಯಲು ಉದ್ದೇಶಿಸಲಾಗಿದೆ. ಮುಂದಿನ ಮೂರು ವರ್ಷಗಳಲ್ಲಿ ತಲಾ ಎರಡು ಗ್ರಾಮ ಪಂಚಾಯಿತಿಗೆ ಒಂದರಂತೆ ಮೂರು ಸಾವಿರ ಕೆಪಿಎಸ್ ಶಾಲೆಗಳನ್ನು ಸಿಎಸ್‌ಆರ್ ನಿಧಿಯ ನೆರವಿನಿಂದ ತೆರೆಯಲು ಚಿಂತನೆ ನಡೆದಿದೆ. ಇದಕ್ಕೆ ₹ 2,500 ಕೋಟಿ ವೆಚ್ಚ ಅಂದಾಜಿಸಲಾಗಿದ್ದು, ಈಗಾಗಲೇ ₹ 600 ಕೋಟಿಯಷ್ಟು ಸಿಎಸ್‌ಆರ್ ನಿಧಿ ಲಭ್ಯವಿದೆ' ಎಂದರು.

'ಮಳೆಯಿಂದ ಶಿಥಿಲಗೊಂಡ ಶಾಲಾ ಕಟ್ಟಡಗಳಿಗೆ ಮೂಲಸೌಲಭ್ಯ ಒದಗಿಸುವ ಕೆಲಸವೂ ನಡೆಯುತ್ತಿದೆ.

> 3 ಸಾವಿರ ಶಿಕ್ಷಕರ ನೇಮಕಾತಿಯಿಂದ ಶಿಕ್ಷಕರ ಕೊರತೆ ನೀಗಿದೆ. ಇನ್ನು 400ರಿಂದ 500 ಶಿಕ್ಷಕರ ನೇಮಕ ವಿಚಾರ ಕೋರ್ಟ್‌ನಲ್ಲಿದೆ. ಕೋರ್ಟ್ ತೀರ್ಮಾನಕ್ಕೆ ಸರ್ಕಾರ ಬದ್ಧವಾಗಿದೆ
> **ಮಧು ಬಂಗಾರಪ್ಪ,** ಸಚಿವ

ಮುಖ್ಯಾಂಶಗಳು
- ಎರಡು ಜಿಲ್ಲೆಗಳಲ್ಲಿ ಪ್ರಾಯೋಗಿಕ ಜಾರಿ, ಯಶಸ್ವಿ
- 2 ಗ್ರಾಮ ಪಂಚಾಯಿತಿಗೆ ಒಂದು ಕೆಪಿಎಸ್ ಶಾಲೆ ತೆರೆಯಲು ಚಿಂತನೆ
- ಶಿಥಿಲ ಕಟ್ಟಡಗಳ ದುರಸ್ತಿ

7,311 ಹೊಸ ಕೊಠಡಿಗಳ ನಿರ್ಮಾಣ, 3,593 ಶಾಲೆಗಳಲ್ಲಿ ದುರಸ್ತಿ, 7,100 ಶೌಚಾಲಯಗಳನ್ನು ಸುಮಾರು ₹ 1 ಸಾವಿರ ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ನರೇಗಾ ಯೋಜನೆಯಲ್ಲಿ ಶಾಲೆಗಳ ಕಾಂಪೌಂಡ್, ಅಡುಗೆ ಕೋಣೆ, ಶೌಚಾಲಯಗಳ ನಿರ್ಮಾಣ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ' ಎಂದು ತಿಳಿಸಿದರು.

ಎಸ್‌ಇಪಿ (ರಾಜ್ಯ ಶಿಕ್ಷಣ ನೀತಿ) ಜಾರಿ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, 'ರಾಜ್ಯ ಶಿಕ್ಷಣ ನೀತಿ ರಚನೆಗೆ ಸಂಬಂಧಿಸಿದಂತೆ ಸಮಿತಿ ಸಭೆ ಆಗಿದೆ. ಎಸ್‌ಇಪಿ ಜಾರಿ ಮೂಲಕ ಉತ್ತಮ ಶಿಕ್ಷಣ ವ್ಯವಸ್ಥೆ ನಿರ್ಮಾಣ ಆಗಲಿದೆ. ಈ ನೀತಿ ರಾಜ್ಯ ಪಠ್ಯಕ್ರಮಕ್ಕೋ, ಸಿಬಿಎಸ್‌ಇ ಪಠ್ಯಕ್ಕೋ ಎನ್ನುವುದು ತಜ್ಞರ ವರದಿ ಬಂದ ಬಳಿಕ ಗೊತ್ತಾಗಲಿದೆ. ಆದರೆ, ರಾಜ್ಯದ ಪಠ್ಯಕ್ರಮ ಸಿಬಿಎಸ್‌ಇಗಿಂತ ಉತ್ತಮವಾಗಿರಬೇಕು ಎಂಬುದು ಉದ್ದೇಶ. ವರದಿ ಬಂದ ಬಳಿಕ ಮುಖ್ಯಮಂತ್ರಿ ಜೊತೆ ಚರ್ಚಿಸಿ, ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದರು.

'ಬರ ಪರಿಹಾರ: ಡಿಸಿಗಳ ಖಾತೆಯಲ್ಲಿ ₹ 783 ಕೋಟಿ'

ಬೆಂಗಳೂರು: 'ಬರಪೀಡಿತ 223 ತಾಲ್ಲೂಕುಗಳಲ್ಲಿ ಪರಿಹಾರ ಕಾರ್ಯಕ್ಕೆ ಶಾಸಕರ ಅಧ್ಯಕ್ಷತೆಯಲ್ಲಿ ಕಾರ್ಯಪಡೆ ರಚಿಸಲಾಗಿದೆ. ಪರಿಹಾರ ಕಾರ್ಯಗಳಿಗೆ ₹ 324 ಕೋಟಿ ಹೆಚ್ಚುವರಿ ಬಿಡುಗಡೆ ಮಾಡಲಾಗಿದ್ದು, ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ₹ 783 ಕೋಟಿ ಲಭ್ಯವಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಸಚಿವ ಸಂಪುಟ ಉಪ ಸಮಿತಿ ಸಭೆ ಬಳಿಕ ಮಾತನಾಡಿದ ಅವರು, 'ಬರ ಘೋಷಣೆಯ ನಂತರ ಕೆಲವು ಕಡೆ ಮಳೆ ಆಗಿದ್ದರಿಂದ ಕುಡಿಯುವ ನೀರು, ಮೇವಿನ ಸಮಸ್ಯೆ ಇದ್ದ ಗ್ರಾಮಗಳ ಸಂಖ್ಯೆಯಲ್ಲಿ ಇಳಿಕೆಯಾಗಿದೆ' ಎಂದರು.

'ಕುಡಿಯುವ ನೀರಿನ ಸಮಸ್ಯೆ ಇರುವ ಕಡೆಗಳಲ್ಲಿ ಖಾಸಗಿ ಕೊಳವೆಬಾವಿ ಬಳಸಿ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲು ವ್ಯವಸ್ಥೆ ಮಾಡಲಾಗಿದೆ. ಮೇವಿನ ತೀವ್ರ ಸಮಸ್ಯೆ ಎದುರಾಗಿಲ್ಲ. ಆದರೂ ಮುಂಜಾಗ್ರತೆ ವಹಿಸುತ್ತೇವೆ. 7 ಲಕ್ಷ ಮೇವಿನ ಬಿತ್ತನೆ ಬೀಜದ ಕಿಟ್ ರೈತರಿಗೆ ವಿತರಿಸಲಾಗುತ್ತಿದೆ. ಗಡಿ ಜಿಲ್ಲೆಗಳಿಂದ ಮೇವು ಸಾಗಣೆ ನಿಲ್ಲಿಸಲು, ರಾಜ್ಯದಿಂದ ಹೊರ ರಾಜ್ಯಗಳಿಗೆ ಹೋಗುವುದನ್ನು ನಿರ್ಬಂಧಿಸಲು ನಿರ್ಣಯಿಸಲಾಗಿದೆ' ಎಂದರು.

'ನರೇಗಾ ಯೋಜನೆಯಲ್ಲಿ 13 ಕೋಟಿ ಮಾನವ ದಿನ ಲಭ್ಯವಿದೆ. ಈಗ 10.30 ಕೋಟಿ ಬಳಕೆ ಆಗಿದೆ. 18 ಕೋಟಿ ಮಾನವ ದಿನಗಳಿಗೆ ಹೆಚ್ಚಿಸಲು ಬೇಡಿಕೆ ಇಡಲಾಗಿದೆ. ಯೋಜನೆಯಡಿ 150 ದಿನ ಕೆಲಸ ಕೊಡಲು ಅವಕಾಶ ಇದೆ. ಈ ಬಗ್ಗೆ ಕೇಂದ್ರಕ್ಕೆ ಈಗಾಗಲೇ ಮನವಿ ಸಲ್ಲಿಸಲಾಗಿದೆ' ಎಂದರು.

ಜಾಮೀನು: ಶಿವಮೂರ್ತಿ ಶರಣರ ಬಿಡುಗಡೆ

ಒಂದನೇ ಪುಟದಿಂದ

ತೊಡಕಾಗದ ಬಾಡಿ ವಾರಂಟ್: ಪೋಕ್ಸೊಗೆ ಸಂಬಂಧಿಸಿದ 2ನೇ ಪ್ರಕರಣದಲ್ಲಿ ಶರಣರ ವಿರುದ್ಧ ಹೊರಡಿಸಿದ ಬಾಡಿ ವಾರಂಟ್ ಅನ್ನು ನ್ಯಾಯಾಂಗ ಬಂಧನದ ಆದೇಶವಾಗಿ ಪರಿವರ್ತಿಸಲು ಕೋರಿ ಸರ್ಕಾರಿ ವಕೀಲರು ಮಾಡಿದ ಮನವಿಯ ವಿಚಾರಣೆಯನ್ನು ನ್ಯಾಯಾಧೀಶೆ ಬಿ.ಕೆ. ಕೋಮಲಾ ಗುರುವಾರ ಬೆಳಿಗ್ಗೆ ಕೈಗೆತ್ತಿಕೊಂಡರು. ವಿಡಿಯೊ ಸಂವಾದದ ಮೂಲಕ ಶರಣರು ಜೈಲಿನಿಂದಲೇ ವಿಚಾರಣೆಗೆ ಹಾಜರಾಗಿದ್ದರು. ವಿಚಾರಣೆಯನ್ನು ಮಧ್ಯಾಹ್ನಕ್ಕೆ ಮುಂದೂಡಿದ ಬಳಿಕ ಶರಣರನ್ನು ಕಾರಾಗೃಹದಿಂದ ಬಿಡುಗಡೆ ಮಾಡಲಾಯಿತು. ಬಿಡುಗಡೆ ಪ್ರಕ್ರಿಯೆಗೆ ಬಾಡಿ ವಾರಂಟ್ ತೊಡಕಾಗಲಿಲ್ಲ.

ಮೊದಲ ಪ್ರಕರಣದಲ್ಲಿ ಜಾಮೀನು ಸಿಕ್ಕಿದ್ದರಿಂದ ಕಾರಾಗೃಹದಿಂದ ಮಧ್ಯಾಹ್ನ 12.40ಕ್ಕೆ ಶರಣರನ್ನು ಬಿಡುಗಡೆಗೊಳಿಸಿದ ಅಧಿಕಾರಿಗಳು ನ್ಯಾಯಾಲಯಕ್ಕೆ ವರದಿ ಸಲ್ಲಿಸಿದರು. ಬಾಡಿ ವಾರಂಟ್ ಮೇಲೆ ಆರೋಪಿಯನ್ನು ಕಾರಾಗೃಹದಲ್ಲಿ ಇಟ್ಟುಕೊಳ್ಳುವಂತಿಲ್ಲ ಎಂದು ಅಧಿಕಾರಿಗಳು ನ್ಯಾಯಾಲಯದ ಗಮನಕ್ಕೆ ತಂದರು.

ಏನಿದು ಪ್ರಕರಣ?: 'ಶರಣರು ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ' ಎಂದು ಪ್ರೌಢ ಶಾಲೆ ಇಬ್ಬರು ಬಾಲಕಿಯರ ಆರೋಪದ ಮೇರೆಗೆ 2022ರ ಆಗಸ್ಟ್ 26ರಂದು ಮೈಸೂರಿನ ನಜರಬಾದ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು. ಚಿತ್ರದುರ್ಗ ಗ್ರಾಮಾಂತರ ಪೊಲೀಸ್ ಠಾಣೆಗೆ ವರ್ಗಾವಣೆಗೊಂಡ ಈ ದೂರು ಆಧರಿಸಿ ಸೆ.1ರಂದು ಶರಣರನ್ನು ಬಂಧಿಸಲಾಗಿತ್ತು.

ಚಿತ್ರದುರ್ಗ ಜಿಲ್ಲಾ ಕಾರಾಗೃಹದಿಂದ ಗುರುವಾರ ಬಿಡುಗಡೆಯಾದ ಮುರುಘಾ ಮಠದ ಶಿವಮೂರ್ತಿ ಶರಣರು ಭಕ್ತರತ್ತ ಕೈಮುಗಿದರು

ದಾವಣಗೆರೆ ವಿರಕ್ತಮಠದಲ್ಲಿ ವಾಸ್ತವ್ಯ

ದಾವಣಗೆರೆ: ಚಿತ್ರದುರ್ಗದ ಜೈಲಿನಿಂದ ಹೊರಬಂದ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರು ಗುರುವಾರ ಮಧ್ಯಾಹ್ನ 1.45ರ ವೇಳೆಗೆ ದಾವಣಗೆರೆಗೆ ಬಂದರು.

ಚಿತ್ರದುರ್ಗ ಪ್ರವೇಶಿಸದಂತೆ ಷರತ್ತು ವಿಧಿಸಿ ಜಾಮೀನು ನೀಡಿರುವುದರಿಂದ ಇಲ್ಲಿನ ವಿರಕ್ತ ಮಠದಲ್ಲಿ ವಾಸ್ತವ್ಯ ಹೂಡಲು ಬಂದ ಶರಣರು, ಮೊದಲು ಶಿವಯೋಗಿ ಮಂದಿರದಲ್ಲಿರುವ ಜಯದೇವ ಮುರುಘರಾಜೇಂದ್ರ ಸ್ವಾಮೀಜಿ ಹಾಗೂ ಅಥಣಿ ಮುರುಘೇಂದ್ರ ಶಿವಯೋಗಿಗಳ ಗದ್ದುಗೆಗೆ ಭೇಟಿ ನೀಡಿ ನಮಿಸಿದರು. ಬಳಿಕ ದೊಡ್ಡಪೇಟೆಯಲ್ಲಿರುವ ವಿರಕ್ತ ಮಠಕ್ಕೆ ತೆರಳಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಶರಣರು, 'ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿದ್ದು, ನಾನು ಮೌನವಾಗಿದ್ದೇನೆ. ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ ಎಂದರು.

'ಮುಂದೆಲ್ಲಾ ಒಳ್ಳೆಯದು ಮಾಡೋಣ. ನಿಮ್ಮ ಸಹಕಾರವಿರಲಿ. ನಿಮ್ಮ ಸಹಕಾರಕ್ಕೆ ಧನ್ಯವಾದಗಳು' ಎಂದು ಹೇಳಿದರು.

ವಿರಕ್ತ ಮಠದಲ್ಲಿ ವಾಸ್ತವ್ಯ ಹೂಡಿರುವ ಶರಣರನ್ನು ಚಿತ್ರದುರ್ಗದ ಭೋವಿ ಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಚಿತ್ರದುರ್ಗದ ಮಡಿವಾಳ ಮಾಚಿದೇವ ಗುರುಪೀಠದ ಬಸವ ಮಾಚಿದೇವ ಸ್ವಾಮೀಜಿ, ವನಕಲ್ಲು ಮಲ್ಲೇಶ್ವರ ಮಹಾ ಸಂಸ್ಥಾನದ ಶ್ರೀ ಬಸವ ರಮಾನಂದ ಸ್ವಾಮೀಜಿ ಸೇರಿದಂತೆ ಹಲವು ಮಠಾಧೀಶರು ಭೇಟಿ ನೀಡಿ ಕುಶಲೋಪರಿ ವಿಚಾರಿಸಿದರು.

ಹೈಕೋರ್ಟ್ ನಿರ್ದೇಶನಕ್ಕೆ ಸಲಹೆ

ಪೋಕ್ಸೊ ಕಾಯ್ದೆಯಡಿ ಶರಣರ ವಿರುದ್ಧ ಅ.13ರಂದು ದಾಖಲಾಗಿದ್ದ 2ನೇ ಪ್ರಕರಣದಲ್ಲಿ ಆರೋಪಿಯ ಬಂಧನಕ್ಕೆ ವಾರಂಟ್ ನೀಡುವಂತೆ ಗುರುವಾರ ಮಧ್ಯಾಹ್ನ ಪ್ರಾಸಿಕ್ಯೂಷನ್ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹೈಕೋರ್ಟ್ ನಿರ್ದೇಶನ ಪಡೆಯುವಂತೆ ಸಲಹೆ ನೀಡಿತು.

'ಆರೋಪಿ ಪ್ರಭಾವಿಯಾಗಿದ್ದು, ಸಾಕ್ಷ್ಯ ನಾಶದ ಸಾಧ್ಯತೆ ಇದೆ' ಎಂದು ಸರ್ಕಾರಿ ವಕೀಲ ಎಚ್.ಆರ್. ಜಗದೀಶ್ ಕೋರ್ಟ್‌ನ ಗಮನಕ್ಕೆ ತಂದರು.

'ಮೊದಲ ಪ್ರಕರಣದಲ್ಲಿ ಹೈಕೋರ್ಟ್ ಜಾಮೀನು ನೀಡುವಾಗ ಚಿತ್ರದುರ್ಗ ಜಿಲ್ಲೆ ಪ್ರವೇಶಿಸದಂತೆ ಆರೋಪಿಗೆ ಷರತ್ತು ವಿಧಿಸಿದ್ದು, ಸಾಕ್ಷ್ಯ ನಾಶದ ಆತಂಕ ಅನಗತ್ಯ' ಎಂದು ಶರಣರ ಪರ ವಕೀಲ ಕೆ.ಎನ್. ವಿಶ್ವನಾಥಯ್ಯ ತಕರಾರು ಸಲ್ಲಿಸಿದರು.

ವಾದ– ಪ್ರತಿವಾದ ಆಲಿಸಿ ಹೈಕೋರ್ಟ್ ಮೊರೆ ಹೋಗುವಂತೆ ಪ್ರಾಸಿಕ್ಯೂಷನ್‌ಗೆ ಸಲಹೆ ನೀಡಿದ ನ್ಯಾಯಾಧೀಶರು, ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಿದರು.

ಮೃತಪಟ್ಟ ಸಿಂಹ ರಾಮ

ಬನ್ನೇರುಘಟ್ಟ ಉದ್ಯಾನದ ಸಿಂಹ 'ರಾಮ' ಸಾವು

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಸಿಂಹ 'ರಾಮ' (13) ಗುರುವಾರ ಮೃತಪಟ್ಟಿದೆ. 'ಬಹು ಅಂಗಾಂಗ ವೈಫಲ್ಯದಿಂದ ಮೃತಪಟ್ಟಿರುವ ಸಾಧ್ಯತೆ ಇದೆ. ಅಂಗಾಂಗಗಳ ಮಾದರಿಯನ್ನು ಹೆಚ್ಚಿನ ಪರೀಕ್ಷೆಗಾಗಿ ಪಶು ವೈದ್ಯಕೀಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ' ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸೂರ್ಯಸೇನ್ ತಿಳಿಸಿದರು.

'ಬುಧವಾರ ವಾಂತಿ ಲಕ್ಷಣ ಕಂಡು ಬಂದಿತು. ಪಶುವೈದ್ಯರ ತಂಡ ಚಿಕಿತ್ಸೆ ನೀಡಿ ನಿಗಾ ವಹಿಸಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ' ಎಂದು ತಿಳಿಸಿದರು.

2010ರ ಫೆ.4ರಂದು ಸಿಂಹ ಗಣೇಶ ಮತ್ತು ಸಿಂಹಿಣಿ ಅನುಗೆ ರಾಮ ಜನಿಸಿದ್ದ. ಜೀವಿತಾವಧಿಯಲ್ಲಿ 12 ಸಿಂಹದ ಮರಿಗಳ ಜನನಕ್ಕೆ ಕಾರಣನಾಗಿದ್ದಾನೆ.

ಬಿಇಒ ಸ್ಥಾನಕ್ಕೆ ಇಬ್ಬರ ನೇಮಕ: ಗೊಂದಲ

ಬಸವಕಲ್ಯಾಣ (ಬೀದರ್ ಜಿಲ್ಲೆ): ಇಲ್ಲಿನ ಕ್ಷೇತ್ರ ಶಿಕ್ಷಣಾಧಿಕಾರಿ ಹುದ್ದೆಗೆ ಇಬ್ಬರ ನೇಮಕಾತಿ ಆಗಿದ್ದರಿಂದ ಗುರುವಾರ ಶಿಕ್ಷಕರಲ್ಲಿ ಗೊಂದಲ ಸೃಷ್ಟಿಯಾಗಿದೆ.

ಚನ್ನಬಸಪ್ಪ ಹಳ್ಳದ್ ವರ್ಗವಾದ ನಂತರ ಶಂಕರೆಪ್ಪ ದೇಶಮುಖ ಅವರು ಅಧಿಕಾರ ವಹಿಸಿಕೊಂಡಿದ್ದಾರೆ. ಮರು ದಿನ ಅದೇ ಸ್ಥಾನಕ್ಕೆ ಚಂದ್ರಶೇಖರ ಗೌಡ ಬಂದಿದ್ದಾರೆ. ಒಬ್ಬರು ಕಡತಗಳನ್ನು ಪರಿಶೀಲಿಸಿದರೆ, ಇನ್ನೊಬ್ಬರು ಶಾಲೆಗಳ ಪರಿಶೀಲನೆಗೆ ಹೋಗಿದ್ದರು ಎನ್ನಲಾಗಿದೆ.

ಚಂದ್ರಶೇಖರಗೌಡ ಅವರಿಗೆ ಶಿಕ್ಷಣ ಇಲಾಖೆ ಹೆಚ್ಚುವರಿ ಆಯುಕ್ತರು, ಶಂಕರೆಪ್ಪ ಅವರನ್ನು ಜಿಲ್ಲಾ ಪಂಚಾಯಿತಿ ಸಿಇಒ ನೇಮಿಸಿದ್ದಾರೆ ಎನ್ನಲಾಗಿದೆ.

ಈ ಸಂಬಂಧ ಪ್ರತಿಕ್ರಿಯೆ ಪಡೆಯಲು ಜಿಲ್ಲಾ ಪಂಚಾಯಿತಿ ಸಿಇಒ ಅವರನ್ನು ಪ್ರಜಾವಾಣಿ ಸಂಪರ್ಕಿಸಲು ಪ್ರಯತ್ನಿಸಿದರೂ ಅವರು ಲಭ್ಯ ಆಗಲಿಲ್ಲ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್–3/2023–24/3305 ದಿನಾಂಕ: 13–11–2023.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗೆ ದ್ವಿ ಲಕೋಟೆ ಪದ್ದತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಯನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ https:kppp.karnataka.gov.inವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1)	PWD/2023-24/RD/WORK_INDENT4/CALL-2	69.00

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಗುತ್ತೇದಾರರು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ **17–11–2023** ರಂದು **12.00** ಗಂಟೆಯ ವರೆಗೆ. ಆ) ಕೆಪಿಪಿ–ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **20–11–2023** ರಂದು **16.00 ಗಂಟೆಯ ವರೆಗೆ.** ಇ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. **21–11–2023 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/–ಕಾರ್ಯನಿರ್ವಾಹಕ ಇಂಜನೀಯರ್,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/433/ಕೆಎಸ್‌ಎಂಸಿಎ/2023–24

ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು

ದೂರವಾಣಿ ಸಂಖ್ಯೆ:0821–2424070, ಇ–ಮೇಲ್:dudc_mys@yahoo.co.in

ಸಂಖ್ಯೆ:ಮುನಿಸಿ(1)ಇಂದಿರಾ ಕ್ಯಾಂಟೀನ್/ಸಿಆರ್–59/2023–24 ದಿನಾಂಕ: 09–11–2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ ಮೈಸೂರುರವರು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರುರವರ ಪರವಾಗಿ ಕೆ.ಟಿ.ಪಿ.ಪಿ.ಕಾಯ್ದೆ 1999 ಮತ್ತು ನಿಯಮ 2000ರನ್ವಯ ಮೈಸೂರು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿ ಲಕೋಟೆ ಪದ್ದತಿಯಲ್ಲಿ ಕೆಜಿ–2 ಇಂಡರ್ ದಸ್ತವೇಜಿನ್ವಯ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ.

ಕ್ರ ಸಂ	ಕಾಮಗಾರಿ ಹೆಸರು ಇಂಡೆಂಟ್ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ	ಇ.ಎಂ.ಡಿ.
1.	ಮೈಸೂರು ಜಿಲ್ಲೆಯ ನಂಜನಗೂಡು ಮತ್ತು ಹುಣಸೂರು ನಗರಸಭೆ, ಕೆ.ಆರ್.ನಗರ, ತಿ.ನರಸೀಪುರ ಮತ್ತು ಹೆಚ್.ಡಿ.ಕೋಟೆ ಪುರಸಭೆ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್ ಮುಖಾಂತರ ಆಹಾರ ಸರಬರಾಜು ಮಾಡುವ ಕಾಮಗಾರಿ. ಇಂಡೆಂಟ್ ಸಂಖ್ಯೆ DMA/2023-24/IND0413 CALL-2	384.71	5.77

ಅರ್ಹ ಸರಬರಾಜುದಾರರು **www.kppp.karnataka.gov.in** ಮುಖಾಂತರ ಟೆಂಡರನ್ನು ಸಲ್ಲಿಸಬಹುದಾಗಿರುತ್ತದೆ. ಪೂರ್ವಭಾವಿ ಸಭೆ **ದಿನಾಂಕ: 17–11–2023, ಮಧ್ಯಾಹ್ನ 3.00 ಗಂಟೆಗೆ.** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 24–11–2023, ಸಂಜೆ 5.30 ಗಂಟೆಯೊಳಗೆ.** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 27–11–2023, ಬೆಳಿಗ್ಗೆ 11.00 ಗಂಟೆಗೆ.** ಪ್ರಕಟಣೆಯಲ್ಲಿ ನಿಗಧಿಪಡಿಸಿರುವ ದಿನಾಂಕಗಳು ಬದಲಾವಣೆಯಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರವೇ ತಿಳಿಸಲಾಗುವುದು. ದಿನಪತ್ರಿಗಳಲ್ಲಿ ತಿಳಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ನಗರಾಭಿವೃದ್ಧಿ ಕೋಶ ಜಿಲ್ಲಾ ಕಛೇರಿಗಳ ಸಂಕೀರ್ಣ ಬನ್ನೂರು ರಸ್ತೆ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ ಹಾಗೂ **e-Procurement website www.kppp.karnataka.gov.in**ನಲ್ಲಿಯೂ ಪಡೆಯಬಹುದಾಗಿರುತ್ತದೆ.

ಸಹಿ/– ಯೋಜನಾ ನಿರ್ದೇಶಕರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ಮೈಸೂರು ಜಿಲ್ಲೆ, ಮೈಸೂರು.

DIPR/MYS/KAVITA/630/23-24

ಕಂದಾಯ ಇಲಾಖೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ, (ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕಟಣಗಳು)

ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು – 560 001

ದೂರವಾಣಿ ಸಂ.080–29565353, 29566556, 29604556 E-Mail: splocaima21@gmai.com

ಸಂಖ್ಯೆ: SPLOCA/ADM/06/2022 ದಿನಾಂಕ: 10.11.2023

ಪ್ರಕಟಣೆ

ವಿಷಯ: ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕಟಣಗಳು) ರವರ ಕಚೇರಿಗೆ ಮಾನವ ಸಂಪನ್ಮೂಲ ಸೇವೆ ಪಡೆಯಲು ಅರ್ಜಿಗಳನ್ನು / ಪ್ರಸ್ತಾವನೆಗಳನ್ನು ಆಹ್ವಾನಿಸುತ್ತಿರುವ ಬಗ್ಗೆ.

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ಗಳವರ ಕಚೇರಿಯ ಕಾನೂನು ಕೋಶವನ್ನು ಬಲಪಡಿಸಲು ಅಗತ್ಯ ಇರುವ ಈ ಕೆಳಕಂಡ ಸೇವೆಯನ್ನು ಮತ್ತು ಸಿಬ್ಬಂದಿಯನ್ನು ಒದಗಿಸಲು ಆಸಕ್ತ ಏಜೆನ್ಸಿಗಳಿಂದ / ಆಸಕ್ತ ವೈಯಕ್ತಿಕ ವ್ಯಕ್ತಿಗಳಿಂದ Resume/Quotation ಅನ್ನು ಆಹ್ವಾನಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಈ ಕೆಳಕಾಣಿಸಿರುವ ಕೋಷ್ಠಕದಲ್ಲಿನ ವಿವರದಂತೆ ಈ ಕಚೇರಿಗೆ ಸಲ್ಲಿಸುವಂತೆ ಸೂಚಿಸಿದೆ.

Sl. No	Post / Designation / Consultancy	Last date & time for submission of Resume
1	Legal Research Consultancy	20th November 2023 on or before 5:00 pm

ಹುದ್ದೆ ವಿವರ:

Sl. No	Post / Designation / Consultancy	Relevant Experience and Nature of Work	No. of Post	Pay / Renumeration Per Month
1	Legal Research Consultancy	Internet and other research on any case. Research shall include - Cause list, Constitutional position, Legal Position, Procedures etc. as well as background check of advocates and previous orders of the Judiciary. The applicant must be a registered law firm/advocate at bar with 10 years' experience in High Court. Two Kinds of Research: a) case by case for objections, arguments, and caveats, petitions etc. b) General research on special matters. c) Authorized representative should be present for 1 weekly briefing. d) Presentation of draft findings, citation copies etc. All reporting shall be with copies in PDF and word.	1	Rs. 1 Lakh/Month (maximum) for Internet and Other research of referred cases. Rs. 15000 per case

ಸಹಿ/–
ವೀಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು, ಬೆಂಗಳೂರು

ವಾ.ಸಾ.ಸಂ.ಇ/ಬೆಂ.ನಗರ/2115/2023–24

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್–ಬೆಂಗಳೂರು ಗ್ರಾಮಾಂತರ ಜಿಲ್ಲೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಕೊಠಡಿ ಸಂಖ್ಯೆ: 207, 2ನೇ ಮಹಡಿ, ಬೀರಸಂದ್ರಗ್ರಾಮ, ವಿಶ್ವನಾಥಪುರ ಅಂಚೆ, ಕುಂದಾಣ ಹೋಬಳಿ,
ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ– 562110
ದೂರವಾಣಿ ಸಂಖ್ಯೆ: 080–29787452 E-mail: dhobengalururural-hfws@karnataka.gov.in

ಸಂಖ್ಯೆ: ಜಿಆಕುಕ/ಸರಬ/ಇ.ಟೆ.ಪ್ರ/01/2023–24 ದಿನಾಂಕ: 15/11/2023

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ) ದ್ವಿ ಲಕೋಟೆ ಪದ್ದತಿ

ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ ಆಸ್ಪತ್ರೆಗಳಲ್ಲಿನ ವೈದ್ಯಕೀಯ ಉಪಕರಣಗಳು, ಸಾಧನ ಸಲಕರಣೆಗಳು ಮತ್ತು ಪೀಠೋಪಕರಣಗಳ ದುರಸ್ಥಿ ಹಾಗೂ ಬಣ್ಣದ ಕೆಲಸಗಳನ್ನು ಮಾಡಲು, ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲು ಹಾಗೂ ಕುಟುಂಬ ಕಲ್ಯಾಣ ಔಷಧಿ ಮತ್ತು ಕನ್ಸ್ಯೂಮಬಲ್ಸ್‌ಗಳನ್ನು ಸರಬರಾಜು ಮಾಡುವ ಸಂಬಂಧ 2023–24ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅನುಮೋದನೆಯಾಗಿದ್ದು, ದ್ವಿ–ಲಕೋಟೆ ಪದ್ದತಿಯಲ್ಲಿ ಕೆಳಕಂಡಂತೆ 'E-Procurement' ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ಆಸಕ್ತರು ವೆಬ್‌ಸೈಟ್ http://www.eproc.karnataka.gov.in ರ ಮೂಲಕ ಡೌನ್‌ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸಬಹುದು.

ಕ್ರ. ಸಂ.	ವಿವರ	ಟೆಂಡರ್‌ಗಳು: ಕುಟುಂಬ ಕಲ್ಯಾಣ ಔಷಧಿ ಮತ್ತು ಕನ್ಸ್ಯೂಮಬಲ್ಸ್‌ಗಳನ್ನು ಸರಬರಾಜು ಮಾಡಲು	ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲು	ವೈದ್ಯಕೀಯ ಉಪಕರಣಗಳು, ಸಾಧನ ಸಲಕರಣೆಗಳು ಮತ್ತು ಪೀಠೋಪಕರಣಗಳ ದುರಸ್ಥಿ ಹಾಗೂ ಬಣ್ಣದ ಕೆಲಸಗಳನ್ನು ಮಾಡಲು
1	ಟೆಂಡರ್ ಪ್ರಕಟಣೆ ಸಂಖ್ಯೆ	BR/SUP/01/2023-24	BR/SUP/01/2023-24	BR/SUP/01/2023-24
2	ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಯಲ್ಲಿರುತ್ತದೆ	17/11/2023	17/11/2023	17/11/2023
3	ಟೆಂಡರ್ ಫಾರಂಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ	16/12/2023	16/12/2023	16/12/2023
4	ಟೆಂಡರ್‌ನ ಅಂದಾಜು ಮೊತ್ತ	ರೂ. 11.00 ಲಕ್ಷ	ರೂ. 66.00 ಲಕ್ಷ	ರೂ. 11.00 ಲಕ್ಷ
5	ಇ.ಎಂ.ಡಿ. ಮೊತ್ತ	ರೂ. 27,500/–	ರೂ. 1,32,000/–	ರೂ. 27,500/–
6	ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ (ತಾಂತ್ರಿಕ ಬಿಡ್)	18/12/2023	18/12/2023	18/12/2023
7	ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ (ಆರ್ಥಿಕ ಬಿಡ್)	ಯಶಸ್ವಿ ತಾಂತ್ರಿಕ ಟೆಂಡರ್‌ದಾರರಿಗೆ ತಿಳಿಸಲಾಗುವುದು		
8	ಟೆಂಡರ್ ತೆರೆಯುವ ಸ್ಥಳ (Online Bid Opening)	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, #207, 2ನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು.		

ಹೆಚ್ಚಿನ ವಿವರಗಳಿಗೆ **www.eproc.karnataka.gov.in** ಮೂಲಕ ಮಾಹಿತಿ ಪಡೆಯಬಹುದು.

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿ
ಬೆಂಗಳೂರು ಗ್ರಾಮಾಂತರ ಜಿಲ್ಲೆ

DIPR/CP/2133/GREENFMC/2023-24

Government of India
CENTRAL BUREAU OF INVESTIGATION
(Department of Personnel & Training)

HIRING OF CONSULTANTS AS PAIRVI OFFICER IN CBI

CBI intends to hire Consultants amongst retired Sub Inspectors, Asst.Sub Inspectors and Head Constable for the Pairvi work related to cases in various Courts in Karnataka, for a period of one year, at a fixed monthly payment, arrived at by deducting the basic pension from the pay drawn at the time retirement + Transport Allowance.

2. The duly filled in application, in the proforma available on the CBI Website(www.cbi.gov.in) may be sent by Regd /Speed Post to the Head of Branch, Central Bureau of Investigation, Anti Corruption Branch, No.36 Bellary Road, Ganganagar, Bangalore-560 032 on or before **03.12.2023.**

3. Incomplete applications and applications received after last date will be summarily rejected.

Sd/- Head of Branch, CBI: ACB: Bangalore

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲ ಮಂಡಳಿಯು ಕೆಳಕಂಡ ಕಾಮಗಾರಿಗಾಗಿ ನೋಂದಾಯಿತ ಏಜೆನ್ಸಿಗಳಿಂದ ಟೆಂಡರನ್ನು ಆಹ್ವಾನಿಸಿದೆ.

ಪ್ರಧಾನ ಮುಖ್ಯ ಅಭಿಯಂತರರ ಕಛೇರಿ, 2ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ
1	(ಯುಎಫ್ ಡಬ್ಲ್ಯೂ)–2	ಬೆಂಜಮಂ/ಕಾನಿಅ(ಯುಎಫ್ ಡಬ್ಲ್ಯೂ)–2/ಪಿಬಿ/320/2023–24 ದಿನಾಂಕ: 04.11.2023	ರೂ. 99,48,323/– / ರೂ. 2,00,000/–	01.12.2023 ಸಂಜೆ 4:00 ಗಂಟೆಯವರೆಗೆ	02.12.2023 ಸಂಜೆ 4:05 ಗಂಟೆಯ ನಂತರ
2	(ಯುಎಫ್ ಡಬ್ಲ್ಯೂ)–2	ಬೆಂಜಮಂ/ಕಾನಿಅ(ಯುಎಫ್ ಡಬ್ಲ್ಯೂ)–2/ಪಿಬಿ/337/2023–24 ದಿನಾಂಕ: 13.11.2023	ರೂ. 98,95,151/– / ರೂ. 2,00,000/–	01.12.2023 ಸಂಜೆ 4:00 ಗಂಟೆಯವರೆಗೆ	02.12.2023 ಸಂಜೆ 4:05 ಗಂಟೆಯ ನಂತರ

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು **https://kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಕಾರ್ಯನಿರ್ವಾಹಕ ಅಭಿಯಂತರರು (ಯುಎಫ್‌ಡಬ್ಲ್ಯೂ)–2

ವಾಸಾಸಂಇ/ವಾಪ್ರ/ಜಿಎ/2124/2023–24

ಮಂಡ್ಯ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಇಮೇಲ್: manmuluht@gmail.com, ದೂರವಾಣಿ: 08232-274940, ಮೊ: 9611120868

ಐಎಫ್‌ಟಿ ಸಂಖ್ಯೆ: ಮಹಾಒ/ಯುಹೆಚ್‌ಟಿ/ಸಾಗಾಣಿಕಾ ಟೆಂಡರ್/47/2023–24 ದಿನಾಂಕ: 09.11.2023

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಮಂಡ್ಯ ಜಿಲ್ಲಾ ಸಹಕಾರ ಹಾಲು ಒಕ್ಕೂಟರವರು ಈ ಕೆಳಕಂಡ ಸೇವೆಯನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ನ್ನು ಅರ್ಹ ಟೆಂಡರ್‌ದಾರರಿಂದ ಆಹ್ವಾನಿಸಲಾಗಿದೆ.

ವಿವರ: **ಒಕ್ಕೂಟದ ಯು.ಹೆಚ್.ಟಿ. ಘಟಕ, ಕುಂಬಳಗೋಡು ಹಾಗೂ ಮುಖ್ಯಡೇರಿ, ಗೆಜ್ಜಲಗೆರೆಯಿಂದ ರಾಜ್ಯ ಮತ್ತು ಹೊರರಾಜ್ಯಗಳಾದ ಕೇರಳ, ಆಂಧ್ರಪ್ರದೇಶ, ತಮಿಳುನಾಡು, ತೆಲಂಗಾಣ, ಗೋವಾ ಮತ್ತು ಮಹಾರಾಷ್ಟ್ರಗಳಿಗೆ ದ್ವೈವಾರ್ಷಿಕ ಅವಧಿಗೆ ಯು.ಹೆಚ್.ಟಿ. ಹಾಲನ್ನು ಸರಬರಾಜು ಮಾಡಲು ಟೆಂಡರ್ ಪ್ರಕ್ರಿಯೆ ಕೈಗೊಳ್ಳುವ ಬಗ್ಗೆ. (ಎ) 16 ಎಂ.ಟಿ. ವಾಹನ (11000 ಲೀ.).** ಇಎಂಡಿ ಮೊಬಲಗು: **ರೂ. 80,000/–. (ಬಿ) 21 ಎಂ.ಟಿ. ವಾಹನ (15000 ಲೀ.).** ಇಎಂಡಿ ಮೊಬಲಗು: **ರೂ. 1,00,000/–.**

ಟೆಂಡರ್ ದಾಖಲಾತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ **https://kppp.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸುವ ಕೊನೆ ದಿನಾಂಕದಂದು ವೆಬ್‌ಸೈಟ್‌ನಲ್ಲಿ ತೊಂದರೆ ಉಂಟಾದಲ್ಲಿ ಕ.ಹಾ.ಮ. ಯಾವುದೇ ಕಾರಣಕ್ಕೂ ಜವಾಬ್ದಾರರಾಗಿರುವುದಿಲ್ಲ.

ಟೆಂಡರ್ ದಾಖಲಾತಿಯಲ್ಲಿ ತಿಳಿಸಲಾಗಿರುವ ಮುಂಗಡ ಠೇವಣಿ ಮೊತ್ತ ಕರ್ನಾಟಕ ಸರ್ಕಾರಕ್ಕೆ ಸಂದಾಯವಾಗುವಂತೆ ಸಲ್ಲಿಸಬೇಕಾಗಿರುತ್ತದೆ. ಟೆಂಡರ್ ದಾಖಲಾತಿಯಲ್ಲಿ ತಿಳಿಸಿರುವಂತೆ ಮುಂಗಡ ಠೇವಣಿಯ (Earnest Money Deposit) ಸಿಂಧುತ್ವವು ಟೆಂಡರ್ ಸಿಂಧುತ್ವದ ಅವಧಿಯಂತೆ ಕನಿಷ್ಠ 135 ದಿನಗಳಾಗಿರಬೇಕಾಗಿರುತ್ತದೆ.

ಟೆಂಡರ್ ಪ್ರಾರಂಭವಾಗುವ ದಿನಾಂಕ: **16.11.2023** ರಿಂದ **30.11.2023.** ಟೆಂಡರ್ ಪ್ರೀಬಿಡ್ ಮೀಟಿಂಗ್ : **22.11.2023 ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್ ಅಪ್‌ಲೋಡಿಂಗ್ ಮಾಡಲು ಕೊನೆಯ ದಿನಾಂಕ: **30.11.2023 ಸಂಜೆ 5.00 ಗಂಟೆಯವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **02.12.2023 ಬೆಳಿಗ್ಗೆ 11.00 ಗಂಟೆಗೆ.** ವಾಣಿಜ್ಯ ಬಿಡ್ ತೆರೆಯುವ ದಿನಾಂಕ: **ನಂತರ ತಿಳಿಸಲಾಗುವುದು.**

ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಸಹಿ/– ವ್ಯವಸ್ಥಾಪಕ ನಿರ್ದೇಶಕರು

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ನಿರ್ದೇಶನಾಲಯ, ನಂ.16 ಸಿ, ಮೌಲಾನಾ ಆಜಾದ್ ಭವನ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತ ನಗರ, ಬೆಂಗಳೂರು–560052.
ದೂರವಾಣಿ: 080–22535901/02, ಸಹಾಯವಾಣಿ: 8277799990.
Email:directorgokdom@gmail.com Website: https://dom.karnataka.gov.in

ಸಂಖ್ಯೆ:ಅ.ಸಂ.ನಿ/ಆಡಳಿತ/ಸಿ.ಆರ್–65/2023–24 ದಿನಾಂಕ: 16–11–2023

ಮರು ಟೆಂಡರ್ ಪ್ರಕಟಣೆ

ಅಲ್ಪಸಂಖ್ಯಾತರ ನಿರ್ದೇಶನಾಲಯದ ಕೇಂದ್ರ ಕಛೇರಿಯಲ್ಲಿ ಡೇಟಾ ಎಂಟ್ರಿ ಆಪರೇಟರ್, ಡ್ರೈವರ್, ಗ್ರೂಪ್–ಡಿ ಹಾಗೂ ಇತರೆ ಅಗತ್ಯವಿರುವ ಹೊರಗುತ್ತಿಗೆ ಹುದ್ದೆಗಳಿಗೆ ಹೊರಗುತ್ತಿಗೆ ಸಂಸ್ಥೆಯ ಮೂಲಕ ಒಂದು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಸೇವೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999, ನಿಯಮಗಳು 2000ರ ಪ್ರಕಾರ ನೊಂದಾಯಿತ ಅರ್ಹ ಸರಬರಾಜುದಾರರಿಂದ ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **https://kppp.karnataka.gov.in** ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

(1) ಟೆಂಡರ್ ಪ್ರಕಟಣೆಯ ದಿನಾಂಕ: 16.11.2023, (2) ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ ಮತ್ತು ಸಮಯ: 30.11.2023, ಸಂಜೆ 5.00 ಗಂಟೆಯೊಳಗೆ, (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಸಮಯ : 01.12.2023 ಬೆಳ್ಳಿಗ್ಗೆ 11.00 ಗಂಟೆಗೆ (4) ತಾಂತ್ರಿಕ ಬಿಡ್ ತೆರೆಯುವ ಸ್ಥಳ : ಅಲ್ಪಸಂಖ್ಯಾತರ ನಿರ್ದೇಶನಾಲಯ, ಕೇಂದ್ರ ಕಛೇರಿ (5) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: – (6) ಟೆಂಡರ್ ಅಂದಾಜು ಮೊತ್ತ : ರೂ.98.00 ಲಕ್ಷ (ವಾರ್ಷಿಕ) (7) ಇ.ಎಂ.ಡಿ. ಮೊತ್ತ : ರೂ.1,96,000/– (8) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ ದೂರವಾಣಿ ಸಂಖ್ಯೆ : ಅಲ್ಪಸಂಖ್ಯಾತರ ನಿರ್ದೇಶನಾಲಯ, ಮೌಲಾನಾ ಅಬುಲ್ ಕಲಾಂ ಆಜಾದ್ ಭವನ, ನಂ.16.ಸಿ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು – 560052. 080–22535902 ,080–22535912.

ಇತರೆ ವಿವರಗಳನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ **https://dom.karnataka.gov.in** ಹಾಗೂ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಜಂಟಿ ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ,
ಬೆಂಗಳೂರು.

DIPR/CP/2135/Zen/2023-24

ಕರ್ನಾಟಕ ಸರ್ಕಾರ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ

ನಂ 10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–560052.
ದೂರವಾಣಿ ಸಂಖ್ಯೆ: 29901193 ಇ–ಮೇಲ್ mdkmvstdc@gmail.com ವೆಬ್‌ಸೈಟ್: https//kmvstdcl.karnataka.gov.in

ಸಂಖ್ಯೆ : ಕಮವಾಪಪಂಅನಿ/ಸಿ&ಆ/ಸಿಆರ್–79/2010–11 ದಿನಾಂಕ : 15.11.2023

ಕೊಟೇಷನ್ ಅಹ್ವಾನ ಪ್ರಕಟಣೆ

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಕೇಂದ್ರ ಕಚೇರಿಯಲ್ಲಿ ಬಳಕೆಯಾಗದೆ ಉಳಿದಿರುವ ಈ ಕೆಳಕಂಡ ಅನುಪಯುಕ್ತ ಪೀಠೋಪಕರಣ, ಎಲೆಕ್ಟ್ರಾನಿಕ್ ಉಪಕರಣ ಮತ್ತು ವಾಹನದ ಬಿಡಿ ಭಾಗಗಳನ್ನು ವಿಲೇವಾರಿ ಮಾಡಲು ಕೇಂದ್ರಿಯ ಮಾಲಿನ್ಯ ಮಂಡಳಿ/ರಾಜ್ಯ ಮಾಲಿನ್ಯ ಮಂಡಳಿ /ಮಾಲಿನ್ಯ ನಿಯಂತ್ರಣ ಸಮಿತಿಯಲ್ಲಿ ನೊಂದಾಯಿಸಲ್ಪಟ್ಟ **Recycle / Refurbisher of e-waste** ಸಂಸ್ಥೆಗಳಿಂದ **As is where is Basis** ನಂತೆ ಕೊಟೇಷನ್ ಆಹ್ವಾನಿಸಲಾಗಿದ್ದು, ಕೊಟೇಷನ್‌ಗಳನ್ನು ಸಲ್ಲಿಸಲು ಅಂತಿಮ ದಿನಾಂಕವನ್ನು 23.11.2023 ರ ಸಂಜೆ 4.00 ಗಂಟೆಗೆ ನಿಗಧಿಪಡಿಸಲಾಗಿದೆ.

ವಾಹನದ ಟೈರ್–30, ಇಂಜಿನ್–1, ಬಿಡಿ ಭಾಗಗಳು–6, ಇಂಡಿಕೇಟರ್–2, ಬಂಪರ್–1, ಏರ್ ಫಿಲ್ಟರ್–3, ಸ್ಟೇಂಡಿಂಗ್ ಪ್ಯಾನ್–4, ಬ್ಯಾಟರಿ ರಾಕ್–2, ಎಲೆಕ್ಟ್ರಿಕ್ ಕೆಟಲ್–1, ಇಂಡೆಕ್ಸ್ ಸ್ಟೌವ್–1, ಹವಾ ನಿಯಂತ್ರಣ–5, ಪ್ರಿಂಟರ್–5, ಕೀ ಬೋರ್ಡ್–15, ಇನ್‌ವರ್ಟರ್–2, ಮೈಕ್ ಆಂಪ್ಲಿಫ್ಲೆಯರ್–1, ಬಯೋ ಮೆಟ್ರಿಕ್–1, ಟಿವಿ–2, ಕಂಪ್ಯೂಟರ್–1, ಎಸಿ ಸ್ಟಬೈಸರ್–3, ಕಾಟ್ರೈಡ್ಜ್–6, ಪ್ರಜೇಂಟೇಷನ್ ಬೋರ್ಡ್–1, ಪ್ರಾಜೆಕ್ಟ್ ಸೆಟ್–1 +ಸ್ಕ್ರೀನ್–2, ಸಿಸಿ ಕ್ಯಾಮರಾ–1 ಕೂಲಿಂಗ್ ಪ್ಯಾನ್–1, ಟ್ಯೂಬ್ ಲೈಟ್–8, ಕೇಬಲ್ –4, ಟೆಲಿಫೋನ್ ಇನ್ಸ್ಟುಮೆಂಟ್–12, ಸಿಪಿಯು–13, ಎಲ್‌ಇಡಿ ಸ್ಲೇಬ್–4, ಟೇಬಲ್ ಡ್ರಾ–7, ಟೇಬಲ್ ಕಬೋರ್ಡ್–2, ನಾಮ ಫಲಕಗಳು–2, ಕೋವಿಡ್ –19 ಶೀಲ್ಡ್ (ಫೈಬರ್)–5, ಮತ್ತು ಅಕ್ವಗಾರ್ಡ್ ಡ್ರಿಂಕಿಂಗ್ ವಾಟರ್–1.

ಸಹಿ/–
ವ್ಯವಸ್ಥಾಪಕ ನಿರ್ದೇಶಕರು
ಕ.ಮ.ವಾ.ಪ.ಪಂ.ಅನಿ, ಬೆಂಗಳೂರು

DIPR/CP/2120/Zenkar/2022-23

ಧರ್ಮಣ್ಣನಿಗೆ ರಾಜಯೋಗ



ಹಾಸ್ಯ ನಟ ಧರ್ಮಣ್ಣ ಕಡೂರು ಮೊದಲ ಬಾರಿಗೆ ನಾಯಕನಾಗಿ ಕಾಣಿಸಿಕೊಂಡಿರುವ 'ರಾಜಯೋಗ' ಚಿತ್ರ ಇಂದು (ನ.17) ತೆರೆ ಕಾಣುತ್ತಿದೆ. ಚಿತ್ರ ಹಾಗೂ ತಮ್ಮ ಸಿನಿಪಯಣದ ಕುರಿತು ಅವರು ಮಾತಿಗೆ ಸಿಕ್ಕರು...

ಪ್ರಜಾವಾಣಿ ನೋಡಿಯೊ ಸಿನಿಮಾತು ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ವಿನಾಯಕ ಕೆ.ಎಸ್.

• ಚಿತ್ರದಲ್ಲಿ ನಿಮ್ಮ ಪಾತ್ರವೇನು?

ಪಾತ್ರದ ಹೆಸರು 'ಪ್ರಾಣೇಶ್'. ಮೂಲಾ ನಕ್ಷತ್ರದಲ್ಲಿ ಜನಿಸಿರುತ್ತಾನೆ. ಈ ನಕ್ಷತ್ರದವರು ದುರದೃಷ್ಟವಂತರು ಎಂಬುದನ್ನು ಆತ ನಂಬುವುದಿಲ್ಲ. ಎಲ್ಲರ ಎದುರು 'ಲತ್ತೆ ನನ್ಮಗ' ಎನಿಸಿಕೊಳ್ಳುತ್ತಾನೆ. ಬದುಕಿಗೆ ಕಾಲುಗುಣ, ಕೈಗುಣ ಮಹತ್ವದ್ದಲ್ಲ. ಡಿಗ್ರಿ ಮಾಡಿದ್ದೇನೆ. ಇನ್ನಷ್ಟು ಓದಿ ಇದೇ ಊರಿಗೆ ತಹಶೀಲ್ದಾರ್ ಆಗಿ ಬರುತ್ತೇನೆ ಎಂದು ಸವಾಲು ಹಾಕುತ್ತಾನೆ. ಮಾಡುವ ಕೆಲಸದಿಂದ ರಾಜಯೋಗ ಬರುತ್ತೆ ಎಂದು ನಂಬಿಕೊಂಡವನು. ಪುಸ್ತಕದ ಹುಳು. ಯಾವಾಗಲೂ ಕೈಯಲ್ಲಿ ಪುಸ್ತಕವಿರುತ್ತದೆ. ಯಾರೇನೇ ಕೇಳಿದರೂ ಎಲ್ಲದಕ್ಕೂ ಪುಸ್ತಕದಿಂದ ವಿವರ ನೀಡುತ್ತಿರುತ್ತಾನೆ.

• ನಾಯಕನಾಗಬೇಕು ಎಂಬುದು ಎಷ್ಟು ವರ್ಷದ ಕನಸು?

ನನಗೆ ಯಾವತ್ತಿಗೂ ನಾಯಕನಾಗಬೇಕೆಂಬ ಕನಸು ಇರಲಿಲ್ಲ. ಪ್ರಮುಖ ಪಾತ್ರವಿದೆ ಎಂದು ಈ ಸಿನಿಮಾ ಮಾಡಿದೆ. ಈ ಸಿನಿಮಾ ನೋಡಿದರೆ ಖಂಡಿತವಾಗಿ ಅನಂತ ನಾಗ್, ಕಾಶೀನಾಥ್, ಜಗ್ಗೇಶ್ ಅವರಂತಹ ಕಲಾವಿದರು ಮಾಡುತ್ತಿದ್ದ ಹಾಸ್ಯ ಸಿನಿಮಾ ನೋಡಿದಂತಾಗುತ್ತದೆ. ಈಗ ಕುಟುಂಬವೇ ಕುಳಿತು ಎಂಜಾಯ್ ಮಾಡಬಹುದಾದ ಆ ರೀತಿಯ ಫ್ಯಾಮಿಲಿ ಸಿನಿಮಾಗಳು ಕಡಿಮೆ ಆಗುತ್ತಿವೆ. ಅಂತಹ ಸಿನಿಮಾವಿದು. ನೈಜವಾಗಿರುವ ಕಥೆ. ನಾಯಕನ ಅಬ್ಬರವಿಲ್ಲ. ಹಳ್ಳಿ ಸೊಗಡಿನ ಸಿನಿಮಾ. ನಮ್ಮ ಮನೆಯಲ್ಲಿಯೇ ಕಥೆ ನಡೆಯುತ್ತಿದೆ ಎಂಬ ಭಾವನೆ ಮೂಡಿಸುತ್ತದೆ.

• ನಿಮ್ಮ ಇಲ್ಲಿಯವರೆಗಿನ ಸಿನಿಪಯಣದ ಬಗ್ಗೆ ಹೇಳಬಹುದೇ?

ಪಯಣ ಅದ್ಭುತವಾಗಿದೆ. ಯಾವುದೇ ಕಹಿ ಘಟನೆ ನನ್ನ ಜೀವನದಲ್ಲಿ ನಡೆದಿಲ್ಲ. ಒಳ್ಳೊಳ್ಳೆ ತಂಡಗಳ ಜೊತೆ ಕೆಲಸ ಮಾಡಿರುವೆ. ಉದ್ಯಮದಲ್ಲಿ ಎಲ್ಲರೂ ನನಗೆ ಸಪೋರ್ಟ್ ಮಾಡಿದ್ದಾರೆ. 'ರಾಮಾ ರಾಮಾ ರೇ' ಸಿನಿಮಾದಿಂದ ಉದ್ಯಮಕ್ಕೆ ಬಂದಿದ್ದು. ಅದಕ್ಕೂ ಮೊದಲು ಡಾಲಿ ಧನಂಜಯ ಅವರ 'ಜಯನಗರ...' ಕಿರುಚಿತ್ರದಲ್ಲಿ ನಟಿಸಿದ್ದೆ. ಇಲ್ಲಿವರೆಗೆ 30 ಸಿನಿಮಾಗಳಲ್ಲಿ ನಟಿಸಿರುವೆ. ಎಂಟು ಸಿನಿಮಾಗಳು ಬಿಡುಗಡೆಗೆ ಸಿದ್ಧವಾಗಿವೆ. ಎಲ್ಲವೂ ಪ್ರಮುಖ ಕಲಾವಿದನಾಗಿ ನಟಿಸಿದ ಸಿನಿಮಾಗಳು.

• 'ರಾಮ ರಾಮ ರೇ' ದಿನಗಳು ಹೇಗಿದ್ದವು?

ಅದು ಕೊಟ್ಟ ಅನುಭವ ಅದ್ಭುತ. ಆ ಸಿನಿಮಾದಲ್ಲಿ ಪ್ರತಿ ವಿಭಾಗದಲ್ಲಿ ಕೆಲಸ ಮಾಡಿರುವೆ. ಸಿನಿಮಾ ನಿರ್ಮಾಣವನ್ನು ಕಲಿಸಿಕೊಟ್ಟಿತು. ಎಲ್ಲೆಲ್ಲಿ ಯಾರಿಂದ ಯಾವ ಕೆಲಸ ಮಾಡಿಸಿಕೊಳ್ಳಬೇಕು ಎಂಬುದನ್ನು ಕಲಿತೆವು. ಆ ಹೊತ್ತಿನಲ್ಲಿ ತುಂಬ ಕಷ್ಟಪಟ್ಟಿದ್ದೆವು. ನಮ್ಮ ಇಷ್ಟಕ್ಕಾಗಿ ಕಷ್ಟಪಟ್ಟಿದ್ದೇವೆ ಎಂಬ ಖುಷಿಯಿತ್ತು. ಸತ್ಯಪ್ರಕಾಶ್, ನಟರಾಜ್ ಎಲ್ಲ ನನ್ನ ಕ್ಲಾಸ್‌ಮೇಟ್ಸ್. ಒಟ್ಟಿಗೆ ಬೆಳೆದವರು. ಒಟ್ಟಿಗೆ ಸಿನಿಮಾಗೆ ಬಂದೆವು. ನನ್ನ ಪಾಲಿಗೆ ಯಾವತ್ತಿಗೂ ಮರೆಯಲಾಗದ ಸಿನಿಮಾವದು.

• ಇನ್ನು ಮುಂದೆ ನಾಯಕ ಅಲ್ಲದ ಪಾತ್ರಗಳನ್ನು ಮಾಡುವುದಿಲ್ಲವೇ?

ನಾಯಕನಾಗಿ ಸಿನಿಮಾ ಮಾಡುತ್ತೇನೋ, ಇಲ್ಲವೋ ಗೊತ್ತಿಲ್ಲ. ಆದರೆ ಕ್ಯಾರೆಕ್ಟರ್ ಆರ್ಟಿಸ್ಟ್ ಆಗಿ ಮುಂದುವರಿಯುತ್ತೇನೆ. ನಾಯಕ ಅನ್ನೋದು ಬಿರಿಯಾನಿ ಇದ್ದಹಾಗೆ. ದಿನವೂ ತಿನ್ನಲು ಸಾಧ್ಯವಿಲ್ಲ. ಕ್ಯಾರೆಕ್ಟರ್ ಆರ್ಟಿಸ್ಟ್ ಎಂಬುದು ಮುದ್ದೆ, ಬಸ್ಸಾರಿನ ರೀತಿ. ಅದನ್ನು ಬಿಡಲು ಸಾಧ್ಯವಿಲ್ಲ.

• ನಿಮ್ಮ ಕೈಯಲ್ಲಿರುವ ಸಿನಿಮಾಗಳು ಯಾವುವು?

'ಗರಡಿ'ಯಲ್ಲಿ ಒಂದೊಳ್ಳೆ ಪಾತ್ರದಲ್ಲಿ ನಟಿಸಿದ್ದೇನೆ. ಚಿಕ್ಕಣ್ಣ ನಟನೆಯ 'ಉಪಾಧ್ಯಕ್ಷ' ಬಿಡುಗಡೆಗೆ ಸಿದ್ಧವಿದೆ. 'ದಿಲ್‌ಖುಷ್', 'ಅಮರಪ್ರೇಮಿ ಅರುಣ್', 'ರಾನಿ', 'ಜಾಗಟೆ ಜೆನ್‌ಸೆಟ್' ಸೇರಿ ಎಂಟು ಸಿನಿಮಾಗಳ ಚಿತ್ರೀಕರಣ ಮುಗಿದಿದೆ. ಮೂರು ಸಿನಿಮಾಗಳು ಮಾತುಕತೆ ಹಂತದಲ್ಲಿವೆ.

• ಒಂದೊಮ್ಮೆ ಚಿತ್ರರಂಗಕ್ಕೆ ಬಾರದಿದ್ದರೆ ಬೇರೆ ಏನಾಗಿರುತ್ತಿದ್ದಿರಿ?

ಚಿತ್ರರಂಗಕ್ಕೆ ಬಾರದಿದ್ದರೆ ಎಲ್‌ಎಲ್‌ಬಿ ಮಾಡಬೇಕು ಎಂದುಕೊಂಡಿದ್ದೆ. ನಾವು ಊರಿನಲ್ಲಿ ಹೂವಿನ ವ್ಯಾಪಾರಿಗಳು. ಬಹುಶಃ ಅದನ್ನೇ ಮಾಡಿಕೊಂಡು ಇರುತ್ತಿದ್ದೆ.

• ನಿಜ ಜೀವನದಲ್ಲಿಯೂ ಧರ್ಮಣ್ಣ ಅವರದ್ದು ತಮಾಷೆ, ನಗಿಸುವ ವ್ಯಕ್ತಿತ್ವವೇ?

ಸ್ವಲ್ಪ ತಲೆಹರಟೆ. ನಗಿಸಿಕೊಂಡು ಇರುವೆ. ಆದರೆ ತುಂಬ ಭಾವನಾತ್ಮಕ ಕೂಡ. ಈ ಸಿನಿಮಾದಲ್ಲಿಯೂ ಅದೇ ರೀತಿ ಪಾತ್ರ ಮಾಡಿರುವೆ. ಪ್ರೀತಿಪಾತ್ರರು ಬೈದರೆ, ನೋವುಂಟು ಮಾಡಿದರೆ ಬೇಗ ಬೇಸರಗೊಳ್ಳುವೆ. ❖

'ಭೈರಾದೇವಿ' ರಾಧಿಕಾ

ರಾಧಿಕಾ ಕುಮಾರಸ್ವಾಮಿ ಅವರ ಜನ್ಮದಿನದ ಪ್ರಯುಕ್ತವಾಗಿ 'ಭೈರಾದೇವಿ' ಚಿತ್ರದ ಟೀಸರ್ ಹಾಗೂ 'ಅಜಾಗ್ರತ' ಚಿತ್ರದ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಈ ಎರಡು ಚಿತ್ರಗಳು ಅವರ ಸಹೋದರ ರವಿರಾಜ್ ಅವರ ಶಮಿಕಾ ಎಂಟರ್‌ಪ್ರೈಸಸ್ ಮೂಲಕ ನಿರ್ಮಾಣಗೊಂಡಿವೆ.

"'ಭೈರಾದೇವಿ' ನನ್ನ ಇಪ್ಪತ್ತು ವರ್ಷಗಳ ಸಿನಿಪಯಣದಲ್ಲೇ ವಿಭಿನ್ನವಾದ ಚಿತ್ರ. ಅಘೋರಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನನಗೆ ಸ್ಮಶಾನ ಎಂದರೆ ಭಯ. ಈ ಚಿತ್ರದ ಚಿತ್ರೀಕರಣ ಹೆಚ್ಚಿನ ಭಾಗ ಸ್ಮಶಾನದಲ್ಲೇ ನಡೆದಿದೆ. ಚಿತ್ರ ತೆರೆಗೆ ಬರಲು ಸಿದ್ಧವಾಗಿದ್ದು, ಸದ್ಯದಲ್ಲೇ ದಿನಾಂಕ ಘೋಷಣೆ ಮಾಡುತ್ತೇವೆ" ಎಂದರು ರಾಧಿಕಾ.

ಚಿತ್ರವನ್ನು ಶ್ರೀಜೈ ನಿರ್ದೇಶಿಸಿದ್ದಾರೆ. ಕನ್ನಡ, ತೆಲುಗು, ತಮಿಳು ಮೂರು ಭಾಷೆಗಳಲ್ಲಿ ಮೂಡಿಬಂದಿದೆ. . 'ಅಜಾಗ್ರತ' ಚಿತ್ರಕ್ಕೆ ಶಶಿಧರ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಕನ್ನಡ ಸೇರಿ ಏಳು ಭಾಷೆಗಳಲ್ಲಿ ಪ್ರತ್ಯೇಕವಾಗಿ ಮೂಡಿಬರುತ್ತಿರುವ ಚಿತ್ರವಿದು. ❖

ಸಪ್ತ ಸಾಗರದಾಚೆ...

ಈ ವಾರ ತೆರೆಗೆ

ರಕ್ಷಿತ್ ಶೆಟ್ಟಿ, ರುಕ್ಮಿಣಿ ವಸಂತ, ಚೈತ್ರಾ ಆಚಾರ್ ನಟಿಸಿರುವ 'ಸಪ್ತಸಾಗರದಾಚೆ ಎಲ್ಲೋ' ಚಿತ್ರದ ಸೈಡ್–ಬಿ ಇಂದು(ನ.17) ತೆರೆ ಕಾಣುತ್ತಿದೆ. ಚರಣ್ ರಾಜ್ ಸಂಗೀತ, ಅದ್ವೈತ ಗುರುಮೂರ್ತಿ ಛಾಯಾಗ್ರಹಣ ಚಿತ್ರಕ್ಕಿದ್ದು, ತಮ್ಮ ಪರಂವಃ ಸಂಸ್ಥೆ ಮೂಲಕ ರಕ್ಷಿತ್ ಶೆಟ್ಟಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಚಿತ್ರದ ಸೈಡ್–ಎ ನಲ್ಲಿ ಜೈಲು ಸೇರಿದ್ದ ನಾಯಕ ಜೈಲಿನಿಂದ ಹೊರಬಂದ ನಂತರ ನಡೆಯುವ ಕಥೆಯನ್ನು ಈ ಭಾಗ ಹೊಂದಿದೆ.

ಬೆಂಬಿಡದ ನಾವಿಕ: ಯುವ ಪ್ರತಿಭೆ ಶ್ರೀಯಾನ್ ನಾಯಕನಾಗಿ ನಟಿಸಿ, ನಿರ್ದೇಶಿಸಿರುವ 'ಬೆಂಬಿಡದ ನಾವಿಕ' ಇಂದು ತೆರೆ ಕಾಣುತ್ತಿದೆ. ಮಂಗಳೂರು, ಉಡುಪಿಯಲ್ಲಿ ನಡೆಯುವ ಥ್ರಿಲ್ಲರ್ ಕಥಾವಸ್ತು ಹೊಂದಿರುವ ಚಿತ್ರಕ್ಕೆ ಜಿ.ಮಹೇಶ್ ಬಂಡವಾಳ ಹೂಡಿದ್ದಾರೆ. ಪ್ರಿಯದರ್ಶಿನಿ, ಐಶ್ವರ್ಯ ನಾಯಕಿಯರು. ಮುನ್ನಾ ಮೈಸೂರು ಸಂಗೀತ, ಸತೀಶ್ ರಾಜೇಂದ್ರನ್ ಛಾಯಾಗ್ರಹಣ ಚಿತ್ರಕ್ಕಿದೆ.

ಬಾಯ್: ಬಂಜಾರ ಸಮುದಾಯದ ಸಂಸ್ಕೃತಿಯ 'ಬಾಯ್' ಸಿನಿಮಾ ಬಿಡುಗಡೆಯಾಗುತ್ತಿದೆ. ಯುವ ಈ ಸಿನಿಮಾ ನಿರ್ದೇಶಿಸಿದ್ದಾರೆ. ಚಿತ್ರದಲ್ಲಿ ನಾಯಕಿಯಾಗಿ ಪೂಜಾ ನಟಿಸಿದ್ದು, ಮಾಲಾಶ್ರೀ ಸುರೇಶ್ ಬಂಡವಾಳ ಹೂಡಿದ್ದಾರೆ.

ದಿ ವೆಕೆಂಟ್ ಹೌಸ್: ಜಾನೆಟ್ ನರೋನ್ಹಾ ಪ್ರೊಡಕ್ಷನ್ಸ್‌ನ 'ದಿ ವೆಕೆಂಟ್ ಹೌಸ್' ತೆರೆ ಕಾಣುತ್ತಿದೆ. ನಟಿ ಎಸ್ತರ್ ನರೋನ್ಹಾ ನಟನೆಯ ಜೊತೆಗೆ ಚಿತ್ರದ ನಿರ್ದೇಶನ, ನಿರ್ಮಾಣವನ್ನೂ ಮಾಡಿದ್ದಾರೆ. ನರೇಂದ್ರ ಗೌಡ ಛಾಯಾಗ್ರಹಣ, ವಿಜಯ್ ರಾಜ್ ಸಂಕಲನ ಸಿನಿಮಾಕ್ಕಿದೆ. ಕನ್ನಡ ಹಾಗೂ ಕೊಂಕಣಿ ಭಾಷೆಯಲ್ಲಿ ಚಿತ್ರ ಪ್ರದರ್ಶನ ಕಾಣಲಿದೆ. ❖

ಸುಭಾಷಿತ

ನೀರು ನಿಮ್ಮ ಕಾಲಬುಡಕ್ಕೆ ಬಂದಾಗಲೇ ಅದರಿಂದ ಪಾರಾಗಲು ನೀವು ಏನನ್ನಾದರೂ ಮಾಡಬೇಕೇ ವಿನಾ ಅದು ನಿಮ್ಮ ಕುತ್ತಿಗೆವರೆಗೆ ಬರುವವರೆಗೂ ಕಾಯುತ್ತಾ ಕೂರುವುದಲ್ಲ.

-ಚಿನುವಾ ಅಚಿಬೆ

ಪತ್ರಕರ್ತರ ಡಿಜಿಟಲ್ ಸಾಧನ ಜಪ್ತಿ ಕಟ್ಟುನಿಟ್ಟಿನ ಮಾರ್ಗಸೂಚಿ ಬೇಕು

ಮಾಧ್ಯಮ ಪ್ರತಿನಿಧಿಗಳಿಂದ ಡಿಜಿಟಲ್ ಉಪಕರಣಗಳನ್ನು ವಶಕ್ಕೆ ಪಡೆಯುವುದಕ್ಕೆ ಸಂಬಂಧಿಸಿ ಮಾರ್ಗಸೂಚಿ ಸಿದ್ಧಪಡಿಸಬೇಕು ಎಂದು ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ; ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಎದುರಾಗಿರುವ ಬೆದರಿಕೆಯನ್ನು ನಿಭಾಯಿಸಲು ಹೊಸ ದಾರಿಯನ್ನು ತೋರಬಹುದು ಎಂಬ ಭರವಸೆಯನ್ನು ಇದು ಮೂಡಿಸಿದೆ. ಮಾಧ್ಯಮ ಸಂಸ್ಥೆಗಳಲ್ಲಿ ಶೋಧ ನಡೆಸಿದಾಗ ಅಲ್ಲಿರುವ ಪತ್ರಕರ್ತರ ಕೈಯಲ್ಲಿರುವ ಮೊಬೈಲ್ ಫೋನ್, ಲ್ಯಾಪ್‌ಟಾಪ್‌ನಂತಹ ಡಿಜಿಟಲ್ ಸಾಧನಗಳನ್ನು ಕೇಂದ್ರೀಯ ತನಿಖಾ ಸಂಸ್ಥೆಗಳು ವಶಕ್ಕೆ ಪಡೆಯುತ್ತವೆ. ಹೀಗೆ ವಶಕ್ಕೆ ಪಡೆದ ಸಾಧನಗಳನ್ನು ತಮ್ಮ ಬಳಿಯೇ ಬಹುಕಾಲ ಉಳಿಸಿಕೊಳ್ಳುತ್ತವೆ. ಸುದ್ದಿ ಪೋರ್ಟಲ್ 'ನ್ಯೂಸ್‌ಕ್ಲಿಕ್' ಕಚೇರಿ ಮತ್ತು ಈ ಪೋರ್ಟಲ್‌ನ ಪತ್ರಕರ್ತರ ಮನೆಗಳಲ್ಲಿ ಇತ್ತೀಚೆಗೆ ಶೋಧ ನಡೆದಾಗ ಇದೇ ರೀತಿ ಮಾಡಲಾಗಿದೆ. ಫೌಂಡೇಷನ್ ಫಾರ್ ಮೀಡಿಯಾ ಪ್ರೊಫೆಷನಲ್ಸ್ ಸಂಸ್ಥೆಯು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಮಾರ್ಗಸೂಚಿ ರೂಪಿಸಲು ನಿರ್ದೇಶನ ನೀಡಿದೆ. ಮಾಧ್ಯಮ ಪ್ರತಿನಿಧಿಗಳ ಡಿಜಿಟಲ್ ಉಪಕರಣಗಳನ್ನು ಪರಿಶೀಲಿಸುವ ಅನಿಯಂತ್ರಿತ ಅಧಿಕಾರವು ಸ್ವೀಕಾರಾರ್ಹವಲ್ಲ ಎಂದು ಹೇಳಿದೆ. ಕರಡು ಮಾರ್ಗಸೂಚಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು. ಹೀಗೆ ಸಲ್ಲಿಸಲಾದ ಕರಡನ್ನು ಕೇಂದ್ರಾಡಳಿತ ಪ್ರದೇಶಗಳು ಮತ್ತು ರಾಜ್ಯಗಳ ಜೊತೆಗೆ ಹಂಚಿಕೊಂಡು ಅವುಗಳ ಪ್ರತಿಕ್ರಿಯೆಯನ್ನೂ ಪಡೆಯಬಹುದಾಗಿದೆ ಎಂದು ಕೋರ್ಟ್ ಹೇಳಿದೆ. ತನಿಖಾ ಸಂಸ್ಥೆಗಳ ಅಧಿಕಾರ ವ್ಯಾಪ್ತಿಯೊಳಗೆ ಎಲ್ಲವೂ ಬರುತ್ತವೆ ಎಂಬುದನ್ನು ಒಪ್ಪಲಾಗದು ಮತ್ತು ಇದು ಅಪಾಯಕಾರಿ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ. ಒಂದು ವೇಳೆ, ಸರ್ಕಾರವು ಮಾರ್ಗಸೂಚಿ ರೂಪಿಸದಿದ್ದರೆ ತಾನೇ ರೂಪಿಸಲು ಸಿದ್ಧ ಎಂದೂ ಹೇಳಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪತ್ರಕರ್ತರ ಹಕ್ಕುಗಳನ್ನು ರಕ್ಷಿಸಲು ಬಲವಾದ ವ್ಯವಸ್ಥೆಯೊಂದರ ಅಗತ್ಯ ಇದೆ

ಡಿಜಿಟಲ್ ಉಪಕರಣಗಳನ್ನು ತನಿಖಾ ಸಂಸ್ಥೆಗಳು ವಶಕ್ಕೆ ಪಡೆದರೆ ಅದು ಪತ್ರಕರ್ತರ ಕಾರ್ಯ ನಿರ್ವಹಣೆಗೆ ಅಡ್ಡಿ ಆಗುವುದಿಲ್ಲ ಎಂಬುದನ್ನು ಹೊಸ ಮಾರ್ಗಸೂಚಿಯು ಖಾತರಿಪಡಿಸಿಕೊಳ್ಳಬೇಕು. ಉಪಕರಣಗಳನ್ನು ತಿರುಚುವ ಕೆಲಸ ಮಾಡಬಾರದು, ಪತ್ರಕರ್ತರ ಖಾಸಗಿತನ, ಪತ್ರಕರ್ತರ ಮೂಲಗಳು ಮತ್ತು ಮಾಹಿತಿಯ ಗೋಪ್ಯತೆ ಉಲ್ಲಂಘನೆ ಆಗಬಾರದು ಎಂಬುದರ ಖಾತರಿಯನ್ನೂ ಮಾರ್ಗ ಸೂಚಿ ನೀಡಬೇಕು. ಡಿಜಿಟಲ್ ಉಪಕರಣಗಳಲ್ಲಿ ವೈಯಕ್ತಿಕ, ಆರ್ಥಿಕ ಮತ್ತು ಇತರರ ಕುರಿತಾದ ಮತ್ತು ಇತರರು ನೀಡಿದ ಮಾಹಿತಿ ಇರಬಹುದು. ಈ ಎಲ್ಲವುಗಳ ಗೋಪ್ಯತೆಯ ರಕ್ಷಣೆ ಆಗಬೇಕು ಮತ್ತು ಮೂರನೇ ವ್ಯಕ್ತಿಯ ಕೈಗೆ ಈ ವಿವರಗಳು ದೊರಕಬಾರದು. ನ್ಯಾಯಾಂಗದ ವಾರಂಟ್‌ಗಳ ಮೂಲಕವೇ ಶೋಧ ಮತ್ತು ಜಪ್ತಿ ನಡೆಯಬೇಕು. ನಿರ್ದಿಷ್ಟ ಮಾಹಿತಿ ಪಡೆಯುವುದಕ್ಕಾಗಿ ಮಾತ್ರವೇ ಈ ಪ್ರಕ್ರಿಯೆಗೆ ಅವಕಾಶ ಇರಬೇಕು. ಏನಾದರೂ ತಪ್ಪು ಜರುಗಿದೆಯೇ ಎಂಬುದನ್ನು ಹುಡುಕುವುದಕ್ಕಾಗಿ ಶೋಧ, ಜಪ್ತಿ ನಡೆಸಬಾರದು. ಪತ್ರಕರ್ತರ ವಿರುದ್ಧ ಬಳಸಬಹುದಾದ ಮಾಹಿತಿ ಸಂಗ್ರಹಿಸುವುದಕ್ಕಾಗಿಯೇ ಶೋಧ ನಡೆಸುವುದು ಸಲ್ಲದು. ಪತ್ರಕರ್ತರ ವೈಯಕ್ತಿಕ ಮತ್ತು ವೃತ್ತಿಪರ ಹಕ್ಕುಗಳ ರಕ್ಷಣೆಯ ಖಾತರಿ ನೀಡುವ ಸಮಗ್ರವಾದ ಮಾರ್ಗಸೂಚಿಯನ್ನು ರೂಪಿಸಬೇಕಾದ ಅಗತ್ಯ ಇದೆ.

ಈ ವಿಚಾರದಲ್ಲಿ, ಸಂಕೀರ್ಣವಾದ ಹಲವು ಕಾನೂನು ಅಂಶಗಳನ್ನು ಪರಿಶೀಲನೆಗೆ ಒಳಪಡಿಸಬೇಕಾಗಿದೆ ಎಂದು ಸರ್ಕಾರವು ನ್ಯಾಯಾಲಯಕ್ಕೆ ಹೇಳಿದೆ. ಸರ್ಕಾರದ ಅಧಿಕಾರ ಮತ್ತು ವ್ಯಕ್ತಿಯ ಹಕ್ಕುಗಳ ನಡುವೆ ಸಮತೋಲನ ಇರಬೇಕು ಎಂದು ಕೋರ್ಟ್ ಹೇಳಿದೆ. ತನಿಖಾ ಸಂಸ್ಥೆಗಳು ಹೊಂದಿರುವ ಅಧಿಕಾರದ ದುರ್ಬಳಕೆ ಆಗದಂತೆ ಖಾತರಿಪಡಿಸುವುದಕ್ಕೂ ಮಾರ್ಗಸೂಚಿಯ ಅಗತ್ಯ ಇದೆ. 'ದೇಶವೊಂದು ತನ್ನ ತನಿಖಾ ಸಂಸ್ಥೆಗಳ ಮೂಲಕವೇ ನಡೆಯುವಂತಹ ಸ್ಥಿತಿ ನಿರ್ಮಾಣ ಆಗಬಾರದು' ಎಂದೂ ಕೋರ್ಟ್ ಹೇಳಿದೆ. ಬ್ರಿಟನ್ ಮತ್ತು ಅಮೆರಿಕದಲ್ಲಿ ಡಿಜಿಟಲ್ ಉಪಕರಣಗಳ ಶೋಧ ಹಾಗೂ ಜಪ್ತಿಗೆ ಸಂಬಂಧಿಸಿ ಕಟ್ಟುನಿಟ್ಟಿನ ನಿಯಮ ಮತ್ತು ನಿರ್ಬಂಧಗಳು ಇವೆ. ಆದರೆ, ಭಾರತದಲ್ಲಿ ಇರುವ ನಿಯಮಗಳು ಕೂಡ ಪಾಲನೆ ಆಗುತ್ತಿಲ್ಲ. ಹಾಗಾಗಿಯೇ, ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪತ್ರಕರ್ತರ ಹಕ್ಕುಗಳನ್ನು ರಕ್ಷಿಸಲು ಬಲವಾದ ವ್ಯವಸ್ಥೆಯೊಂದರ ಅಗತ್ಯ ಇದೆ.

ದಿನದ ಟ್ವೀಟ್

ಹೀಗಿದೆ ಜೀವನದ ನಿಯಮ!

ಸಹಾರ ಮುಖ್ಯಸ್ಥ ಸುಬ್ರತೊ ರಾಯ್ ಅವರ ಯಶಸ್ಸಿನ ದಿನಗಳಲ್ಲಿ ಪ್ರಮುಖ ಚಿತ್ರನಟರು, ಅತ್ಯಂತ ಪ್ರಬಲ ರಾಜಕಾರಣಿಗಳು ಮತ್ತು ಅತಿ ದೊಡ್ಡ ಉದ್ಯಮಿಗಳು ಅವರನ್ನು ಹಿಂಬಾಲಿಸುತ್ತಿದ್ದುದನ್ನು ನಾನು ಕಂಡಿದ್ದೇನೆ. ಅದೇ ಅವರು ಕಷ್ಟದ ದಿನಗಳಿಗೆ ಜಾರಿದ್ದಾಗ, ಬಹುತೇಕ ಏಕಾಂಗಿಯಾಗಿಯೇ ಇದ್ದರು. ದುರದೃಷ್ಟದ ಸಂಗತಿಯೆಂದರೆ, ಇದೇ ಜೀವನದ ನಿಯಮ.

ಹರ್ಷ್ ಗೋಯೆಂಕಾ, ಉದ್ಯಮಿ

ಕಿಡಿನುಡಿ

ಬಿ.ಎಸ್.ಯಡಿಯೂರಪ್ಪ ಅವರನ್ನು ಈ ಹಿಂದೆ ಬಿಜೆಪಿ ಯಾವ ರೀತಿ ನಡೆಸಿಕೊಂಡಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಕೇಂದ್ರದಲ್ಲಿ ಮತ್ತೆ ಅಧಿಕಾರಕ್ಕೆ ಬರಬೇಕೆಂಬ ಕಾರಣಕ್ಕೆ ವಿಜಯೇಂದ್ರ ಅವರನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆಯೇ ವಿನಾ ಅವರ ಮೇಲಿನ ಪ್ರೀತಿಯಿಂದಲ್ಲ.

ಎಂ.ಬಿ.ಪಾಟೀಲ, ರಾಜ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 17-11-1998

• ಹೊಣೆಗೇಡಿತನ ಸಲ್ಲದು ಅಧಿಕಾರಿಗಳಿಗೆ ಎಚ್ಚರಿಕೆ

ಬೆಂಗಳೂರು, ನ. 16– 'ಜವಾಬ್ದಾರಿ ಅರಿತು ದಕ್ಷತೆಯಿಂದ ಜನಪರ ಕೆಲಸ ಮಾಡುವುದಿದ್ದರೆ ಮಾಡಿ; ಇಲ್ಲದಿದ್ದರೆ ನಿಮ್ಮನ್ನು ರಾಜ್ಯದಿಂದ ಹೊರಗೆ ಕಳುಹಿಸುವುದು ಅನಿವಾರ್ಯವಾಗುತ್ತದೆ'.

'ಅಧಿಕಾರಿಗಳ ಹೊಣೆಗೇಡಿತನವನ್ನು ಇಷ್ಟು ದಿನ ಸಹಿಸಿದ್ದೇನೆ; ಆದರೆ ಇನ್ನು ಸಹಿಸಲು ಸಾಧ್ಯವೇ ಇಲ್ಲ. ನಿರ್ಲಜ್ಜ ಹೊಣೆಗೇಡಿ ಅಧಿಕಾರಿಗಳನ್ನು ಸುಧಾರಣೆ ಮಾಡುವುದು ನನ್ನ ಕೆಲಸವೂ ಅಲ್ಲ'.

ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಇಂದು ರಾಜ್ಯದ ಹಿರಿಯ ಐಎಎಸ್ ಅಧಿಕಾರಿಗಳಿಗೆ ನೀಡಿದ ಎಚ್ಚರಿಕೆ ಇದು.

ಆಡಳಿತ ಚುರುಕುಗೊಳಿಸುವ ಉದ್ದೇಶದಿಂದ ವಿಧಾನಸೌಧದ ಸಮಿತಿ ಸಭಾಂಗಣದಲ್ಲಿ ನಡೆದ ವಿವಿಧ ಇಲಾಖೆಗಳ ಕಾರ್ಯದರ್ಶಿಗಳ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಹಿರಿಯ ಅಧಿಕಾರಿಗಳ ಕಾರ್ಯಶೈಲಿಯನ್ನು ನೇರವಾಗಿ ತರಾಟೆಗೆ ತೆಗೆದುಕೊಂಡರು ಎನ್ನಲಾಗಿದೆ.

• ಆಂಧ್ರ: ಚಂಡಮಾರುತಕ್ಕೆ ಆರು ಮಂದಿ ಬಲಿ

ಹೈದರಾಬಾದ್, ನ. 16– ಭೀಕರ ಚಂಡಮಾರುತ ನಿನ್ನೆ ರಾತ್ರಿ ಆಂಧ್ರದ ಕರಾವಳಿ ಪ್ರದೇಶವಾದ ವಿಶಾಖಪಟ್ಟಣದ ಮೂಲಕ ಹಾದುಹೋಗಿ ಆರು ಮಂದಿಯನ್ನು ಬಲಿ ತೆಗೆದುಕೊಂಡಿತಲ್ಲದೆ, ಬೆಳೆದು ನಿಂತಿದ್ದ ಬೆಳೆಗೆ ತೀವ್ರ ಹಾನಿ ಮಾಡಿತು. ಇಲ್ಲಿ ಸಂಪರ್ಕ ವ್ಯವಸ್ಥೆ ಅಸ್ತವ್ಯಸ್ತಗೊಂಡಿತು.

ಅಧಿಕೃತ ವರದಿಗಳ ಪ್ರಕಾರ, ಚಂಡಮಾರುತದಿಂದ ಉಂಟಾದ ಪ್ರವಾಹದಲ್ಲಿ ರವಿಕಮತಂನಲ್ಲಿ ಮನೆಯೊಂದರ ಗೋಡೆ ಕುಸಿದು ಒಬ್ಬ ಸತ್ತಿದ್ದಾನೆ. ಒಂದು ಲಕ್ಷಕ್ಕೂ ಹೆಚ್ಚು ಎಕರೆ ಪ್ರದೇಶದಲ್ಲಿ ಬೆಳೆದುನಿಂತಿದ್ದ ಭತ್ತದ ಬೆಳೆಗೆ ಹಾನಿಯಾಗಿದೆ. ಸುಮಾರು 32 ಸಾವಿರ ಜನರು ನಿರ್ವಸತಿಗರಾಗಿದ್ದಾರೆ.

ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು, ಚಂಡಮಾರುತದಿಂದ ಹಾನಿಗೊಳಗಾದ ಪ್ರದೇಶದಲ್ಲಿ ಇಂದು ವೈಮಾನಿಕ ಸಮೀಕ್ಷೆಯನ್ನು ನಡೆಸಿದರು.

50 ವರ್ಷಗಳ ಹಿಂದೆ

ಶನಿವಾರ, 17-11-1973

• ಸಬ್ ಇನ್‌ಸ್ಪೆಕ್ಟರಿಗೆ ಮರಣದಂಡನೆ ಮೂವರಿಗೆ ಜೀವಾವಧಿ ಶಿಕ್ಷೆ

ನವದೆಹಲಿ, ನ. 16– ಕೊಲೆ ಪ್ರಕರಣದ ಸಂಬಂಧದಲ್ಲಿ ದೆಹಲಿಯ ಅಸಿಸ್ಟೆಂಟ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಬಕ್ಷಿಸಿಂಗ್ ಎಂಬುವವರಿಗೆ ಅಡಿಷನಲ್ ಸೆಷನ್ಸ್ ನ್ಯಾಯಾಧೀಶ ಶ್ರೀ ಎಂ.ಕೆ. ಚಾವ್ಲಾ ಅವರು ಇಂದು ಮರಣದಂಡನೆ ವಿಧಿಸಿದರು.

ಹೆಡ್ ಕಾನ್‌ಸ್ಟೆಬಲ್ ಸುಜನ್ ಸಿಂಗ್ ಮತ್ತು ಕಾನ್‌ಸ್ಟೆಬಲ್ ಧರಂಪಾಲ್ ಅವರೂ ಸೇರಿ ಒಂಬತ್ತು ಆರೋಪಿಗಳಲ್ಲಿ ಮೂವರಿಗೆ ನ್ಯಾಯಾಧೀಶರು ಜೀವಾವಧಿ ಶಿಕ್ಷೆ ವಿಧಿಸಿದರು. ತೀರ್ಪು ನೀಡಿದ ನ್ಯಾಯಾಧೀಶರು 'ಕಾನೂನು ಪಾಲಕರೇ ಕಾನೂನನ್ನು ಕೈಗೆತ್ತಿಕೊಂಡು, ನಿರಪರಾಧಿ ಹಾಗೂ ಶಾಂತಿಪ್ರಿಯ ನಾಗರಿಕನ ಕೊಲೆ ಮಾಡಿದ ಪ್ರಕರಣವಿದು' ಎಂದರು.

• ಅನಾಣ್ಯೀಕರಣಕ್ಕೆ ಒತ್ತಾಯ ಬೆಲೆ ಏರಿಕೆ ಬಗ್ಗೆ ಆತಂಕ

ನವದೆಹಲಿ, ನ.16– ಬೆಲೆಗಳು ಏರುತ್ತಿರುವುದನ್ನು ತಡೆಗಟ್ಟಲು ಅನಾಣ್ಯೀಕರಣ ಮಾಡಬೇಕೆಂದು ಇಂದು ಸಂಸದೀಯ ಕಾಂಗ್ರೆಸ್ ಪಕ್ಷದ ಸರ್ವಸದಸ್ಯರ ಸಭೆಯಲ್ಲಿ ಪ್ರಬಲವಾಗಿ ಒತ್ತಾಯಪಡಿಸಲಾಯಿತು.

ನಾಗಾಲೋಟದಿಂದ ಏರುತ್ತಿರುವ ಬೆಲೆಗಳನ್ನು ತಡೆಗಟ್ಟುವುದರಲ್ಲಿ ಸರ್ಕಾರ ವಿಫಲವಾಗಿರುವುದಕ್ಕೆ, ಒಬ್ಬರಾದ ಮೇಲೊಬ್ಬರಂತೆ ಸದಸ್ಯರು ತೀವ್ರ ಆತಂಕ ವ್ಯಕ್ತಪಡಿಸಿದರು.

ಬೆಲೆಗಳ ಏರಿಕೆಯನ್ನು ತಡೆಗಟ್ಟಲು ಸರ್ಕಾರ ಅಸಮರ್ಥವಾದಲ್ಲಿ ಕೊನೆಯಪಕ್ಷ ಈಗ ಇರುವ ಮಟ್ಟವನ್ನೇ ಕಾಯ್ದುಕೊಂಡು ಬರುವುದಕ್ಕೆ ಪ್ರಯತ್ನಿಸಬೇಕು ಎಂದೂ ಅವರು ಹೇಳಿದರು.

ಶಿಕ್ಷಣ ನೀತಿಯು ಸಂವಿಧಾನದ ಆಶಯಗಳನ್ನು ಜಾರಿಗೊಳಿಸುವ ಸಾಧನವಾಗಬೇಕು

ಶಿಕ್ಷಣ ವ್ಯವಸ್ಥೆ ಮತ್ತು ತಾತ್ವಿಕ ನೆಲೆ

ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಮಾನವ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿರುವ ಇಂದಿನ ಕಾಲಘಟ್ಟದಲ್ಲಿ, ಮೂಲಭೂತ ಹಕ್ಕಾಗಿರುವ ಶಿಕ್ಷಣವನ್ನು ಹಕ್ಕು ಆಧಾರಿತ ನೆಲೆಯಿಂದ ನೋಡಬೇಕು. ಸಮಾನ ಗುಣಾತ್ಮಕ ಶಿಕ್ಷಣ ಪಡೆಯುವುದು ಪ್ರತಿಯೊಂದು ಮಗುವಿನ ಮೂಲಭೂತ ಹಕ್ಕು. ಅದನ್ನು ಕೊಡಮಾಡುವ ಕರ್ತವ್ಯ, ಜವಾಬ್ದಾರಿ ಸರ್ಕಾರಗಳದ್ದಾಗಿರಬೇಕು. ಅಂತರ-ರಾಷ್ಟ್ರೀಯ ಕಾನೂನು, ಒಡಂಬಡಿಕೆ, ಒಪ್ಪಂದ, ಘೋಷಣೆಗಳಲ್ಲಿ ಮತ್ತು ಭಾರತದ ಸಂವಿಧಾನದ ಚೌಕಟ್ಟಿನಲ್ಲಿ ಶಾಲಾ ಶಿಕ್ಷಣವನ್ನು ಒಂದು ಮೂಲಭೂತ ಮಾನವ ಹಕ್ಕೆಂದು ಗುರುತಿಸಲಾಗಿದೆ. ಹೀಗಾಗಿ, ಸರ್ಕಾರಗಳು ಈ ಹಕ್ಕನ್ನು ಗೌರವಿಸಿ ಸಾಕಾರಗೊಳಿಸುವುದನ್ನು ಆದ್ಯತೆಯ ವಿಷಯವಾಗಿ ಪರಿಗಣಿಸಬೇಕು. ಈ ಕಾರಣದಿಂದ, ಶಿಕ್ಷಣ ನೀತಿಯ ತಾತ್ವಿಕ ನೆಲೆ ಏನಾಗಬೇಕೆಂದು ಚರ್ಚಿಸುವುದು ಈ ಲೇಖನದ ಆಶಯ.

ಮೊದಲನೆಯದಾಗಿ, ಸರ್ಕಾರಗಳು ಶಿಕ್ಷಣವನ್ನು ಒಂದು ಸಾಮಾಜಿಕ ಒಳಿತು ಹಾಗೂ ಸಾಮಾಜಿಕ ಪರಿವರ್ತನೆಯ ಸಾಧನವೆಂದು ಪರಿಗಣಿಸಬೇಕು. ಶಿಕ್ಷಣವು ಮಹತ್ತರ ಉದ್ದೇಶಕ್ಕಾಗಿ ದೀರ್ಘಕಾಲದಲ್ಲಿ ಒಂದು ನ್ಯಾಯಯುತ ಸಮಾಜವನ್ನು ಕಟ್ಟುವ ಸಾಧನವಾಗಬೇಕು. ಸಂವಿಧಾನದ ಮೂಲಭೂತ ಹಕ್ಕನ್ನು ಸಾಕಾರಗೊಳಿಸಲು ರೂಪಿಸಲಾಗಿರುವ ಶಿಕ್ಷಣ ಹಕ್ಕು ಕಾಯ್ದೆಯಲ್ಲಿ ಶಿಕ್ಷಣದ ಸಾರ್ವತ್ರೀಕರಣದ ಉದ್ದೇಶ ಮತ್ತು ಕಾರಣಗಳನ್ನು ವಿವರಿಸಲಾಗಿದೆ. ಅದರಲ್ಲಿರುವ ಪ್ರಮುಖ ಅಂಶಗಳು, ಸರ್ಕಾರಗಳು ರೂಪಿಸಬಹುದಾದ ನೀತಿಯ ಮುಂಗಾಣ್ಕೆ ಹಾಗೂ ಮಾರ್ಗದರ್ಶಿ ತತ್ವಗಳಾಗಬೇಕು.

'ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಪ್ರಜಾಪ್ರಭುತ್ವ ಎಂಬ ಮೌಲ್ಯಗಳನ್ನು ಕಾಯ್ದುಕೊಳ್ಳಬಹುದು ಹಾಗೂ ಎಲ್ಲರನ್ನೂ ಒಳಗೊಳ್ಳುವ ಪ್ರಾಥಮಿಕ ಶಿಕ್ಷಣದ ಮೂಲಕ ಒಂದು ನ್ಯಾಯಯುತ ಮಾನವೀಯ ಸಮಾಜವನ್ನು ಕಟ್ಟಿಕೊಳ್ಳಬಹುದು ಎಂಬ ನಂಬಿಕೆಯಿಂದ ಈ ಮಸೂದೆಯನ್ನು ರೂಪಿಸಲಾಗಿದೆ. ಅವಕಾಶವಂಚಿತ ಹಾಗೂ ದುರ್ಬಲ ವರ್ಗದ ಮಕ್ಕಳಿಗೆ ಉಚಿತ, ಕಡ್ಡಾಯ ಮತ್ತು ತೃಪ್ತಿದಾಯಕ ಶಿಕ್ಷಣದ ಅವಕಾಶ ಒದಗಿಸುವುದು ಸರ್ಕಾರಿ ಅಥವಾ ಸರ್ಕಾರಿ ಅನುದಾನಿತ ಶಾಲೆಗಳ ಜವಾಬ್ದಾರಿ ಮಾತ್ರವಲ್ಲ, ಅದರ ಜೊತೆಗೆ ಸರ್ಕಾರದ ಅನುದಾನವನ್ನು ಅವಲಂಬಿಸದ ಶಾಲೆಗಳ ಜವಾಬ್ದಾರಿಯೂ ಹೌದು' ಎಂದು ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದಾಗ ಪ್ರತಿಪಾದಿಸಲಾಯಿತು.

ಎರಡನೆಯದಾಗಿ, ಶಿಕ್ಷಣ ಹಕ್ಕು ಕಾಯ್ದೆಯನ್ನು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕೆ ಪೂರಕವಾಗಿ ಎಲ್ಲಾ ಮೂಲಸೌಕರ್ಯಗಳನ್ನು ನಿಗದಿತ ಅವಧಿಯಲ್ಲಿ ಒದಗಿಸುವುದು ಶಿಕ್ಷಣ ನೀತಿಯ ಆದ್ಯತೆಯಾಗಬೇಕು. ಅಂಗವಿಕಲರು ಸೇರಿದಂತೆ ಎಲ್ಲಾ ಮಕ್ಕಳ ಕಲಿಕೆಗೆ ಇದು ಒತ್ತು ನೀಡಬೇಕು. ಜೊತೆಗೆ, ಸ್ವಾತಂತ್ರ್ಯಪೂರ್ವದಲ್ಲಿ ಅಂದಿನ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಜಾಗತಿಕ ಅಗತ್ಯಗಳಿಗೆ ಅನುಗುಣವಾಗಿ ಇದ್ದ 8 ವರ್ಷಗಳ ಕಡ್ಡಾಯ ಶಿಕ್ಷಣವನ್ನು, ಇಂದಿನ ಅಗತ್ಯಗಳಿಗೆ ಅನುಗುಣವಾಗಿ ಹುಟ್ಟಿನಿಂದ 18 ವರ್ಷದವರೆಗಿನ ಎಲ್ಲಾ ಮಕ್ಕಳಿಗೆ ನೀಡಬೇಕು. ಜಾತಿ, ವರ್ಗಭೇದ, ಧರ್ಮ ಮತ್ತು ಸಾಮಾಜಿಕ- ಆರ್ಥಿಕ ತಾರತಮ್ಯ ಅಲ್ಲಿ ಇರಬಾರದು. ಈ ಮಕ್ಕಳ ಆರೈಕೆ, ರಕ್ಷಣೆ, ಪೋಷಣೆ, ಆರೋಗ್ಯ ಕಾಯ್ದುಕೊಳ್ಳುವಿಕೆ ಮತ್ತು ಗುಣಾತ್ಮಕ ಶಿಕ್ಷಣವನ್ನು ಒಂದು ಸಂವಿಧಾನಾತ್ಮಕ ಹಕ್ಕನ್ನಾಗಿ ಒಳಗೊಳ್ಳಲು ಅನುವಾಗುವಂತೆ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿ ತರುವ ಅಗತ್ಯವನ್ನು ಶಿಕ್ಷಣ ನೀತಿ ಪ್ರಸ್ತಾಪಿಸಬೇಕು.

ಶಿಕ್ಷಣವನ್ನು ಬರೀ ಓದು, ಬರಹದ ಲೆಕ್ಕಾಚಾರಕ್ಕೆ ಸೀಮಿತಗೊಳಿಸದೆ, ಸಮಾಜಕ್ಕೆ ಉತ್ತಮ ನಾಗರಿಕರನ್ನು ನೀಡುವ ಪ್ರಕ್ರಿಯೆಯನ್ನಾಗಿಸಬೇಕು. ಈ ದಿಸೆಯಲ್ಲಿ, ಹಾಲಿ ಮಾಹಿತಿ ಒದಗಿಸುವ ವಿಧಾನದ ಬದಲು ರಚನಾತ್ಮಕವಾದ ಹಾಗೂ ಪ್ರಜಾಸತ್ತಾತ್ಮಕ ಚರ್ಚೆಯ ಮೂಲಕ, ಈಗಾಗಲೇ ಮಕ್ಕಳಲ್ಲಿರುವ ಭಾಷಾ ಸಾಮರ್ಥ್ಯ, ಹೊಳಹು, ಕಲಿಕೆ ಮತ್ತು ಅನುಭವಗಳನ್ನು ಆಧರಿಸಿದ ಜ್ಞಾನವನ್ನು ಕಟ್ಟಿಕೊಡುವ ಹೊಸ ವಿಧಾನಗಳನ್ನು ಬಳಸಬೇಕು. ಇದಕ್ಕಾಗಿ, ವೃತ್ತಿ ಪರಿಣತಿಯಿರುವ ಸಮರ್ಥ ಶಿಕ್ಷಕರನ್ನು ರೂಪಿಸುವುದು ನೀತಿಯ ಜೀವಾಳವಾಗಬೇಕು. ಶಿಕ್ಷಣ ಮತ್ತು ಅದು ಕೊಡಮಾಡುವ ಎಲ್ಲಾ ತರಗತಿ ಪ್ರಕ್ರಿಯೆಗಳು ಪ್ರಜಾಪ್ರಭುತ್ವೀಕರಣ ಶಿಕ್ಷಣ ನೀತಿಯ ಬುನಾದಿಯಾಗಬೇಕು.

ಮೂರನೆಯದಾಗಿ, ಪೂರ್ವ ಪ್ರಾಥಮಿಕದಿಂದ 12ನೇ ತರಗತಿಯವರೆಗಾದರೂ ಶಿಕ್ಷಣವು ಮಾತೃಭಾಷೆ ಅಥವಾ ಪರಿಸರ ಭಾಷೆಯಲ್ಲಿದ್ದು, ಇಂಗ್ಲಿಷ್ ಭಾಷೆ ಅಥವಾ ನಮ್ಮ ಸಂವಿಧಾನದಲ್ಲಿ ಗುರುತಿಸಿರುವ 22 ರಾಷ್ಟ್ರೀಯ ಭಾಷೆಗಳ ಪೈಕಿ ಮಗು ಕಲಿಯಲು ಇಚ್ಛಿಸುವ ಒಂದು ಅಥವಾ ಹೆಚ್ಚಿನ ಭಾಷೆಗಳನ್ನು ಸಮರ್ಥವಾಗಿ ಕಲಿಸುವುದು ಶಿಕ್ಷಣ ನೀತಿಯ ಆಶಯವಾಗಬೇಕು. ಈ ನೀತಿಯು ಎಲ್ಲಾ ಬಗೆಯ ಪಠ್ಯಕ್ರಮಗಳ ಶಾಲೆಗಳಲ್ಲಿ ಸಮಾನವಾಗಿ ಜಾರಿಯಾಗಬೇಕು. ಮೌಲ್ಯಾಂಕನದ ಹೆಸರಿನಲ್ಲಿ ಅನಗತ್ಯವಾಗಿ ಪರೀಕ್ಷೆಗಳನ್ನು ನಡೆಸುವ ಬದಲು ವ್ಯಾಪಕ ಹಾಗೂ ನಿರಂತರ ಮೌಲ್ಯಮಾಪನದ (ಸಿಸಿಇ) ಆಧಾರದಲ್ಲಿ ಮಕ್ಕಳ ಕಲಿಕೆಯನ್ನು ಶಾಲಾ ಹಂತದಲ್ಲಿಯೇ ಮೌಲ್ಯಾಂಕನ ಮಾಡಿ, ಪರಿಣಾಮಕಾರಿಯಾಗಿ ಕಲಿಸಲು ಎಲ್ಲಾ ಅಗತ್ಯ ಕ್ರಮ ವಹಿಸಬೇಕು. ಇದು ಒಂದು ಉತ್ತಮ ಶಿಕ್ಷಣ ನೀತಿಯ ಬುನಾದಿ ತತ್ವವಾಗಬೇಕು. ದಿನನಿತ್ಯ ಈ ಅಂಶಗಳ ಮೇಲುಸ್ತುವಾರಿಗಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಬಲವರ್ಧನೆಗೊಳಿಸಲು ಪರಿಣಾಮಕಾರಿ ಕ್ರಮಗಳನ್ನು ಸೂಚಿಸುವುದು ಶಿಕ್ಷಣ ನೀತಿಯ ಕಾರ್ಯಸೂಚಿಯಾಗಬೇಕು.

ನಾಲ್ಕನೆಯದಾಗಿ, ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಖಾಸಗಿ ವಲಯದಲ್ಲಿ ಉತ್ತರದಾಯಿತ್ವ ಮತ್ತು ಪಾರದರ್ಶಕತೆ ತರಲು ಕಟ್ಟುನಿಟ್ಟಾದ ಸಮಗ್ರ ಕಾನೂನನ್ನು ರೂಪಿಸುವುದು ಶಿಕ್ಷಣ ನೀತಿಯ ಭಾಗವಾಗಬೇಕು. ಬಹುತೇಕ ರಾಜ್ಯಗಳಲ್ಲಿ ಈ ವಿಧಾನ ಈಗಾಗಲೇ ಜಾರಿಯಲ್ಲಿದೆ. ಖಾಸಗಿ ಶಾಲೆಗಳು ಜನಸಾಮಾನ್ಯರಿಗೆ ಹೊಣೆಗಾರಿಕೆ ಮತ್ತು ಉತ್ತರದಾಯಿತ್ವವನ್ನು ಹೊಂದಿರಲು ಅನುವಾಗುವಂತೆ ಶುಲ್ಕ ನಿಯಂತ್ರಣ, ಗುಣಾತ್ಮಕ ಶಿಕ್ಷಣಕ್ಕಾಗಿ ಕನಿಷ್ಠ ಪ್ರಮಾಣಕಗಳು, ಮಾನದಂಡಗಳು ಮತ್ತು ಪೋಷಕರ ಪಾಲ್ಗೊಳುವಿಕೆಗೆ ಪೂರಕವಾಗುವ ಸಾಂಸ್ಥಿಕ ರಚನೆಯನ್ನು ಇದು ಒಳಗೊಂಡಿರಬೇಕು.

ಐದನೆಯದಾಗಿ, ಮೂಲಭೂತ ಹಕ್ಕಾದ ಹಾಗೂ ಸಾಮಾಜಿಕ ಒಳಿತಿಗೆ ಪೂರಕವಾದ ಶಿಕ್ಷಣವನ್ನು ಸಾಕಾರಗೊಳಿಸುವುದರ ಭಾಗವಾಗಿ ಸರ್ಕಾರವು ಅಗತ್ಯ ಸಂಪನ್ಮೂಲಗಳನ್ನು ಒದಗಿಸಬೇಕು. ಈ ದಿಸೆಯಲ್ಲಿ ರಾಜ್ಯ ಸರ್ಕಾರಗಳು ತಮ್ಮ ಆಯವ್ಯಯದಲ್ಲಿ ಕನಿಷ್ಠ ಶೇಕಡ 20ರಷ್ಟನ್ನಾದರೂ ಶಿಕ್ಷಣಕ್ಕೆ ಮೀಸಲಿಡುವುದು ಶಿಕ್ಷಣ ನೀತಿಯ ಆಶಯವಾಗಬೇಕು. ಜೊತೆಗೆ, ಸರ್ಕಾರವು ಸಮಾನ ಗುಣಮಟ್ಟದ ಶಿಕ್ಷಣ ಒದಗಿಸುವ ಪ್ರಕ್ರಿಯೆಗೆ ತಾನು ಒದಗಿಸುವ ಸಂಪನ್ಮೂಲಗಳಿಗೆ ಪೂರಕವಾಗಿ ಹಾಗೂ ಹೆಚ್ಚುವರಿಯಾಗಿ ಸಂಪನ್ಮೂಲಗಳನ್ನು ಕ್ರೋಡೀಕರಿಸುವ ಪ್ರಯತ್ನಕ್ಕೆ ಮುಂದಾಗಬೇಕು. ಅದರಂತೆ, ನಾಡಿನ ಕಲಿಕಾ ವ್ಯವಸ್ಥೆಯನ್ನು ಕಟ್ಟಲು ಸ್ವಯಂಪ್ರೇರಿತವಾಗಿ ಭಾಗವಹಿಸಲು ಇಚ್ಛಿಸುವ ಖಾಸಗಿ ವ್ಯಕ್ತಿಗಳು, ಸಂಸ್ಥೆಗಳು, ಕಾರ್ಪೊರೇಟ್ ಕಂಪನಿಗಳಿಗೆ ಅವಕಾಶ ಕಲ್ಪಿಸಬೇಕು. ಈ ಮೂಲಕ, ಸರ್ಕಾರ ಸ್ಥಾಪಿಸುವ ಸಾರ್ವಜನಿಕ ಸಮಾನ ಶಾಲಾ ದತ್ತಿ ನಿಧಿಗೆ ವ್ಯಕ್ತಿ ಅಥವಾ ಕಂಪನಿಗಳು ತಮ್ಮ ಸಿಎಸ್‌ಆರ್ ದೇಣಿಗೆಯನ್ನು ನೀಡಲು ಅವಕಾಶ ಇರಬೇಕು.

ಕೊನೆಯದಾಗಿ, ಸರ್ಕಾರವು ಕಾಲದಿಂದ ಕಾಲಕ್ಕೆ ರೂಪಿಸುವ ಶಾಲಾ ಶಿಕ್ಷಣ ನೀತಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು, ಮೇಲುಸ್ತುವಾರಿ ಮಾಡಲು ಮತ್ತು ಕಾಲಕಾಲಕ್ಕೆ ಪರಾಮರ್ಶಿಸಿ ಸೂಕ್ತ ಬದಲಾವಣೆಗಳ ಮೂಲಕ ಬಲಿಷ್ಠ ಶಾಲಾ ಶಿಕ್ಷಣ ವ್ಯವಸ್ಥೆ ರೂಪಿಸಲು ಒಂದು ಶಾಶ್ವತ ಶಾಲಾ ಶಿಕ್ಷಣ ಆಯೋಗ ಅಥವಾ ಪ್ರಾಧಿಕಾರ ರಚನೆಯಾಗಬೇಕು. ಶಿಕ್ಷಣ ನೀತಿಯು ಇಂತಹ ಬಲಿಷ್ಠ ಆಡಳಿತಾತ್ಮಕ ವ್ಯವಸ್ಥೆಗೆ ಪ್ರಬಲವಾಗಿ ಶಿಫಾರಸು ಮಾಡಬೇಕು. ಒಟ್ಟಾರೆ, ಶಿಕ್ಷಣ ನೀತಿಯು ಸಂವಿಧಾನದ ಆಶಯದಂತೆ, ಭಾರತವನ್ನು ಒಂದು ಬಲಿಷ್ಠ ಸಾರ್ವಭೌಮ, ಸಮಾಜವಾದಿ, ಜಾತ್ಯತೀತ, ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿಸುವ ಮೂಲಕ ಸಂವಿಧಾನದ ಪೀಠಿಕೆಯಲ್ಲಿನ ಎಲ್ಲಾ ವಾಗ್ದಾನಗಳನ್ನು ನಾಗರಿಕರಿಗೆ ಕೊಡಮಾಡುವ ಒಂದು ಸಾಧನವಾಗಬೇಕು.

ಚುರುಮುರಿ

ಕೈ-ಗಡ ಶಾಸಕರು!

• ಚಂದ್ರಕಾಂತ ವಡ್ಡು

'ಹಬ್ಬ ಜೋರಾ?' ಆ ಕಡೆಯಿಂದ ಬದ್ರಿ, 'ಕಾಫಿ ಆಯ್ತಾ' ಟೋನ್‌ನಲ್ಲಿ ಯಾಂತ್ರಿಕವಾಗಿ ಕೇಳಿದ.

'ಈ ದುಬಾರಿ ಕಾಲ್ದಾಗ ಎಲ್ಲಿಯ ಜೋರು ಮಾರಾಯ?' ತಿಂಗಳೇಶನ ಬೋರು ದನಿ.

'ಎಷ್ಟೇ ದುಬಾರಿ ಆಗಲಿ, ಹೋಳಿಗೆಗೆ ಹೂರಣ ಕಡಿಮೆಯಾದ್ರೂ ಪಟಾಕಿ ಸದ್ದು ಮಾತ್ರ ಯಾವಾಗ್ಲೂ ಜೋರು'.

'ಹೌದೌದು, ಈ ಪಟಾಕಿ ಸದ್ದಿನ ಜೊತೆ 'ಕೇಂದ್ರದಲ್ಲಿ ನರೇಂದ್ರ... ರಾಜ್ಯದಲ್ಲಿ ವಿಜಯೇಂದ್ರ' ಸದ್ದು ಕೂಡ ಜೋರಾಗಿದೆ'.

'ಪಾಪ, ಯಾವ ಸ್ಥಾನಮಾನಕ್ಕೂ ಆಸೆಪಡದ ಯುವಕ ಮನೆಗೆ ಸುಣ್ಣಬಣ್ಣ ಬಳಿದು ತನ್ನಷ್ಟಕ್ಕೆ ತಾನು ಹಬ್ಬದ ಸಿದ್ಧತೆಯಲ್ಲಿದ್ದನಂತೆ. ಅಶರೀರವಾಣಿ 'ನೀನೇ ಅಧ್ಯಕ್ಷ' ಎಂದು ನುಡಿಯಿತಂತೆ! ಅಧ್ಯಕ್ಷರು ಹಿರಿಯರ 'ಕೈ'ಹಿಡಿದು ಸಲಹೆ ಕೇಳಲು ಹೊರಟರೆ, ವಂಚಿತರು 'ಕೈಕೈ' ಹಿಸುಕಿಕೊಳ್ಳಬೇಕಾಯಿತು'.

'ಅವರದೂ ರಾಜ್ಯೋತ್ಸವ ಪ್ರಶಸ್ತಿಯ ಅಂತಿಮ ಪಟ್ಟಿಯಿಂದ 'ಕೈ'ಬಿಟ್ಟ ಸಾಹಿತಿಗಳ ಸ್ಥಿತಿ ಅನ್ನಬಹುದು'.

'ಹಾಗಾಗಿಯೇ ಜೈ ವಿಜಯೇಂದ್ರ ಘೋಷಣೆ ಜೊತೆಗೆ ಜೈ ಜೈ ಅಸಂತೋಷಿಮಾ ದನಿಗಳೂ ಅಲ್ಲಲ್ಲಿ ಕೇಳಿಬರುತ್ತಿವೆ. ಯಾರು ಯಾರ ಕೈಗೊಂಬೆ, ಯಾರು ಯಾರ ಕಾಲ್ಚೆಂಡು ತಿಳಿಯೋದೇ ಕಷ್ಟ'.

'ಪಕ್ಷ ಗೆಲ್ಲೋದು ರಾಜ್ಯಾಧ್ಯಕ್ಷರಿಂದ ಅಲ್ಲ, ಬೂತ್ ಅಧ್ಯಕ್ಷರಿಂದ ಎಂದು ಹೇಳುವ ಮೂಲಕ ಅಧ್ಯಕ್ಷರು ಪಕ್ಷದೊಳಗಿನ ವಿರೋಧಿಗಳ ಲಕ್ಷ್ಯವನ್ನು ಬೂತ್ ಕಡೆಗೆ ಹೊರಳಿಸಿದ್ದಾರೆ. ಕೈಗೆ ಸ್ಥಾನ ಸಿಗುವುದೇ ತಡ ವಿಜಯೇಂದ್ರ, ಕೈ-ಕಡೆಗಿನ ವಲಸೆ ತಡೆಯಲು ಕೈಹಾಕಿದ್ದಾರೆ. ಅವರನ್ನು ಕೊಡುಗೈದೊರೆ ಅಂತಾರೆ ಕಾರ್ಯಕರ್ತರು'.

'ಅದೇನೋ ಸರಿ, ಕಳೆದ ಬಾರಿ ಸರ್ಕಾರ ರಚಿಸಲು 'ಕೈ'ಗಡ ತಂದಿದ್ದರಲ್ಲ, ಆ ಶಾಸಕರ ಪಾಡೇನು?'

'ಅವರೇನು ಸಾಮಾನ್ಯರಲ್ಲ; ಕೊಡು'ಕೈ' ದೊರೆಗಳು! ಅವಕಾಶ ಸಿಕ್ಕರೆ ಒಂದು 'ಕೈ' ನೋಡುವವರೇ. ಅವರಿಗೆ 'ಕೈ'ಲಾಸವಾಸವೇ ಪ್ರಿಯವೆನಿಸಿದರೆ ಕೈ-ಕೋಳ ಹಾಕಲು ಸಾಧ್ಯವೇ?'

ಸಂಗತ

ಗ್ರಂಥಾಲಯ ಸಪ್ತಾಹ: ನಿತ್ಯದ ಹಬ್ಬವಾಗಲಿ

ಸಾರ್ವಜನಿಕ ಗ್ರಂಥಾಲಯಗಳು ನಾಗರಿಕರಲ್ಲಿ ಪುಸ್ತಕ ಪ್ರೀತಿಯನ್ನು ಹೆಚ್ಚಿಸಲು ಅಗತ್ಯವಾದ ಯೋಜನೆಗಳನ್ನು ರೂಪಿಸಬೇಕಾಗಿದೆ

• ರಾಜಕುಮಾರ ಕುಲಕರ್ಣಿ

ದೇಶದಲ್ಲಿ ಪ್ರತಿವರ್ಷ ನ. 14ರಿಂದ 20ರವರೆಗೆ 'ರಾಷ್ಟ್ರೀಯ ಗ್ರಂಥಾಲಯ ಸಪ್ತಾಹ' ಆಚರಿಸಲಾಗುತ್ತದೆ. ಈ ಅವಧಿಯಲ್ಲಿ ಪುಸ್ತಕ ಪ್ರದರ್ಶನ, ವಿಶೇಷ ಉಪನ್ಯಾಸದಂತಹ ಕಾರ್ಯಕ್ರಮಗಳನ್ನು ಗ್ರಂಥಾಲಯಗಳಲ್ಲಿ ಆಯೋಜಿಸಲಾಗುತ್ತದೆ. ಗ್ರಂಥಾಲಯ ಮತ್ತು ಪುಸ್ತಕಗಳ ಮಹತ್ವವನ್ನು ಸಾರ್ವಜನಿಕರಿಗೆ ತಿಳಿಸಿಕೊಡುವುದು ಇದರ ಉದ್ದೇಶ. ವಿವಿಧ ವಯೋಮಾನದ ಮತ್ತು ಹಿನ್ನೆಲೆಯ ಓದುಗರು ಭೇಟಿ ನೀಡುವ ಈ ತಾಣಗಳಲ್ಲಿ, ಗ್ರಂಥಾಲಯ ಸಪ್ತಾಹದ ಆಚರಣೆಗೆ ಹೆಚ್ಚು ಮಹತ್ವವಿದೆ.

ಅಗತ್ಯವಿರುವ ಪುಸ್ತಕಗಳನ್ನು ವೈಯಕ್ತಿಕವಾಗಿ ಖರೀದಿಸಿ ಓದುವುದು ಆರ್ಥಿಕವಾಗಿ ಕಷ್ಟಸಾಧ್ಯವಾದ ಕೆಲಸ. ಅದಕ್ಕೆಂದೇ ಓದುಗರ ಅಭಿರುಚಿ ಮತ್ತು ಅಗತ್ಯಕ್ಕೆ ಅನುಗುಣವಾಗಿ ಪುಸ್ತಕಗಳು ದೊರೆಯುವ ವ್ಯವಸ್ಥೆಯನ್ನು ಗ್ರಂಥಾಲಯಗಳಲ್ಲಿ ಮಾಡಲಾಗಿದೆ. ಜನರಲ್ಲಿ ಓದಿನಂತಹ ಸುಸಂಸ್ಕೃತ ಹವ್ಯಾಸವನ್ನು ಬೆಳೆಸುವ ದಿಸೆಯಲ್ಲಿ ಇವುಗಳ ಪಾತ್ರ ಪ್ರಶಂಸಾರ್ಹ. 'ಜನಸಾಮಾನ್ಯರ ವಿಶ್ವವಿದ್ಯಾಲಯ'ಗಳೆಂದು ಪರಿಗಣಿಸಲಾಗುವ ಸಾರ್ವಜನಿಕ ಗ್ರಂಥಾಲಯಗಳನ್ನು ಆರ್ಥಿಕವಾಗಿ ಸದೃಢಗೊಳಿಸಲು ದೇಶದಲ್ಲಿ ಗ್ರಂಥಾಲಯ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಸಾರ್ವಜನಿಕರಿಂದ ಸಂಗ್ರಹವಾಗುವ ಆಸ್ತಿ ತೆರಿಗೆಯಲ್ಲಿ ಶೇ 6ರಷ್ಟನ್ನು ಗ್ರಂಥಾಲಯಗಳ ಅಭಿವೃದ್ಧಿಗಾಗಿ ಖರ್ಚು ಮಾಡಬೇಕೆಂದು ಕಾಯ್ದೆಯಲ್ಲಿ ಉಲ್ಲೇಖಿಸಲಾಗಿದೆ.

ಸಾರ್ವಜನಿಕ ಗ್ರಂಥಾಲಯಗಳು ಇಂದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎನ್ನುವ ಆರೋಪ ಇದೆ. ಕೆಲವು ದಶಕಗಳ ಹಿಂದಿನ ಗ್ರಂಥಾಲಯಗಳಿಗೆ ಹೋಲಿಸಿದರೆ ಇಂದು ಕಟ್ಟಡ ಮತ್ತು ಪೀಠೋಪಕರಣಗಳು ಆಧುನೀಕರಣಗೊಂಡಿರುವುದು ಢಾಳಾಗಿ ಗೋಚರಿಸುತ್ತದೆ. ವಿಪರ್ಯಾಸದ ಸಂಗತಿ ಎಂದರೆ, ಓದುಗರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿದೆ. ಇದಕ್ಕೆ ಗ್ರಂಥಾಲಯಗಳಲ್ಲಿ ಗುಣಾತ್ಮಕ ಪುಸ್ತಕಗಳು ಅಗತ್ಯ ಪ್ರಮಾಣದಲ್ಲಿ ಲಭ್ಯವಿಲ್ಲದಿರುವುದೇ ಕಾರಣ ಎನ್ನುವುದು ಓದುಗರ ಅಭಿಪ್ರಾಯ. ಓದುಗರ ಅಭಿರುಚಿ ಮತ್ತು ಅಗತ್ಯಕ್ಕೆ ಅನುಗುಣವಾದ ಪುಸ್ತಕಗಳು ಅಲ್ಲಿ ಲಭ್ಯವಾಗುವಂತೆ ಆಗಬೇಕು.

ಸಾರ್ವಜನಿಕ ಗ್ರಂಥಾಲಯಗಳಿಗಾಗಿ ಸರ್ಕಾರವು ನಿಯಮಿತವಾಗಿ ಪುಸ್ತಕಗಳನ್ನು ಖರೀದಿಸುವುದಿಲ್ಲ ಎಂಬುದು ಪ್ರಕಾಶಕರ ಅಳಲು. ಓದಿನ ಸಂಸ್ಕೃತಿ ಕ್ಷೀಣಿಸುತ್ತಿರುವ ಈ ಸಂದರ್ಭದಲ್ಲಿ ಸರ್ಕಾರವು ಪುಸ್ತಕಗಳ ಖರೀದಿಗೆ ನೆರವು ನೀಡುವಲ್ಲಿ ವಿಳಂಬ ಮಾಡುವುದರಿಂದ, ಈಗಾಗಲೇ ಓದುಗರು ಮತ್ತು ಪುಸ್ತಕಗಳ ನಡುವೆ ಸೃಷ್ಟಿಯಾಗಿರುವ ಕಂದಕವನ್ನು ಮತ್ತಷ್ಟು ವಿಸ್ತರಿಸಲು ಆಹ್ವಾನ ನೀಡಿದಂತೆ ಆಗುತ್ತದೆ.

ಕಟ್ಟಡ, ಪೀಠೋಪಕರಣಗಳು, ಪುಸ್ತಕಗಳಷ್ಟೇ ಅಲ್ಲಿನ ಸಿಬ್ಬಂದಿಯ ಪಾತ್ರವೂ ಮಹತ್ವದ್ದು. ಓದುಗರ ಸಂಖ್ಯೆಯನ್ನು ಹೆಚ್ಚಿಸುವುದರ ಜೊತೆಗೆ ಪುಸ್ತಕಗಳ ವ್ಯಾಪಕ ಬಳಕೆಗೆ ಪೂರಕವಾದ ವಾತಾವರಣವನ್ನು ಗ್ರಂಥಾಲಯದಲ್ಲಿ ರೂಪಿಸಬೇಕು. ಪುಸ್ತಕಗಳನ್ನು ಕಣ್ಣಿಗೆ ಚೆಂದ ಕಾಣುವಂತೆ ಜೋಡಿಸಿಡುವುದಕ್ಕಿಂತ ಓದಿ ಅರಗಿಸಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಪುಸ್ತಕವೊಂದು ಎಷ್ಟೊಂದು ಪ್ರಮಾಣದಲ್ಲಿ ಓದಿಸಿಕೊಂಡಿದೆ ಎನ್ನುವುದನ್ನು ದಾಖಲೆಗಳ ಮೂಲಕ ಹೇಳಲು ಸಾಧ್ಯವಿಲ್ಲ, ಅದರ ಭೌತಿಕ ಸ್ವರೂಪವೇ ಅದನ್ನು ಹೇಳುತ್ತದೆ. ಕಥೆಗಾರ ಎಸ್.ದಿವಾಕರ್ 'ಪುಸ್ತಕ ಓದಿದ್ದಕ್ಕೆ ಪುಸ್ತಕವೇ ಸಾಕ್ಷಿ' ಎನ್ನುವ ತಮ್ಮ ಪ್ರಬಂಧದಲ್ಲಿ ಹೀಗೆ ಹೇಳಿದ್ದಾರೆ- 'ಪುಸ್ತಕಗಳ ರಟ್ಟು ಕಿತ್ತುಹೋಗಿರಬಹುದು, ಅವುಗಳ ಪುಟಗಳು ನಾಯಿಕಿವಿಗಳಾಗಿರಬಹುದು, ಹೊಲಿಗೆಯೋ ಅಂಟೋ ಬಿಚ್ಚಿಕೊಂಡು ಕೆಲವು ಹಾಳೆಗಳೇ ಸಡಿಲವಾಗಿರಬಹುದು. ಅವು ಮತ್ತೆ ಮತ್ತೆ ಓದಿಸಿಕೊಂಡು ತಮ್ಮ ಸುಸ್ವರೂಪ ಕಳೆದುಕೊಂಡ ಪುಸ್ತಕಗಳು. ಅಂಥ ಪುಸ್ತಕಗಳ ಮಾರ್ಜಿನ್ನಿನ ತುಂಬ ಪೆನ್ಸಿಲಿನಲ್ಲೋ ಪೆನ್ನಲ್ಲೋ ಗೀಚಿರುವ ಬರಹಗಳಿದ್ದರೆ ಆಶ್ಚರ್ಯವಿಲ್ಲ'.

ಹಿಂದೆಲ್ಲ ಮನೆಬಾಗಿಲಿಗೆ ಪುಸ್ತಕಗಳನ್ನು ಕೊಂಡೊಯ್ದು ಓದುಗರಿಗೆ ತಲುಪಿಸುವ 'ಸಂಚಾರಿ ಗ್ರಂಥಾಲಯ' ಸೇವೆ ಚಾಲ್ತಿಯಲ್ಲಿತ್ತು. ಇದರಿಂದ ವಿಶೇಷವಾಗಿ ಗೃಹಿಣಿಯರಿಗೆ ಬಿಡುವಿನ ವೇಳೆಯಲ್ಲಿ ಪುಸ್ತಕಗಳನ್ನು ಓದಲು ಹೆಚ್ಚು ಅನುಕೂಲವಾಗುತ್ತಿತ್ತು. ಆದರೆ ಇಂದು ಈ ಸೇವೆ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. ಅದನ್ನು ಪುನರಾರಂಭಿಸುವುದು ಓದಿನ ಅಭಿರುಚಿಯನ್ನು ಹೆಚ್ಚಿಸುವ ದೃಷ್ಟಿಯಿಂದ ಅಗತ್ಯ. ಸಾರ್ವಜನಿಕರು ಕೂಡ ಪುಸ್ತಕ ಪ್ರೀತಿಯನ್ನು ಮೈಗೂಡಿಸಿಕೊಳ್ಳುವುದು ಮುಖ್ಯ. ಸಾರ್ವಜನಿಕ ಸಭೆ ಸಮಾರಂಭಗಳು ಮಾತ್ರವಲ್ಲದೆ ಕೌಟುಂಬಿಕ ಸಮಾರಂಭಗಳಲ್ಲೂ ಪುಸ್ತಕಗಳನ್ನು ಉಡುಗೊರೆಯಾಗಿ ನೀಡುವ ಪದ್ಧತಿ ಆಚರಣೆಗೆ ಬರಬೇಕು.



ಮೊಬೈಲ್ ಫೋನಿನ ವ್ಯಾಪಕ ಬಳಕೆಯು ಓದಿನ ಆಸಕ್ತಿ ಕ್ಷೀಣಿಸುತ್ತಿರುವುದಕ್ಕೆ ಇರುವ ಪ್ರಬಲ ಕಾರಣಗಳಲ್ಲೊಂದು. ಎಲ್ಲ ವಯೋಮಾನದವರಲ್ಲಿ ಮೊಬೈಲ್ ಬಳಕೆಯ ವ್ಯಾಮೋಹ ಸೋಂಕಿನಂತೆ ಹರಡುತ್ತಿದೆ. ಪುಸ್ತಕಗಳ ಓದಿನ ಹವ್ಯಾಸವನ್ನು ಹೆಚ್ಚಿಸುವುದೇ ಈ ಸಮಸ್ಯೆಯ ಪರಿಹಾರಕ್ಕಿರುವ ಪರ್ಯಾಯ ಮಾರ್ಗ. ಈ ದಿಸೆಯಲ್ಲಿ ಸಾರ್ವಜನಿಕ ಗ್ರಂಥಾಲಯಗಳು ನಾಗರಿಕರಲ್ಲಿ ಪುಸ್ತಕ ಪ್ರೀತಿಯನ್ನು ಹೆಚ್ಚಿಸಲು ಅಗತ್ಯ ಯೋಜನೆಗಳನ್ನು ರೂಪಿಸಬೇಕು. ಯೋಜನೆಗಳನ್ನು ಅನುಷ್ಠಾನಗೊಳಿಸಲು ಗ್ರಂಥಾಲಯ ಇಲಾಖೆಗೆ ಆರ್ಥಿಕ ನೆರವು ನೀಡುವುದು ಸರ್ಕಾರದ ಸಾಂಸ್ಕೃತಿಕ ಜವಾಬ್ದಾರಿಯಾಗಬೇಕು. ಜೊತೆಗೆ, ಗ್ರಂಥಾಲಯ ಸಪ್ತಾಹ ಬರೀ ಏಳು ದಿನಗಳ ಆಚರಣೆಯಾಗದೆ ಅದು ದಿನನಿತ್ಯದ ಹಬ್ಬವಾಗಬೇಕು.

ಲೇಖಕ: ಮುಖ್ಯ ಗ್ರಂಥಪಾಲಕ, ಎಸ್‌ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ, ಬಾಗಲಕೋಟೆ

ವಾಚಕರ ವಾಣಿ

ತಂದೆಯ ಹಾದಿಯಲ್ಲಿಯೇ ಪುತ್ರ ಸಾಗಲಿ

ಬಿ.ವೈ.ವಿಜಯೇಂದ್ರ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರಾಗಿ ನೇಮಕಗೊಂಡದ್ದು ಪಕ್ಷದ ಕೆಲ ಹಿರಿಯರ ಅಸಮಾಧಾನಕ್ಕೆ ಕಾರಣವಾಗಿರುವುದು ಸತ್ಯ. 'ಮತ್ತೆ ಯಡಿಯೂರಪ್ಪ ಕೈಗೆ ಬಿಜೆಪಿ' ಎಂಬ ಲೇಖನದಲ್ಲಿ (ಪ್ರ.ವಾ., ನ.16) ವೈ.ಗ.ಜಗದೀಶ್ ಅವರು ತಿಳಿಸಿರುವಂತೆ, ಕುಟುಂಬ ರಾಜಕೀಯ, ಭ್ರಷ್ಟಾಚಾರಕ್ಕಿಂತ ಕೋಮುವಾದವೇ ಹೆಚ್ಚು ಅಪಾಯಕಾರಿ ಎಂಬುದು ಒಪ್ಪಿಕೊಳ್ಳುವಂಥದ್ದು. ಯಡಿಯೂರಪ್ಪ ಪಕ್ಷದ ಮೇಲೆ ಹಿಡಿತ ಸಾಧಿಸಿ ಅಧಿಕಾರಕ್ಕೇರಿದ್ದು ಹಿಂದುತ್ವದ ಪ್ರತಿಪಾದನೆಯಿಂದಲ್ಲ. ಅವರು ಇಲ್ಲಿಯವರೆಗೆ ಒಮ್ಮೆಯೂ ಅಲ್ಪಸಂಖ್ಯಾತರ ವಿರುದ್ಧ ಮಾತನಾಡಿಲ್ಲ. 'ಹಿಂದೂ ಹುಲಿ', 'ಹಿಂದೂ ಫೈರ್ ಬ್ರ್ಯಾಂಡ್' ಎಂದೆಲ್ಲ ಕರೆಸಿಕೊಳ್ಳುತ್ತಿರುವವರು ಪಕ್ಷವನ್ನು ಅಧಿಕಾರಕ್ಕೆ ತಂದರೇ? ತರಲಾರರು ಎಂಬುದು ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸಾಬೀತಾಗಿದೆ. ಯಡಿಯೂರಪ್ಪ ಅವರ ಹಾದಿಯಲ್ಲಿಯೇ ಅವರ ಪುತ್ರನೂ ಸಾಗಬೇಕಾಗಿದೆ. ಹೀನಾಯ ಮಟ್ಟಕ್ಕೆ ಇಳಿದಿರುವ ಪಕ್ಷವನ್ನು ಮುನ್ನಡೆಸುವಲ್ಲಿ ಇದ್ದುದರಲ್ಲಿಯೇ ವಿಜಯೇಂದ್ರ ಉತ್ತಮ. ಅವರೊಂದಿಗಿನ ಭಿನ್ನಾಭಿಪ್ರಾಯವನ್ನು ಬದಿಗೊತ್ತಿ ಉಳಿದವರು ಕೈಜೋಡಿಸುವುದು ಪಕ್ಷದ ದೃಷ್ಟಿಯಿಂದ ಕ್ಷೇಮ.

ಶಿವಕುಮಾರ ಬಂಡೋಳಿ, ಹುಣಸಗಿ

ಚೆನ್ನಾಗಿ ಆಡುವವನೇ ಸ್ಟಾರ್...

'ಸವಾಲು ಮೆಟ್ಟಿದ ಕೂಲ್ ಕೋಚ್' ಲೇಖನದಲ್ಲಿ ಕೋಚ್ ರಾಹುಲ್ ದ್ರಾವಿಡ್ ಅವರ ಕುರಿತು ಗಿರೀಶ ದೊಡ್ಡಮನಿ ಅವರು ಹೇಳಿರುವ (ಪ್ರ.ವಾ., ನ. 13) ಎಲ್ಲ ವಿಷಯಗಳನ್ನೂ ಒಪ್ಪಲಾಗದು. ಕ್ರಿಕೆಟ್‌ನಲ್ಲಿ ಗೆಲುವಿಗೆ ಒಬ್ಬರೇ ಕಾರಣರಲ್ಲ, ಹಾಗೇ ಸೋಲಿಗೆ ಸಹ. ವಿಶ್ವಕಪ್‌ನಲ್ಲಿ ಭಾರತದ ಈಗಿನ ಗೆಲುವುಗಳಿಗೆ ಒಟ್ಟಾರೆ ತಂಡದ ಸ್ಥಿರ ಪ್ರದರ್ಶನ ಕಾರಣವಾಗಿದೆ. ದ್ರಾವಿಡ್ ಅವರು ಕೋಚ್ ಆದ ಪ್ರಾರಂಭಿಕ ಹಂತದಲ್ಲಿ ತಂಡವು (ಉದಾಹರಣೆಗೆ, ಇಂಗ್ಲೆಂಡ್, ಆಸ್ಟ್ರೇಲಿಯಾದಲ್ಲಿ) ಕೆಲ ಟೆಸ್ಟ್ ಮ್ಯಾಚ್‌ಗಳಲ್ಲಿ ಗೆಲ್ಲುವ ಅವಕಾಶಗಳನ್ನು ಕೈಚೆಲ್ಲಿತು. ಇದಕ್ಕೆ ಯಾರು ಹೊಣೆ? ಇಲ್ಲಿ ಸ್ಟಾರ್ ಆಟಗಾರರು ಯಾರೂ ಇಲ್ಲ. ಚೆನ್ನಾಗಿ ಆಡುವವನೇ ಸ್ಟಾರ್ ಆಗುತ್ತಾನೆ, ಅಷ್ಟೆ.

ಗುರು ಜಗಳೂರು, ಹರಿಹರ

ಮಾತನಾಡುವಾಗ ಎಚ್ಚರ ಇರಲಿ

ಕಲರ್ಸ್ ಕನ್ನಡ ವಾಹಿನಿಯ ಬಿಗ್ ಬಾಸ್ ರಿಯಾಲಿಟಿ ಷೋನಲ್ಲಿ 'ನೀನು ವಡ್ಡನಾ?' ಎಂದು ಸಹಸ್ಪರ್ಧಿಯನ್ನು ಹೀಯಾಳಿಸಿದ್ದರಿಂದ ಬೋವಿ ಸಮುದಾಯಕ್ಕೆ ಅವಮಾನವಾಗಿದೆ ಎಂಬ ಆರೋಪದ ಮೇಲೆ ಸ್ಪರ್ಧಿ ತನಿಷಾ ಕುಪ್ಪಂಡ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿರುವುದು (ಪ್ರ.ವಾ., ನ. 16) ಇತರರಿಗೆ ಎಚ್ಚರಿಕೆಯ ಸಂದೇಶದಂತಿದೆ. ಚಿತ್ರನಟ ಉಪೇಂದ್ರ ಸಹ ಇತ್ತೀಚೆಗೆ ಇದೇ ರೀತಿ ಒಂದು ಸಮುದಾಯದ ಭಾವನೆಗಳಿಗೆ ಗಾಸಿ ಉಂಟುಮಾಡಿದ ಆರೋಪ ಎದುರಿಸಿದರು. ಅವರ ವಿರುದ್ಧವೂ ಪ್ರಕರಣ ದಾಖಲಾಗಿದೆ. ಸೆಲೆಬ್ರಿಟಿಗಳು ಮತ್ತು ಜನಪ್ರತಿನಿಧಿಗಳು ಒಂದು ಜಾತಿ ಅಥವಾ ಒಂದು ವಿಷಯದ ಬಗ್ಗೆ ಮಾತನಾಡುವಾಗ ತುಂಬಾ ಎಚ್ಚರಿಕೆ ವಹಿಸಬೇಕಾಗುತ್ತದೆ. ಕೋಪದಲ್ಲಿ ಆಡಿದ ಮಾತುಗಳು ಈ ರೀತಿಯ ಪ್ರಸಂಗಗಳನ್ನು ಸೃಷ್ಟಿಸುತ್ತವೆ.

ಜಾತಿ ಆಧಾರದ ಮೇಲೆ ವ್ಯಕ್ತಿಯನ್ನು ನಿಂದಿಸುವುದು, ಆಡಿಕೊಳ್ಳುವುದು ಅಥವಾ ವ್ಯಂಗ್ಯ ಮಾಡುವುದು ಅಪರಾಧ. ಇಂದು ಎಲ್ಲಾ ಜಾತಿಯವರು ಎಲ್ಲಾ ಬಗೆಯ ಉದ್ಯೋಗವನ್ನೂ ಮಾಡುವಷ್ಟು ಪ್ರಬುದ್ಧರಾಗಿದ್ದಾರೆ. ಹಿಂದೆ ಇದ್ದ ಜಾತಿ ಆಧಾರಿತ ಉದ್ಯೋಗಗಳು ಈಗ ಇಲ್ಲ. ಮನುಷ್ಯ ಮನುಷ್ಯನನ್ನು ಮಾನವೀಯತೆಯ ದೃಷ್ಟಿಯಿಂದ ನೋಡುವುದನ್ನು ನಾವು ಕಲಿಯಬೇಕಿದೆ. ಹಿಂದೆ ಬಾಯಿಮಾತಿಗೆ ಗಾದೆಗಳ ರೂಪದಲ್ಲಿ ಬಳಸುತ್ತಿದ್ದ ಜಾತಿಯ ಬಗೆಗಿನ ಹೇಳಿಕೆಗಳನ್ನು ಈಗಲೂ ಮುಂದುವರಿಸುವುದು ಸರಿಯಲ್ಲ.

ಮಲ್ಲತಹಳ್ಳಿ ಎಚ್. ತುಕಾರಾಂ, ಬೆಂಗಳೂರು

ಒಂದೇ ಮೆಟ್ಟಿಲು...!

ಗುರಿಯ ಮುಟ್ಟಲು
ಭಾರತಕ್ಕೆ ಬೇಕಿರುವುದು
ಇನ್ನು ಒಂದೇ ಮೆಟ್ಟಿಲು,
ವಿಶ್ವಕಪ್‌ನ ಕೀರ್ತಿ ಕಿರೀಟ
ಸಂಭ್ರಮದಿ ಧರಿಸಲು,
ವಿಜಯದ ಘೋಷ
ಮುಗಿಲು ಮುಟ್ಟಲು,
ಏರಬೇಕಿರುವುದು
ಇನ್ನು ಒಂದೇ ಮೆಟ್ಟಿಲು!

ಮ.ಗು.ಬಸವಣ್ಣ
ನಂಜನಗೂಡು

ಮತದಾರರ ಗ್ರಹಿಕೆ ಜಾಗೃತವಾಗಿದೆ

'ನಮ್ಮ ಸರ್ಕಾರ ಇದ್ದಾಗ ಕಾಂಗ್ರೆಸ್ ಪಕ್ಷದವರು ಶೇ 40 ಕಮಿಷನ್ ಸರ್ಕಾರ ಎಂದು ಟೀಕಿಸಿದರು. ಜನ ಅದನ್ನು ನಂಬಿದರು' ಎಂದಿದ್ದಾರೆ ಬಿಜೆಪಿ ರಾಜ್ಯ ಘಟಕದ ನೂತನ ಅಧ್ಯಕ್ಷ ಬಿ.ವೈ.ವಿಜಯೇಂದ್ರ (ಪ್ರ.ವಾ., ನ. 16). ನಿಜ, ಏಕೆಂದರೆ ಅದು ಸುಡು ವಾಸ್ತವವಾಗಿತ್ತು. ಆದರೆ ಅದಕ್ಕೂ ಮುಂಚಿನ ಕಾಂಗ್ರೆಸ್ ನೇತೃತ್ವದ ಸರ್ಕಾರದ ವಿರುದ್ಧ 'ಶೇ 10 ಕಮಿಷನ್ ಸರ್ಕಾರ' ಎಂದು ಆರೋಪ ಮಾಡಿದ್ದು ಮೊದಲು ಬಿಜೆಪಿಯವರೇ ಅಲ್ಲವೆ? ಆಗಲೂ ಅದು ಸುಡು ವಾಸ್ತವವೇ ಆಗಿದ್ದರಿಂದ ಮತದಾರರು ಆಗ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ಮನೆಗೆ ಕಳಿಸಿದರು. ನಂತರ ಬಂದ ಬಿಜೆಪಿ ನೇತೃತ್ವದ ಸರ್ಕಾರವೂ ಅದೇ ಹಾದಿ ಹಿಡಿದಿದ್ದರಿಂದ ಮತದಾರರು ಆ ಪಕ್ಷವನ್ನೂ ಚುನಾವಣೆಯಲ್ಲಿ ಸೋಲಿಸಿದರು. ಅಂದರೆ ಸರ್ಕಾರದ ನೇತೃತ್ವವನ್ನು ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಯಾವುದೇ ಪಕ್ಷ ವಹಿಸಿಕೊಂಡಿರಲಿ, ಅಲ್ಲಿ ಮತದಾರರಿಗೆ ಲಂಚಾವತಾರ ಎಂಬುದು ಒಂದು ಸುಡು ವಾಸ್ತವವಾಗಿ ಅನುಭವಕ್ಕೆ ಬರುತ್ತದೆ. ಆದ್ದರಿಂದ ಅವರು ಚುನಾವಣೆಯಲ್ಲಿ ತಮ್ಮ ಮತದಾನದ ಹಕ್ಕು ಚಲಾಯಿಸಿ, ಆಡಳಿತ ನಡಸುವ ಪಕ್ಷವನ್ನು ಬದಲಿಸುತ್ತಾರೆ.

ಮತದಾರರ ಈ ನಂಬಿಕೆಗೆ ಯಾರ ಪ್ರೇರಣೆಯಾಗಲೀ ಆಣತಿಯಾಗಲೀ ಬೇಕಾಗುವುದಿಲ್ಲ. ಅಷ್ಟರಮಟ್ಟಿಗೆ ಮತದಾರರ ವಾಸ್ತವ ಗ್ರಹಿಕೆ ಜಾಗೃತವಾಗಿದೆ. ಆದರೆ ಸರ್ಕಾರದ ನೇತೃತ್ವ ಯಾರದೇ ಇರಲಿ, ಲಂಚಾವತಾರವನ್ನು ತಡೆಗಟ್ಟುವ ಅಧಿಕಾರ ಇರುವ ಲೋಕಾಯುಕ್ತ ಸಂಸ್ಥೆಯೂ ಪರಿಣಾಮಕಾರಿಯಾಗಿ ಕೆಲಸ ಮಾಡಲಾಗುತ್ತಿಲ್ಲವೇಕೆ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಟ್ಟಣೆ ಹೆಚ್ಚಿಸಿದ ಶಕ್ತಿ ಯೋಜನೆ

ಪ್ರಯಾಣಿಕರಿದ್ದಾರೆ, ಬಸ್ಸೇ ಇಲ್ಲ

• ಮನೋಜಕುಮಾರ್ ಗುದ್ದಿ, ಶ್ರೀಕಾಂತ ಕಲ್ಲಮ್ಮನವರ, ಬಾಲಕೃಷ್ಣ ಪಿ.ಎಚ್.

ಮಹಿಳೆಯರಿಗೆ ಬಸ್ ಪ್ರಯಾಣ ದರವನ್ನು ಉಚಿತ ಮಾಡಿದ 'ಶಕ್ತಿ' ಯೋಜನೆ ಜಾರಿಯಾಗಿದ್ದು ಜೂನ್ 11ರಂದು. ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ನೀಡಿದ್ದ ಐದು ಗ್ಯಾರಂಟಿಗಳಲ್ಲಿ ಇದೂ ಒಂದಾಗಿತ್ತು. ಮಹಿಳೆಯರಿಗಾಗಿಯೇ ಈ ಯೋಜನೆಯನ್ನು ಜಾರಿ ಮಾಡಲಾಗಿದೆ. ಈ ಯೋಜನೆಯಿಂದಾಗಿ ಬಸ್ ಪ್ರಯಾಣಿಕರ ಸಂಖ್ಯೆಯಲ್ಲಿ ಭಾರಿ ಏರಿಕೆ ಆಗಿದೆ. ಕಳೆದ ಐದು ತಿಂಗಳಲ್ಲಿ ಮಹಿಳಾ ಪ್ರಯಾಣಿಕರ ಸಂಖ್ಯೆಯಲ್ಲಿ ಮಾತ್ರವೇ ಏರಿಕೆಯಾಗಿಲ್ಲ. ಬಸ್ಸಿನಲ್ಲಿ ಪ್ರಯಾಣಿಸುವ ಪುರುಷರ ಸಂಖ್ಯೆಯಲ್ಲಿಯೂ ಏರಿಕೆಯಾಗಿದೆ. ಹಾಗಿದ್ದರೂ ಬಸ್ ಪ್ರಮಾಣದಲ್ಲಿ ಮಾತ್ರ ಏರಿಕೆಯಾಗಿಲ್ಲ. ಇದು ಯೋಜನೆಯ ಶಕ್ತಿಯನ್ನೇ ಕುಂದಿಸುತ್ತಿದೆ.

ಯೋಜನೆ ಜಾರಿಗೂ ಮೊದಲು, ಸುಮಾರು 84.5 ಲಕ್ಷ ಜನ ಸಾರಿಗೆ ಬಸ್‌ಗಳಲ್ಲಿ ನಿತ್ಯ ರಾಜ್ಯದಾದ್ಯಂತ ಪ್ರಯಾಣಿಸುತ್ತಿದ್ದರು. ಯೋಜನೆ ಜಾರಿ ಬಳಿಕ ಈಗ ದಿನವೊಂದರಲ್ಲಿ ಸುಮಾರು 1.06 ಕೋಟಿಯಷ್ಟು ಜನರು ಪ್ರಯಾಣಿಸುತ್ತಿದ್ದಾರೆ. ಇದರಲ್ಲಿ, ಶೇ 55ರಷ್ಟು ಮಹಿಳೆಯರು ಇದ್ದರೆ, ಶೇ 45ರಷ್ಟು ಪುರುಷರು ಸೇರಿದ್ದಾರೆ. ಪುರುಷರೇ ಆಗಿರಲಿ, ಮಹಿಳೆಯರೇ ಆಗಿರಲಿ, ವಿದ್ಯಾರ್ಥಿಗಳೇ ಆಗಿರಲಿ ಒಟ್ಟಿನಲ್ಲಿ ಬಸ್ ಅನ್ನು ಬಳಸುತ್ತಿರುವ ಜನರ ಸಂಖ್ಯೆ ಏರಿಕೆಯಾಗಿದೆ. ಇದಕ್ಕೆ ಹಲವು ಕಾರಣಗಳನ್ನು ನೀಡಬಹುದು:

• ದೇವಸ್ಥಾನ ಸೇರಿದಂತೆ ಧಾರ್ಮಿಕ ಕೇಂದ್ರಗಳಿಗೆ, ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಕನಸಿಗೆ 'ಶಕ್ತಿ' ಬಂದಿದೆ. ಕುಟುಂಬ ಸಮೇತ ಜನರು ಪ್ರಯಾಣ ಮಾಡುತ್ತಿದ್ದಾರೆ. ಇದೇ ಕಾರಣಕ್ಕೆ ಪುರುಷರ ಬಸ್ ಪ್ರಯಾಣ ಪ್ರಮಾಣವೂ ಏರಿಕೆಯಾಗಿದೆ
• ಒಂದೆರಡು ಕಿಲೋಮೀಟರ್ ನಡೆದುಕೊಂಡೇ ಸಾಗುತ್ತಿದ್ದ ಮಹಿಳಾ ಕೂಲಿ ಕಾರ್ಮಿಕರು, ಬೀದಿಬದಿ ವ್ಯಾಪಾರಿ ಮಹಿಳೆಯರು ಬಸ್‌ಗಳಲ್ಲಿ ಸಂಚರಿಸುತ್ತಿದ್ದಾರೆ. ಗಾರ್ಮೆಂಟ್ ಕೆಲಸ ಮಾಡುವ ಮಹಿಳೆಯರು ದ್ವಿಚಕ್ರ ವಾಹನಗಳನ್ನು ಬಿಟ್ಟು ಬಸ್‌ಗಳಲ್ಲಿ ಸಂಚರಿಸುತ್ತಿದ್ದಾರೆ

ಬಸ್‌ಗಳ ಕೊರತೆ: ಬಸ್‌ನಲ್ಲಿ ಪ್ರಯಾಣ ಮಾಡುವ ಒಟ್ಟು ಪ್ರಯಾಣಿಕರ ಪ್ರಮಾಣ ಶೇ 30ರಷ್ಟು ಹೆಚ್ಚಳವಾಗಿದೆ ನಿಜ. ಆದರೆ, ಈ ಹೆಚ್ಚಳಕ್ಕೆ ಅನುಗುಣವಾಗಿ ಬಸ್ ಲಭ್ಯತೆ ಇಲ್ಲ. ಈ ಏರಿಕೆಗೆ ಅನುಗುಣವಾಗಿ ಸುಮಾರು 3,000 ಹೆಚ್ಚುವರಿ ಬಸ್‌ಗಳ ಅವಶ್ಯಕತೆ ಇದೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ), ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮ (ಎನ್‌ಡಬ್ಲ್ಯುಕೆಆರ್‌ಟಿಸಿ) ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ (ಕೆಕೆಆರ್‌ಟಿಸಿ) 24,352 ಬಸ್‌ಗಳಿದ್ದರೂ 22,017 ಬಸ್‌ಗಳಷ್ಟೇ ಸಂಚರಿಸುತ್ತಿವೆ.

ಹೆಚ್ಚಿದ ಪ್ರಯಾಣಿಕರ ಸಂಖ್ಯೆಗೆ ತಕ್ಕಷ್ಟು ಬಸ್‌ಗಳನ್ನು ಓಡಿಸದೇ ಇರುವುದರಿಂದ ನಿತ್ಯ ಜಿಲ್ಲಾ, ತಾಲ್ಲೂಕು ಕೇಂದ್ರಗಳಿಂದ ಗ್ರಾಮಗಳಿಗೆ ತೆರಳುವ ಸರ್ಕಾರಿ ಉದ್ಯೋಗಿಗಳು, ವಿದ್ಯಾರ್ಥಿಗಳಿಗೆ ಸೀಟು ಸಿಗದೇ ಸಂಕಷ್ಟಪಡಬೇಕಾದ ಪರಿಸ್ಥಿತಿ ಎದುರಾಗಿದೆ. ಮಾಸಿಕ ಬಸ್ ಪಾಸ್ ಹೊಂದಿದವರಿಗೂ ಸೀಟುಗಳು ಸಿಗುತ್ತಿಲ್ಲ. ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು 620 ಹೊಸ ಬಸ್‌ಗಳನ್ನು ಸೇವೆಗೆ ನಿಯೋಜಿಸಿದರೂ ದಟ್ಟಣೆ ಕಡಿಮೆಯಾಗಿಲ್ಲ. ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಬಹುತೇಕ ಎಲ್ಲ 4,500 ಬಸ್‌ಗಳು ಪ್ರತಿ ದಿನ ಭರ್ತಿಯಾಗಿ ಸಂಚರಿಸುತ್ತಿವೆ.

ಸಮಸ್ಯೆಗಳ ಸರಮಾಲೆ: ಪ್ರಯಾಣಿಕರು ಹೆಚ್ಚಿದಂತೆ ನಿಲ್ದಾಣಗಳಲ್ಲಿ ದಟ್ಟಣೆ ಹೆಚ್ಚುತ್ತಿದ್ದು, ಮೂಲಸೌಕರ್ಯದ ಕೊರತೆ ಕಾಡುತ್ತಿದೆ. ಶೌಚಾಲಯ, ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಆಸನ ವ್ಯವಸ್ಥೆ ಎಲ್ಲವೂ ಅಸ್ತವ್ಯಸ್ತವಾಗಿದೆ. ಬಸ್ ಹತ್ತುವಾಗ ಉಂಟಾಗುವ ಜನದಟ್ಟಣೆಯ ಲಾಭ ಪಡೆಯುವ ಕೆಲವರು ಕಿಸೆಗಳ್ಳತನ, ಚಿನ್ನಾಭರಣ ಕಳ್ಳತನವೂ ನಡೆಸುತ್ತಿದ್ದಾರೆ.

ಜೂನ್ 11ರಿಂದ ನವೆಂಬರ್ 15ವರೆಗಿನ ಪ್ರಯಾಣಿಕರ ಪ್ರಮಾಣ

95.5 ಕೋಟಿ	ಮಹಿಳೆಯರು
74.5 ಕೋಟಿ	ಪುರುಷರು
170 ಕೋಟಿ	ಒಟ್ಟು ಪ್ರಯಾಣಿಕರು
₹2,286 ಕೋಟಿ	ಮಹಿಳಾ ಪ್ರಯಾಣಿಕರ ಟಿಕೆಟ್ ಮೊತ್ತ



ಬಸ್‌ಗಳ ಖರೀದಿ ಪ್ರಕ್ರಿಯೆ ನಡೆಯುತ್ತಿದೆ. ಈ ಪ್ರಕ್ರಿಯೆ ಮುಗಿದು ಬಸ್ ರಸ್ತೆಗಿಳಿಯಲು ನಾಲ್ಕೈದು ತಿಂಗಳು ಬೇಕು. ಮುಂದಿನ ವರ್ಷ ಬಸ್‌ಗಳ ಕೊರತೆ ಇರುವುದಿಲ್ಲ. ಹೊಸ ಕಾಲೇಜು, ಹೊಸ ಕೋರ್ಸ್‌ಗಳು ಆರಂಭವಾಗಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದ ಕಡೆಗಳಲ್ಲಿ ಹೆಚ್ಚು ಸಮಸ್ಯೆ ಉಂಟಾಗಿರುವುದು ನಿಜ. ಬೊಲೆರೊ ವಾಹನಗಳಲ್ಲಿ ನಮ್ಮ ಅಧಿಕಾರಿಗಳು ಹೋಗಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡುತ್ತಿದ್ದಾರೆ. ಅಗತ್ಯ ಇರುವಲ್ಲಿ ಬಸ್ ಟ್ರಿಪ್‌ಗಳನ್ನು ಜಾಸ್ತಿ ಮಾಡಿದ್ದೇವೆ

ವಿ. ಅನ್ಬುಕುಮಾರ್
ವ್ಯವಸ್ಥಾಪಕ ನಿರ್ದೇಶಕ, ಕೆಎಸ್‌ಆರ್‌ಟಿಸಿ

620 ಬಸ್‌ಗಳನ್ನು ಈಗಾಗಲೇ ಸೇವೆಗೆ ನಿಯೋಜಿಸಿದ್ದು, ಮತ್ತೆ ಹೊಸದಾಗಿ 250 ಬಸ್ ಖರೀದಿಗೆ ಟೆಂಡರ್ ಪ್ರಕ್ರಿಯೆ ಆರಂಭಿಸಲಿದ್ದೇವೆ. ಬೇಡಿಕೆ ಬಂದ ರೂಟ್‌ಗಳಲ್ಲಿ ಹೆಚ್ಚಿನ ಶೆಡ್ಯೂಲ್‌ಗಳಲ್ಲಿ ಬಸ್‌ಗಳನ್ನು ಓಡಿಸುತ್ತಿದ್ದೇವೆ. ಈಗೀಗ ಬಹುತೇಕ ಬಸ್‌ಗಳಲ್ಲಿ ಆಸನಗಳು ಸಿಗುತ್ತಿವೆ

ಎಂ. ರಾಚಪ್ಪ
ವ್ಯವಸ್ಥಾಪಕ ನಿರ್ದೇಶಕ, ಕೆಕೆಆರ್‌ಟಿಸಿ

ಗ್ರಾಮಾಂತರ ಪ್ರದೇಶಗಳ ಬಸ್ ಕೊರತೆ ನೀಗಿಸಲು 375 ಬಸ್‌ಗಳ ಖರೀದಿಗೆ ಸರ್ಕಾರದಿಂದ ಅನುಮತಿ ಸಿಕ್ಕಿದೆ. ಖರೀದಿ ಪ್ರಕ್ರಿಯೆ ಟೆಂಡರ್ ಹಂತದಲ್ಲಿದೆ. ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಬಿ.ಆರ್.ಟಿ ಸೇವೆಗೆ ₹45 ಕೋಟಿ ವೆಚ್ಚದಲ್ಲಿ 100 ಹೊಸ ಬಸ್ ಮತ್ತು ವಾಯವ್ಯ ಕರ್ನಾಟಕ ಸಾರಿಗೆ ಸಂಸ್ಥೆಗೆ ₹16.20 ಕೋಟಿ ವೆಚ್ಚದಲ್ಲಿ ಎ.ಸಿ/ ನಾನ್ ಎ.ಸಿ 24 ಹೊಸ ಬಸ್ ಖರೀದಿಸಲು ಅನುಮೋದನೆ ನೀಡಿದೆ. ಸದ್ಯದಲ್ಲೇ ಒಟ್ಟು 499 ಬಸ್ ಸೇರ್ಪಡೆಯಾಗಲಿವೆ. ಇದರ ಜೊತೆಗೆ 2 ಸಾವಿರ ಡ್ರೈವರ್/ ಕಂಡಕ್ಟರ್ ಹುದ್ದೆಗಳ ಭರ್ತಿಗೂ ಸರ್ಕಾರ ಹಸಿರು ನಿಶಾನೆ ತೋರಿದೆ.

ಭರತ್ ಎಸ್.
ವ್ಯವಸ್ಥಾಪಕ ನಿರ್ದೇಶಕ, ಎನ್‌ಡಬ್ಲ್ಯುಕೆಆರ್‌ಟಿಸಿ

'ನಗುವ ಗಂಡಸರು'

ನಿರ್ವಾಹಕರು ಅತ್ತಿತ್ತ ಚಲಿಸುವುದೂ ಸಾಧ್ಯವಿಲ್ಲದಷ್ಟು ಜನರಿದ್ದರು. ಮಹಿಳೆಯರಿಗೆ ಟಿಕೆಟ್ ನೀಡಲು ನಿರ್ವಾಹಕರು ಪ್ರಯತ್ನಿಸುತ್ತಿದ್ದಾಗ 'ಅವೆಲ್ಲ ಆಧಾರ್ ಕಾರ್ಡ್‌ಗಳು, ಟಿಕೆಟ್ ಕೊಡದಿದ್ದರೂ ನಡೆಯುತ್ತೆ' ಎಂದು ಪ್ರಯಾಣಿಕರೊಬ್ಬರು ಕೇವಲವಾಗಿ ಮಾತನಾಡಿದರು. ಸುತ್ತಲಿದ್ದ ಗಂಡಸರು ಇದಕ್ಕೆ ನಕ್ಕರು. ಒಂದು ಕಡೆಯಿಂದ ನಿಲ್ಲಲೂ ಸಾಧ್ಯವಿಲ್ಲದಷ್ಟು ನೂಕುನುಗ್ಗಲು, ಇನ್ನೊಂದು ಕಡೆ ಇಂಥ ಗೇಲಿ ಮಾತುಗಳು

ಭಾರತಿ ಕೆ., ಪ್ರಯಾಣಿಕರು, ಚಳ್ಳಕೆರೆ

ಬಸ್ಸಿಲ್ಲದ ಗೋಳು

'ನರಗುಂದಕ್ಕೆ ಹೋಗಲು ನಾಲ್ಕು ಗಂಟೆಯಿಂದ ಬಸ್‌ಗಾಗಿ ಕಾಯ್ತಾ ಇದ್ದೀನಿ. 3ರಿಂದ 4 ಬಸ್‌ಗಳು ಬಂದುಹೋದವು. ಆದರೆ, ಎಲ್ಲವೂ ಭರ್ತಿ. ಬಸ್ ಹತ್ತಲು ನೂಕುನುಗ್ಗಲು ಬೇರೆ. 10 ವರ್ಷದ ಮಗನನ್ನು ಕರೆದುಕೊಂಡು ಹೇಗೆ ಹತ್ತಲಿ...' -ಇದು ನರಗುಂದದ ಸತೀಶ ಕಟಗೇರಿ ಅವರ ಮಾತು.

'ನಾನು ನಿತ್ಯ ಗುಲಬರ್ಗಾ ವಿ.ವಿಗೆ ಬೀದರ್‌ನಿಂದ ಹೋಗುತ್ತೇನೆ. ಈ ಹಿಂದೆ ಬಸ್‌ನಲ್ಲಿ ಒಂದಾದರೂ ಸೀಟು ಸಿಗುತ್ತಿತ್ತು. ಇಳಿಯುವವರಿಗಿಂತ ಬಸ್ ಹತ್ತುವವರ ಸಂಖ್ಯೆಯೇ ಹೆಚ್ಚಾಗಿದೆ. 120 ಕಿ.ಮೀ ನಿಂತುಕೊಂಡು ಪ್ರಯಾಣ ಮಾಡುವುದು ಬಹಳ ಪ್ರಯಾಸದಾಯಕ ಕೆಲಸ. ನಿತ್ಯ ಕೆಲಸಕ್ಕೆ ಹೋಗಿ ಬರುವವರಿಗೆ ಕೆಲವು ಸೀಟುಗಳನ್ನಾದರೂ ಮೀಸಲಿಡಬೇಕು' ಎಂದು ನಾಗರತ್ನ ಅಭಿಪ್ರಾಯಪಟ್ಟರು.

'ರಾಯಚೂರು ಜಿಲ್ಲೆಯಲ್ಲಿ ನಿಲ್ದಾಣಗಳಲ್ಲೇ ಬಸ್ ಭರ್ತಿಯಾಗಿ ಬರುವುದರಿಂದ ಕೋರಿಕೆಯ ನಿಲ್ದಾಣಗಳಲ್ಲಿ ಬಸ್ ಚಾಲಕರು ಬಸ್ ನಿಲ್ಲಿಸುತ್ತಿಲ್ಲ ಎಂದು ರಾಯಚೂರು ನಗರ ಹಾಗೂ ಜಿಲ್ಲೆಯ ಹಲವೆಡೆ ವಿದ್ಯಾರ್ಥಿಗಳಿಂದ ದೂರು ಬರುತ್ತಿದೆ' ಎನ್ನುತ್ತಾರೆ ಎಐಆರ್‌ಎಸ್‌ಒ ಸಂಘಟನೆಯ ಮುಖಂಡ ಅಜೀಜ್ ಜಾಗೀರ್ದಾರ್.

'ವಿದ್ಯಾರ್ಥಿಗಳು, ಅಂಗವಿಕಲರು, ವೃದ್ಧರು ತೊಂದರೆ ಅನುಭವಿಸುತ್ತಿದ್ದಾರೆ. ಹಣ ಕೊಟ್ಟು ಹೋಗಲು ಸಿದ್ಧವೆಂದರೂ ಬೇರೆ ಬಸ್‌ಗಳ (ಎಸಿ ಸ್ಲೀಪರ್ ಕ್ಲಾಸ್, ಇತ್ಯಾದಿ) ವ್ಯವಸ್ಥೆ ಇಲ್ಲ. ಇದಲ್ಲದೇ, ಖಾಸಗಿ ಬಸ್ ಹತ್ತೋಣವೆಂದರೆ, ಅವು ಗ್ರಾಮೀಣ ಪ್ರದೇಶಗಳಿಗೆ ಹೋಗಲ್ಲ' ಎನ್ನುವುದು ಪ್ರಯಾಣಿಕರೊಬ್ಬರ ದೂರು.

'ನನ್ನ ಮಾರ್ಗದ ಬಿಎಂಟಿಸಿಯಲ್ಲಿ ಯಾವಾಗಲೂ ನೂಕುನುಗ್ಗಲು. ಈ ಮಾರ್ಗದಲ್ಲಿ ಕನಿಷ್ಠ ಅರ್ಧಗಂಟೆಗೆ ಒಂದು ಬಸ್ ಇದ್ದರೂ ಹೀಗಾಗುತ್ತಿರಲಿಲ್ಲ. 'ಶಕ್ತಿ' ಯೋಜನೆಯಿಂದ ಬಹಳ ಅನುಕೂಲವಾಗಿದ್ದರೂ ಸರಿಯಾದ ಸಮಯಕ್ಕೆ ಬಸ್‌ಗಳಿಲ್ಲದೇ ಸಮಸ್ಯೆಯಾಗಿದೆ' ಎನ್ನುವುದು ಐಟಿಐ ಬಡಾವಣೆಯ ಬಿ.ಎಸ್. ಭಾಗ್ಯಲಕ್ಷ್ಮೀ ಅಭಿಪ್ರಾಯ.

ಖರೀದಿ ಪ್ರಕ್ರಿಯೆಯಲ್ಲಿರುವ ಬಸ್‌ಗಳ ಸಂಖ್ಯೆ

800	ಕೆಎಸ್‌ಆರ್‌ಟಿಸಿ
921	ಬಿಎಂಟಿಸಿ
250	ಕೆಕೆಆರ್‌ಟಿಸಿ
375	ಎನ್‌ಡಬ್ಲ್ಯುಕೆಆರ್‌ಟಿಸಿ

ಸಿನಿ ಬಿಟ್ಸ್

ಅಹಮದಾಬಾದ್ ಚಿತ್ರೋತ್ಸವಕ್ಕೆ 'ಚಿಣ್ಣರ ಚಂದ್ರ'

ನಿರ್ದೇಶಕ ಬರಗೂರು ರಾಮಚಂದ್ರಪ್ಪ ನಿರ್ದೇಶಿಸಿದ 'ಚಿಣ್ಣರ ಚಂದ್ರ' ಚಿತ್ರವು, ಅಹಮದಾಬಾದ್ ಅಂತರರಾಷ್ಟ್ರೀಯ ಮಕ್ಕಳ ಚಿತ್ರೋತ್ಸವಕ್ಕೆ ಅಧಿಕೃತವಾಗಿ ಆಯ್ಕೆಯಾಗಿದೆ. ಚಿತ್ರವು ಸ್ಪರ್ಧಾ ವಿಭಾಗದಲ್ಲಿ ಪ್ರವೇಶ ಪಡೆದಿದೆ.

ಈ ಚಿತ್ರವು ಈಗಾಗಲೇ ಮೆಲ್ಬರ್ನ್ ಅಂತರರಾಷ್ಟ್ರೀಯ ಚಿತ್ರೋತ್ಸವದ ಸ್ಪರ್ಧಾ ವಿಭಾಗಕ್ಕೆ ಆಯ್ಕೆಯಾಗಿ ಸ್ಪರ್ಧೆಯ ಅಂತಿಮ ಹಂತ ತಲುಪಿದೆ. 'ಚಿತ್ರವು ಶಿಕ್ಷಣದ ಮಹತ್ವವನ್ನು ಸಾದರಪಡಿಸುತ್ತಲೇ ಸಮಾಜದಲ್ಲಿ ಸದಭಿರುಚಿ, ಸೌಹಾರ್ದತೆ ಮತ್ತು ಸಮಾನತೆ ಅಗತ್ಯ ಎಂಬುದನ್ನು ಮಕ್ಕಳ ಮೂಲಕ ಅಭಿವ್ಯಕ್ತಿಸುತ್ತದೆ. ಜೊತೆಗೆ ಜನಪದ ಕಥನಗಳು ಮಕ್ಕಳ ಮನಸ್ಸಿನ ಭಾಗವಾಗುವುದನ್ನು ಚಿತ್ರಿಸುತ್ತದೆ' ಎಂದಿದ್ದಾರೆ ಬರಗೂರು ರಾಮಚಂದ್ರಪ್ಪ.

'ಚಿಣ್ಣರ ಚಂದ್ರ' ಚಿತ್ರವು ಬರಗೂರರ 'ಅಡಗೂಲಜ್ಜಿ' ಕಾದಂಬರಿಯನ್ನು ಆಧರಿಸಿದೆ. ಚಿತ್ರವನ್ನು ಜಿ.ಎನ್.ಗೋವಿಂದರಾಜು(ರಾಜಶೇಖರ್) ನಿರ್ಮಿಸಿದ್ದಾರೆ. ತಾರಾಗಣದಲ್ಲಿ ಆಕಾಂಕ್ಷ್ ಬರಗೂರ್, ನಿಕ್ಷೇಪ, ಶಙ್ಖ, ಈಶನ್, ಅಭಿನವ್, ಸುಂದರ್ ರಾಜ್, ರೇಖಾ, ವತ್ಸಲಾ ಮೋಹನ್, ರಾಧಾ ರಾಮಚಂದ್ರ, ರಾಘವ್, ರಾಜಪ್ಪ ದಳವಾಯಿ, ಸುಂದರರಾಜ ಅರಸು, ವೆಂಕಟರಾಜು, ಹಂಸ ಮುಂತಾದವರಿದ್ದಾರೆ.

ಸಂಕಲನಕಾರರಾಗಿ ಸುರೇಶ್ ಅರಸು, ಛಾಯಾಚಿತ್ರಗ್ರಾಹಕರಾಗಿ ನಾಗರಾಜ ಆದವಾನಿ, ಸಂಗೀತ ನಿರ್ದೇಶಕರಾಗಿ ಶಮಿತಾ ಮಲ್ನಾಡ್ ಕಾರ್ಯನಿರ್ವಹಿಸಿದ್ದಾರೆ. 'ಚಿತ್ರವನ್ನು ಶೀಘ್ರದಲ್ಲೇ ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡಲಾಗುವುದು. ಶಾಲಾ ಮಕ್ಕಳಿಗೆ ರಾಜ್ಯದಾದ್ಯಂತ ಪ್ರದರ್ಶಿಸುವ ಉದ್ದೇಶ ಹೊಂದಲಾಗಿದೆ' ಎಂದಿದ್ದಾರೆ ಬರಗೂರು.

ತಿಗಳಪೇಟೆಯ 'ಕೈವ'

'ಬೆಲ್‌ಬಾಟಂ' ನಂತರ ನಿರ್ದೇಶಕ ಜಯತೀರ್ಥ 'ಕೈವ'ನೊಂದಿಗೆ ಮತ್ತೆ ಬಂದಿದ್ದಾರೆ. ವಿಚಿತ್ರವಾಗಿರುವ ಚಿತ್ರದ ಶೀರ್ಷಿಕೆ ಓರ್ವ ವ್ಯಕ್ತಿಯ ಹೆಸರಂತೆ. ಚಿತ್ರದ ಆ್ಯಕ್ಷನ್ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಧನ್ವೀರ್, ಮೇಘಾ ಶೆಟ್ಟಿ ಜೋಡಿಯಾಗಿ ಕಾಣಿಸಿಕೊಂಡಿದ್ದಾರೆ.

''ಕೈವ' 1983ರಲ್ಲಿ ಬೆಂಗಳೂರಿನ ತಿಗಳಪೇಟೆಯಲ್ಲಿ ನಡೆದ ನೈಜಘಟನೆ ಆಧರಿಸಿದ ಚಿತ್ರ. ಬೆಂಗಳೂರು ಕರಗದಲ್ಲಿ ಹುಟ್ಟಿದ ಪ್ರೇಮಕಥೆಯೇ ಚಿತ್ರದ ಪ್ರಮುಖ ಕಥಾವಸ್ತು. ಈ ಘಟನೆ ಕಂಡಿದ್ದ ಅನೇಕರು ಈಗಲೂ ಇದ್ದಾರೆ. ಅದೇ ವರ್ಷ ನಡೆದ ಗಂಗಾರಾಮ್ ಕಟ್ಟಡದ ದುರಂತಕ್ಕೂ ಚಿತ್ರದ ಕಥೆಗೂ ಸಂಬಂಧವಿದೆ'' ಎಂದರು ನಿರ್ದೇಶಕ ಜಯತೀರ್ಥ.

ರವೀಂದ್ರಕುಮಾರ್ ನಿರ್ಮಾಣದ ಚಿತ್ರದಲ್ಲಿ ದಿನಕರ್ ತೂಗುದೀಪ, ರಾಘು ಶಿವಮೊಗ್ಗ ಸೇರಿ ಐದು ಜನ ನಿರ್ದೇಶಕರು ಈ ಚಿತ್ರದಲ್ಲಿ ನಟಿಸಿರುವುದು ವಿಶೇಷ. ಅಜನೀಶ್ ಲೋಕನಾಥ್ ಸಂಗೀತ, ಶ್ವೇತಪ್ರಿಯ ಛಾಯಾಗ್ರಹಣ, ರಘು ನಿಡವಳ್ಳಿ ಸಂಭಾಷಣೆ ಚಿತ್ರಕ್ಕಿದೆ. 'ಮೈಸೂರಿನಲ್ಲಿ ನಲವತ್ತೆಂಟು ದಿನಗಳ ಚಿತ್ರೀಕರಣ ನಡೆದಿದೆ. ಕೆಲವು ಭಾಗಗಳನ್ನು ಬೆಂಗಳೂರಿನ ತಿಗಳರಪೇಟೆಯಲ್ಲಿ ಚಿತ್ರೀಕರಿಸಲಾಗಿದೆ. ಡಿಸೆಂಬರ್‌ನಲ್ಲಿ ಚಿತ್ರ ತೆರೆಗೆ ಬರಲಿದೆ' ಎಂದು ನಿರ್ದೇಶಕ ಜಯತೀರ್ಥ ತಿಳಿಸಿದರು.

ಮೇಘಾ ಶೆಟ್ಟಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬಾಲಿವುಡ್ ನಟಿ ಕಾಜೋಲ್ ದೇವಗನ್ ಅವರು ಕ್ಯಾಮೆರಾ ಮುಂದೆ ಬಟ್ಟೆ ಬದಲಾಯಿಸುತ್ತಿರುವ ವಿಡಿಯೊವೊಂದು ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಹಾಗೂ 'ಎಕ್ಸ್' ಸಾಮಾಜಿಕ ಜಾಲತಾಣಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ಹಂಚಿಕೆಯಾಗುತ್ತಿದೆ. ಅಶ್ಲೀಲ ಪದಗಳಿಂದ ಈ ವಿಡಿಯೊಗೆ ಕ್ಯಾಪ್ಷನ್ ನೀಡಲಾಗುತ್ತಿದೆ. ಇದಕ್ಕೆ ಅಶ್ಲೀಲವಾದ ಕಾಮೆಂಟ್‌ಗಳನ್ನು ಜನರು ಮಾಡುತ್ತಿದ್ದಾರೆ. ಆದರೆ, ಇದು ಡೀಪ್‌ಫೇಕ್ ವಿಡಿಯೊ.

ಇತ್ತೀಚೆಗಷ್ಟೇ ನಟಿ ರಶ್ಮಿಕಾ ಮಂದಣ್ಣ ಅವರ ಡೀಪ್‌ಫೇಕ್ ವಿಡಿಯೊ ಆತಂಕ ಸೃಷ್ಟಿಸಿತ್ತು. ಕೇಂದ್ರ ಸರ್ಕಾರವು ಈ ಬಗ್ಗೆ ಕ್ರಮ ತೆಗೆದುಕೊಂಡಿದೆ. ಇವುಗಳ ಬೆನ್ನಲ್ಲೇ ನಟಿಯರಾದ ಕಿಯಾರ ಅಡ್ವಾನಿ, ದೀಪಿಕಾ ಪಡುಕೋಣೆ, ಆಲಿಯಾ ಭಟ್ ಸೇರಿದಂತೆ ಹಲವು ನಟಿಯರ ಡೀಪ್‌ಫೇಕ್ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. 'ಗೆಟ್ ರೆಡಿ ವಿತ್ ಮಿ' ಎನ್ನುವ ಟಿಕ್‌ಟಾಕ್‌ನ ಟ್ರೆಂಡ್‌ಗಾಗಿ ಇಂಗ್ಲಿಷ್ ಸೋಷಿಯಲ್ ಮೀಡಿಯಾ ಇನ್‌ಫ್ಲುಯೆನ್ಸರ್ ರೋಸಿ ಬ್ರಿನ್ ಅವರ ವಿಡಿಯೊಗೆ ಕಾಜೋಲ್ ಅವರ ಮುಖವನ್ನು ಡೀಪ್‌ಫೇಕ್ ಮಾಡಲಾಗಿದೆ. ಇದು ತಮ್ಮದೇ ವಿಡಿಯೊ ಎಂದು ರೋಸಿ ಅವರು ಖಚಿತಪಡಿಸಿದ್ದಾರೆ ಎಂದು 'ದಿ ಕ್ವಿಂಟ್' ಹಾಗೂ 'ಬೂಮ್‌ಲೈವ್' ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ.

ಗುಂಡಣ್ಣ

ಇವನು ಮತ್ತು ಅವನು

ನುಡಿ ಬೆಳಗು

ಪ್ರೊ.ಎಂ. ಕೃಷ್ಣೇಗೌಡ

ಒಂದು ಊರಿನಲ್ಲಿ ಇಬ್ಬರು ಯುವಕರಿದ್ದರು. ಇಬ್ಬರೂ ಬುದ್ಧಿವಂತರು ಮತ್ತು ಶಕ್ತಿವಂತರು. ಒಬ್ಬನ ಹೆಸರು ಅವನು ಹಾಗೂ ಮತ್ತೊಬ್ಬನ ಹೆಸರು ಇವನು. ಇವನು ಒಂದು ಧರ್ಮದವನಾದರೆ ಅವನು ಮತ್ತೊಂದು ಧರ್ಮದವನು. ಇವನಿಗೆ ತನ್ನ ಧರ್ಮದ ಬಗ್ಗೆ ಎಷ್ಟು ಪ್ರೇಮವಿತ್ತೋ ಅದಕ್ಕಿಂತ ಹೆಚ್ಚಾಗಿ ಅವನ ಧರ್ಮದ ಬಗ್ಗೆ ಕ್ರೋಧವಿತ್ತು. ಅವನಿಗೂ ಅಷ್ಟೆ. ತನ್ನ ಧರ್ಮದ ಬಗ್ಗೆ ಎಷ್ಟು ಪ್ರೀತಿಯಿತ್ತೋ ಅದಕ್ಕಿಂತ ಅಧಿಕವಾಗಿ ಇವನ ಧರ್ಮದ ಬಗ್ಗೆ ದ್ವೇಷವಿತ್ತು. ಆ ಕಾರಣವಾಗಿಯೇ ಇವನಿಗೂ ಅವನಿಗೂ ಅವರವರ ಧರ್ಮಗಳಲ್ಲಿ ಹೆಚ್ಚು ಅಧಿಕಾರವಿತ್ತು. ಪ್ರಭಾವವಿತ್ತು.

ಇವನಿಗೆ ಅವನ ಧರ್ಮದ ಬಗ್ಗೆ ಯಾವಾಗಲೂ ಸಂಶಯ. ಅವನಿಗೂ ಇವನ ಧರ್ಮದ ಬಗ್ಗೆ ಸದಾ ಅನುಮಾನ. ತಾನು ಸುಮ್ಮನಿದ್ದರೆ ಮತ್ತೊಬ್ಬ ಎಲ್ಲಿ ನನ್ನ ಧರ್ಮವನ್ನು ನಾಶಮಾಡಿಬಿಡುತ್ತಾನೋ ಅಂತ ಇಬ್ಬರಿಗೂ ಯಾವಾಗಲೂ ಭಯ, ಆತಂಕ. ಇವನು ಮತ್ತು ಅವನು ಇಬ್ಬರೂ ತಮ್ಮ ತಮ್ಮ ಧರ್ಮ ರಕ್ಷಣೆಗಾಗಿ ಏನು ಮಾಡಲೂ ಹೇಸರು.

ಒಂದು ಸಲ ಇವನಿಗೂ ಅವನಿಗೂ ವಾದ ಶುರುವಾಯಿತು. ವಾದದಲ್ಲಿ ಇಬ್ಬರಿಗೂ ಗೆಲ್ಲಲು ಸಾಧ್ಯವಾಗದಾಗ ಜಗಳ ಹತ್ತಿತು. ಜಗಳದಲ್ಲೂ ಇಬ್ಬರಿಗೂ ಗೆಲ್ಲಲು ಸಾಧ್ಯವಾಗದಾಗ ಯುದ್ಧ ಅನಿವಾರ್ಯವಾಯಿತು. ತಮ್ಮ ಧರ್ಮರಕ್ಷಣೆಗಾಗಿ ಯುದ್ಧ ಮಾಡುವ ಈ ಇಬ್ಬರೂ ಧೀರರ ಪಕ್ಷಕ್ಕೆ ಮತ್ತಷ್ಟು ಜನ ಸೇರಿಕೊಂಡರು. 'ಆಹಾ! ಧರ್ಮರಕ್ಷಣೆಗಾಗಿ ಯುದ್ಧ' ಎಂದು ಅತ್ತ ಇತ್ತ ನಿಂತಿದ್ದವರು ಗಲಗು ಗದ್ದಲ ಎಬ್ಬಿಸಿದರು, ರೊಚ್ಚು ಕಿಚ್ಚಾಯಿತು. ಕಿಚ್ಚು ಹೆಚ್ಚಾಯಿತು. ಹಲವಾರು ದಿನಗಳ ಕಾಲ ಯುದ್ಧ ನಡೆಯಿತು. ಗುಡಿ ಗೋಪುರಗಳು ಉರುಳಿದವು. ಮನೆಮನೆಗಳು ಧ್ವಂಸವಾದವು. ಸಾವೆಂಬುದು ಸಾಮಾನ್ಯ ಸುದ್ದಿಯಾಯಿತು.

ಕಡೆಗೊಂದು ದಿನ ಇವನು ಮತ್ತು ಅವನು ಇಬ್ಬರು ಪರಸ್ಪರ ಈಟಿಗಳಿಂದ ಇರಿದುಕೊಡು ಸತ್ತರು.

ಸತ್ತಮೇಲೆ ಇವನು ಮತ್ತು ಅವನು ಇಬ್ಬರೂ ಸ್ವರ್ಗದ ಬಾಗಿಲ ಬಳಿ ಹೋದರು. ಅಲ್ಲಿ ದೇವರು ಪ್ರತ್ಯಕ್ಷನಾದ. 'ಯಾರು ನೀವು? ಯಾಕೆ ಇಲ್ಲಿ ಬಂದಿರಿ' ಅಂತ ದೇವರು ಕೇಳಿದ. 'ಭಗವಾನ್, ನಿನಗಾಗಿ ಮತ್ತು ನಿನ್ನ ಧರ್ಮದ ರಕ್ಷಣೆಗಾಗಿ ನಾವು ಪರಸ್ಪರ ಕೊಂದುಕೊಂಡು ನಿನ್ನಲ್ಲಿಗೆ ಬಂದಿದ್ದೇವೆ. ನಮಗೆ ವೀರಸ್ವರ್ಗ ನೀಡು' ಎಂದರು. ಆಗ ದೇವರು ಹೇಳಿದ- 'ಅಯ್ಯೋ ಅವಿವೇಕಿಗಳೇ, ನನ್ನ ಧರ್ಮವನ್ನು ರಕ್ಷಿಸಲು ನಾನೇ ಸೃಷ್ಟಿಸಿದ ಸುಂದರ ಜಗತ್ತನ್ನು ಹಾಳು ಮಾಡಿ ಇಲ್ಲಿಗೆ ಬಂದಿದ್ದೀರಾ? ಇವನು ಮತ್ತು ಅವನು ಎಂಬ ನೀವು ಬೇರೆಯಲ್ಲ. ಇಲ್ಲಿರುವಾಗ ಇವನು ಆಗಿರುವವನು ಅಲ್ಲಿ ಹೋದಾಗ ಅವನು ಆಗುತ್ತಾನೆ. ಅಲ್ಲಿರುವ ಅವನು ಇಲ್ಲಿ ಬಂದಾಗ ಇವನು ಆಗುತ್ತಾನೆ. ಕೊಂದು ಉಳಿಸಬೇಕಾದ ಧರ್ಮ ಧರ್ಮವೇ ಅಲ್ಲ' ಹಾಗೆಂದು ದೇವರು ಅದೃಶ್ಯನಾದ.

(ಸಿದ್ಧೇಶ್ವರ ಸ್ವಾಮಿಗಳು ಹೇಳಿದ ಕತೆಯಿಂದ ಪ್ರೇರಿತ)

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ನವೆಂಬರ್ 17, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಚತುರ್ಥಿ ಗಂ. 11-04 ನಕ್ಷತ್ರ: ಪೂರ್ವಾಷಾಢ ಗಂ. 25-17 ಯೋಗ: ಧೃತಿ ಗಂ 07-36 ನಂತರ ಶೂಲ ಗಂ. 29-01 ಕರಣ: ವಿಷ್ಟಿ ಗಂ. 11-04, ವೃಶ್ಚಿಕ ಮಾಸದ 01ನೇ ದಿನ, ಮಳೆನಕ್ಷತ್ರ: ವಿಶಾಖ 4.
ರಾಹುಕಾಲ: ಬೆಳಿಗ್ಗೆ 10-30 - 12-00 ಸೂರ್ಯೋದಯ: 06-34 ಸೂರ್ಯಾಸ್ತ: 05-57 ಮುಸ್ಲಿಂ ದಿನಾಂಕ : 02 ಜುಮಾದುಲ್ಲಾವಲ್ ದಿನ ವಿಶೇಷ : ಲಾಲಾ ಲಜಪತ್ ರಾಯ್ ಪುಣ್ಯಸ್ಮರಣೆ ಅದೃಷ್ಟ ಸಂಖ್ಯೆ: 8, 9

ಮೇಷ: ಪಾರಂಪರಿಕವಾಗಿ ಬಂದ ಹಿರಿಯರ ಸ್ವತ್ತುಗಳು ನಿಮ್ಮ ಪಾಲಿಗೆ ಬರಲಿದೆ. ನಿಮ್ಮ ಅಧೀನ ಸಿಬ್ಬಂದಿಯೊಂದಿಗೆ ಸಂಯಮದಿಂದ ನಡೆದುಕೊಳ್ಳುವುದು ಉತ್ತಮ. ಶ್ರಮಜೀವಿಗಳಿಗೆ ಉತ್ತಮ ಆದಾಯವಿದೆ.

ವೃಷಭ: ನಿಮ್ಮ ಒಳ್ಳೆಯ ಯೋಚನಾಶಕ್ತಿ ಹಾಗೂ ಒಳ್ಳೆಯ ಸಂಸ್ಕೃತಿ ಈ ದಿನ ಉಪಯೋಗಕ್ಕೆ ಬರಲಿದೆ. ಕೆಲಸಗಳನ್ನು ಸಮರ್ಪಕವಾಗಿ ಮಾಡಿದ ತೃಪ್ತಿಕರ ಭಾವ ನಿಮಗೆ ಇರಲಿದೆ. ಹಿರಿಯರಿಂದ ದ್ರವ್ಯ ಲಾಭವಿದೆ.

ಮಿಥುನ: ಸಂಬಂಧಿಗಳ ಅಪಹಾಸ್ಯದ ಮಾತುಗಳಿಂದ ನಿಮ್ಮಲ್ಲಿನ ಆತ್ಮವಿಶ್ವಾಸ ಇಮ್ಮಡಿಯಾಗಲಿವೆ. ಕಠಿಣ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸುವಿರಿ. ರಾಸಾಯನಿಕ ಬಳಕೆಯ ವ್ಯತ್ಯಾಸದಿಂದ ರೈತರಿಗೆ ನಷ್ಟ ಸಂಭವಿಸುತ್ತದೆ.

ಕರ್ಕಾಟಕ: ಇನ್ನೊಬ್ಬರ ಬಲವಂತದ ಮೇಲೆ ಜೀವನ ಶೈಲಿ ಬದಲಾಯಿಸಿಕೊಳ್ಳಬೇಕಾಗಲಿದೆ. ಉದ್ಯೋಗ ನಿಮಿತ್ತ ವಿದೇಶ ಯಾನ ಮಾಡುವ ಅವಕಾಶವಿದೆ. ಆರೋಗ್ಯಕ್ಕಾಗಿ ಆಹಾರ ಸೇವನೆ ವಿಧಾನ ಬದಲಾಯಿಸಿಕೊಳ್ಳಬೇಕು.

ಸಿಂಹ: ಇನ್ನೊಬ್ಬರಿಗೆ ಹಿತ ಬಯಸುವುದು ನಿಮ್ಮ ಏಳಿಗೆಗೆ ಪೂರಕವಾಗುವುದೆಂದು ಮರೆಯದಿರಿ. ಎಲ್ಲವನ್ನೂ ಎದುರಿಸಬಲ್ಲೆನೆಂಬ ಮಾನಸಿಕ ಧೈರ್ಯವನ್ನು ತಂದುಕೊಳ್ಳಿರಿ. ಮಹಿಳಾ ಉದ್ಯೋಗಿಗಳಿಗೆ ಬಡ್ತಿ ಸಾಧ್ಯತೆ.

ಕನ್ಯಾ: ಯೋಜಿತ ಕೆಲಸ ಕಾರ್ಯಗಳಿಗೆ ಕುಟುಂಬದವರಿಂದ ಉತ್ತಮ ಸಹಕಾರ ಸಿಗಲಿದೆ. ಅಪರಿಚಿತರಿಂದ ಮೋಸ ಆಗುವ ಸಾಧ್ಯತೆಯಿದ್ದು, ಅಪರಿಚಿತ ವ್ಯಕ್ತಿಗಳೊಂದಿಗೆ ವ್ಯವಹಾರ ಸರಿಯಲ್ಲ.

ತುಲಾ: ವೃತ್ತಿ ಬದುಕಿನಲ್ಲಿ ಸಂಕೋಚದ ಪ್ರವೃತ್ತಿಯಿಂದಾಗಿ ಯಾವುದೇ ಲಾಭಗಳಿಲ್ಲದೆ ಅಧಿಕವಾದ ಜವಾಬ್ದಾರಿ ಹೊರಬೇಕಾಗುತ್ತದೆ. ವಿದ್ಯಾರ್ಥಿಗಳು ಉದಾಸೀನ ಮಾಡದೆ ವಿದ್ಯಾಭ್ಯಾಸದ ಕಡೆಗೆ ಗಮನವಹಿಸಬೇಕು.

ವೃಶ್ಚಿಕ: ಹೃದಯ ಸಂಬಂಧಿ ಕಾಯಿಲೆ ಇರುವವರಿಗೆ ರೋಗ ಉಲ್ಬಣವಾಗುವ ಸಾಧ್ಯತೆ ಇದೆ. ಪರಿಶ್ರಮದಿಂದ ಕಾರ್ಯಸಫಲತೆ ಉಂಟಾಗುವುದು. ಸೌಂದರ್ಯ ವರ್ಧಕ ವಸ್ತುಗಳ ಬಳಕೆಯಿಂದ ಅಲರ್ಜಿಯಾಗಬಹುದು.

ಧನು: ಶುಭ ಕಾರ್ಯಕ್ಕೆ ಹಿರಿಯರಿಂದ ಮಾರ್ಗದರ್ಶನ ಸಿಗುವುದು. ಅಲೆದಾಟದಿಂದ ದೇಹ ಆಯಾಸವಾದರೂ, ಕಾರ್ಯಗಳು ಉತ್ತಮ ರೀತಿಯಲ್ಲಿ ಸಾಗುವುದು. ನನೆಗುದ್ದಿಗೆ ಬಿದ್ದ ಕೆಲಸಗಳು ಪುನರಾರಂಭವಾಗುತ್ತದೆ.

ಮಕರ: ಕಾರ್ಯಕ್ಷೇತ್ರದಲ್ಲಿ ವಿಳಂಬಗಳು ತೋರಿ ಬಂದರೂ ಯೋಜಿತ ಕೆಲಸಗಳು ಫಲ ನೀಡಲಿದೆ. ಹಿರಿಯರೊಡನೆ ವಾಗ್ವಾದ ತೋರಿ ಬಾರದಂತೆ ಜಾಗ್ರತೆ ವಹಿಸಿ. ನಿಮ್ಮ ಯಶಸ್ಸಿಗೆ ಅವರ ಸಹಾಯವೂ ಅಗತ್ಯವಾಗಿರುತ್ತದೆ.

ಕುಂಭ: ಅಧಿಕಾರಿಗಳ ಜೊತೆ ಮುಕ್ತ ಚರ್ಚೆ ಮಾಡಿದ್ದಲ್ಲಿ ಸಮಸ್ಯೆಗಳ ಪರಿಹಾರವನ್ನು ಶಾಶ್ವತವಾಗಿ ಬಗೆಹರಿಸಿಕೊಳ್ಳಲು ಸಾಧ್ಯವಾಗುವುದು. ಮಹಿಳಾ ಉದ್ಯೋಗಿಗಳಿಗೆ ಕೆಲಸದ ಒತ್ತಡ ಮತ್ತು ಮಾನಸಿಕ ಒತ್ತಡ ಹೆಚ್ಚಲಿದೆ.

ಮೀನ: ಬಾಕಿ ಇರಿಸಿದ ಕೆಲಸಗಳನ್ನು ಈ ದಿನ ಪೂರ್ಣಗೊಳಿಸುವ ಬಗ್ಗೆ ಗಮನವಹಿಸಬೇಕು. ಇಲ್ಲವಾದಲ್ಲಿ ಅಧಿಕಾರಿಗಳ ಕೋಪಕ್ಕೆ ಗುರಿಯಾಗುವಿರಿ. ವ್ಯವಹಾರ ಕುಂಠಿತವಾದರೂ ಮುಂದಿನ ದಿನದಲ್ಲಿ ಅಭಿವೃದ್ಧಿಯಾಗುತ್ತದೆ.

ಪದಬಂಧ 5502

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಆಯಾಸದಿಂದ ಬಿಡುವ ಉಸಿರು (4)
2. ದ್ರವರೂಪದ ಲೋಹ (4)
4. ವಾಡಿಕೆಯಂತೆ ಬಂದಿರುವ ಗೊಲ್ಲ (4)
6. ಆನಂದ ಹೀಗೆ ಬಂದಿದೆ (3)
7. ಉಲ್ಟಾ ಆಗಿರುವ ಶರ (2)
9. ಕಬ್ಬಿಣದ ಕೆಲಸಗಾರನಿಲ್ಲಿ ತಿರುಗಿದ್ದಾನಲ್ಲಾ! (3)
11. ವರಾರದವರಿಗೆ ದೊರೆತ ಅನುಗ್ರಹ (2)
13. ಬಳಪದಲ್ಲಿ ಬರೆದವನಿಗೆ ದೊರೆತ ವೇತನ (3)
14. ನಳ ಮಾಡಿದ ರುಚಿಕಟ್ಟಾದ ಅಡುಗೆಯಿದು (4)
16. ಹೂವಿನಲ್ಲಿನ ಸಿಹಿ ರಸ (4)
17. ತೆಳುವಾದ ಎಳೆ (4)

ಮೇಲಿನಿಂದ ಕೆಳಕ್ಕೆ
1. ಹೀಗೆ ಒಂದುಗೂಡಿಸುವುದು (5)
2. ಕೆಟ್ಟ ಕೆಲಸವನ್ನು ಮಾಡಿದವನು (2)
3. ಬೆಳ್ಳಿ ಹಬ್ಬವಿದು (5)
5. ಟಾರ ರಸ್ತೆ ಬಳಿಯಲ್ಲಿನ ಮೋರಿ (3)
8. ಲಾಂಗೂಲ ಹಿಡಿದಿರುವ ಅನುಯಾಯಿ (5)
10. ವನದ ಬಗ್ಗೆ ಬರೆದ ಪದ್ಯ (3)
12. ಯುದ್ಧವನ್ನು ಸಾರುವ ಕಹಳೆ (5)



ಹಿಂದಿನ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಸುಗಮ 6.ಸೂತಿಕಾಗೃಹ 7.ಸರೀಕ 8.ತರಿ 10.ಅಂಕ 11.ಕಾರಂಜಿ 13.ಸಂಪುಟ 14.ಕೆರ 8.ಸಾಧನೆ 19.ಮಾರ್ಗದರ್ಶಕ 20.ಸದನ

ಮೇಲಿಂದ ಕೆಳಕ್ಕೆ
1.ಸುವಾಸನೆ 2.ಮರಕತ 3.ಮಸೂರ 4.ಪ್ರಕಾಶಕ 5.ಮೆಹನತ್ತು 9.ರಿಕಾಪು 10.ಅಂಜಿಕೆ 12.ಸ್ವಾಭಿಮಾನ 13.ಸಂಪಾದನೆ 15.ರಸಾಭಾಸ

ಸುಡೊಕು 5588

4				8			6	
			1		6		2	3
3		5		2		9		
	8	7					1	
		4	7	6	3	8		
5	9						7	4
		2	6	7		1		5
1	4		2				9	
	5			4		2		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5887 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ವಿಜಯೇಂದ್ರ ಹೇಳಿಕೆ: ಕಾಂಗ್ರೆಸ್ ವ್ಯಂಗ್ಯ

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಕ್ಷೇತ್ರಗಳಲ್ಲಿಯೂ ಬಿಜೆಪಿ ಗೆಲ್ಲಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಹೇಳಿಕೆ ನೀಡಿದ್ದರು. ಈ ಹೇಳಿಕೆಗೆ ರಾಜ್ಯದ ಕೆಲ ಕಾಂಗ್ರೆಸ್‌ನ ನಾಯಕರು ವಾಗ್ದಾಳಿ ನಡೆಸಿದ್ದರೆ, ಇನ್ನೂ ಕೆಲವರು ಗೇಲಿ ಮಾಡಿದ್ದಾರೆ.

'ಲೋಕಸಭಾ ಚುನಾವಣೆ ಬಳಿಕ ಬಿವೈವಿ ಹಠಾವೋ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಬಿ.ವೈ.ವಿಜಯೇಂದ್ರ ಅವರನ್ನು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ನೇಮಿಸಿರುವುದು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಯಡಿಯೂರಪ್ಪ ಅವರನ್ನು ಬಳಸಿಕೊಳ್ಳುವ ಉದ್ದೇಶದಿಂದ. ಚುನಾವಣೆ ಮುಗಿದ ಬಳಿಕ ವಿಜಯೇಂದ್ರ ಹಠಾವೋ ಅಭಿಯಾನ ಆರಂಭವಾಗಲಿದೆ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

'ರಾಜ್ಯ ಘಟಕದ ಅಧ್ಯಕ್ಷ ಅಥವಾ ವಿರೋಧ ಪಕ್ಷ ನಾಯಕನಾಗಲು ಶಾಸಕ ಬಸನಗೌಡ ಪಾಟೀಲ ಯತ್ನಾಳ ಜಾಕೆಟ್ ಹೊಲಿಸಿಕೊಂಡು ದೆಹಲಿಯಲ್ಲಿ ತಿಂಗಳ ಕಾಲ ಕೂತಿದ್ದರು. ನಮ್ಮ ಜಿಲ್ಲೆಯವರೇ ವಿರೋಧ ಪಕ್ಷದ ನಾಯಕ ಆಗುತ್ತಾರೆ ಎಂದು ನಾವೂ ಖುಷಿಯಾಗಿದ್ದೆವು. ಆದರೆ, ಆಗಿರುವುದೇ ಬೇರೆ' ಎಂದು ಕುಟುಕಿದರು.

'32 ಸ್ಥಾನ ಗೆಲ್ಲುವುದಾಗಿ ಹೇಳಬಹುದಿತ್ತು'

ಲಕ್ಷ್ಮಣ ಸವದಿ

ಬೆಳಗಾವಿ: 'ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲೂ ಗೆಲ್ಲುವುದಾಗಿ ಹೇಳಿದ್ದಾರೆ. ಅವರು ಪಕ್ಕದ ಮೂರು–ನಾಲ್ಕು ಕ್ಷೇತ್ರ ಸೇರಿಸಿಕೊಂಡು 32 ಕ್ಷೇತ್ರಗಳಲ್ಲೂ ಗೆಲ್ಲುತ್ತೇವೆ ಎನ್ನಬಹುದಿತ್ತು' ಎಂದು ಶಾಸಕ ಲಕ್ಷ್ಮಣ ಸವದಿ ವ್ಯಂಗ್ಯವಾಡಿದರು.

ಚುನಾವಣೆಯಲ್ಲಿ ಗೆಲ್ಲುವ ಬಗ್ಗೆ ವಿಜಯೇಂದ್ರ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಎಲ್ಲ ಸ್ಥಾನಗಳನ್ನೂ ಅವರಿಗೆ ಬಿಟ್ಟುಕೊಡಲು ನಾವೇನು ಕಡಲೆ ಪುರಿ ತಿನ್ನುತ್ತ ಕುಳಿತಿದ್ದೇವೆಯೇ' ಎಂದು ಪ್ರಶ್ನಿಸಿದರು.

'ಉಪ ಚುನಾವಣೆಯೇ ಬೇರೆ. ಸಾರ್ವತ್ರಿಕ ಚುನಾವಣೆಯೇ ಬೇರೆ. ಉಪ ಚುನಾವಣೆ ಕೇವಲ ಬಿಂದಿಗೆಯಲ್ಲಿನ ನೀರು ತೆಗೆದಂತೆ. ಆದರೆ, ಸಾರ್ವತ್ರಿಕ ಚುನಾವಣೆ ಸಮುದ್ರದಲ್ಲಿನ ನೀರು ತೆಗೆದಂತೆ. ಯಾರು ಗೆಲ್ಲುತ್ತಾರೆ ನೋಡೋಣ' ಎಂದು ಪುನರುಚ್ಚರಿಸಿದರು.

ವಿಜಯೇಂದ್ರಗಿಂತ ಡಿಕೆಶಿ 10 ಪಟ್ಟು ಪ್ರಬಲ

ಹಾವೇರಿ: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗಿಂತ ಹತ್ತು ಪಟ್ಟು ನಮ್ಮ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪ್ರಬಲರು. ಅವರನ್ನು ಒಂದು ಬಾರಿ ಮುಟ್ಟಿದ್ದಕ್ಕೆ ಬಿಜೆಪಿ 66 ಸ್ಥಾನಕ್ಕೆ ಇಳಿದಿದೆ. ಇನ್ನಷ್ಟು ಹತ್ತಿರ ಹೋದರೂ ಬಿಜೆಪಿ 33 ಸ್ಥಾನಗಳಿಗೆ ಕುಸಿಯುತ್ತದೆ' ಎಂದು ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ನಲಪಾಡ್ ತಿಳಿಸಿದರು. ನಗರದಲ್ಲಿ ಗುರುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಬಿ.ವೈ.ವಿಜಯೇಂದ್ರ ಅವರು ಯುವ ಘಟಕದ ಅಧ್ಯಕ್ಷರಾಗಿದ್ದರೆ ಸಂತೋಷವಾಗುತ್ತಿತ್ತು. ಅವರ ಸಮಯ ಚೆನ್ನಾಗಿದೆ. ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾರೆ. ಅವರಿಗೆ ದೇವರು ಒಳ್ಳೆಯದು ಮಾಡಲಿ' ಎಂದರು.

ವಿಜಯೇಂದ್ರಗೆ ಕಾಲವೇ ಉತ್ತರ ಕೊಡಲಿದೆ: ವಿ. ಸೋಮಣ್ಣ

ವಿ. ಸೋಮಣ್ಣ

ಬೆಂಗಳೂರು: 'ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಬಗ್ಗೆ ಮಾತನಾಡಲು ಕಾಲ ಬಂದಿಲ್ಲ. ಮುಂದಿನ ದಿನಗಳಲ್ಲಿ ಕಾಲವೇ ಉತ್ತರ ಕೊಡಲಿದೆ' ಎಂದು ಮಾಜಿ ಸಚಿವ ವಿ.ಸೋಮಣ್ಣ ಹೇಳಿದ್ದಾರೆ.

ಗುರುವಾರ ಸುದ್ದಿಗಾರರ ಜತೆ ಮಾತನಾಡಿ, 'ಪ್ರಸಿದ್ಧಿ ಪಡೆದವರಿಗೆ, ಕೆಲಸಗಾರರಿಗೆ ಕೆಲವು ವೇಳೆ ಮುಜುಗರದ ಸಂಗತಿ ಎದುರಾಗುತ್ತದೆ. ಕೆಲವೇ ದಿನಗಳಲ್ಲಿ ಸವಿಸ್ತಾರವಾಗಿ ಮಾತನಾಡುತ್ತೇನೆ. ಕಾಂಗ್ರೆಸ್ ನನ್ನನ್ನು ಸಂಪರ್ಕಿಸಬೇಕಾದ ಅವಶ್ಯಕತೆ ಇಲ್ಲ' ಎಂದರು.

'ನಾನು ಲೋಕಸಭೆ ಚುನಾವಣೆಗೆ ಅಭ್ಯರ್ಥಿಯಲ್ಲ. ನನ್ನದೇ ಆದ ಭಾವನೆ ವ್ಯಕ್ತಪಡಿಸಲು ಕಾಲ ಕೂಡಿಬಂದಿಲ್ಲ. ರಸ್ತೆಯಲ್ಲಿ ಬೇಕಾದಷ್ಟು ಚರ್ಚೆಗಳು ಆಗುತ್ತವೆ. ಅದಕ್ಕೆ ನಾನು ಹೊಣೆಯಲ್ಲ. ಕಷ್ಟಪಟ್ಟು ಮೇಲೆ ಬಂದಿದ್ದೇನೆ. ಬೆಂಗಳೂರಿನಂತಹ ಮಹಾನಗರದಲ್ಲಿ ಗೆದ್ದು ಬಂದಿದ್ದೇನೆ. ನೇರವಾಗಿ ಮಾತನಾಡುತ್ತೇನೆ. ಇಬ್ಬಗೆತನ ನನಗೆ ಗೊತ್ತಿಲ್ಲ' ಎಂದು ಹೇಳಿದರು.

'ಸಿದ್ಧಗಂಗಾ ಮಠಕ್ಕೂ ನನಗೂ ಅವಿನಾಭಾವ ಸಂಬಂಧವಿದೆ. ಹಿಂದಿನ ಸ್ವಾಮೀಜಿ ಅವರ ಅಣತಿ ಮೇರೆಗೆ ಅಲ್ಲಿ ಸಣ್ಣ ಕಟ್ಟಡ ಕಟ್ಟಿದ್ದು, ಅದನ್ನು ಮಠಕ್ಕೆ ಹಸ್ತಾಂತರಿಸುತ್ತಿದ್ದೇನೆ. ರಾಜಕಾರಣಕ್ಕೆ ಮಠವನ್ನು ಬಳಸಿಕೊಳ್ಳುವ ಸಣ್ಣತನ ನನ್ನದಲ್ಲ' ಎಂದೂ ಅವರು ಸ್ಪಷ್ಟಪಡಿಸಿದರು.

ಸುದ್ದಿ 2 ನಿಮಿಷ

ಇಂದು ವಿರೋಧ ಪಕ್ಷದ ನಾಯಕನ ಆಯ್ಕೆ

ಬೆಂಗಳೂರು: ವಿರೋಧಪಕ್ಷದ ನಾಯಕ ಸ್ಥಾನದ ಆಯ್ಕೆ ಶುಕ್ರವಾರ ನಡೆಯಲಿದ್ದು, ಶಾಸಕರಾದ ವಿ.ಸುನಿಲ್‌ಕುಮಾರ್, ಡಾ.ಸಿ.ಎನ್. ಅಶ್ವತ್ಥನಾರಾಯಣ ಮತ್ತು ಆರ್. ಅಶೋಕ ಅವರ ಹೆಸರು ಮುನ್ನೆಲೆಗೆ ಬಂದಿದೆ.

ಸಂಜೆ 6 ಕ್ಕೆ ಐಟಿಸಿ ಗಾರ್ಡೇನಿಯಾದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ. ಆಯ್ಕೆ ಪ್ರಕ್ರಿಯೆಗಾಗಿ ಕೇಂದ್ರದಿಂದ ಇಬ್ಬರು ವೀಕ್ಷಕರು ಬರಲಿದ್ದು, ಯಾರೆಲ್ಲ ಬರುತ್ತಾರೆ ಮತ್ತು ಯಾವ ರೀತಿಯಲ್ಲಿ ಆಯ್ಕೆ ಮಾಡಲಾಗುತ್ತದೆ ಎಂಬ ಸ್ಪಷ್ಟತೆ ಸಿಕ್ಕಿಲ್ಲ ಎಂದು ಬಿಜೆಪಿ ಮೂಲಗಳು ಹೇಳಿವೆ.

ಪಕ್ಷದ ಅಧ್ಯಕ್ಷ ಸ್ಥಾನ ಲಿಂಗಾಯತ ಸಮುದಾಯಕ್ಕೆ ನೀಡಿರುವುದರಿಂದ ವಿರೋಧಪಕ್ಷದ ನಾಯಕ ಸ್ಥಾನವನ್ನು ಹಿಂದುಳಿದ ಸಮುದಾಯಕ್ಕೆ ನೀಡುವುದಾದರೆ ಸುನಿಲ್‌ಕುಮಾರ್ ಅವರಿಗೂ, ಒಕ್ಕಲಿಗ ಸಮುದಾಯಕ್ಕೆ ಮಣೆ ಹಾಕುವುದಾದರೆ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ಹೊಣೆಗಾರಿಕೆ ನೀಡಬಹುದು. ಅಶೋಕ ಅವರು ಹಿರಿತನದ ಆಧಾರದಲ್ಲಿ ವಿರೋಧಪಕ್ಷದ ನಾಯಕನಾಗಬೇಕು ಎಂಬ ಉತ್ಸಾಹದಲ್ಲಿದ್ದಾರೆ. ಆದರೆ, ಇವರಿಗೆ ಎದುರಾಳಿ ನಾಯಕರನ್ನು ಮಾತಿನಲ್ಲಿ ಕಟ್ಟಿಹಾಕಲು ಸಾಧ್ಯವಿಲ್ಲ ಎಂಬ ಅಭಿಪ್ರಾಯವೂ ಇದೆ. ಅಂತಿಮ ಕ್ಷಣದಲ್ಲಿ ಹಿರಿತನದ ಆಧಾರದಲ್ಲಿ ಅಶೋಕ ಅವರಿಗೆ ಪಟ್ಟ ಕಟ್ಟಿದರೂ ಅಚ್ಚರಿ ಇಲ್ಲ ಎಂದು ಮೂಲಗಳು ತಿಳಿಸಿವೆ.

ಈ ಮಧ್ಯೆ ಸುದ್ದಿಗಾರರ ಜತೆ ಮಾತನಾಡಿದ ಆರ್.ಅಶೋಕ, 'ಪ್ರತಿಪಕ್ಷ ನಾಯಕನ ಸ್ಥಾನಕ್ಕೆ ನಾನೂ ಆಕಾಂಕ್ಷಿಯಾಗಿದ್ದೇನೆ. ನಾಳೆ ಹೆಸರು ಪ್ರಕಟವಾಗಲಿದೆ. ನಾನೂ ಸೇರಿ ನಾಲ್ಕೈದು ಮಂದಿ ಆಕಾಂಕ್ಷಿಗಳಿದ್ದೇವೆ. ಪಕ್ಷ ಯಾರಿಗೆ ಅವಕಾಶ ನೀಡಿದರೂ ಸ್ವಾಗತಿಸುತ್ತೇನೆ' ಎಂದೂ ಹೇಳಿದ್ದಾರೆ.

ಕಳೆದಿದ್ದ ತಾಳಿ ಹಾಸನಾಂಬ ಹುಂಡಿಯಲ್ಲಿ ಪತ್ತೆ

ಹಾಸನ: ಹಾಸನಾಂಬ ದರ್ಶನಕ್ಕೆಂದು ಬಂದು ತಾಳಿಯನ್ನು ಕಳೆದುಕೊಂಡಿದ್ದ ಕೆ.ಆರ್. ನಗರ ತಾಲ್ಲೂಕಿನ ಸಾಲಿಗ್ರಾಮದ ರಮ್ಯಾ ಅವರ 5 ಗ್ರಾಂ ಚಿನ್ನದ ತಾಳಿಯು, ಗುರುವಾರ ಗುಡಿಯ ಹುಂಡಿ ಎಣಿಕೆ ವೇಳೆ ಪತ್ತೆಯಾಯಿತು.

ಉತ್ಸವದ ಸಂದರ್ಭದಲ್ಲಿ ತಾಳಿ ಕಳೆದುಕೊಂಡಿದ್ದ ಗೃಹಿಣಿಯು ಉಪ ವಿಭಾಗಾಧಿಕಾರಿ ಮಾರುತಿ ಅವರಿಗೆ ಮಾಹಿತಿ ನೀಡಿ ತೆರಳಿದ್ದರು. ತಾಳಿಯನ್ನು ಗುರುವಾರ ಅಧಿಕಾರಿಗಳು ಅವರಿಗೆ ಮರಳಿಸಿದರು.

ಹಾಸನಾಂಬ ಹುಂಡಿಯಲ್ಲಿ ₹2.50 ಕೋಟಿ ಸಂಗ್ರಹವಾಗಿದೆ. ಟಿಕೆಟ್, ಲಾಡು ಮಾರಾಟದಿಂದ ₹6.15 ಕೋಟಿ ಸಂಗ್ರಹವಾಗಿದೆ. ಒಟ್ಟಾರೆ ಈ ವರ್ಷ ದಾಖಲೆಯ ₹8.72 ಕೋಟಿ ಆದಾಯ ಸಂಗ್ರಹವಾಗಿದೆ.

ಜೊತೆಗೆ 62 ಗ್ರಾಂ ಚಿನ್ನಾಭರಣ, 161 ಗ್ರಾಂ ಬೆಳ್ಳಿಯ ಆಭರಣಗಳು ಹುಂಡಿಯಲ್ಲಿ ಸಿಕ್ಕಿವೆ. ಇದೇ ಮೊದಲ ಬಾರಿಗೆ ಅಳವಡಿಸಿದ್ದ ಇ-ಹುಂಡಿಯಿಂದ ₹4.64 ಲಕ್ಷ ಸಂಗ್ರಹವಾಗಿದೆ.

ಭಕ್ತರು ವಿವಿಧ ಕೋರಿಕೆಗಳನ್ನು ಬರೆದು ದೇವಸ್ಥಾನದ ಹುಂಡಿಯಲ್ಲಿ ಹಾಕುತ್ತಾರೆ. ಈ ಕೋರಿಕೆಗಳ ಗೋಪ್ಯತೆ ಕಾಪಾಡಲೆಂದೇ ಕಳೆದ ವರ್ಷದಿಂದ ಪತ್ರಗಳನ್ನು ಓದದಂತೆ ದೇಗುಲದ ಆಡಳಿತ ಮಂಡಳಿ ನಿರ್ಧಾರ ಕೈಗೊಂಡಿದೆ.

ವರ್ಗಾವಣೆ ದಂಧೆಗೆ ಸಾಕ್ಷ್ಯ ಬೇಕಾ: ಕುಮಾರಸ್ವಾಮಿ

ಒಂದನೇ ಪುಟದಿಂದ

'ಮುಖ್ಯಮಂತ್ರಿ, ಸಚಿವರು ಸೇರಿದಂತೆ ಕಾಂಗ್ರೆಸ್ ನಾಯಕರು ಎಲ್ಲದಕ್ಕೂ ಸಾಕ್ಷ್ಯ ಕೇಳುತ್ತಿದ್ದಾರೆ. ಹಿಂದೆ ಬಿಜೆಪಿ ಸರ್ಕಾರದ ಮೇಲೆ ಮಾಡಿದ್ದ ಒಂದಾದರೂ ಆರೋಪಕ್ಕೆ ಸಾಕ್ಷ್ಯ ನೀಡಲಿಲ್ಲ. 'ಪೇಸಿಎಂ' ಎಂದು ಅಬ್ಬರಿಸಿದ್ದರು. ಈಗ ತೆಲಂಗಾಣ ಸೇರಿದಂತೆ ಬೇರೆ ರಾಜ್ಯಗಳಲ್ಲೂ ಇವರದೇ ಫೋಟೊ ಅಂಟಿಸಿ 'ಪೇಸಿಎಂ' ಪ್ರಚಾರ ಮಾಡುವ ಸ್ಥಿತಿ ನಿರ್ಮಾಣವಾಗಿದೆ. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾದಾಗ ಅವರ ಪುತ್ರ ವಿಜಯೇಂದ್ರ ಅವರನ್ನು 'ಸೂಪರ್ ಸಿಎಂ', ಎಲ್ಲದಕ್ಕೂ ಶೇ 25ರಷ್ಟು ಕಮಿಷನ್ ತೆಗೆದುಕೊಳ್ಳುತ್ತಾರೆ ಎಂದು ಸಿದ್ದರಾಮಯ್ಯ ಟೀಕಿಸಿದ್ದರು. ಈಗ ಅವರ ಪುತ್ರ ಯತೀಂದ್ರ ಏನು' ಎಂದು ಪ್ರಶ್ನಿಸಿದರು.

'ರಾಜಕೀಯದಲ್ಲಿ ನಾನು ಸೇರಿದಂತೆ ಯಾರೂ ಸಾಚಾ ಇಲ್ಲ. ಶೇ 100ರಷ್ಟು ಶುದ್ಧವಾಗಿರುವುದು ಸಾಧ್ಯವಿಲ್ಲ. ಹಾಗಂತ ಕಾಂಗ್ರೆಸ್‌ನವರ ರೀತಿ ವರ್ಗಾವಣೆ, ನೇಮಕಾತಿಯಲ್ಲೂ ಹಣಕ್ಕೆ ಕೈಚಾಚಲಿಲ್ಲ. ಕೆರೆ, ಕಟ್ಟೆ, ಕಟ್ಟಡಗಳನ್ನೇ ನುಂಗಿ ಹಣ ಮಾಡಲಿಲ್ಲ. ಚುನಾವಣಾ ಖರ್ಚಿಗಾಗಿ ಹಣ ಸಂಗ್ರಹಿಸಿದ್ದೇವೆ. ಬಲಗೈಲಿ ತೆಗೆದುಕೊಂಡಿದ್ದನ್ನು ಎಡಗೈಲಿ ನೀಡಿದ್ದೇವೆ. ಪಕ್ಷ ಉಳಿಸಲು ಭಿಕ್ಷೆ ಬೇಡಿದ್ದೇವೆ. ದಂಧೆ ಮಾಡಿ ಗಂಟು ಇಟ್ಟಿಲ್ಲ' ಎಂದರು.

ಮಂಡ್ಯ ಸಚಿವರಿಂದ ಕೆರೆ ಕಬಳಿಕೆ: ಕುಮಾರಸ್ವಾಮಿ ಆಸ್ತಿಯ ಬಗ್ಗೆ ತನಿಖೆ ಮಾಡಬೇಕು ಎಂದು ಸಿದ್ದರಾಮಯ್ಯ ಸಂಪುಟದ ಸಚಿವರೊಬ್ಬರು ಹೇಳಿದ್ದಾರಂತೆ. ಮಂಡ್ಯ ಜಿಲ್ಲೆಯ ಆ ಮಹಾ ನಾಯಕರು (ಚಲುವರಾಯಸ್ವಾಮಿ) ದಾಸನಪುರ ಹೋಬಳಿಯ ಸರ್ವೆ ನಂಬರ್ 13ರ 3.5 ಎಕರೆ ಮಾಕಳಿ ಕೆರೆಯನ್ನೇ ಕಬಳಿಸಿದ್ದಾರೆ. ಅದನ್ನೂ ತನಿಖೆ ಮಾಡಿಸಬೇಕು ಎಂದು ಕುಮಾರಸ್ವಾಮಿ ಒತ್ತಾಯಿಸಿದರು.

ಹಲೋ ಅಪ್ಪ. . . ಯತೀಂದ್ರ

ಒಂದನೇ ಪುಟದಿಂದ

ಹಲೋ... ಮಹದೇವ್ ಯಾಕೆ ಯಾವ್ಯಾವುದೋ ಕೊಡುತ್ತಿದ್ದೀರಿ. ಹ... ಮತ್ತೆ ಇದೆಲ್ಲ ಯಾರು ಕೊಡುತ್ತಿರುವುದು ಲಿಸ್ಟ್‌ನಲ್ಲಿ?

ಇಲ್ಲ... ಬೇಡ ಅದೆಲ್ಲ ಬೇಡ. ನಾನು ಯಾವುದೆಲ್ಲ ನಾಲ್ಕೈದು ಕೊಟ್ಟಿದ್ದಿನೊ... ಅಷ್ಟನ್ನು ಮಾತ್ರ ಮಾಡಿ. ಹೇಳಿ.

ಎಂದು ತಮ್ಮ ಮೊಬೈಲ್ ಅನ್ನು ಹಿಂಭಾಗದಲ್ಲಿರುವವರಿಗೆ ಯತೀಂದ್ರ ನೀಡಿರುವುದು ವಿಡಿಯೊದಲ್ಲಿದೆ.

ಯತೀಂದ್ರ ವಿಡಿಯೊ ತುಣುಕಿನ ಬಗ್ಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿಕೆ

'ವರ್ಗಾವಣೆ ದಂಧೆ ಎನ್ನಲು ಉಲ್ಲೇಖವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವ ಅಧಿಕಾರಿ ಹೆಸರು, ಯಾವ ಹುದ್ದೆ, ಎಷ್ಟು ಲಂಚ ಎಂದು ಯತೀಂದ್ರ ಎಲ್ಲಿ ಹೇಳಿದ್ದಾರೆ. ಕುಮಾರಸ್ವಾಮಿ ಸುಮ್ಮನೆ ಪ್ರಚಾರ ಮಾಡಿ ನಮ್ಮ ಹುಡುಗನನ್ನು (ಯತೀಂದ್ರ) ನಾಯಕನನ್ನಾಗಿ ಬೆಳೆಸುತ್ತಿದ್ದಾರೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರತಿಕ್ರಿಯಿಸಿದರು.

ಯತೀಂದ್ರ ವಿಡಿಯೊ ತುಣುಕಿನ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ನಾನು ಆ ವಿಡಿಯೊ ನೋಡಿದ್ದೇನೆ. ಮಾಜಿ ಶಾಸಕ ತಂದೆಯ ಜವಾಬ್ದಾರಿ ತೆಗೆದುಕೊಂಡು ತಮ್ಮ ಕ್ಷೇತ್ರದ ಶಾಲೆಗಳ ಅಭಿವೃದ್ಧಿ ಬಗ್ಗೆ ಮಾತನಾಡಿದ್ದಾರೆ. ವರ್ಗಾವಣೆ ದಂಧೆ ಎನ್ನಲು ಅವರು ಯಾವ ಅಧಿಕಾರಿ, ಯಾವ ಹುದ್ದೆ ಎಂದು ಉಲ್ಲೇಖವನ್ನೇ ಮಾಡಿಲ್ಲವಲ್ಲ' ಎಂದರು.

'ಮಾಜಿ ಶಾಸಕರಾಗಿ ಯತೀಂದ್ರ ಅವರು ಒಂದು ವೇಳೆ ತಮ್ಮ ಕ್ಷೇತ್ರಕ್ಕೆ ಬೇಕಾದ 4-5 ಅಧಿಕಾರಿಗಳನ್ನು ವರ್ಗಾವಣೆ ಮಾಡಿಸಿಕೊಂಡರೆ ಅದರಲ್ಲಿ ತಪ್ಪೇನಿದೆ' ಎಂದೂ ಪ್ರಶ್ನಿಸಿದರು. 'ಬಿಜೆಪಿ- ಜೆಡಿಎಸ್‌ನವರಿಗೆ ಮಾಡಲು ಕೆಲಸವಿಲ್ಲ. ಯತೀಂದ್ರ ಅವರು ಆಶ್ರಯ ಸಮಿತಿ ಅಧ್ಯಕ್ಷರು. ಒಂದಷ್ಟು ಶಾಲೆಗಳಿಗೆ ಸಿಎಸ್‌ಆರ್ ಅನುದಾನದ ಅಡಿಯಲ್ಲಿ ಮೂಲಸೌಕರ್ಯಗಳನ್ನು ಒದಗಿಸಲು ವಿವೇಕಾನಂದ ಅಥವಾ ಮಹದೇವಪ್ಪ ಎನ್ನುವ ಅಧಿಕಾರಿಗೆ ಶಾಲೆಗಳನ್ನು ಗುರುತಿಸುವ ಜವಾಬ್ದಾರಿ ನೀಡಿದ್ದಾರೆ. ಯಾರೋ ಒಂದಷ್ಟು ಶಾಲೆಗಳ ಹೆಸರನ್ನು ಬದಲಾಯಿಸಿದ ಕಾರಣ, ಸ್ಥಳೀಯರು ದೂರು ನೀಡಿದ್ದರು. ಅದಕ್ಕೆ ಯತೀಂದ್ರ ಅವರು ಇಂತಿಷ್ಟು ಹಳ್ಳಿಗಳ ಶಾಲೆಗಳಿಗೆ ಸೌಲಭ್ಯ ನೀಡುತ್ತೇವೆ ಎಂದು ಮಾತುಕೊಟ್ಟಿದ್ದು, ಅದರಂತೆ ಜನ ಸಂಪರ್ಕ ಸಭೆಯಲ್ಲಿಯೇ ಕರೆ ಮಾಡಿ ಮಾತನಾಡಿದ್ದಾರೆ' ಎಂದರು.

'ಉನ್ನತ ಮಟ್ಟದ ತನಿಖೆಯಾಗಲಿ'

ಬೆಂಗಳೂರು: 'ಯತೀಂದ್ರ ಅವರಿಗೆ ಸಂಬಂಧಿಸಿದ ವಿಡಿಯೊದಲ್ಲಿ ಸಿದ್ದರಾಮಯ್ಯ ಅವರ ಸಂಭಾಷಣೆಯೂ ಇದೆ. ಹೀಗಾಗಿ, ಉನ್ನತ ಮಟ್ಟದ ತನಿಖೆ ಆಗಬೇಕು' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಗುರುವಾರ ಇಲ್ಲಿ ಮಾತನಾಡಿ, 'ಯಾರಾದರೂ ಹೇಳಿಕೆ ನೀಡಿದರೆ, ಟ್ವೀಟ್ ಮಾಡಿದರೆ ಈ ಸರ್ಕಾರ ಪ್ರಕರಣ ದಾಖಲಿಸುತ್ತದೆ. ಈಗ ಬಹಿರಂಗವಾಗಿ ಎಲ್ಲ ವಿಚಾರಗಳ ಸಂಭಾಷಣೆ ನಡೆದಿದೆ. ಆದ್ದರಿಂದ ಯಾವ ಯಾವ ವ್ಯವಹಾರ ಆಗಿದೆ ಎನ್ನುವುದರ ಬಗ್ಗೆ ಸ್ಪಷ್ಟ ತನಿಖೆಯಾಗಲಿ' ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಅವರು ವಿಧಾನಸೌಧದ ಹೊರಗೆ ಪರ್ಯಾಯ ಸರ್ಕಾರ ನಡೆಸಿದ್ದಾರೆ
ಗೋವಿಂದ ಕಾರಜೋಳ, ಬಿಜೆಪಿ ನಾಯಕ

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ನಂತರ ಈಗ ಯತೀಂದ್ರ ಅವರು ಅಧಿಕಾರದ ಕೇಂದ್ರ ಬಿಂದು ಆಗಿದ್ದಾರೆ
ಎ.ನಾರಾಯಣಸ್ವಾಮಿ, ಕೇಂದ್ರದ ರಾಜ್ಯ ಸಚಿವ

ಡಾ.ಯತೀಂದ್ರ ಅವರ ಕುರಿತು ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ವಾಸ್ತವವಾಗಿಲ್ಲ, ಕಟ್ ಅಂಡ್ ಪೇಸ್ಟ್ ಮಾಡಿರುವ ಸಾಧ್ಯತೆ ಇದೆ
ಎನ್.ಚಲುವರಾಯಸ್ವಾಮಿ, ಕೃಷಿ ಸಚಿವ

'ರಾಜ್ಯದಲ್ಲಿ ಅಪ್ಪ–ಮಕ್ಕಳ ಸರ್ಕಾರ'

ಕಲಬುರಗಿ: 'ಫೋನ್‌ನಲ್ಲಿ ಮುಖ್ಯಮಂತ್ರಿ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರು ಮಾತನಾಡುವುದು ನೋಡಿದರೆ ಹಿಂಬಾಗಿಲಿನ ಮೂಲಕ ಸರ್ಕಾರವನ್ನು ನಡೆಸುತ್ತಿದ್ದಾರೆ ಎಂಬುದು ತಿಳಿಯುತ್ತದೆ. ರಾಜ್ಯದಲ್ಲಿ ಇರುವುದು ಅಪ್ಪ–ಮಕ್ಕಳ ಸರ್ಕಾರ' ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಟೀಕಿಸಿದರು.

ಗುರುವಾರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಯತೀಂದ್ರ ಅವರು ಸೂಪರ್ ಸಿ.ಎಂ ಆಗಿ ಕಾರ್ಯ ನಿರ್ವಹಿಸುತ್ತಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಸರ್ಕಾರದಲ್ಲಿ ಯತೀಂದ್ರ ಅವರು ಆದೇಶ ಕೊಡುವ ಮಟ್ಟಕ್ಕೆ ತಲುಪಿದ್ದಾರೆ ಎಂದರೆ ಏನರ್ಥ? ವಿಡಿಯೊ ಸಂಭಾಷಣೆಯ ಬಗ್ಗೆ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಡಬೇಕು' ಎಂದು ಅವರು ಒತ್ತಾಯಿಸಿದರು.

ಎಚ್‌ಡಿಕೆ ತಾನು ಕಳ್ಳ, ಪರರ ನಂಬ: ಸಿದ್ದರಾಮಯ್ಯ

ಒಂದನೇ ಪುಟದಿಂದ

'ಆದರೆ ಮಾಧ್ಯಮಗಳಲ್ಲಿ ಪ್ರಸಾರ, ಪ್ರಕಟವಾಗುತ್ತಿರುವ ಸುಳ್ಳು ಸುದ್ದಿಗಳನ್ನು ಅಮಾಯಕ ಜನ ನಂಬಿ ತಪ್ಪು ತಿಳಿದುಕೊಳ್ಳಬಾರದು ಎನ್ನುವ ಕಾರಣಕ್ಕೆ ಈ ವಿವರವನ್ನು ನೀಡಿದ್ದೇನೆ. ಸುಳ್ಳು, ಮೋಸ, ದ್ರೋಹ, ವಚನಭ್ರಷ್ಟತೆಗಳನ್ನೇ ಅಸ್ತ್ರಮಾಡಿಕೊಂಡು ಗಳಿಸಿದ ಅಧಿಕಾರವನ್ನು ಕೇವಲ ಹಣದ ಲೂಟಿಗಾಗಿ ದುರ್ಬಳಕೆ ಮಾಡಿಕೊಂಡ ಕುಮಾರಸ್ವಾಮಿಯವರಿಗೆ ಅಭಿವೃದ್ಧಿಯ ವಿಚಾರ ಅರ್ಥವಾಗುವಂತಹದ್ದಲ್ಲ' ಎಂದಿದ್ದಾರೆ.

'ಆಶ್ರಯ ಸಮಿತಿ ಅಧ್ಯಕ್ಷ, ಕೆಡಿಪಿ ಸದಸ್ಯರಾಗಿರುವ ಹಾಗೂ ಕ್ಷೇತ್ರವನ್ನು ನೋಡಿಕೊಳ್ಳುತ್ತಿರುವ ಯತೀಂದ್ರ ನನ್ನ ಬಳಿ ಮಾತನಾಡಿ, ಸಿಎಸ್‌ಆರ್ ನಿಧಿಯ ಕುರಿತು ಪ್ರಶ್ನಿಸಿದಾಗ ಪಟ್ಟಿಯನ್ನು ಮಹದೇವಪ್ಪ ಅವರಿಗೆ ನೀಡಲಾಗಿದೆ ಎಂದು ತಿಳಿಸಿದೆ. ಕುಮಾರಸ್ವಾಮಿ ಅವರ ಕಾಲದಲ್ಲಿ ಏನಾಗುತ್ತಿತ್ತೊ? ಅದರಿಂದ ಹೊರಬರಲು ಅವರಿಗೆ ಆಗುತ್ತಿಲ್ಲ' ಎಂದು ದೂರಿದರು.

ಒಎಸ್‌ಡಿ ಮಹದೇವ್ ಅವರಿಗೆ ಅಕ್ರಮವಾಗಿ ಬಡ್ತಿ ನೀಡಿ ಇಟ್ಟುಕೊಳ್ಳಲಾಗಿದೆ ಎಂಬ ಆರೋಪಕ್ಕೆ ಉತ್ತರಿಸಿದ ಅವರು, 'ಮಹದೇವ್ ಅವರು ನಮ್ಮೂರಿನವರೇ ಆಗಿದ್ದು, ಉಪ ನೋಂದಣಾಧಿಕಾರಿ ಆಗಿದ್ದಾರೆ. ಅವರನ್ನು ನಮ್ಮ ಕಚೇರಿಗೆ ತೆಗೆದುಕೊಳ್ಳಲಾಗಿದೆ. ಅದರಲ್ಲಿ ತಪ್ಪೇನು? ವಿಡಿಯೊದಲ್ಲಿ ಹಣದ ಬಗ್ಗೆ ಮಾತನಾಡಿದ್ದಾರೆಯೇ? ಅಥವಾ ವರ್ಗಾವಣೆಯ ಬಗ್ಗೆ ಮಾತನಾಡಿದ್ದಾರೆಯೇ' ಎಂದು ಪ್ರಶ್ನಿಸಿದರು. 'ಸಿಎಸ್‌ಆರ್ ನಿಧಿ ಬಗ್ಗೆ ಮಾತನಾಡಿರುವುದಕ್ಕೆ ದಾಖಲಾತಿ ಇರುತ್ತದೆಯೇ? ಅದಕ್ಕೆ ಎಲ್ಲಿಂದ ದಾಖಲಾತಿ ನೀಡಬೇಕು. ಅನಗತ್ಯವಾಗಿ ಸುಳ್ಳು ಆರೋಪ ಮಾಡಬಾರದು' ಎಂದರು.

ಗೋದಾಮು ಕಣ್ಗಾವಲಿಗೆ ಕ್ಯಾಮೆರಾ

306 ಗೋದಾಮುಗಳಲ್ಲಿನ 2.2 ಲಕ್ಷ ಟನ್ ಆಹಾರ ಧಾನ್ಯ ರಕ್ಷಣೆಗೆ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಎಲ್ಲ ಗೋದಾಮುಗಳಿಗೂ ಸಿಸಿಟಿವಿ ಕ್ಯಾಮೆರಾ ಅಳವಡಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದ್ದು, ಇದಕ್ಕೆ ₹12.24 ಕೋಟಿ ಬಿಡುಗಡೆ ಮಾಡಲು ನಿರ್ಧರಿಸಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಇದರಿಂದಾಗಿ ಸಗಟು ಗೋದಾಮುಗಳಲ್ಲಿ ಸಂಗ್ರಹಿಸಿರುವ ಆಹಾರ ಧಾನ್ಯಗಳನ್ನು ರಕ್ಷಣೆ ಸಾಧ್ಯವಾಗಲಿದೆ. ಈ ಕ್ರಮದಿಂದಾಗಿ, ತಾಲ್ಲೂಕು, ಜಿಲ್ಲೆ ಹಾಗೂ ರಾಜ್ಯ ಮಟ್ಟದ ಕಚೇರಿಗಳಲ್ಲಿ ಕುಳಿತೇ, ನೈಜ ಸಮಯದಲ್ಲಿ ಗೋದಾಮುಗಳ ಮೇಲೆ ನಿಗಾ ಇಡಲು ಸಾಧ್ಯ. ರಾಜ್ಯದಲ್ಲಿ 306 ಗೋದಾಮುಗಳಿದ್ದು, 2.2 ಲಕ್ಷ ಟನ್ ಆಹಾರ ಧಾನ್ಯವನ್ನು ಸಂಗ್ರಹಿಸಿಡಲಾಗುತ್ತಿದೆ ಎಂದರು.

ಸಂಪುಟ ಸಭೆಯ ಪ್ರಮುಖ ಅಂಶಗಳು:

- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ನಂಜನಗೂಡು ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿ ಮತ್ತು ತ್ಯಾಜ್ಯ ನೀರು ಸಂಸ್ಕರಣಾ ಘಟಕದ ಭೂಸ್ವಾಧೀನ ವೆಚ್ಚಕ್ಕೆ ₹44 ಕೋಟಿ ನೀಡಲು ಅನುಮೋದನೆ
- ಎನ್‌ಜಿಟಿ ಪರಿಸರ ಪರಿಹಾರ ನಿಧಿಯ ಅಡಿಯಲ್ಲಿ 2 ನೇ ಹಂತದಲ್ಲಿ 17 ಆದ್ಯತೆಯ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆಯ ನಿರ್ಮಾಣ ಮತ್ತು ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ₹750 ಕೋಟಿಗೆ ಆಡಳಿತಾತ್ಮಕ ಅನುಮೋದನೆ
- 2023–24 ನೇ ಸಾಲಿಗೆ ಅಂಗವಿಕಲರಿಗೆ ₹36 ಕೋಟಿ ವೆಚ್ಚದಲ್ಲಿ 4,000 ಹೆಚ್ಚುವರಿ ಯಂತ್ರ ಚಾಲಿತ ದ್ವಿಚಕ್ರ ವಾಹನ ಖರೀದಿಸಿ ವಿತರಿಸಲು ಅನುಮತಿ
- ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ 4 ಲಕ್ಷ ಟನ್ ರಾಗಿ ಸಂಗ್ರಹಿಸಿಡಲು 80 ಲಕ್ಷ ಗೋಣಿ ಚೀಲ ಖರೀದಿಸಲು ₹76 ಕೋಟಿ ಬಿಡುಗಡೆಗೆ ಒಪ್ಪಿಗೆ.

ಇಂದಿರಾ ಕ್ಯಾಂಟೀನ್ ಕಾಮಗಾರಿಗೆ ವಿನಾಯ್ತಿ

ರಾಜ್ಯದ ಮಹಾನಗರ ಪಾಲಿಕೆ (ಬಿಬಿಎಂಪಿ ಹೊರತುಪಡಿಸಿ) ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಾಣ ಕಾಮಗಾರಿಗೆ ಕೆಟಿಪಿಪಿ ಕಾಯ್ದೆಯ ಕಲಂ4 (ಜಿ) ರಡಿ ವಿನಾಯಿತಿ ನೀಡಲು ಸಂಪುಟ ಒಪ್ಪಿಗೆ ನೀಡಿದೆ.

ಎಲ್ಲಾ ನಗರ ಸ್ಥಳೀಯ ಪಟ್ಟಣಗಳಲ್ಲಿ ಎರಡನೇ ಹಂತದಲ್ಲಿ 188 ಇಂದಿರಾ ಕ್ಯಾಂಟೀನ್‌ಗಳನ್ನು ಮೊದಲ ಹಂತದಲ್ಲಿ ನಿರ್ಮಿಸಲಾಗಿದ್ದ ಪ್ರೀಕಾಸ್ಟ್ ವಿಧಾನದ ಮಾದರಿ ಹಾಗೂ ಅನುಮೋದಿತ ವಿನ್ಯಾಸದಲ್ಲೇ ನಿರ್ಮಿಸಲು ಅನುಮೋದನೆ ನೀಡಲಾಗಿದೆ. ಈ ಊರುಗಳಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಾಣಕ್ಕೆ ಯಾರೂ ಬರುತ್ತಿಲ್ಲವಾದ ಕಾರಣ 4 ಜಿ ವಿನಾಯತಿ ನೀಡಲಾಗುತ್ತಿದೆ ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ನನ್ನಿಂದಾಗಿ ಎಚ್ಚೆತ್ತುಕೊಂಡ ಬಿಜೆಪಿ: ಜಗದೀಶ ಶೆಟ್ಟರ್

ಪ್ರಜಾವಾಣಿ ವಾರ್ತೆ

ಜಗದೀಶ ಶೆಟ್ಟರ್

ಹುಬ್ಬಳ್ಳಿ: 'ಪಂಚರಾಜ್ಯಗಳ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯು 75 ರಿಂದ 80 ವಯಸ್ಸಿನ ನಾಯಕರಿಗೆ ಟಿಕೆಟ್ ನೀಡಿದೆ. ನನಗೆ ಟಿಕೆಟ್ ನೀಡದ ಪರಿಣಾಮ ರಾಜ್ಯದಲ್ಲಿ ಅಧಿಕಾರ ಕಳೆದುಕೊಂಡ ಬಿಜೆಪಿ ಎಚ್ಚೆತ್ತುಕೊಂಡಿದೆ' ಎಂದು ವಿಧಾನ ಪರಿಷತ್ ಸದಸ್ಯ ಜಗದೀಶ ಶೆಟ್ಟರ್ ತಿಳಿಸಿದರು.

'75 ವಯಸ್ಸು ಎಂಬ ಕಾರಣಕ್ಕೆ ಎಲ್.ಕೆ. ಅಡ್ವಾಣಿ, ಮುರಳಿ ಮನೋಹರ ಜೋಶಿ ಅವರನ್ನು ಮೂಲೆಗುಂಪು ಮಾಡಲಾಯಿತು. ಇದು ಎಲ್ಲರಿಗೂ ಅನ್ವಯ ಆಗಬೇಕಲ್ಲವೇ? ಚುನಾವಣೆಯಲ್ಲಿ ಗೆದ್ದು ಅಧಿಕಾರ ಹಿಡಿಯಲು 75 ರಿಂದ 80 ವಯಸ್ಸಿನವರಿಗೆ ಟಿಕೆಟ್ ನೀಡಿ, ಬಿಜೆಪಿಯು ಎಲ್ಲಾ ನಿಯಮಗಳನ್ನು ಉಲ್ಲಂಘಿಸಿದೆ' ಎಂದು ಅವರು ಗುರುವಾರ ಸುದ್ದಿಗಾರರಿಗೆ ತಿಳಿಸಿದು.

'ನನಗೆ ಏಕೆ ಟಿಕೆಟ್ ತಪ್ಪಿಸಲಾಯಿತು ಎಂಬುದಕ್ಕೆ ಕೊನೆಯವರೆಗೂ ಕಾರಣ ನೀಡಲಿಲ್ಲ. ಮಾಜಿ ಮುಖ್ಯಮಂತ್ರಿಗೆ ಕಡೆಗಣಿಸಿದರೆ ಏನಾಗುತ್ತದೆ ಎಂಬುದನ್ನು ಅವರು ಚುನಾವಣಾ ಫಲಿತಾಂಶದಲ್ಲಿ ನೋಡಿದ್ದಾರೆ. ಅದಕ್ಕೆ ಮಾಜಿ ಮುಖ್ಯಮಂತ್ರಿಗಳಾದ ವಸುಂಧರಾ ರಾಜೇ, ಶಿವರಾಜ್‌ಸಿಂಗ್ ಚೌಹಾಣ್, ರಮಣ್‌ಸಿಂಗ್ ಅವರಿಗೆ ಟಿಕೆಟ್ ನೀಡಿದ್ದಾರೆ' ಎಂದರು.

ಸಂಪರ್ಕ ವ್ಯವಸ್ಥೆಯಿಲ್ಲದ ನಡುಗಡ್ಡೆಯಲ್ಲಿ ಕಟ್ಟಡ

ಒಂದನೇ ಪುಟದಿಂದ

ತಾತ್ಕಾಲಿಕವಾಗಿ ನಿರ್ಮಿಸಿದ್ದ ರಸ್ತೆ ಮೂಲಕ ನಿರ್ಮಾಣ ಸಾಮಗ್ರಿಗಳನ್ನು ಸಾಗಿಸಲಾಗಿತ್ತು. 2022ರ ಸೆಪ್ಟೆಂಬರ್‌ನಲ್ಲಿ ಜಲಾಶಯದ ನೀರಿನ ಮಟ್ಟ ಹೆಚ್ಚಾಗಿ ರಸ್ತೆಗಳು ಜಲಾವೃತವಾದ ಬಳಿಕ ದೋಣಿಯಲ್ಲಿ ಸಿಮೆಂಟ್, ಕಬ್ಬಿಣ, ಮರಳು ಸಾಗಿಸಿ ಕಾಮಗಾರಿ ಪೂರ್ಣಗೊಳಿಸಲಾಗಿದೆ. ಒಂದು ಅಂತಸ್ತಿನ ಈ ಕಟ್ಟಡದಲ್ಲಿ ತರಬೇತಿಗೆ ಸಭಾಂಗಣ, ವಾಸ್ತವ್ಯಕ್ಕೆ ಕೊಠಡಿ ಸೇರಿ ಅಗತ್ಯ ಸೌಲಭ್ಯಗಳಿವೆ.

'ನಡುಗಡ್ಡೆಯಲ್ಲಿ ಕೌಶಲಾಭಿವೃದ್ಧಿ ಕೇಂದ್ರ ಸ್ಥಾಪಿಸಿ ತರಬೇತಿ ನೀಡುವುದಾದರೂ ಯಾರಿಗೆ' ಎಂದು ಹೊಸದುರ್ಗ ಶಾಸಕ ಬಿ.ಜಿ. ಗೋವಿಂದಪ್ಪ ಈಚೆಗೆ ನಡೆದ ಡಿಎಂಎಫ್ ಪ್ರತಿಷ್ಠಾನದ ಆಡಳಿತ ಮಂಡಳಿ ಸಭೆಯಲ್ಲಿ ಪ್ರಶ್ನಿಸಿದ್ದರು. ಜನವಸತಿ ಪ್ರದೇಶದಿಂದ ಬಹುದೂರದಲ್ಲಿ ಕಟ್ಟಡ ನಿರ್ಮಿಸಿ ಅನುದಾನ ಪೋಲು ಮಾಡಿ ತಪ್ಪು ಎಸಗಿರುವವರ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆಯೂ ಅವರು ಪಟ್ಟು ಹಿಡಿದಿದ್ದಾರೆ. ಕಟ್ಟಡ ನಿರ್ಮಾಣದ ಹೊಣೆ ಹೊತ್ತಿರುವ ನಿರ್ಮಿತಿ ಕೇಂದ್ರವು ಗುತ್ತಿಗೆದಾರರಿಗೆ ನೀಡಬೇಕಾಗಿದ್ದ ಬಾಕಿ ಪಾವತಿಯನ್ನು ತಡೆ ಹಿಡಿದಿದೆ.

ವಿ.ವಿ.ಸಾಗರದ ಹಿನ್ನೀರಿನ ನಡುಗಡ್ಡೆಯಲ್ಲಿ ಕೌಶಲಾಭಿವೃದ್ಧಿ ಕೇಂದ್ರ ನಿರ್ಮಿಸಿರುವುದು

ಕಟ್ಟಡಕ್ಕೆ ಬಳಸಿದ ಸ್ಥಳ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿದೆ. ಇಲಾಖೆಯ ಅನುಮತಿ ಪಡೆಯದೇ ಕಟ್ಟಡ ನಿರ್ಮಿಸಿರುವುದೂ ಪರಿಶೀಲನೆಯಿಂದ ಬೆಳಕಿಗೆ ಬಂದಿದೆ.

'ಈ ಹಿಂದೆ ಡಿಎಂಎಫ್ ಪ್ರತಿಷ್ಠಾನದ ಆಡಳಿತ ಮಂಡಳಿ ಸಭೆಯ ಅನುಮತಿ ಪಡೆದು ಕಟ್ಟಡ ನಿರ್ಮಿಸಲಾಗಿದೆ.

ಕಟ್ಟಡವನ್ನು ಪ್ರವಾಸೋದ್ಯಮ ಇಲಾಖೆಗೆ ಹಸ್ತಾಂತರಿಸಿದರೆ ಸೂಕ್ತ ಎಂಬ ಸಲಹೆ ಕೇಳಿಬಂದಿದೆ. ಡಿಎಂಎಫ್ ಟ್ರಸ್ಟ್‌ನ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು
ದಿವ್ಯ ಪ್ರಭು ಜಿ.ಆರ್.ಜೆ, ಜಿಲ್ಲಾಧಿಕಾರಿ

ಯಾವ ಉದ್ದೇಶಕ್ಕೆ ಬಳಕೆ ಮಾಡಬೇಕು ಎಂಬುದರ ಬಗ್ಗೆ ಇನ್ನೂ ಸ್ಪಷ್ಟತೆ ಇಲ್ಲ. ಯಾವ ಇಲಾಖೆಯ ಅಧೀನಕ್ಕೆ ಕಟ್ಟಡವನ್ನು ಒಪ್ಪಿಸಬೇಕು ಎಂಬುದರ ಬಗ್ಗೆ ಚರ್ಚೆ ನಡಯಬೇಕಿದೆ. ಈಜು, ಜಲಸಾಹಸ ಕ್ರೀಡೆಗೆ ಬಳಕೆ ಮಾಡಿದರೆ ಸೂಕ್ತ ಎಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸಿದ್ದಾರೆ' ಎಂದು ಜಿಲ್ಲಾಧಿಕಾರಿ ದಿವ್ಯ ಪ್ರಭು ಜಿ.ಆರ್.ಜೆ ಹೇಳಿದ್ದಾರೆ.

ದೋಣಿ ಮೂಲಕವೇ ಸಂಪರ್ಕ!

ಮುಳುಗಡೆ ಪ್ರದೇಶದಲ್ಲಿರುವ ಈ ಕಟ್ಟಡ ಜಲಾಶಯದ ನೀರಿನ ಮಟ್ಟಕ್ಕಿಂತ 25 ಅಡಿ ಎತ್ತರದಲ್ಲಿದೆ. ನೀರಿನ ಮಧ್ಯ ಭಾಗದಲ್ಲಿದ್ದರೂ ವಿ.ವಿ. ಸಾಗರ ಭರ್ತಿಯಾಗಿ ಕೋಡಿ ಹರಿದರೂ ಕಟ್ಟಡ ಮುಳುಗುವುದಿಲ್ಲ.

ಇಂತಹ ಕಟ್ಟಡಕ್ಕೆ ದೋಣಿಯೊಂದೇ ಸಂಪರ್ಕ ಸಾಧನವಾಗಿದೆ. ಕೌಶಲಾಭಿವೃದ್ಧಿ ತರಬೇತಿಗೆ ಕಟ್ಟಡ ಮೀಸಲಿಟ್ಟರೆ ಜನರನ್ನು ಕರೆದೊಯ್ಯುವ ಸಮಸ್ಯೆ ಎದುರಾಗಬಹುದು. ಹಿನ್ನೀರಿನಲ್ಲಿರುವ ಜಲಸಾಹಸ ಕ್ರೀಡಾ ತರಬೇತಿ ಕೇಂದ್ರಕ್ಕೆ ಈ ಕಟ್ಟಡ ಹಸ್ತಾಂತರಿಸುವುದು ಸೂಕ್ತ ಎಂಬುದು ಜಿಲ್ಲಾ ಖನಿಜ ನಿಧಿ ಪ್ರತಿಷ್ಠಾನ ಟ್ರಸ್ಟ್‌ನ ಆಡಳಿತ ಮಂಡಳಿ ಸದಸ್ಯರು ಸಲಹೆ ನೀಡಿದ್ದಾರೆ.

ಕಟ್ಟಡ ನಿರ್ಮಾಣ ಆರಂಭಿಸಿದ ಸಂದರ್ಭ ಜಲಾಶಯದಲ್ಲಿ ನೀರಿನ ಸಂಗ್ರಹವಿರಲಿಲ್ಲ. 2022ರಲ್ಲಿ ಭಾರಿ ಮಳೆ ಸುರಿದ ಕಾರಣ, 89 ವರ್ಷಗಳ ನಂತರ ವಿ.ವಿ. ಸಾಗರ ಭರ್ತಿಯಾಗಿ, ಈ ನಡುಗಡ್ಡೆಯ ಸಂಪರ್ಕ ಕಡಿದುಕೊಂಡಿದ್ದರಿಂದ ಕಟ್ಟಡ ನಿರ್ಮಾಣದ ಉದ್ದೇಶವು ಈಡೇರದಂತಾಯಿತು ಎಂದೂ ಮೂಲಗಳು ಹೇಳಿವೆ.

ಜಲಾಶಯಕ್ಕೆ ನೀರು ಹರಿಸಲೆಂದೇ ಭದ್ರಾ ಮೇಲ್ದಂಡೆ ಯೋಜನೆ ರೂಪಿಸಲಾಗಿದೆ. ಯೋಜನೆ ಸಾಕಾರಗೊಂಡಲ್ಲಿ ನಡುಗಡ್ಡೆ ಮುಳುಗುವುದು ಖಚಿತವಾಗಿ ಗೊತ್ತಿತ್ತು. ಆದರೂ ಹಿನ್ನೀರಿನ ಪ್ರದೇಶದಲ್ಲಿ ಈ ಕಟ್ಟಡ ನಿರ್ಮಿಸಿರುವುದು ಸಂಶಯಗಳಿಗೆ ಎಡೆಮಾಡಿಕೊಟ್ಟಿದೆ.

ವೇದಿಕೆಯಲ್ಲಿ ರಾಜಕೀಯ ವಿರೋಧ ಮರೆತ ನಾಯಕರು

ಸಿದ್ದರಾಮಯ್ಯ, ಬೊಮ್ಮಾಯಿ ಪರಸ್ಪರ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಜಕೀಯ ವಿರೋಧ ಮರೆತು, ಪರಸ್ಪರ ಮೆಚ್ಚುಗೆ ವ್ಯಕ್ತಪಡಿಸಿದ ಕ್ಷಣಕ್ಕೆ 'ರಮಣಶ್ರೀ ಶರಣ ಪ್ರಶಸ್ತಿ' ಪ್ರದಾನ ಸಮಾರಂಭ ಸಾಕ್ಷಿಯಾಯಿತು.

ಮೈಸೂರಿನ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ರಮಣಶ್ರೀ ಪ್ರತಿಷ್ಠಾನ ಜಂಟಿಯಾಗಿ ನಗರದಲ್ಲಿ ಗುರುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಉಭಯ ನಾಯಕರು ಪರಸ್ಪರ ಎದುರಾದರು. ಕಾರ್ಯಕ್ರಮದುದ್ದಕ್ಕೂ ಅಕ್ಕಪಕ್ಕದಲ್ಲಿಯೇ ಕುಳಿತು ಚರ್ಚಿಸಿದರು. ಈ ವೇಳೆ ಮಾಜಿ ಸಚಿವ ವಿ. ಸೋಮಣ್ಣ ಅವರೂ ಇದ್ದದ್ದು ವಿಶೇಷ.

ಬಸವರಾಜ ಬೊಮ್ಮಾಯಿ ಮಾತನಾಡಿ, 'ಸಿದ್ದರಾಮಯ್ಯ ಅವರ ಸಮಾಜವಾದಕ್ಕೆ ಮೂಲ ಪ್ರೇರಣೆ ಬಸವಣ್ಣ ಮತ್ತು ವಚನ ಸಾಹಿತ್ಯ. ಅವರು ಬಸವಣ್ಣನವರ ತತ್ವಗಳನ್ನು ನಂಬಿರುವುದಾಗಿ ಬಲವಾಗಿ ಹೇಳುತ್ತಾರೆ. ಹೀಗಾಗಿ ಅವರ ಕೆಲಸಗಳು ಮತ್ತು ನಡೆ ಎಲ್ಲರಿಗಿಂತ ಭಿನ್ನವಾಗಿ ಕಾಣುತ್ತದೆ. ಒಬ್ಬ ಮುತ್ಸದ್ದಿಯ ಕಣ್ಣು ಮುಂದಿನ ಜನಾಂಗದ ಮೇಲೆ ಇರುತ್ತದೆ. ಸಮಾಜದ ತುಳಿತಕ್ಕೊಳಗಾದವರ ಸಮಾನತೆಗಾಗಿ ನಿರಂತರವಾಗಿ ಕೆಲಸ ಮಾಡುವುದೇ ಒಬ್ಬ ನಿಜವಾದ ನಾಯಕನ ಜವಾಬ್ದಾರಿ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಅವರು ತಮ್ಮ ಭಾಷಣದಲ್ಲಿ, 'ನಮ್ಮಲ್ಲಿ ರಾಜಕೀಯ ಭಿನ್ನಾಭಿಪ್ರಾಯ ಇದ್ದರೂ ಬಸವರಾಜ ಬೊಮ್ಮಾಯಿ ಅವರ ಮೇಲೆ ಪ್ರೀತಿ ಇದೆ' ಎಂದರು.

ಸೋಮಣ್ಣ ಬಗ್ಗೆಯೂ ಮೆಚ್ಚುಗೆ: 'ಒಂದು ಕಾಲದಲ್ಲಿ ಸೋಮಣ್ಣ, ಬಸವರಾಜ ನಾವೆಲ್ಲ ಒಟ್ಟಿಗೆ ಇದ್ದವರು. ನಮಗೆಲ್ಲ ವೈಯಕ್ತಿಕವಾಗಿ ಪ್ರೀತಿಯಿದ್ದರೂ ರಾಜಕೀಯವಾಗಿ ಬೇರೆ ಇದ್ದೇವೆ. ಬಸವರಾಜ ಅವರ ತಂದೆ ಎಸ್.ಆರ್. ಬೊಮ್ಮಾಯಿ ಅವರು ರಾಜಕೀಯವಾಗಿ ನನಗೆ ಸಹಾಯ ಮಾಡಿದ್ದಾರೆ' ಎಂದು ಸಿದ್ದರಾಮಯ್ಯ ಹೇಳಿದರು.

'ಸೋಮಣ್ಣ ಅವರು ಕಳೆದ ವಿಧಾನಸಭೆ ಚುನಾವಣೆಯಲ್ಲಿ ನನ್ನ ವಿರುದ್ಧವೇ ಸ್ಪರ್ಧಿಸಿದ್ದರು. ಅಷ್ಟಕ್ಕೂ ಅವರು ಹೈಕಮಾಂಡ್ ಹೇಳಿದ್ದಾರೆ ಅಂತ ಸ್ಪರ್ಧಿಸಿದ್ದರು. ವೈಯಕ್ತಿಕವಾಗಿ ಸೋಮಣ್ಣನ ಮೇಲೆ ಪ್ರೀತಿ ಇದೆಯೇ ಹೊರತು, ದ್ವೇಷ, ಅಸೂಯೆ ಇಲ್ಲ' ಎಂದರು.


ಮುಖ್ಯಮಂತ್ರಿ ಸಿದ್ದರಾಮಯ್ಯ, ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಸಚಿವ ವಿ.ಸೋಮಣ್ಣ ಪರಸ್ಪರ ಮಾತುಕತೆ –ಪ್ರಜಾವಾಣಿ ಚಿತ್ರ

'ನಮ್ಮ ಲೋಕ ಛಿದ್ರವಾಗಿದೆ'

'ಅಧಿಕಾರ ಶಾಶ್ವತವಲ್ಲ. ಅಧಿಕಾರ ಇದ್ದಾಗ ಎಲ್ಲರೊಂದಿಗೆ ಬೆರೆತು, ಪ್ರತಿಯೊಬ್ಬರಿಗೂ ಸಹಾಯ ಮಾಡಬೇಕು. ಈ ಹಿಂದೆ ಸಿದ್ದರಾಮಯ್ಯ, ಬಸವರಾಜ ಬೊಮ್ಮಾಯಿ ಒಳಗೊಂಡಂತೆ ನಮ್ಮದೇ ಆದ ಒಂದು ಲೋಕವಿತ್ತು. ಆ ಲೋಕ ಈಗ ಛಿದ್ರವಾಗಿದೆ. ಜನತಾ ಪಕ್ಷದಿಂದ ಹೊರ ಬಂದರೂ ನಮ್ಮದೇ ಆದ ತತ್ವ, ಬದ್ಧತೆಯಲ್ಲಿ ಸಾಗುತ್ತಿದ್ದೇವೆ' ಎಂದು ಮಾಜಿ ಸಚಿವ ವಿ. ಸೋಮಣ್ಣ ತಿಳಿಸಿದರು.

ನಾವು ಒಗ್ಗೂಡಿದ್ದೇವೆ–ರಾಹುಲ್

ಪ್ರಜಾವಾಣಿ ವಾರ್ತೆ

ರಾಜಸ್ಥಾನದ ತಾರಾನಗರದಲ್ಲಿ ಗುರುವಾರ ಕಾಂಗ್ರೆಸ್ ಗ್ಯಾರಂಟಿ ರ್‍ಯಾಲಿಯಲ್ಲಿ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮುಖ್ಯಮಂತ್ರಿ ಅಶೋಕ್ ಗೆಹಲೋತ್, ನಾಯಕ ಸಚಿನ್ ಪೈಲಟ್ ಅವರೊಂದಿಗೆ ಪಾಲ್ಗೊಂಡಿದ್ದರು ಪಿಟಿಐ ಚಿತ್ರ

ಜೈಪುರ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ರಾಜಸ್ಥಾನದಲ್ಲಿ ಗುರುವಾರ ಪ್ರಚಾರವನ್ನು ಚೂರೂ ಜಿಲ್ಲೆಯಿಂದ ಆರಂಭಿಸಿದ್ದಾರೆ.

ರಾಜಸ್ಥಾನದಲ್ಲಿ ನಾಲ್ಕು ದಿನಗಳು ಪ್ರಚಾರ ಕೈಗೊಳ್ಳುವ ಅವರು ಇದೇ 19, 21 ಮತ್ತು 22ರಂದು ರ್‍ಯಾಲಿಗಳನ್ನು ಹಮ್ಮಿಕೊಂಡಿದ್ದಾರೆ.

ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಮತ್ತು ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ಅವರ ನಡುವಣ ಭಿನ್ನಾಭಿಪ್ರಾಯ ಮತ್ತು ಗುಂಪುಗಾರಿಕೆಯಿಂದಾಗಿ ರಾಜಸ್ಥಾನದಲ್ಲಿ ಕಾಂಗ್ರೆಸ್‌ಗೆ ತೀವ್ರ ಧಕ್ಕೆ ಆಗಿದೆ.

2020ರಲ್ಲಿ ಪೈಲಟ್ ಅವರು ತಮಗೆ ಆಪ್ತರಾದ 18 ಮಂದಿ ಶಾಸಕರೊಂದಿಗೆ ಬಂಡೆದ್ದು ಉನ್ನತ ಸ್ಥಾನ ತಮಗೇ ನೀಡಬೇಕೆಂದು ಪಟ್ಟು ಹಿಡಿದಿದ್ದರು. ಆದರೆ ಪ್ರಯತ್ನ ವಿಫಲಗೊಂಡು ಪೈಲಟ್ ಮತ್ತು ಪಕ್ಷದ ವರ್ಚಸ್ಸಿಗೆ ಧಕ್ಕೆಯಾಗಿತ್ತು.

2022ರಲ್ಲಿ ಪಕ್ಷದ ಅಧ್ಯಕ್ಷ ಸ್ಥಾನವನ್ನು ಗೆಹಲೋತ್ ಅವರಿಗೆ ನೀಡಲು ಹೈಕಮಾಂಡ್ ಬಯಸಿತ್ತು. ಆಗ ಗೆಹಲೋತ್ ಅವರು ಬೆಂಬಲಿಗರೊಂದಿಗೆ ಸೇರಿ ಇದನ್ನು ತಡೆದರು. ಇದು ರಾಹುಲ್ ಅವರಿಗೆ ಸಿಟ್ಟು ತರಿಸಿತ್ತು. ಗೆಹಲೋತ್ ಪರ ಪ್ರಚಾರ ಕೈಗೊಳ್ಳದಿರಲು ರಾಹುಲ್, ಆರಂಭದಲ್ಲಿ ನಿರ್ಧರಿಸಿದ್ದರು ಎಂದು ಮೂಲಗಳು ಹೇಳಿವೆ.

ಸೆಪ್ಟೆಂಬರ್‌ನಲ್ಲಿ ದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಹುಲ್ ಅವರು, 'ಈಗಿನ ಪ್ರಕಾರ ನಾವು ತೆಲಂಗಾಣದಲ್ಲಿ ಪ್ರಾಯಶಃ ಗೆಲ್ಲುತ್ತೇವೆ. ಮಧ್ಯಪ್ರದೇಶದಲ್ಲಿ ಖಂಡಿತಾ ಅಧಿಕಾರಕ್ಕೆ ಬರುತ್ತೇವೆ. ಛತ್ತೀಸಗಢದಲ್ಲಿ ಕೂಡ ಖಚಿತವಾಗಿ ಗೆಲುವು ಪಡೆಯುತ್ತೇವೆ. ರಾಜಸ್ಥಾನದಲ್ಲಿ ಗೆಲುವಿನ ಸನಿಹದಲ್ಲಿದ್ದೇವೆ, ಅಲ್ಲೂ ನಾವು ಜಯಿಸಲು ಸಾಧ್ಯವಾಗಲಿದೆ ಎಂದು ಭಾವಿಸಿದ್ದೇವೆ' ಎಂದಿದ್ದರು. ಇದರಿಂದ ಕಾಂಗ್ರೆಸ್ ಕಾರ್ಯಕರ್ತರು ಆಸಕ್ತಿ ಕಳೆದುಕೊಂಡಿದ್ದರು.

ಗೆಹಲೋತ್ ಅವರು ತಾವು ಜಾರಿಗೆ ತಂದ ಕಲ್ಯಾಣ ಯೋಜನೆಗಳನ್ನು ಮತದಾರರ ಮುಂದಿಟ್ಟು ಮತ ಯಾಚಿಸಿದರೂ ಮತ್ತು ಪೈಲಟ್ ಅವರು ಒಗ್ಗೂಡಿ ಕಾರ್ಯ ನಿರ್ವಹಿಸುವುದನ್ನು ತಾವು ಎದುರುನೋಡುತ್ತಿರುವುದಾಗಿ ಹೇಳಿದ್ದರೂ ಕಾರ್ಯಕರ್ತರು ಮತ್ತು ಬೆಂಬಲಿಗರು ಇವರಿಬ್ಬರ ನಡುವಣ ಸ್ನೇಹಪರತೆಯನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ.

ಸ್ವಾಗತ: ಗೆಹಲೋತ್, ಪೈಲಟ್ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಗೋವಿಂದ್ ಸಿಂಗ್ ಧೊಟಾಸರಾ ಅವರು ಗುರುವಾರ ವಿಮಾನ ನಿಲ್ದಾಣದಲ್ಲಿ ಒಗ್ಗೂಡಿ ನಿಂತು ನಗುಮೊಗದಿಂದ ರಾಹುಲ್ ಅವರನ್ನು ಬರಮಾಡಿಕೊಂಡಿದ್ದಾರೆ. ಇದು ಕೇವಲ ಫೋಟೊಗೆ ಪೋಸು ನೀಡಲಷ್ಟೇ ಅಲ್ಲ. ಪಕ್ಷದಲ್ಲಿ ಎಲ್ಲವೂ ಸರಿಯಾಗಿದೆ ಎಂಬುದನ್ನು ಸಾಬೀತುಪಡಿಸಲು ಕೂಡ ಆಗಿತ್ತು.

ಕೋಟ್ಯಧೀಶರಿಗೆ ನೆರವು: ಆರೋಪ

ಜೈಪುರ (ಪಿಟಿಐ): ರಾಜಸ್ಥಾನದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿದ್ದ ಕಲ್ಯಾಣ ಯೋಜನೆಗಳನ್ನು ನಿಲ್ಲಿಸಲಿದೆ ಅಲ್ಲದೆ ಕೋಟ್ಯಧಿಪತಿಗಳಿಗೆ ನೆರವು ನೀಡಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

ರಾಜ್ಯದ ವಿವಿಧೆಡೆ ರ್‍ಯಾಲಿಗಳಲ್ಲಿ ಮಾತನಾಡಿದ ಅವರು, 'ಬಿಜೆಪಿ ಸರ್ಕಾರ ರಚಿಸಿದರೆ, ಕಾಂಗ್ರೆಸ್ ಜಾರಿಗೆ ತಂದಿರುವ ಪಿಂಚಣಿ ಯೋಜನೆ, ಆರೋಗ್ಯ ವಿಮೆಯಂತಹ ಜನಪರ ಯೋಜನೆಗಳನ್ನು ನಿಲ್ಲಿಸಲಿದೆ. ಕೋಟ್ಯಧಿಪತಿಗಳಿಗೆ ನೆರವು ನೀಡಲಿದೆ' ಎಂದರು.

'ನಾವು ನೋಡಲಷ್ಟೇ ಒಟ್ಟಾಗಿಲ್ಲ. ನಾವೀಗ ಒಗ್ಗೂಡಿದ್ದೇವೆ ಕೂಡ. ರಾಜಸ್ಥಾನದಲ್ಲಿ ಪಕ್ಷವು ಗೆಲ್ಲುತ್ತದೆ' ಎಂದು ರಾಹುಲ್ ಹೇಳಿದ್ದಾರೆ. ಅವರು ಮೊದಲು ಪೈಲಟ್ ಅವರ ಕೈಕುಲುಕಿ ನಂತರ ಗೆಹಲೋತ್ ಅವರತ್ತ ತೆರಳಿದರು. ಇದಕ್ಕೂ ಮೊದಲು ಗೆಹಲೋತ್ ಅವರು, ಪೈಲಟ್ ಅವರೊಂದಿಗೆ ಸಭೆಯಲ್ಲಿದ್ದ ಚಿತ್ರವನ್ನು ಎಕ್ಸ್‌ನಲ್ಲಿ ಪೋಸ್ಟ್ ಮಾಡಿ 'ಒಗ್ಗೂಡಿ ಮತ್ತೆ ನಾವು ಗೆಲ್ಲುತ್ತೇವೆ' ಎಂದು ಹೇಳಿದ್ದರು.

ರಾಜಸ್ಥಾನ: ಬಿಜೆಪಿ ಪ್ರಣಾಳಿಕೆ ಬಿಡುಗಡೆ ಮಾಡಿದ ಅಧ್ಯಕ್ಷ ಜೆ.ಪಿ. ನಡ್ಡಾ

ಸಬ್ಸಿಡಿ ದರದಲ್ಲಿ ಸಿಲಿಂಡರ್

ಜೈಪುರ (ಪಿಟಿಐ): ರಾಜಸ್ಥಾನ ವಿಧಾನ ಸಭೆ ಚುನಾವಣೆಗಾಗಿ ಬಿಜೆಪಿ ಗುರುವಾರ ಪ್ರಣಾಳಿಕೆ ಬಿಡುಗಡೆ ಮಾಡಿದ್ದು, ಉಜ್ವಲಾ ಯೋಜನೆಯ ಫಲಾನುಭವಿಗಳಿಗೆ ₹ 450 ದರದಲ್ಲಿ ಅಡುಗೆ ಅನಿಲ ಸಿಲಿಂಡರ್ ನೀಡುವುದಾಗಿ ಮತ್ತು ಐದು ವರ್ಷಗಳಲ್ಲಿ 2.5 ಲಕ್ಷ ಸರ್ಕಾರಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿದೆ.

ಪಿಎಂ ಕಿಸಾನ್ ಯೋಜನೆಯಡಿ ರೈತರಿಗೆ ನೀಡುವ ಆರ್ಥಿಕ ನೆರವನ್ನು ಹೆಚ್ಚಿಸುವುದಾಗಿಯೂ ಆಶ್ವಾಸನೆ ನೀಡಿದೆ.

ಸಂಕಲ್ಪ ಪತ್ರ ಬಿಡುಗಡೆ ಮಾಡಿದ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು, ರಾಜಸ್ಥಾನದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಕಾಂಗ್ರೆಸ್ ಸರ್ಕಾರದ ಇತರ ಹಗರಣಗಳ ಬಗ್ಗೆ ತನಿಖೆ ನಡೆಸಲು ವಿಶೇಷ ತನಿಖಾ ತಂಡ ರಚಿಸುವುದಾಗಿ ಹೇಳಿದರು.

ಗೋಧಿಯನ್ನು ಕ್ವಿಂಟಲ್‌ಗೆ ₹ 2,700 ದರದಲ್ಲಿ ಪಡೆಯಲು ವ್ಯವಸ್ಥೆ ಮಾಡಲಾಗುವುದು. ಪಿಎಂ ಕಿಸಾನ್ ಸಮ್ಮಾನ್ ನಿಧಿಯಡಿ ನೀಡುವ ಆರ್ಥಿಕ ನೆರವನ್ನು ವರ್ಷಕ್ಕೆ ₹ 12,000ಕ್ಕೆ ಏರಿಸಲಾಗುವುದು ಎಂದೂ ಪ್ರಣಾಳಿಕೆ ತಿಳಿಸಿದೆ.

ಪ್ರಧಾನ್ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ (ಪಿಎಂ– ಕಿಸಾನ್) ಯೋಜನೆಯಡಿ ಈಗ ವರ್ಷಕ್ಕೆ ₹ 6,000ವನ್ನು ಮೂರು ಕಂತುಗಳಲ್ಲಿ ರೈತರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗುತ್ತಿದೆ.

ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಜೈಪುರದಲ್ಲಿ ಗುರುವಾರ ಪಕ್ಷದ ಪ್ರಣಾಳಿಕೆ ಬಿಡುಗಡೆ ಮಾಡಿದರು. ಪಕ್ಷದ ನಾಯಕಿ ವಸುಂಧರಾ ರಾಜೇ, ಕೇಂದ್ರ ಸಚಿವ ಗಜೇಂದ್ರಸಿಂಗ್ ಶೆಖಾವತ್ ಇದ್ದಾರೆ ಪಿಟಿಐ ಚಿತ್ರ

ಕೇಂದ್ರ ಸರ್ಕಾರದ ಸಹಯೋಗದಲ್ಲಿ ಪೂರ್ವ ರಾಜಸ್ಥಾನ ಕಾಲುವೆ ಯೋಜನೆ (ಇಆರ್‌ಸಿಪಿ) ನಿಗದಿತ ವೇಳೆಯಲ್ಲಿ ಪೂರ್ಣಗೊಳಿಸುವುದಾಗಿಯೂ ಪ್ರಣಾಳಿಕೆ ಭರವಸೆ ನೀಡಿದೆ.

ಹರಾಜಾಗುವ ಜಮೀನಿನ ರೈತರಿಗಾಗಿ ಪರಿಹಾರ ಸೂತ್ರವನ್ನು ರೂಪಿಸಲಾಗುವುದು ಎಂದ ನಡ್ಡಾ ಅವರು 19,400 ರೈತರ ಜಮೀನು ಹರಾಜಾಗಿದೆ ಎಂದು ವಿವರಿಸಿದರು.

ಪ್ರತಿ ಜಿಲ್ಲೆಯಲ್ಲಿ ಮಹಿಳಾ ಠಾಣೆ, ಪ್ರತಿ ಪೊಲೀಸ್ ಠಾಣೆಯಲ್ಲಿ 'ಮಹಿಳಾ ಡೆಸ್ಕ್' ಸ್ಥಾಪನೆ ಅಲ್ಲದೆ ಪ್ರತಿ ನಗರದಲ್ಲಿ ಹುಡುಗಿಯರನ್ನು ಚುಡಾಯಿಸುವ ಹುಡುಗರ ವಿರುದ್ಧ ಕ್ರಮಕ್ಕೆ ಪ್ರತ್ಯೇಕ ದಳ ರಚಿಸಲಾಗುವುದು ಎಂದರು.

ಹೆಣ್ಣುಮಗು ಜನಿಸಿದರೆ ₹ 2 ಲಕ್ಷ ಉಳಿತಾಯ ಯೋಜನೆಯ ಬಾಂಡ್, ಆರು ಲಕ್ಷ ಗ್ರಾಮೀಣ ಮಹಿಳೆಯರಿಗೆ ಕೌಶಲ ತರಬೇತಿ, 12ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕ ಗಳಿಸುವ ವಿದ್ಯಾರ್ಥಿನಿಯರಿಗೆ ಸ್ಕೂಟಿ, ಬಡ ಕುಟುಂಬಗಳ ಹೆಣ್ಣುಮಕ್ಕಳಿಗೆ ಎಲ್‌ಕೆಜಿಯಿಂದ ಪಿ.ಜಿವರೆಗೆ ಉಚಿತ ಶಿಕ್ಷಣ ನೀಡಲಾಗುವುದು. ಪಿಎಂ ಮಾತೃ ವಂದನ ಯೋಜನೆಯಡಿ ನೀಡುವ ಹಣಕಾಸು ನೆರವನ್ನು ₹ 5,000 ದಿಂದ ₹ 8,000ಕ್ಕೆ ಏರಿಸಲಾಗುವುದು ಎಂದೂ ಅವರು ಮಾಹಿತಿ ನೀಡಿದರು.

ಬಡಕುಟುಂಬದ ವಿದ್ಯಾರ್ಥಿಗಳಿಗೆ ಶಾಲಾ ಬ್ಯಾಗ್, ಪುಸ್ತಕಗಳು ಮತ್ತು ಸಮವಸ್ತ್ರ ಖರೀದಿಗಾಗಿ ₹ 12,000 ವಾರ್ಷಿಕ ನೆರವು, ಪ್ರತಿ ವಿಭಾಗದಲ್ಲಿ ರಾಜಸ್ಥಾನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ರಾಜಸ್ಥಾನ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಸ್ಥಾಪಿಸಲಾಗುವುದು.

ಪ್ರಣಾಳಿಕೆ ಬಿಡುಗಡೆಗೆ ಮೊದಲು ಕಾಂಗ್ರೆಸ್ ಸರ್ಕಾರವನ್ನು ಟೀಕಿಸಿದ ನಡ್ಡಾ ಅವರು, ರಾಜ್ಯ ಸರ್ಕಾರವು ಭ್ರಷ್ಟಾಚಾರ, ಮಹಿಳೆಯರ ವಿರುದ್ಧ ದೌರ್ಜನ್ಯ, ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಹಗರಣಗಳಿಂದ ಹೆಸರುವಾಸಿಯಾಗಿದೆ ಎಂದರು.

ರಾಜಸ್ಥಾನದಲ್ಲಿ ಇದೇ 25ರಂದು ಚುನಾವಣೆ ನಡೆಯಲಿದೆ. ಡಿ. 3ರಂದು ಮತ ಎಣಿಕೆ ನಡೆಯಲಿದೆ.

ಆಶ್ವಾಸನೆಗಳು

- ಜೈಪುರ ಮೆಟ್ರೊ ವಿಸ್ತರಣೆ
- 24 ತಾಸು ವಿದ್ಯುತ್ ಪೂರೈಕೆ
- ಪಿಎಂ ಗರೀಬ್ ಕಲ್ಯಾಣ ಯೋಜನೆಯಡಿ ಐದು ವರ್ಷಗಳವರೆಗೆ ಬಡ ಕುಟುಂಬಗಳಿಗೆ ಉಚಿತ ಪಡಿತರ
- ಅಂಗವಿಕಲರಿಗೆ ಮಾಸಿಕ ₹ 1500 ಪಿಂಚಣಿ, ವೃದ್ಧರ ಪಿಂಚಣಿ ಹೆಚ್ಚಳ
- ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಪ್ರಕರಣಗಳ ಕುರಿತಂತೆ ಶ್ವೇತಪತ್ರ ಮತ್ತು ಕಠಿಣ ಕ್ರಮ

ಮಹಿಳೆಯರಿಗೆ ಟಿಕೆಟ್; ಬಿಜೆಪಿ–ಕಾಂಗ್ರೆಸ್ ಹಿಂದೇಟು

ಪ್ರಜಾವಾಣಿ ವಾರ್ತೆ

ಜೈಪುರ: ಮಹಿಳಾ ಮೀಸಲು ಮಸೂದೆ (ನಾರಿ ಶಕ್ತಿ ವಂದನಾ ಅಧಿನಿಯಮ) ಮುಖಾಂತರ ರಾಜಕೀಯವಾಗಿ ಮಹಿಳೆಯರ ಸಬಲೀಕರಣಕ್ಕೆ ಬೆಂಬಲ ನೀಡಿರುವುದಾಗಿ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳು ಅಬ್ಬರಿಸಿದರೂ, ರಾಜಸ್ಥಾನ ವಿಧಾನಸಭೆ ಚುನಾವಣೆಯಲ್ಲಿ ಮಹಿಳೆಯರಿಗೆ ಟಿಕೆಟ್ ನೀಡುವಲ್ಲಿ ಹಿಂದೆ ಬಿದ್ದಿವೆ.

ಟಿಕೆಟ್ ಹಂಚಿಕೆ ಮಾಡುವಾಗ ಎರಡು ಪ್ರಮುಖ ಪಕ್ಷಗಳ ಪೈಕಿ ಯಾವ ಪಕ್ಷವೂ ಮಹಿಳೆಯರಿಗೆ ಮೂರನೇ ಒಂದು ಸ್ಥಾನವನ್ನು ಮೀಸಲಿಡುವ ಆಲೋಚನೆ ಮಾಡಿಲ್ಲ.

ರಾಜಸ್ಥಾನದಲ್ಲಿ ಇದೇ 25ರಂದು ಚುನಾವಣೆ ನಡೆಯಲಿದ್ದು, ಕಣದಲ್ಲಿ ಒಟ್ಟು 183 ಮಹಿಳಾ ಅಭ್ಯರ್ಥಿಗಳು ಇದ್ದಾರೆ.

2018ರಲ್ಲಿ ಕಾಂಗ್ರೆಸ್‌ನಿಂದ 27 ಮತ್ತು ಬಿಜೆಪಿಯಿಂದ 23 ಮಹಿಳೆಯರು ಟಿಕೆಟ್ ಪಡೆದಿದ್ದರು. ವಿಧಾನಸಭೆ ಚುನಾವಣೆ ನಡೆದ 2003, 2008 ಮತ್ತು 2013ರ ಅವಧಿಯಲ್ಲಿ ಸರಾಸರಿ ಶೇ 13ರಷ್ಟು ಟಿಕೆಟ್‌ಗಳನ್ನು ಮಾತ್ರ ಬಿಜೆಪಿಯು ಮಹಿಳೆಯರಿಗೆ ನೀಡಿದ್ದರೆ ಕಾಂಗ್ರೆಸ್ ಶೇ 11ರಷ್ಟು ಮಾತ್ರ ನೀಡಿತ್ತು.

2018ರಲ್ಲಿ ರಾಜಸ್ಥಾನ ವಿಧಾನಸಭಾ ಚುನಾವಣೆಯಲ್ಲಿ ಶೇ 74.66ರಷ್ಟು ಮಹಿಳೆಯರು ಮತ ಹಾಕಿದ್ದರೆ, ಶೇ 73.80ರಷ್ಟು ಪುರುಷರು ಮತಹಾಕಿದ್ದರು. 2023ರಲ್ಲಿ ಮಹಿಳಾ ಮತದಾರರ ಸಂಖ್ಯೆ 2.51 ಕೋಟಿ ಇದ್ದರೂ ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಪಕ್ಷಗಳು ಹಿಂದೇಟು ಹಾಕಿವೆ.

ಆದರೆ, ಮಹಿಳೆಯರ ಹೆಸರಿನಲ್ಲಿ ಶೌಚಾಲಯ ಸ್ಥಾಪನೆ, ಉಚಿತ ಸ್ಮಾರ್ಟ್ ಫೋನ್ ಯೋಜನೆ, ಸಬ್ಸಿಡಿ ದರದಲ್ಲಿ ಅಡುಗೆ ಅನಿಲ ಸಿಲಿಂಡರ್, ನೇರ ಹಣ ವರ್ಗಾವಣೆ, ಆರೋಗ್ಯ ಕಾರ್ಡ್‌ನಂತಹ ಮಹಿಳಾ ಕೇಂದ್ರಿತ ಯೋಜನೆಗಳನ್ನು ಪಕ್ಷಗಳು ಘೋಷಿಸಿವೆ.

ಬಿಜೆಪಿಯಲ್ಲಿನ ಪ್ರಮುಖ ಮಹಿಳಾ ಅಭ್ಯರ್ಥಿಗಳೆಂದರೆ ವಸುಂಧರ ರಾಜೆ, ದಿಯಾ ಕುಮಾರಿ, ಅನಿತಾ ಭಡೆಲ್, ಜ್ಯೋತಿ ಮಿರ್ಧಾ ಮತ್ತು ಸಿದ್ಧಿ ಕುಮಾರಿ. ಕಾಂಗ್ರೆಸ್‌ನಿಂದ ಅರ್ಚನಾ ಶರ್ಮಾ, ಮಮತಾ ಭೂಪೇಶ್, ಜಾಹಿದಾ ಖಾನ್, ದಿವ್ಯಾ ಮತ್ತಿತರರು ಇದ್ದಾರೆ.

ವಸುಂಧರಾ ರಾಜೆ, ಸಿದ್ಧಿ ಕುಮಾರಿ ಮತ್ತು ದಿಯಾ ಕುಮಾರಿ ಅವರು ರಾಜ ವಂಶಸ್ಥರಾಗಿದ್ದರೆ, ಜ್ಯೋತಿ ಮಿರ್ಧಾ, ದಿವ್ಯಾ ಅವರಿಗೆ ರಾಜಕೀಯ ಕುಟುಂಬಗಳ ಹಿನ್ನೆಲೆ ಇದೆ.

'ಚುನಾವಣೆಗೆ ಮೊದಲು ಕನಿಷ್ಠ 5–6 ಮಹಿಳಾ ಅಭ್ಯರ್ಥಿಗಳ ಬಗ್ಗೆ ಪಕ್ಷಗಳು ಮಾತನಾಡಿದರೂ ಅಂತಿಮವಾಗಿ ಟಿಕೆಟ್ ಹಂಚಿಕೆ ಸಮಯದಲ್ಲಿ ಗೆಲ್ಲುವ ಸಾಮರ್ಥ್ಯ, ಜಾತಿ, ಹಣದ ಪ್ರಾಬಲ್ಯ ಮುಖ್ಯವಾಗುತ್ತದೆ' ಎಂದು ಮಹಿಳಾ ಹೋರಾಟಗಾರ್ತಿಮತ್ತು ಪ್ರಾಧ್ಯಾಪಕಿ ಲಾಡ್ ಕುಮಾರಿ ಜೈನ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

ಮಹಿಳಾ ಅಭ್ಯರ್ಥಿಗಳು

28 (14%) ಕಾಂಗ್ರೆಸ್

20 (10%) ಬಿಜೆಪಿ

ರಾಜಸ್ಥಾನ ಚುನಾವಣೆ: ಅಸ್ಸಾಂ ರಾಜ್ಯಪಾಲರ ವಜಾಕ್ಕೆ ಒತ್ತಾಯ

ಗುವಾಹಟಿ (ಪಿಟಿಐ): ರಾಜಸ್ಥಾನ ವಿಧಾನಸಭೆ ಚುನಾವಣೆಯ ಬಿಜೆಪಿ ಅಭ್ಯರ್ಥಿ ಪರವಾಗಿ ಅಸ್ಸಾಂ ರಾಜ್ಯಪಾಲ ಗುಲಾಬ್ ಚಂದ್ ಕಟಾರಿಯಾ ಅವರು ಪ್ರಚಾರ ಮಾಡಿದ್ದಾರೆ ಎಂದು ಟಿಎಂಸಿ ಮತ್ತು ಎಎಪಿಯ ಅಸ್ಸಾಂ ಘಟಕಗಳು ಆರೋಪಿಸಿವೆ ಅಲ್ಲದೆ ರಾಜ್ಯಪಾಲರನ್ನು ವಜಾ ಮಾಡಬೇಕೆಂದು ಒತ್ತಾಯಿಸಿವೆ.

ಈ ಬಗ್ಗೆ ಕಟಾರಿಯಾ ಅವರಿಂದಾಗಲೀ, ರಾಜ್ಯಪಾಲರ ಕಚೇರಿಯಿಂದಾಗಲೀ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ಈ ಕುರಿತು ಪ್ರತ್ಯೇಕ ಹೇಳಿಕೆ ನೀಡಿರುವ ಎರಡೂ ಪಕ್ಷಗಳು ರಾಜ್ಯಪಾಲರ ವಿರುದ್ಧ ಕ್ರಮ ಕೈಗೊಳ್ಳಲು ರಾಷ್ಟ್ರಪತಿ ಮತ್ತು ಚುನಾವಣಾ ಆಯೋಗ ಮಧ್ಯ ಪ್ರವೇಶಿಸಬೇಕೆಂದು ಕೋರಿವೆ.

'ಅಸ್ಸಾಂ ರಾಜ್ಯಪಾಲರು ಉದಯಪುರದಲ್ಲಿ ಬಿಜೆಪಿ ಅಭ್ಯರ್ಥಿ ಪರ ಪ್ರಚಾರದಲ್ಲಿ ತೊಡಗಿದ್ದರು. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೇ ಸವಾಲು. ಅವರ ವಿರುದ್ಧ ಆಯೋಗ ಕ್ರಮ ಕೈಗೊಳ್ಳಬೇಕು ಎಂದು ಅಸ್ಸಾಂ ಟಿಎಂಸಿ ಅಧ್ಯಕ್ಷ ರಿಪುನ್ ಬೊರಾ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಮೋದಿ ವಿರುದ್ಧ ಕ್ರಮಕ್ಕೆ ಆಗ್ರಹ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪಕ್ಷಕ್ಕೆ 'ಮರಣದಂಡನೆ' ವಿಧಿಸುವ ರೀತಿಯಲ್ಲಿ ಕಮಲ ಚಿತ್ರದ ಬಟನ್ ಒತ್ತಬೇಕು ಎಂದು ಮತದಾರರನ್ನು ಕೋರಿರುವ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಚುನಾವಣಾ ಆಯೋಗ ಕ್ರಮ ಕೈಗೊಳ್ಳಬೇಕು ಎಂದು ಸಿಪಿಎಂ ಗುರುವಾರ ಒತ್ತಾಯಿಸಿದೆ.

ರಾಜಸ್ಥಾನದ ಬಾರ್ಮೆರ್ ಜಿಲ್ಲೆಯ ಬಾಯತೂದಲ್ಲಿ ಬುಧವಾರ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಮೋದಿ ಅವರು, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರ ಮತ್ತು ಮನವೊಲಿಕೆ ನೀತಿ ಕುರಿತು ವಾಗ್ದಾಳಿ ನಡೆಸಿದ್ದರು. ಅಲ್ಲದೆ ಕಾಂಗ್ರೆಸ್ ಅಧಿಕಾರಲ್ಲಿರುವೆಡೆಯೆಲ್ಲಾ ಉಗ್ರರು ಮತ್ತು ಗಲಭೆಕೋರರ ಸ್ಥೈರ್ಯ ಹೆಚ್ಚಾಗಿದೆ ಎಂದಿದ್ದರು.

'ಅವರನ್ನು ಶಿಕ್ಷಿಸುವ ಅವಕಾಶ ನಿಮಗಿದೆ. ಕಮಲ ಚಿಹ್ನೆಯ ಬಟನ್ ಒತ್ತಿ. ಇದರಿಂದ ಅವರ ಶಿಕ್ಷೆ ಖಚಿತವಾಗುತ್ತದೆ. ಅವರಿಗೆ ನೀವು ಮರಣದಂಡನೆ ನೀಡುತ್ತಿರುವ ರೀತಿಯಲ್ಲಿ ಕಮಲ ಚಿಹ್ನೆ ಬಟನ್ ಒತ್ತಿ' ಎಂದಿದ್ದರು.

ಮೋದಿ ಭಾಷಣದ ವಿಡಿಯೊವನ್ನು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಸಿಪಿಎಂ, ಚುನಾವಣಾ ಆಯೋಗವು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದೆ.

ಚುನಾವಣಾ ಕಣದಲ್ಲಿ

- **ಬಿಜೆಪಿ ತೊರೆದ ವಿಜಯಶಾಂತಿ:** ತೆಲಂಗಾಣ ವಿಧಾನಸಭೆಗೆ ಕೆಲ ದಿನಗಳು ಬಾಕಿ ಇರುವಾಗ ಮಾಜಿ ಸಂಸದೆ ಮತ್ತು ನಟಿ ವಿಜಯಶಾಂತಿ ಅವರು ಬಿಜೆಪಿಗೆ ರಾಜೀನಾಮೆ ನೀಡಿದ್ದಾರೆ. ಅವರು ಶುಕ್ರವಾರ ಕಾಂಗ್ರೆಸ್‌ಗೆ ಸೇರುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.
  ಇತ್ತೀಚಿನ ದಿನಗಳಲ್ಲಿ ಅವರು ಬಿಜೆಪಿಯ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರಲಿಲ್ಲ. 2009ರಲ್ಲಿ ರಾಜಕೀಯ ಜೀವನ ಆರಂಭಿಸಿದ್ದ ಅವರು 2020ರಲ್ಲಿ ಬಿಜೆಪಿ ಸೇರಿದ್ದರು.
- **ಪ್ರಣಾಳಿಕೆ ಇಂದು ಬಿಡುಗಡೆ:** ತೆಲಂಗಾಣದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶುಕ್ರವಾರ ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ ಮಾಡುವರು. ಅವರು ಮತ್ತು ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ರಾಜ್ಯದಲ್ಲಿ ಪ್ರತ್ಯೇಕವಾಗಿ ಚುನಾವಣಾ ರ್‍ಯಾಲಿಗಳಲ್ಲಿ ಪಾಲ್ಗೊಳ್ಳುವರು ಎಂದು ಮೂಲಗಳು ಹೇಳಿವೆ.
- **ಅಭ್ಯರ್ಥಿ ವಿರುದ್ಧ ಪ್ರಕರಣ:** ಮಧ್ಯಪ್ರದೇಶದ ಮೊರೆನಾ ಕ್ಷೇತ್ರದ ಬಿಎಸ್ಪಿ ಅಭ್ಯರ್ಥಿ ರಾಕೇಶ್ ಸಿಂಗ್ ಅವರು ಮತದಾರರಿಗೆ ಲಂಚ ನೀಡಿದ ಆರೋಪದ ಮೇಲೆ ಅವರ ವಿರುದ್ಧ ಪ್ರಕರಣ ದಾಖಲಾಗಿದೆ.
  ಸಿಂಗ್ ಅವರೆಂದು ಹೇಳಲಾದ ವ್ಯಕ್ತಿಯು ಕೆಲವರಿಗೆ ಹಣ ಹಂಚುವ ವಿಡಿಯೊವೊಂದು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹಂಚಿಕೆ ಆಗಿದೆ.
- **2,290 ಮಂದಿ ಕಣದಲ್ಲಿ:** ತೆಲಂಗಾಣ ವಿಧಾನಸಭೆ ಚುನಾವಣೆಗಾಗಿ ಅಂತಿಮವಾಗಿ ಕಣದಲ್ಲಿ 2,290 ಅಭ್ಯರ್ಥಿಗಳು ಇದ್ದಾರೆ. 608 ಅಭ್ಯರ್ಥಿಗಳು ನಾಮಪತ್ರ ಹಿಂದಕ್ಕೆ ಪಡೆದಿದ್ದಾರೆ ಎಂದು ಮುಖ್ಯ ಚುನಾವಣಾಧಿಕಾರಿ ಕಚೇರಿ ಪ್ರಕಟಣೆ ತಿಳಿಸಿದೆ.
  ನಾಮಪತ್ರ ಪರಿಶೀಲನೆ ವೇಳೆ 606 ಮಂದಿಯ ನಾಮಪತ್ರಗಳು ತಿರಸ್ಕೃತಗೊಂಡಿದ್ದವು. ತೆಲಂಗಾಣದಲ್ಲಿ 3.26 ಕೋಟಿ ಮತದಾರರಿದ್ದಾರೆ. ಇದೇ 30ರಂದು ಮತದಾನ ನಡೆಯಲಿದೆ.
- **ಡಿ. 3ರಂದೇ ಮತ ಎಣಿಕೆ:** ಮಿಜೋರಾಂ ರಾಜ್ಯದ ವಿವಿಧ ಕ್ಷೇತ್ರದ ಗಣ್ಯರು ಮತ ಎಣಿಕೆ ದಿನವನ್ನು ಬದಲಿಸಬೇಕು ಎಂದು ಕೋರಿದ್ದರೂ ಅದೇ ದಿನವೇ ಮತ ಎಣಿಕೆ ನಡೆಸಲು ಚುನಾವಣಾ ಆಯೋಗ ನಿರ್ಧರಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.
  ಡಿ. 3 ಭಾನುವಾರ ಮತ ಎಣಿಕೆ ನಿಗದಿಯಾಗಿದೆ. ಆದರೆ ಕ್ರೈಸ್ತ ಸಮುದಾಯದವರೇ ಹೆಚ್ಚಿರುವ ಮಿಜೋರಾಂನಲ್ಲಿ ಭಾನುವಾರ ಚರ್ಚ್ ಕಾರ್ಯಕ್ರಮಗಳು ಇರುತ್ತವೆ. ಆದ್ದರಿಂದ ಮತ ಎಣಿಕೆ ದಿನ ಬದಲಿಸಬೇಕು ಎಂದು ಕೋರಲಾಗಿತ್ತು. ಆದರೆ ನಿಗದಿ ಪಡಿಸಿದ ದಿನವೇ ಮತ ಎಣಿಕೆ ನಡೆಯಲಿದೆ ಎಂದು ಮಿಜೋರಾಂ ಮುಖ್ಯ ಚುನಾವಣಾ ಅಧಿಕಾರಿ ಮಧುಪ್ ವ್ಯಾಸ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮಧ್ಯಪ್ರದೇಶದ ಸೀಹೊರ್ ಜಿಲ್ಲೆಯಲ್ಲಿ ನರ್ಮದಾ ನದಿ ತೀರದ ಬಳಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಗುರುವಾರ ಪೂಜೆ ಸಲ್ಲಿಸಿದರು ಪಿಟಿಐ ಚಿತ್ರ

ನುಡಿ–ಕಿಡಿ

ಬಿಜೆಪಿಗೆ ನೀವು ಮತ ನೀಡಿದರೆ ಚರಂಡಿಗೆ ಹೋಗುತ್ತದೆ. ಅದು ವ್ಯರ್ಥ ಕಸರತ್ತು. ಕಾಂಗ್ರೆಸ್‌ಗೆ ನೀವು ಮತ ಹಾಕಿದರೆ ಅದು ಇನ್ನೂ ವ್ಯರ್ಥ. ಜನರು ಈ ಬಗ್ಗೆ ಆಲೋಚನೆ ಮಾಡಬೇಕೆಂದು ಮನವಿ ಮಾಡುತ್ತೇನೆ.

ಕೆ. ಚಂದ್ರಶೇಖರರಾವ್, ಬಿಆರ್‌ಎಸ್ ಮುಖ್ಯಸ್ಥ

ದೇಶ ವಿಶ್ವದಲ್ಲೇ ಸೂಪರ್ ಪವರ್ ಆಗಬೇಕು. ವಿಶ್ವ ನಾಯಕನಾಗಬೇಕು, ಗ್ರಾಮಸ್ಥರು, ಬಡ ಕಾರ್ಮಿಕರು ಮತ್ತು ರೈತರು ಹಸಿವು, ಭಯೋತ್ಪಾದನೆ ಹಾಗೂ ಭ್ರಷ್ಟಾಚಾರದಿಂದ ಮುಕ್ತರಾಗಬೇಕು. ಈ ಕನಸನ್ನು ಬಿಜೆಪಿ ಮಾತ್ರ ಈಡೇರಿಸಬಲ್ಲದು.

ನಿತಿನ್ ಗಡ್ಕರಿ, ಕೇಂದ್ರ ಸಾರಿಗೆ ಸಚಿವ

ಪಿಎಂ ಗರೀಬ್ ಕಲ್ಯಾಣ್ ಅನ್ನ ಯೋಜನೆಯನ್ನು ಐದು ವರ್ಷಗಳಿಗೆ ವಿಸ್ತರಿಸುವುದಾಗಿ ಛತ್ತೀಸಗಢದಲ್ಲಿ ಪ್ರಚಾರದ ವೇಳೆ ಪ್ರಧಾನಿ ಘೋಷಿಸಿದ್ದರು. ಆದರೆ ಬುಧವಾರ ಸಂಜೆ ಸರ್ಕಾರ ಬಿಡುಗಡೆ ಮಾಡಿರುವ ಅಧಿಕೃತ ಪತ್ರಿಕಾ ಹೇಳಿಕೆಯಲ್ಲಿ ಯೋಜನೆಯನ್ನು 2023ರ ಜ. 1ರಿಂದ ಆರಂಭವಾಗುವ ವರ್ಷಕ್ಕೆ ವಿಸ್ತರಿಸಲಾಗಿದೆ ಎಂದಷ್ಟೆ ಹೇಳಲಾಗಿದೆ.

ಪ್ರಧಾನಿ ಅವರು ಹೇಳಿದ ವಿಸ್ತರಣೆಯ ಘೋಷಣೆ ಬಗ್ಗೆ ಯಾವ ಪ್ರಸ್ತಾವವೂ ಇಲ್ಲ ಏಕೆ? ನಿಜವಾಗಿ ಇಲ್ಲಿ ಏನಾಗುತ್ತಿದೆ?

ಜೈರಾಂ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಮಧ್ಯಪ್ರದೇಶ ಕೇಂದ್ರ ಭಾಗದಲ್ಲಿ ಯಾರಿಗೆ ಮಣೆ?

ಬಿಜೆಪಿ ಭದ್ರಕೋಟೆಯಲ್ಲಿ ಮತ್ತೆ ನೆಲೆ ಕಂಡುಕೊಳ್ಳಲು ಕಾಂಗ್ರೆಸ್ ಹವಣಿಕೆ

ಭೋಪಾಲ್ (ಪಿಟಿಐ): ರಾಜಧಾನಿ ಭೋಪಾಲ್ ಹಾಗೂ ಅದಕ್ಕೆ ಹೊಂದಿಕೊಂಡಿರುವ ಪ್ರದೇಶಗಳನ್ನು ಒಳಗೊಂಡಿರುವ ಮಧ್ಯಪ್ರದೇಶದ ಕೇಂದ್ರ ಭಾಗವು ಕಳೆದ ಮೂರು ದಶಕಗಳಿಂದ ಬಿಜೆಪಿಯ ಭದ್ರಕೋಟೆಯಾಗಿದೆ. ಈ ಬಾರಿ ಇಲ್ಲಿ ಮತ್ತೆ ನೆಲೆ ಕಂಡುಕೊಳ್ಳಲು ಕಾಂಗ್ರೆಸ್ ಹವಣಿಸುತ್ತಿದೆ.

ಇಲ್ಲಿನ ಸಾಮಾಜಿಕ ಹಾಗೂ ರಾಜಕೀಯ ಸಮೀಕರಣಕ್ಕೆ ಅನುಗುಣವಾಗಿ ತಾನು ಕೆಲಸ ಮಾಡಿದ್ದು, ಭದ್ರಕೋಟೆಯ ಮೇಲಿನ ತನ್ನ ಹಿಡಿತ ಇನ್ನಷ್ಟು ಬಿಗಿಯಾಗಿದೆ ಎಂದು ಬಿಜೆಪಿ ಹೇಳುತ್ತಿದೆ. ಹಿಂದಿನ ತಪ್ಪುಗಳನ್ನು ಸರಿಪಡಿಸಿಕೊಳ್ಳಲಾಗಿದೆ, ಈ ಬಾರಿ ಇಲ್ಲಿನ ಫಲಿತಾಂಶವು ಹಿಂದಿನ ಬಾರಿಯ ಫಲಿತಾಂಶಕ್ಕಿಂತ ಭಿನ್ನವಾಗಿರುತ್ತದೆ ಎಂದು ಕಾಂಗ್ರೆಸ್ ಹೇಳುತ್ತಿದೆ.

ಈ ಭಾಗದಲ್ಲಿ ಬಿಜೆಪಿಯ ಪ್ರಾಬಲ್ಯವು ಈ ಬಾರಿಯೂ ಮುಂದುವರಿಯಲಿದೆ ಎಂದು ರಾಜಕೀಯ ವಿಶ್ಲೇಷಕರೊಬ್ಬರು ಅಭಿಪ್ರಾಯಪಟ್ಟಿದ್ದಾರೆ. 'ಮಧ್ಯ ಭಾರತ' ಎಂದು ಕೆಲವರು ಕರೆಯುವ ಈ ಭಾಗದಲ್ಲಿ ಒಟ್ಟು 36 ವಿಧಾನಸಭಾ ಕ್ಷೇತ್ರಗಳಿವೆ. 2013ರಲ್ಲಿ ಇಲ್ಲಿ ಬಿಜೆಪಿ ಒಟ್ಟು 30 ಸ್ಥಾನಗಳನ್ನು, 2018ರಲ್ಲಿ 24 ಸ್ಥಾನಗಳನ್ನು ಗೆದ್ದುಕೊಂಡಿದೆ. ಕಾಂಗ್ರೆಸ್ ಇಲ್ಲಿ ಈಗ 12 ಸ್ಥಾನಗಳನ್ನು ಹೊಂದಿದೆ. ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಪ್ರತಿನಿಧಿಸುವ ಬುಧ್ನಿ ಕ್ಷೇತ್ರ ಕೂಡ ಈ ಭಾಗಕ್ಕೇ ಸೇರಿದೆ.

ಚೌಹಾಣ್ ಅವರ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿ ವಿಕ್ರಮ್ ಮಸ್ತಾಲ್ ಅವರು ಕಣಕ್ಕಿಳಿದಿದ್ದಾರೆ. ಇವರು ಟಿ.ವಿ. ಧಾರಾವಾಹಿಯೊಂದರಲ್ಲಿ ಹನುಮಂತನ ಪಾತ್ರ ನಿರ್ವಹಿಸಿದ್ದರು. ಸಮಾಜವಾದಿ ಪಕ್ಷದಿಂದ ಮಿರ್ಚಿ ಬಾಬಾ ಕಣದಲ್ಲಿದ್ದಾರೆ. ಭೋಪಾಲ್ ಲೋಕಸಭಾ ಕ್ಷೇತ್ರದಲ್ಲಿ 2019ರಲ್ಲಿ ಕಾಂಗ್ರೆಸ್ಸಿನ ದಿಗ್ವಿಜಯ್ ಸಿಂಗ್ ಗೆಲ್ಲಲಿ ಎಂದು ಬಯಸಿ ಮೆಣಸಿನ ಕಾಯಿ ಹವನ ಮಾಡಿದವರು ಈ ಬಾಬಾ.

ಭಿನ್ನ ಬಗೆಯ ರಾಜಕೀಯ ಪ್ರಭಾವ ಹೊಂದಿದ್ದ ರಾಜ್ಯಗಳ ವಿಲೀನದ ಮೂಲಕ ಮಧ್ಯಪ್ರದೇಶ ರಾಜ್ಯದ ರಚನೆ ಆಗಿದೆ ಎಂದು ಹೇಳುತ್ತಾರೆ ಹಿರಿಯ ಪತ್ರಕರ್ತ ಗಿರಿಜಾ ಶಂಕರ್. ಸಿಹೋರ್, ಆಷ್ಟಾ, ಭೋಪಾಲ್ ಮತ್ತು ಅದರ ಸುತ್ತಲಿನ ಪ್ರದೇಶಗಳ ಮೇಲೆ ಆರ್‌ಎಸ್‌ಎಸ್ ಗಮನ ನೀಡಿದ ಕಾರಣದಿಂದಾಗಿ ಅಲ್ಲಿ ಜನಸಂಘದ ಹಾಗೂ ನಂತರ ಬಿಜೆಪಿಯ ಪ್ರಭಾವ ಸೃಷ್ಟಿಯಾಯಿತು ಎಂದು ಅವರು ವಿವರಿಸುತ್ತಾರೆ.

'ಈ ಬಾರಿಯೂ ಇಲ್ಲೆಲ್ಲ ಬಿಜೆಪಿ ಪ್ರಾಬಲ್ಯ ಮುಂದುವರಿಯುವ ಸಾಧ್ಯತೆಗಳು ಇವೆ' ಎಂದು ಅವರು ಹೇಳುತ್ತಾರೆ.

ಕೆಲವು ತಪ್ಪುಗಳ ಕಾರಣದಿಂದಾಗಿ ಬೈತೂಲ್ ಮತ್ತು ರಾಜಗಢ ಜಿಲ್ಲೆಗಳಲ್ಲಿ ಈ ಹಿಂದೆ ಪಕ್ಷವು ಕೆಲವು ಸ್ಥಾನಗಳನ್ನು ಕಳೆದುಕೊಂಡಿತ್ತು. ಆದರೆ ಈ ಬಾರಿ ಪಕ್ಷವು ಆ ತಪ್ಪುಗಳನ್ನು ಸರಿಪಡಿಸಿಕೊಂಡಿದೆ. ಭೋಪಾಲ್ ಹಾಗೂ ನರ್ಮದಾಪುರಂ ವಿಭಾಗಗಳ ಸಾಮಾಜಿಕ ಹಾಗೂ ರಾಜಕೀಯ ಸಮೀಕರಣಕ್ಕೆ ಅನುಗುಣವಾಗಿ ಪಕ್ಷ ಕೆಲಸ ಮಾಡಿದೆ, ಅಲ್ಲಿ ಶಕ್ತಿಯನ್ನು ಹೆಚ್ಚಿಸಿಕೊಂಡಿದೆ ಎಂದು ಬಿಜೆಪಿ ರಾಜ್ಯ ಘಟಕದ ಕಾರ್ಯದರ್ಶಿ ರಜನೀಶ್ ಅಗರ್ವಾಲ್ ಹೇಳುತ್ತಾರೆ.

ಈ ಬಾರಿ ಪಕ್ಷವು ತಪ್ಪುಗಳನ್ನು ತಿದ್ದಿಕೊಂಡಿದೆ. ಬೂತ್ ಮಟ್ಟದವರೆಗೂ ಪಕ್ಷದ ಸಂಘಟನೆಯನ್ನು ಗಟ್ಟಿಮಾಡಲಾಗಿದೆ. ಹೀಗಾಗಿ 36 ಕ್ಷೇತ್ರಗಳಲ್ಲಿ ಈ ಬಾರಿ ಫಲಿತಾಂಶವು ಭಿನ್ನವಾಗಿರುತ್ತದೆ ಎಂದು ಮಧ್ಯಪ್ರದೇಶ ಕಾಂಗ್ರೆಸ್ ಮಾಧ್ಯಮ ವಿಭಾಗದ ಅಧ್ಯಕ್ಷ ಕೆ.ಕೆ. ಮಿಶ್ರಾ ವಿವರಿಸುತ್ತಾರೆ.

ಮುಖ್ಯಾಂಶಗಳು

- ಬೂತ್ ಹಂತದಲ್ಲೂ ಸಂಘಟನೆಗೆ ಬಲ
- ಹಿಂದಿನ ತಪ್ಪು ತಿದ್ದಿಕೊಂಡು ಕಾರ್ಯತಂತ್ರ

ಒಂದು ವರ್ಷದ ಸ್ನಾತಕೋತ್ತರ: ಪ್ರವೇಶಾತಿ

ನವದೆಹಲಿ: ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಹಾಗೂ ಗಣಿತ ವಿಷಯದಲ್ಲಿ ಪದವಿ ಶಿಕ್ಷಣ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಒಂದು ವರ್ಷದ ಸ್ನಾತಕೋತ್ತರ ಪದವಿ ಪ್ರವೇಶಾತಿ ಪಡೆಯುವುದಕ್ಕೆ ಅನುವಾಗುವಂತೆ ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಹೊಸ ಮಾರ್ಗಸೂಚಿಯನ್ನು ಪ್ರಕಟಿಸಿದೆ.

ಈ ನಾಲ್ಕು ವಿಭಾಗಗಳಲ್ಲಿ ನಾಲ್ಕು ವರ್ಷದ ಪದವಿ ಪಡೆದವರು, ಮೂರು ವರ್ಷದ ಪದವಿ ಹಾಗೂ ಎರಡು ವರ್ಷದ ಸ್ನಾತಕೋತ್ತರ ಪದವಿ ಪಡೆದವರು ಅಥವಾ ಐದು ವರ್ಷಗಳ ಸಂಯೋಜಿತ ಪದವಿ ಶಿಕ್ಷಣ ಪೂರ್ಣಗೊಳಿಸಿದವರು ನೇರವಾಗಿ ಎಂ.ಇ ಹಾಗೂ ಎಂ.ಟೆಕ್ ಪ್ರವೇಶಾತಿಗೆ ಅರ್ಹತೆ ಪಡೆಯಲಿದ್ದಾರೆ ಎಂದು ತಿಳಿಸಿದೆ.

ನ.3ರಂದು ನಡೆದ ಸಭೆಯಲ್ಲಿ ಈ ಸ್ನಾತಕೋತ್ತರ ಪದವಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕರಡು ಪಠ್ಯಕ್ರಮ ಹಾಗೂ ವಿಶ್ವಾಸಪೂರ್ಣವಾದ ಚೌಕಟ್ಟನ್ನು ರೂಪಿಸಲಾಗಿದೆ. ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿದ ಬಳಿಕ ಆಯೋಗವು ಅಧಿಕೃತವಾಗಿ ಒಪ್ಪಿಗೆ ನೀಡಲಿದೆ.

'ಭಾಷಣಕಾರರ ಆಹ್ವಾನಕ್ಕೆ ಪೂರ್ವಾನುಮತಿ ಕಡ್ಡಾಯ'

ಮುಂಬೈ (ಪಿಟಿಐ): ಭಾರತೀಯ ತಂತ್ರಜ್ಞಾನ ಸಂಸ್ಥೆ ಬಾಂಬೆಯಲ್ಲಿ (ಐಐಟಿಬಿ) ಉಪನ್ಯಾಸ ಅಥವಾ ಭಾಷಣಕ್ಕೆ ಹೊರಗಿನಿಂದ ಅತಿಥಿಗಳನ್ನು ಆಹ್ವಾನಿಸಲು ಮತ್ತು ಸಾಕ್ಷ್ಯಚಿತ್ರ, ಸಿನಿಮಾಗಳನ್ನು ಪ್ರದರ್ಶಿಸುವ ಮೊದಲು ಅದು 'ರಾಜಕೀಯ, ವಿವಾದಾತ್ಮಕ' ವಿಷಯಗಳಿಂದ ಮುಕ್ತವಾಗಿರಿಸುವ ಸಲುವಾಗಿ ಅಗತ್ಯ ಪೂರ್ವಾನುಮತಿ ಪಡೆಯುವಂತೆ ತನ್ನ ಬೋಧಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಸೂಚಿಸಿದೆ.

ಆದರೆ, ಉಪನ್ಯಾಸದ ವಿಷಯವು ಸಂಪೂರ್ಣ ರಾಜಕೀಯೇತರವಾಗಿದ್ದರೆ ಅದಕ್ಕೆ ಪೂರ್ವಾನುಮತಿಯ ಅಗತ್ಯವಿಲ್ಲ ಎಂದು ಸಂಸ್ಥೆಯು ಎರಡು ದಿನಗಳ ಹಿಂದೆ ಹೊರಡಿಸಿದ ಮಾರ್ಗಸೂಚಿಗಳಲ್ಲಿ ತಿಳಿಸಿದೆ.

ಇಸ್ರೇಲ್ ವಿರುದ್ಧ ಪ್ಯಾಲೆಸ್ಟೀನ್ ಸ್ವಾತಂತ್ರ್ಯ ಹೋರಾಟದ ಕುರಿತು ಉಪನ್ಯಾಸ ನೀಡುವಾಗ ಭಯೋತ್ಪಾದನೆ ವೈಭವೀಕರಿಸಿದ ಆರೋಪದ ಮೇಲೆ ಅತಿಥಿ ಉಪನ್ಯಾಸಕರ ವಿರುದ್ಧ ಐಐಟಿಬಿ ಕ್ಯಾಂಪಸ್‌ನ ಹೊರಗೆ ಪ್ರತಿಭಟನೆ ನಡೆದ ಕೆಲ ದಿನಗಳ ನಂತರ ಈ ಬೆಳವಣಿಗೆ ನಡೆದಿದೆ.

ನ.14 ರಂದು ಹೊರಡಿಸಿರುವ 'ಐಐಟಿ ಬಾಂಬೆಯಲ್ಲಿ ಕಾರ್ಯಕ್ರಮಗಳನ್ನು ನಡೆಸುವ ಮಧ್ಯಂತರ ಮಾರ್ಗಸೂಚಿಗಳು' ಅಡಿಯಲ್ಲಿ ಹೊರಗಿನ ಅತಿಥಿ ಭಾಷಣಕಾರರನ್ನು ಒಳಗೊಂಡಿರುವ ಕಾರ್ಯಕ್ರಮಗಳು ಅಥವಾ ಚಲನಚಿತ್ರಗಳು, ಸಾಕ್ಷ್ಯಚಿತ್ರಗಳ ಪ್ರದರ್ಶನಗಳಿಗೆ ಡೀನ್ ಅನುಮೋದನೆ ನೀಡುವ ಮೊದಲು, ಸಂಸ್ಥೆಯ ನಿರ್ದೇಶಕರು ನೇಮಕ ಮಾಡಿದ ಸಮಿತಿಯಿಂದ ಪೂರ್ವಾನುಮತಿ ಪಡೆದುಕೊಳ್ಳಬೇಕಿದೆ.

ಎಡಪಂಥೀಯ ವಿದ್ಯಾರ್ಥಿಗಳ ಸಂಘಟನೆ 'ಅಂಬೇಡ್ಕರ್ ಪೆರಿಯಾರ್ ಫುಲೆ ಸ್ಟಡಿ ಸರ್ಕಲ್' ಈ ಮಾರ್ಗಸೂಚಿಗಳ ಪ್ರತಿಯನ್ನು ಸಾಮಾಜಿಕ ಮಾಧ್ಯಮ ಜಾಲತಾಣ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದು, ಇದೊಂದು ದಮನಕಾರಿ ಆದೇಶ ಎಂದು ಕಿಡಿಕಾರಿದೆ.

ಮಧ್ಯಪ್ರದೇಶ ವಿಧಾನಸಭಾ ಚುನಾವಣೆ: ಮತದಾನ ಇಂದು

ಸಿ.ಎಂ ಚೌಹಾಣ್ ವಿರೋಧಿ ಅಲೆಯೇ ಬಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಐದು ರಾಜ್ಯಗಳ ಪೈಕಿ ಅತ್ಯಂತ 'ಹೈವೋಲ್ಟೇಜ್' ಚುನಾವಣೆ ಎಂದೇ ಪರಿಗಣಿಸಲಾಗಿರುವ ಮಧ್ಯಪ್ರದೇಶ ವಿಧಾನ ಸಭೆ ಚುನಾವಣೆಗೆ ಕ್ಷಣಗಣನೆ ಆರಂಭವಾಗಿದೆ. ರಾಜ್ಯದ ಎಲ್ಲ 230 ಕ್ಷೇತ್ರಗಳಲ್ಲಿ ಶುಕ್ರವಾರ ಮತದಾನ ನಡೆಯಲಿದೆ.

ರಾಜ್ಯದಲ್ಲಿ ಆಳುವ ಬಿಜೆಪಿ ಮತ್ತು ವಿರೋಧಪಕ್ಷ ಕಾಂಗ್ರೆಸ್ ನಡುವೆ ತೀವ್ರ ತುರುಸಿನ ಸ್ಪರ್ಧೆ ನಡೆದಿದೆ. ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿಯು ಮೋದಿ ನಾಮಬಲ– ಹಿಂದುತ್ವ ಹಾಗೂ ಕಲ್ಯಾಣ ಕಾರ್ಯಕ್ರಮಗಳನ್ನು ಪಣಕ್ಕಿಟ್ಟರೆ, 'ಆಪರೇಷನ್ ಕಮಲ'ದಿಂದ ಮೂರುವರೆ ವರ್ಷದ ಹಿಂದೆ ಅಧಿಕಾರ ಕಳೆದುಕೊಂಡ ಕಾಂಗ್ರೆಸ್ ಪಕ್ಷ ಆಡಳಿತ ವಿರೋಧಿ ಅಲೆಯನ್ನೇ ನಂಬಿಕೊಂಡಿದೆ. ಬಿಜೆಪಿ ಪುನಃ ಅಧಿಕಾರ ಹಿಡಿಯುತ್ತದೆಂದು ನಿಶ್ಚಿತವಾಗಿ ಹೇಳುವ ಸ್ಥಿತಿ ಇಲ್ಲ. 18 ವರ್ಷಗಳ ಆಡಳಿತದ ಬಳಿಕ ಶಿವರಾಜ್ ಸಿಂಗ್ ಚೌಹಾಣ್ ಅವರ ಸಾಂಪ್ರದಾಯಿಕ ಬೆಂಬಲಿಗರು ನಿಧಾನಕ್ಕೆ ಕೈಕೊಡಲಾರಂಭಿಸಿದ್ದಾರೆ. ರಾಜ್ಯದಲ್ಲಿ ಬಿಜೆಪಿ ವಿರೋಧಿ ಅಲೆಗಿಂತ ಚೌಹಾಣ್ ವಿರೋಧಿ ಅಲೆಯೇ ಬಲವಾಗಿದೆ.

ಹಿಂದಿ ಪ್ರಾಬಲ್ಯದ ರಾಜ್ಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 15 ರ್‍ಯಾಲಿಗಳಲ್ಲಿ ಭಾಗಿಯಾಗಿ ಬಿಜೆಪಿ ಪರ ಅಲೆ ಎಬ್ಬಿಸುವ ಪ್ರಯತ್ನ ನಡೆಸಿದರೆ, ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಒಂದೇ ತಿಂಗಳಲ್ಲಿ 160 ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು 14 ಸಾರ್ವಜನಿಕಸಭೆಗಳಲ್ಲಿ ಭಾಗಿಯಾದರು.

ಕಾಂಗ್ರೆಸ್‌ನ ಸ್ಟಾರ್ ಪ್ರಚಾರಕರಾದ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ತಲಾ 10 ರ್‍ಯಾಲಿಗಳಲ್ಲಿ ಭಾಗಿಯಾದರು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಏಳು ಸಭೆಗಳಲ್ಲಿ ಭಾಗವಹಿಸಿ 'ಕೈ' ಕಾರ್ಯಕರ್ತರಲ್ಲಿ ಹುರುಪು ತುಂಬಿದರು.

ಬಿಜೆಪಿ ಸರ್ಕಾರಕ್ಕೆ ಆಡಳಿತ ವಿರೋಧಿ ಅಲೆಯ ಬಿಸಿ ಜೋರಾಗಿ ತಟ್ಟಿದೆ. ಇದನ್ನು ಕಡಿಮೆ ಮಾಡಲು ಕಮಲ ಪಡೆಯು ಮಹಿಳೆಯರ ಮನ ಗೆಲ್ಲಲು ಹಲವು ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ಲಾಡ್ಲಿ ಬೆಹನಾ ಯೋಜನೆಯಡಿ ಮಹಿಳೆಯರಿಗೆ ಮಾಸಿಕ ₹1,250 ಹಣ ವರ್ಗಾಯಿಸುತ್ತಿದೆ. ಮಹಿಳೆಯರ ಖಾತೆಗೆ ಒಂದಷ್ಟು ದುಡ್ಡು ಬಂದಿದೆ. ಹಿಂದೂ ಧಾರ್ಮಿಕ ಕೇಂದ್ರಗಳ ಅಭಿವೃದ್ಧಿಗೆ ಹೇರಳ ಅನುದಾನ ನೀಡಿದೆ. ಕಾಂಗ್ರೆಸ್ ಪಕ್ಷವು ಕರ್ನಾಟಕದ ಮಾದರಿಯಲ್ಲೇ 'ಗ್ಯಾರಂಟಿ'ಗಳನ್ನು ಘೋಷಿಸಿದೆ. ಒಬಿಸಿ ಮತದಾರರೇ ನಿರ್ಣಾಯಕವಾಗಿರುವ ರಾಜ್ಯದಲ್ಲಿ 'ಜಾತಿ ಗಣತಿಯ ಅಸ್ತ್ರ' ಬಿಟ್ಟಿದೆ. ಮೀಸಲಾತಿ ರಾಜಕಾರಣ ಚುನಾವಣೆಗಳ ಆಸುಪಾಸಿನಲ್ಲಿ ತಲೆಯೆತ್ತಿದೆ.

ರಾಜ್ಯದಲ್ಲಿ ಬಿಜೆಪಿ ಸರಿಸುಮಾರು 19 ವರ್ಷಗಳಿಂದ ಅಧಿಕಾರ ನಡೆಸಿದೆ. ಹಾಗಾಗಿ ಆಡಳಿತವಿರೋಧಿ ಭಾವನೆ ಸ್ವಾಭಾವಿಕ. ಅದನ್ನು ಅಡಗಿಸುವಷ್ಟು ಪ್ರಖರ ಸಾಧನೆಯನ್ನು ಚೌಹಾಣ್ ಮಾಡಿಲ್ಲ. ಚೌಹಾಣ್ ಜನರ ನಡುವೆ ಬೆರೆಯುವ ಸರಳ ವ್ಯಕ್ತಿ. ಆದರೆ, ಮೋದಿ ಅವರಂತಹ ಪ್ರಖರ ವರ್ಚಸ್ಸು ಅವರಿಗೆ ಇಲ್ಲ. ಜತೆಗೆ, ಬಿಜೆಪಿ ಶಾಸಕರ ಜನಪ್ರಿಯತೆ ನಶಿಸಿದೆ. ಈ ಕಾರಣಕ್ಕೆ ಶೇ 33ರಷ್ಟು ಹಾಲಿ ಶಾಸಕರಿಗೆ ಟಿಕೆಟ್ ನಿರಾಕರಿಸಿ ಈ ವ್ಯತಿರಿಕ್ತ ಅಂಶವನ್ನು ಮೆಟ್ಟುವ ಪ್ರಯತ್ನವನ್ನು ಕಮಲ ಪಾಳಯ ಮಾಡಿದೆ. ಮೂವರು ಕೇಂದ್ರ ಸಚಿವರು ಒಳಗೊಂಡಂತೆ ಏಳು ಸಂಸದರನ್ನು ಹುರಿಯಾಳುಗಳನ್ನಾಗಿ ಮಾಡಿ ಆಡಳಿತ ವಿರೋಧಿ ಅಲೆಯನ್ನು ಕಡಿಮೆ ಮಾಡುವ ಮಹಾಪ್ರಯತ್ನ ನಡೆಸಿದೆ. ಐದು ರಾಜ್ಯಗಳ ಚುನಾವಣೆಗೆ ತಿಂಗಳುಗಳು ಇರುವ ಹೊತ್ತಿನಲ್ಲಿ ಸಂಸತ್‌ನ ವಿಶೇಷ ಅಧಿವೇಶನ ನಡೆಸಿ ಮಹಿಳಾ ಮೀಸಲಾತಿ ಮಸೂದೆಗೆ ಅಂಗೀಕಾರ ಸಿಗುವಂತೆ ಮಾಡಲಾಯಿತು. ಇದೊಂದು ಚಾರಿತ್ರಿಕ ಸಾಧನೆ ಎಂದು ಬೆನ್ನು ತಟ್ಟಿಕೊಂಡ ಬಿಜೆಪಿಯು ಮಧ್ಯಪ್ರದೇಶದಲ್ಲಿ ಮಹಿಳೆಯರನ್ನು 27 ಕ್ಷೇತ್ರಗಳಲ್ಲಷ್ಟೇ ಕಣಕ್ಕಿಳಿಸಿತು. ಚುನಾವಣಾ ಪ್ರಚಾರ ರ್‍ಯಾಲಿಗಳಲ್ಲಿ ಕಮಲ ಪಾಳಯದ ಘಟಾನುಘಟಿ ನಾಯಕರು ಮಹಿಳಾ ಮೀಸಲಾತಿ ಮಸೂದೆ ಬಗ್ಗೆ ಹೆಚ್ಚೇನೂ ಮಾತನಾಡಲೂ ಹೋಗಿಲ್ಲ.

ರಾಜ್ಯದಲ್ಲಿ ವಿರೋಧಪಕ್ಷಗಳು ಹರಿದು ಹಂಚಿ ಹೋಗಿರುವುದೇ ಬಿಜೆಪಿಯ ಉಳಿವಿನ ಆಸರೆಯಾಗಿ ಪರಿಣಮಿಸಿದೆ. ಬಿಜೆಪಿಯನ್ನು ಸೋಲಿಸುವ ಸಂಕಲ್ಪ ತೊಟ್ಟು ಪಾಟ್ನ, ಬೆಂಗಳೂರು ಹಾಗೂ ಮುಂಬೈನಲ್ಲಿ ಸುದೀರ್ಘ ಚಿಂತನ ಮಂಥನ ನಡೆಸಿದ್ದ 'ಇಂಡಿಯಾ' ಮೈತ್ರಿಕೂಟದ ಸದಸ್ಯ ಪಕ್ಷಗಳು ಮಧ್ಯಪ್ರದೇಶದ ಕಣದಲ್ಲಿ ಪರಸ್ಪರ ಹೋರಾಟಕ್ಕೆ ಸಜ್ಜಾಗಿ ನಿಂತಿವೆ. ಕಾಂಗ್ರೆಸ್ ಪಕ್ಷವು 92 ಕ್ಷೇತ್ರಗಳಲ್ಲಿ ಬಿಜೆಪಿ ಜತೆಗೆ 'ಇಂಡಿಯಾ' ಒಕ್ಕೂಟದ ಪಕ್ಷಗಳಿಂದಲೇ ಸವಾಲು ಎದುರಿಸುತ್ತಿದೆ.

ಛತ್ತೀಸಗಢ: ಎರಡನೇ ಹಂತದ ಮತದಾನ ಇಂದು

ಛತ್ತೀಸಗಢ ವಿಧಾನಸಭೆಯ 70 ಕ್ಷೇತ್ರಗಳಿಗೆ ಮತದಾನ ಶುಕ್ರವಾರ ನಡೆಯಲಿದೆ.

ರಾಜ್ಯದಲ್ಲಿ 90 ವಿಧಾನಸಭಾ ಕ್ಷೇತ್ರಗಳಿದ್ದು, ನಕ್ಸಲ್‌ಪೀಡಿತ ಪ್ರದೇಶಗಳ 20 ಕ್ಷೇತ್ರಗಳಿಗೆ ನ.7ರಂದು ಮತದಾನ ನಡೆದಿತ್ತು. ಐದು ರಾಜ್ಯಗಳ ಪೈಕಿ ಛತ್ತೀಸಗಢದಲ್ಲಿ ಮಾತ್ರ 2 ಹಂತಗಳಲ್ಲಿ ಚುನಾವಣೆ ನಡೆಯುತ್ತಿದೆ. ಇಲ್ಲಿ ಮುಖ್ಯಮಂತ್ರಿ ಭೂಪೇಶ್ ಬಘೆಲ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ.

‘ಕನ್ನಡ ಮೊದಲು ಮನೆಯ ಮಾತಾಗಲಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಕನ್ನಡ ಬೆಳೆಯ ಬೇಕಾದರೆ ಮನೆ ಮನೆಯಲ್ಲಿ, ಜನಮನದಲ್ಲಿ ವ್ಯಾಪಕವಾದ ಮತ್ತು ಸ್ಥಾಯಿಯಾದ ಬದಲಾವಣೆ ಆಗಬೇಕು’ ಎಂದು ಪ್ರಥಮ ರಾಷ್ಟ್ರೀಯ ಹೊರನಾಡು ಮಕ್ಕಳ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷೆ ಸುದೀತಿ ಅಂಬಳೆ ತಿಳಿಸಿದರು.

ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು ಹಾಗೂ ದೆಹಲಿ ಘಟಕದ ಆಶ್ರಯದಲ್ಲಿ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಮಾತನಾಡಿದರು.

ಇಂದು ನಾವು ಪಣ ತೊಟ್ಟು ಜನಾಂದೋಲನ ಮಾಡಿದ್ದೇ ಆದರೆ ಆ ಒಕ್ಕೊರಲಿನ ಧ್ವನಿಯು ಪರಿಣಾಮಕಾರಿಯಾಗಲಿದೆ. ಕಲಿಕೆ ಎನ್ನುವುದು ಕಲಿಸುವವರ ಮತ್ತು ಕಲಿಯುವವರ ಆಸಕ್ತಿಯನ್ನು ಅವಲಂಬಿಸಿದ್ದು ಈ ಆಸಕ್ತಿಯನ್ನು ಮಕ್ಕಳಲ್ಲಿ ಮೂಡಿಸುವುದು ಹೇಗೆ ಎನ್ನುವುದೇ ಹೊರನಾಡ ಕನ್ನಡಿಗರ ಮುಂದಿರುವ ಸವಾಲು. ಇದರಲ್ಲಿ ಪೋಷಕರ ಪಾತ್ರ ಮುಖ್ಯ ಎಂದರು.

ಕನ್ನಡ ಮೊದಲು ಮನೆಯ ಮಾತಾಗಬೇಕು. ಹೊರನಾಡ ಕನ್ನಡದ ಮಕ್ಕಳಿಗೆ ಕನ್ನಡದ ಪುಸ್ತಕವನ್ನು ಓದಿ ಎಂದು ಒಮ್ಮೆಗೆ ಹೇಳಿದರೆ ಅದು ಹತ್ತಲಾಗದ ಬೆಟ್ಟದಂತೆ ಕಾಣುತ್ತದೆ. ಈ ಸಮಸ್ಯೆಗೆ ಪರಿಹಾರ ಖಂಡಿತ ಇದೆ. ಕನ್ನಡ ಓದಲು ತೊಂದರೆ ಇರಬಹುದು. ಆದರೆ ಅನುಭವಿಸಲು ಏನು ತೊಂದರೆ ಇಲ್ಲವಲ್ಲ; ಕಥೆ, ಪದ್ಯ, ಭಾವಗೀತೆ, ಜನಪದ ಗೀತೆ, ಹಾಸ್ಯ ಸಂಜೆ, ನಾಟಕಗಳು ಕನ್ನಡದ ಜ್ಞಾನ ಭಂಡಾರ ಮತ್ತು ಸೊಬಗನ್ನು ಹಂಚುತ್ತವೆ. ಇವೆಲ್ಲವನ್ನೂ ಅನುಭವಿಸುವ ಅವಕಾಶ ಒದಗಿಸಬೇಕು ಎಂದರು.

ಲೇಖಕ ಡಾ. ನಾ. ಸೋಮೇಶ್ವರ ಮಾತನಾಡಿ, ‘ಮೊಬೈಲ್ ಬಳಕೆಯು ಚಟವಾಗುತ್ತಿದ್ದು ಇದನ್ನು ಗುಣಪಡಿಸಲು ನಿಮ್ಹಾನ್ಸ್ ನಲ್ಲಿ ವಿಭಾಗವನ್ನೇ ತೆರೆಯಲಾಗಿದೆ. ಮಕ್ಕಳ ಮೇಲೆ ಪೋಷಕರು ತಮ್ಮ ಆಶೋತ್ತರಗಳನ್ನು ಹೇರಬಾರದು’ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜ್ಯಸಭಾ ಸದಸ್ಯ ಡಾ. ಎಲ್. ಹನುಮಂತಯ್ಯ, ‘ಮಕ್ಕಳೇ ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ವೇದಿಕೆ ಇದಾಗಬೇಕು’ ಎಂದರು.

ಸಚಿವ ಆರ್.ಬಿ. ತಿಮ್ಮಾಪುರ, ‘ಸಂಬಂಧದ ಬೆಸುಗೆ ಈ ಸಮ್ಮೇಳನದಿಂದ ಗಟ್ಟಿಯಾಗಿದೆ. ಗ್ರಾಮೀಣ ಭಾಗದ ಕಲೆಗಳ ಪುನರುತ್ಥಾಗೊಳಿಸುವ ಕೆಲಸ ಸರ್ಕಾರದಿಂದಲೂ ಆಗಬೇಕು’ ಎಂದರು.

ಜಿನ್‌ಪಿಂಗ್ ಸರ್ವಾಧಿಕಾರಿ: ಬೈಡನ್

ಕ್ಯಾಲಿಫೋರ್ನಿಯಾ (ಪಿಟಿಐ): ‘ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಒಬ್ಬ ಸರ್ವಾಧಿಕಾರಿ’ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಟೀಕಿಸಿದ್ದಾರೆ.

ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ನಡೆದ ಏಷ್ಯಾ–ಪೆಸಿಫಿಕ್ ಆರ್ಥಿಕ ಸಹಕಾರ ಶೃಂಗಸಭೆಯ ಭಾಗವಾಗಿ ಬೈಡನ್ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಭೇಟಿಯಾದರು. ಈ ಭೇಟಿ ಬಳಿಕ ಬೈಡನ್ ಅವರು, ಜಿನ್‌ಪಿಂಗ್ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಅವರು (ಜಿನ್‌ಪಿಂಗ್) ಈಗಲೂ ಸರ್ವಾಧಿಕಾರಿಯಂತೆ ಕಾಣುತ್ತಾರೆ. ಕಮ್ಯುನಿಸ್ಟ್ ದೇಶವಾಗಿರುವ ಚೀನಾದ ಆಡಳಿತವು ನಮ್ಮ ಆಡಳಿತಕ್ಕಿಂತಲೂ ತೀರಾ ಭಿನ್ನವಾಗಿದೆ. ಆದರೂ, ನಮ್ಮ ಮಾತುಕತೆ ಪ್ರಗತಿ ಕಂಡಿದೆ’ ಎಂದು ಹೇಳಿದರು.

ಸೇನಾ ಸಂವಹನಕ್ಕೆ ಸಮ್ಮತಿ: ಉಭಯ ನಾಯಕರು ಎರಡೂ ದೇಶಗಳ ನಡುವೆ ಸಂಬಂಧವನ್ನು ವೃದ್ಧಿಸುವ ನಿಟ್ಟಿನಲ್ಲಿ ಚರ್ಚೆ ನಡೆಸಿದರು. ಉನ್ನತ ಮಟ್ಟದ ಸೇನಾ ಸಂವಹನಕ್ಕೆ ಇಬ್ಬರೂ ಸಮ್ಮತಿ ಸೂಚಿಸಿದ್ದರು. ‘ದ್ವಿಪಕ್ಷೀಯ ಸಂಬಂಧದಲ್ಲಿ ಅಮೆರಿಕ ಮತ್ತು ಚೀನಾ ಮುಖ್ಯವಾದ ಮುನ್ನಡೆ ಸಾಧಿಸಿವೆ’ ಎಂದು ಬೈಡನ್ ಹೇಳಿದ್ದಾರೆ.

ತಮಿಳುನಾಡಿನಲ್ಲಿ ಡಿಎಂಕೆ – ರಾಜಭವನ ಹಗ್ಗಜಗ್ಗಾಟ • ಮರು ಮಂಡನೆಗೆ ನಿರ್ಧಾರ • ವಿಶೇಷ ಅಧಿವೇಶನ ನಾಳೆ

ರಾಜ್ಯಪಾಲರಿಂದ 10 ಮಸೂದೆ ವಾಪಸ್

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನಲ್ಲಿ ಡಿಎಂಕೆ ಮತ್ತು ರಾಜಭವನದ ನಡುವೆ ನಡೆಯುತ್ತಿರುವ ಹಗ್ಗಜಗ್ಗಾಟದ ಬೆನ್ನಲ್ಲೇ ರಾಜ್ಯಪಾಲ ಆರ್.ಎನ್. ರವಿ ಅವರು, 2020 ಮತ್ತು 2022ರ ನಡುವೆ ವಿಧಾನಸಭೆಯಲ್ಲಿ ಅಂಗೀಕರಿಸಿದ್ದ ಹತ್ತು ಮಸೂದೆಗಳಿಗೆ ಅಂಕಿತ ಹಾಕದೆ ರಾಜ್ಯ ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದಾರೆ.

ಮಸೂದೆಗಳಿಗೆ ಒಪ್ಪಿಗೆ ನೀಡದ ರಾಜ್ಯಪಾಲರ ವಿಳಂಬ ಧೋರಣೆ ಪ್ರಶ್ನಿಸಿ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ನೇತೃತ್ವದ ಸರ್ಕಾರವು, ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿತ್ತು. ವಾರದ ಹಿಂದೆ ಈ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಾಲಯವು, ರಾಜ್ಯಪಾಲರ ನಿಷ್ಕ್ರಿಯತೆಯು ಗಂಭೀರವಾಗಿ ಪರಿಗಣಿಸಬೇಕಾದ ವಿಷಯವಾಗಿದೆ ಎಂದು ಹೇಳಿತ್ತು. ಈ ನಡುವೆಯೇ ರಾಜ್ಯಪಾಲರು ಇಂತಹ ಕ್ರಮ ಕೈಗೊಂಡಿದ್ದಾರೆ.

ಆರ್.ಎನ್. ರವಿ

ರಾಜಭವನದಿಂದ ವಾಪಸ್ ಕಳುಹಿಸಿರುವ ಮಸೂದೆಗಳಲ್ಲಿ ಯಾವುದೇ ಬದಲಾವಣೆ ಮಾಡದೆ ಯಥಾಸ್ಥಿತಿಯಲ್ಲಿ ಅಂಗೀಕರಿಸಿ ಮತ್ತೆ ರಾಜ್ಯಪಾಲರ ಅಂಗಳಕ್ಕೆ ಕಳುಹಿಸಲು ಸರ್ಕಾರವೂ ಮುಂದಾಗಿದೆ. ಇದಕ್ಕಾಗಿ ವಿಧಾನಸಭಾ ಅಧ್ಯಕ್ಷ ಎಂ. ಅಪ್ಪಾವು ಅವರು, ಶನಿವಾರ ಒಂದು ದಿನದ ವಿಶೇಷ ಅಧಿವೇಶನ ಕರೆದಿದ್ದಾರೆ.

‘ರಾಜ್ಯ ಅನುದಾನಿತ ವಿಶ್ವವಿದ್ಯಾಲಯಗಳು ಹಾಗೂ ಹೊಸ ಸಿದ್ಧ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಮಸೂದೆಗಳನ್ನು ಹಿಂದಕ್ಕೆ ಕಳುಹಿಸಲಾಗಿದೆ’ ಎಂದು ಸರ್ಕಾರದ ಉನ್ನತ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

‘ಹತ್ತು ಮಸೂದೆಗಳಲ್ಲಿ 2020ರಲ್ಲಿ ಎಐಎಡಿಎಂಕೆ ಸರ್ಕಾರದ ಅವಧಿಯಲ್ಲಿ ಮಂಡಿಸಿದ್ದ ಎರಡು ಮಸೂದೆಗಳು ಇವೆ. ಉಳಿದವು ಡಿಎಂಕೆ ಅಧಿಕಾರಾವಧಿಯಲ್ಲಿ ಮಂಡನೆಯಾಗಿವೆ’ ಎಂದು ತಿಳಿಸಿವೆ.

ವಾಪಸ್ ಕಳುಹಿಸಿದ ಮಸೂದೆಗಳನ್ನು ಸದನದಲ್ಲಿ ಮರು ಮಂಡಿಸಿ ಅಂಗೀಕಾರ ನೀಡಿದ ಬಳಿಕ ಪುನಃ ರಾಜ್ಯಪಾಲರಿಗೆ ಕಳುಹಿಸಲಾಗುತ್ತದೆ. ರಾಜ್ಯಪಟ್ಟಿಯಲ್ಲಿ ಇರುವ ವಿಷಯಗಳಿಗೆ ಸಂಬಂಧಿಸಿದ ಮಸೂದೆಗಳನ್ನು ಅವರು ಮತ್ತೆ ಹಿಂದಕ್ಕೆ ಕಳುಹಿಸಲು ಸಾಧ್ಯವಿಲ್ಲ. ಅವುಗಳಿಗೆ ಒಪ್ಪಿಗೆ ನೀಡಲೇ ಬೇಕಿದೆ. ಆದರೆ, ಇಂತಹ ಮಸೂದೆಗಳ ಬಗ್ಗೆ ನಿರ್ಧರಿಸಲು ರಾಜ್ಯಪಾಲರಿಗೆ ಸಮಯದ ಚೌಕಟ್ಟನ್ನು ನಿಗದಿಪಡಿಸಿಲ್ಲ. ಸಮವರ್ತಿ ಪಟ್ಟಿಯಲ್ಲಿರುವ ವಿಷಯಗಳಿಗೆ ಸಂಬಂಧಿಸಿದ ಮಸೂದೆಗಳಿಗೆ ರಾಜ್ಯಪಾಲರು ಸಹಿ ಹಾಕದೆ, ರಾಷ್ಟ್ರಪತಿ ಅವರಿಗೆ ಕಳುಹಿಸಬಹುದಾಗಿದೆ.

ಮಸೂದೆಗಳ ವಿವರ

ತಮಿಳುನಾಡು ವಿಶ್ವವಿದ್ಯಾಲಯಗಳ ಕಾಯ್ದೆಯ ತಿದ್ದುಪಡಿ ಮಸೂದೆಯನ್ನು ವಾಪಸ್ ಕಳುಹಿಸಲಾಗಿದೆ. ಮದ್ರಾಸ್ ವಿ.ವಿ ಹೊರತುಪಡಿಸಿ ರಾಜ್ಯ ಅನುದಾನಿತ ವಿ.ವಿಗಳಿಗೆ ಉಪ ಕುಲಪತಿಗಳ ನೇಮಕ ಸಂಬಂಧ ರಾಜ್ಯಪಾಲರಿಗೆ ನೀಡಿರುವ ಅಧಿಕಾರವನ್ನು ಮೊಟಕುಗೊಳಿಸುವ ಬಗ್ಗೆ ಇದರಲ್ಲಿ ಪ್ರಸ್ತಾಪಿಸಲಾಗಿದೆ.

ಉಳಿದಂತೆ ತಮಿಳುನಾಡು ಮೀನುಗಾರಿಕೆ ಕಾಯ್ದೆ 2012, ತಮಿಳುನಾಡು ಪಶುವೈದ್ಯಕೀಯ ಮತ್ತು ಪ್ರಾಣಿ ವಿಜ್ಞಾನ ವಿಶ್ವವಿದ್ಯಾಲಯ ಕಾಯ್ದೆ 1989, ತಮಿಳುನಾಡು ಡಾ.ಅಂಬೇಡ್ಕರ್ ಕಾನೂನು ಕಾಯ್ದೆ 1996, ತಮಿಳುನಾಡು ಡಾ.ಎಂಜಿಆರ್ ವೈದ್ಯಕೀಯ ವಿಶ್ವವಿದ್ಯಾಲಯ ಕಾಯ್ದೆ 1987, ತಮಿಳುನಾಡು ಕೃಷಿ ವಿಶ್ವವಿದ್ಯಾಲಯ ಕಾಯ್ದೆ 1971 ಹಾಗೂ ತಮಿಳು ವಿಶ್ವವಿದ್ಯಾಲಯ ಕಾಯ್ದೆ 1982ಕ್ಕೆ ಸಂಬಂಧಿಸಿದ ಮಸೂದೆಗಳಾಗಿವೆ.

ಮೂರನೇ ಬಾರಿ ಹಿಂದಕ್ಕೆ

ತಮಿಳುನಾಡು ರಾಜ್ಯಪಾಲ ಆರ್. ಎನ್ ರವಿ ಅವರು ಒಪ್ಪಿಗೆ ನೀಡದೆ ಸರ್ಕಾರಕ್ಕೆ ಮಸೂದೆಗಳನ್ನು ಹಿಂದಕ್ಕೆ ಕಳುಹಿಸುತ್ತಿರುವುದು ಇದು ಮೂರನೇ ಬಾರಿಯಾಗಿದೆ. 2022ರ ಫೆಬ್ರುವರಿ ಹಾಗೂ 2023ರ ಮಾರ್ಚ್‌ನಲ್ಲಿ ನೀಟ್ ವಿರೋಧಿ ಮಸೂದೆ ಹಾಗೂ ಆನ್‌ಲೈನ್ ಜೂಜಾಟಕ್ಕೆ ಸಂಬಂಧಿಸಿದ ಮಸೂದೆಗಳನ್ನೂ ಅವರು ವಾಪಸ್ ಕಳುಹಿಸಿದ್ದರು. ಈ ಎರಡೂ ಮಸೂದೆಗಳನ್ನು ಸರ್ಕಾರವು ಸದನದಲ್ಲಿ ಮತ್ತೆ ಮಂಡಿಸಿ ಮರಳಿ ರಾಜಭವನಕ್ಕೆ ಕಳುಹಿಸಿತ್ತು.

ಆನ್‌ಲೈನ್ ಜೂಜಾಟ ಮಸೂದೆಗೆ ಕೆಲವೇ ವಾರಗಳಲ್ಲಿ ಅಂಕಿತ ಹಾಕಿದ್ದ ರಾಜ್ಯಪಾಲರು, ನೀಟ್ ವಿರೋಧಿ ಮಸೂದೆಯನ್ನು ರಾಷ್ಟ್ರಪತಿ ಅವರಿಗೆ ಕಳುಹಿಸಿದ್ದರು.

ನ್ಯೂಸ್‌ಕ್ಲಿಕ್: ನೆವಿಲ್ಲೆ ರಾಯ್‌ಗೆ ಮತ್ತೆ ಸಮನ್ಸ್

ನವದೆಹಲಿ (ಪಿಟಿಐ): ‘ನ್ಯೂಸ್ ಕ್ಲಿಕ್’ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಹಾಜರಾಗಲು ಅಮೆರಿಕದ ಉದ್ಯಮಿ ನೆವಿಲ್ಲೆ ರಾಯ್ ಸಿಂಘಮ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತೆ ಸಮನ್ಸ್ ನೀಡಿದೆ.

ಭಾರತದಲ್ಲಿ ಚೀನಾ ಪರ ಪ್ರಚಾರ ಮಾಡಿರುವ ಆರೋಪವು ಇವರ ಮೇಲಿದೆ ಎಂದು ಮೂಲಗಳು ತಿಳಿಸಿವೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಅಡಿ ಸಿಂಘಮ್ ಅವರಿಗೆ ಸಮನ್ಸ್ ನೀಡಲಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಸಿಂಘಮ್ ಅವರ ಇ–ಮೇಲ್‌ಗೆ ಸಮನ್ಸ್ ಕಳುಹಿಸಲಾಗಿದೆ ಎಂದೂ ವಿವರಿಸಿದ್ದಾರೆ.

ಮೃತ ವ್ಯಕ್ತಿ ವಿರುದ್ಧ ಸಾಲ ವಸೂಲಿಗೆ ಅರ್ಜಿ!

ನವದೆಹಲಿ (ಪಿಟಿಐ): ಯಾವುದೇ ಬ್ಯಾಂಕ್, ಅದರಲ್ಲೂ ಮುಖ್ಯವಾಗಿ ಎಸ್‌ಬಿಐ, ತಾನು ವ್ಯಕ್ತಿಯೊಬ್ಬರ ವಿರುದ್ಧ ಮೊಕದ್ದಮೆ ದಾಖಲಿಸುವ ಮೊದಲು ಆತ ಜೀವಂತ ಇದ್ದಾನೋ, ಮೃತಪಟ್ಟಿದ್ದಾನೋ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ದೆಹಲಿಯ ನ್ಯಾಯಾಲಯವೊಂದು ಹೇಳಿದೆ.

ಮೃತಪಟ್ಟ ವ್ಯಕ್ತಿಯೊಬ್ಬರ ವಿರುದ್ಧ ಸಾಲ ವಸೂಲಾತಿಗೆ ಸಲ್ಲಿಸಿದ್ದ ಅರ್ಜಿಯೊಂದನ್ನು ವಜಾಗೊಳಿಸಿದೆ. ಸಿಯಾನಂದ್ ಎನ್ನುವವರಿಂದ ಸಾಲ ಮತ್ತು ಬಡ್ಡಿ ಸೇರಿ ₹13.51 ಲಕ್ಷ ತನಗೆ ಬರಬೇಕು ಎಂದು ಎಸ್‌ಬಿಐ ಅರ್ಜಿ ಸಲ್ಲಿಸಿತ್ತು.

ಈ ಅರ್ಜಿಯ ವಿಚಾರಣೆಯನ್ನು ಜಿಲ್ಲಾ ನ್ಯಾಯಾಧೀಶ ಸುರಿಂದರ್ ಎಸ್. ರಾಠಿ ನಡೆಸಿದರು.

ಸಿಯಾ ನಂದ್ ಅವರ ಬಗ್ಗೆ ಮಾಹಿತಿ ಪಡೆದು ಬರುವಂತೆ ಬ್ಯಾಂಕ್‌ಗೆ ಕೋರ್ಟ್ ಈ ಹಿಂದೆ ಸೂಚಿಸಿತ್ತು. ಕೋರ್ಟ್‌ಗೆ ಅರ್ಜಿ ಸಲ್ಲಿಸುವ ಎರಡು ವರ್ಷ ಮೊದಲೇ ಸಿಯಾ ನಂದ್ ಅವರು ಮೃತಪಟ್ಟಿದ್ದಾರೆ ಎಂಬುದು ನಂತರ ಗೊತ್ತಾಯಿತು.

ನಂತರದಲ್ಲಿ ಕೋರ್ಟ್, ಬ್ಯಾಂಕ್‌ನ ಸಂಬಂಧಪಟ್ಟ ಶಾಖಾ ವ್ಯವಸ್ಥಾಪಕರಿಗೆ ತಪ್ಪು ಪ್ರಮಾಣಪತ್ರ ನೀಡಿದ್ದಕ್ಕಾಗಿ ನೋಟಿಸ್ ನೀಡಿತ್ತು. ಬ್ಯಾಂಕಿನ ಕಾನೂನು, ಸಾಲ ವಸೂಲಾತಿ ಮತ್ತು ಕೋರ್ಟ್ ಪ್ರಕರಣಗಳ ವಿಭಾಗದ ಪ್ರಧಾನ ವ್ಯವಸ್ಥಾಪಕರಿಗೆ ನೋಟಿಸ್ ಜಾರಿಗೊಳಿಸಿ, ಮೃತಪಟ್ಟ ವ್ಯಕ್ತಿಯ ವಿರುದ್ಧ ಅರ್ಜಿ ಸಲ್ಲಿಸಲು ತೀರ್ಮಾನಿಸಿದ್ದಕ್ಕೆ ಕಾರಣ ನೀಡುವಂತೆ ಹೇಳಿತ್ತು.

‘ಅದಕ್ಕೆ ಪ್ರತಿಕ್ರಿಯೆಯಾಗಿ ಎಸ್‌ಬಿಐ ತನ್ನ ತಪ್ಪನ್ನು ಒಪ್ಪಿಕೊಂಡಿದೆ. ತಪ್ಪು ಮಾಡಿದ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಕೋರ್ಟ್‌ಗೆ ಮಾತು ಕೊಟ್ಟಿದೆ’ ಎಂದು ನವೆಂಬರ್ 2ರಂದು ನೀಡಿರುವ ಆದೇಶದಲ್ಲಿ ನ್ಯಾಯಾಲಯ ಹೇಳಿದೆ.

‘ಯಾವುದೇ ಬ್ಯಾಂಕ್, ಅದರಲ್ಲೂ ಮುಖ್ಯವಾಗಿ ದೇಶದ ಮುಂಚೂಣಿ ಬ್ಯಾಂಕ್ ಆಗಿರುವ ಎಸ್‌ಬಿಐ ತಾನು ಯಾರ ವಿರುದ್ಧ ದಾವೆ ಹೂಡುತ್ತಿದ್ದೇನೆಯೋ ಆ ವ್ಯಕ್ತಿ ಜೀವಂತವಾಗಿ ಇದ್ದಾನೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಲು ಕ್ರಮ ಕೈಗೊಳ್ಳಬೇಕು’ ಎಂದು ಕೋರ್ಟ್ ಹೇಳಿದೆ.

ಶಾಖಾ ವ್ಯವಸ್ಥಾಪಕ ಸಲ್ಲಿಸಿದ ಬೇಷರತ್ ಕ್ಷಮಾಪತ್ರವನ್ನು ಒಪ್ಪಿಕೊಂಡ ಕೋರ್ಟ್, ಅವರಿಗೆ ನೀಡಿದ್ದ ನೋಟಿಸ್ ಹಿಂಪಡೆದಿದೆ. ‘ಮುಂಚೂಣಿ ಬ್ಯಾಂಕ್ ಆಗಿರುವ ಎಸ್‌ಬಿಐ, ದೇಶದ ಬ್ಯಾಂಕಿಂಗ್ ಉದ್ಯಮದ ಪಾಲಿಗೆ ವೃತ್ತಿಪರತೆ, ದಕ್ಷತೆ, ಪಾರದರ್ಶಕತೆ ಮತ್ತು ನೈತಿಕತೆಯ ವಿಚಾರದಲ್ಲಿ ದಿಗ್ದರ್ಶಕನಂತೆ ಇರಬೇಕು’ ಎಂದು ಕೋರ್ಟ್ ಕಿವಿಮಾತು ಹೇಳಿದೆ. ಮೃತಪಟ್ಟಿರುವ ವ್ಯಕ್ತಿಯ ವಿರುದ್ಧ ಕಾನೂನು ಕ್ರಮ ಜರುಗಿಸಲಾಗದು ಎಂದು ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಆನ್‌ಲೈನ್ ಔಷಧ: ನೀತಿ ರೂಪಿಸಲು ಕಡೆಯ ಅವಕಾಶ

ನವದೆಹಲಿ (ಪಿಟಿಐ): ಔಷಧಗಳನ್ನು ಆನ್‌ಲೈನ್ ಮೂಲಕ ಮಾರಾಟ ಮಾಡುವುದಕ್ಕೆ ನೀತಿಯೊಂದನ್ನು ರೂಪಿಸಲು ದೆಹಲಿ ಹೈಕೋರ್ಟ್ ಕೇಂದ್ರ ಸರ್ಕಾರಕ್ಕೆ ಎಂಟು ವಾರಗಳ ಅಂತಿಮ ಅವಕಾಶ ನೀಡಿದೆ. ನೀತಿ ರೂಪಿಸುವ ಪ್ರಕ್ರಿಯೆಗೆ ಕೇಂದ್ರವು ವೇಗ ನೀಡಬೇಕು ಎಂದು ಹೇಳಿದೆ.

ನೀತಿಯನ್ನು ರೂಪಿಸಲು ಎಂಟು ವಾರಗಳಲ್ಲಿ ಸಾಧ್ಯವಾಗದಿದ್ದರೆ, ಈ ವಿಷಯಕ್ಕೆ ಸಂಬಂಧಿಸಿದ ಜಂಟಿ ಕಾರ್ಯದರ್ಶಿಯು ಮುಂದಿನ ವಿಚಾರಣೆ ಸಂದರ್ಭದಲ್ಲಿ ಖುದ್ದಾಗಿ ಹಾಜರಿರಬೇಕು ಎಂದು ಹೈಕೋರ್ಟ್ ಹೇಳಿದೆ.

‘ಐದು ವರ್ಷಗಳಿಗಿಂತ ಹೆಚ್ಚು ಕಾಲ ಸಂದಿದೆ. ಕೇಂದ್ರ ಸರ್ಕಾರಕ್ಕೆ ನೀತಿಯನ್ನು ರೂಪಿಸಲು ಅಗತ್ಯ ಕಾಲಾವಕಾಶ ಇತ್ತು. ನೀತಿಯನ್ನು ರೂಪಿಸಲು ಕೇಂದ್ರ ಸರ್ಕಾರಕ್ಕೆ ಕಡೆಯ ಒಂದು ಅವಕಾಶವನ್ನು ನೀಡಲಾಗುತ್ತಿದೆ’ ಎಂದು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್ ಮತ್ತು ನ್ಯಾಯಮೂರ್ತಿ ಮಿನಿ ಪುಷ್ಕರ್ಣ ಅವರಿದ್ದ ನ್ಯಾಯಪೀಠ ಹೇಳಿದೆ.

ಔಷಧಗಳನ್ನು ಆನ್‌ಲೈನ್ ಮೂಲಕ ಅಕ್ರಮವಾಗಿ ಮಾರಾಟ ಮಾಡುತ್ತಿರುವುದನ್ನು ನಿಷೇಧಿಸಬೇಕು ಎಂದು ಕೋರಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ವಸ್ತುಸ್ಥಿತಿ ವರದಿಯನ್ನು ಸಲ್ಲಿಸುವಂತೆ ಕೋರ್ಟ್ ಈ ಹಿಂದೆ ಕೇಂದ್ರಕ್ಕೆ ಸೂಚಿಸಿತ್ತು.

ಹೈಕೋರ್ಟ್ ತಡೆಯಾಜ್ಞೆ ಇದ್ದರೂ ಔಷಧಗಳನ್ನು ಆನ್‌ಲೈನ್ ಮೂಲಕ ಮಾರಾಟ ಮಾಡುತ್ತಿರುವ ಇ–ಫಾರ್ಮಸಿಗಳ ವಿರುದ್ಧ ನ್ಯಾಯಾಂಗ ನಿಂದನೆ ಕಾನೂನಿನ ಅಡಿಯಲ್ಲಿ ಕ್ರಮ ಜರುಗಿಸಬೇಕು ಎಂದು ಅರ್ಜಿದಾರ ಜಹೀರ್ ಅಹ್ಮದ್ ಅವರು ಕೋರಿದ್ದಾರೆ. ಜಹೀರ್ ಅಹ್ಮದ್ ಅವರು ಈಚೆಗೆ ಮೃತಪಟ್ಟಿದ್ದಾರೆ ಎಂದು ಅವರ ವಕೀಲರು ಕೋರ್ಟ್‌ಗೆ ತಿಳಿಸಿದ್ದಾರೆ.

ಆನ್‌ಲೈನ್ ಮೂಲಕ ಔಷಧಗಳನ್ನು ಅಕ್ರಮವಾಗಿ ಮಾರಾಟ ಮಾಡುವುದು ಮುಂದುವರಿದಿದೆ ಎಂದು ಇನ್ನೊಬ್ಬರು ಅರ್ಜಿದಾರರ ಪರ ವಕೀಲರು ಪೀಠಕ್ಕೆ ತಿಳಿಸಿದರು. ಪರವಾನಗಿ ಇಲ್ಲದ ಇ–ಫಾರ್ಮಸಿಗಳು ಔಷಧಗಳನ್ನು ಆನ್‌ಲೈನ್ ಮೂಲಕ ಮಾರಾಟ ಮಾಡುವುದಕ್ಕೆ ಹೈಕೋರ್ಟ್ 2018ರ ಡಿಸೆಂಬರ್ 12ರಂದು ತಡೆ ನೀಡಿದೆ.

ವಿಕ್ಟೋರಿಯಾ ಗೌರಿ ನೇಮಕ ಸಮರ್ಥಿಸಿಕೊಂಡ ಸಿಜೆಐ

ನವದೆಹಲಿ (ಪಿಟಿಐ): ಲಕ್ಷ್ಮಣ ಚಂದ್ರ ವಿಕ್ಟೋರಿಯಾ ಗೌರಿ ಅವರನ್ನು ಮದ್ರಾಸ್ ಹೈಕೋರ್ಟ್‌ನ ನ್ಯಾಯ ಮೂರ್ತಿಯಾಗಿ ನೇಮಕ ಮಾಡುವ ಕೊಲಿಜಿಯಂ ತೀರ್ಮಾನವನ್ನು ಸಮರ್ಥಿಸಿಕೊಂಡಿರುವ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ವಕೀಲರಾಗಿದ್ದಾಗ ಹೊಂದಿದ್ದ ಅಭಿಪ್ರಾಯಗಳನ್ನು ಮಾತ್ರ ಆಧರಿಸಿ ವ್ಯಕ್ತಿಗಳ ಬಗ್ಗೆ ಅನಗತ್ಯ ಮಾತುಗಳನ್ನು ಆಡಬಾರದು ಎಂದು ಹೇಳಿದ್ದಾರೆ.

ಗೌರಿ ಅವರು ಮದ್ರಾಸ್ ಹೈಕೋರ್ಟ್‌ನ ಮದುರೈ ಪೀಠದಲ್ಲಿ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸುತ್ತಿದ್ದರು. ಅವರನ್ನು ನ್ಯಾಯಮೂರ್ತಿ ಆಗಿ ನೇಮಕ ಮಾಡುವ ಪ್ರಸ್ತಾವವು ವಿವಾದ ಸೃಷ್ಟಿಸಿತ್ತು. ಅವರಿಗೆ ಬಿಜೆಪಿ ಜೊತೆ ನಂಟು ಇದೆ ಎಂದು ಆರೋಪಿಸಲಾಗಿತ್ತು.

ಗೌರಿ ಅವರನ್ನು ಹೆಚ್ಚುವರಿ ನ್ಯಾಯಮೂರ್ತಿಯನ್ನಾಗಿ ನೇಮಕ ಮಾಡುವ ಶಿಫಾರಸನ್ನು ಹಿಂಪಡೆಯಬೇಕು ಎಂದು ಕೋರಿ ಕೆಲವು ವಕೀಲರು ಸಿಜೆಐ ಅವರಲ್ಲಿ ಮನವಿ ಮಾಡಿದ್ದರು. ಗೌರಿ ಅವರು ಮುಸ್ಲಿಮರು ಹಾಗೂ ಕ್ರೈಸ್ತರ ವಿರುದ್ಧ ದ್ವೇಷ ಭಾಷಣ ಮಾಡಿದ್ದಾರೆ ಎಂದು ದೂರಿದ್ದರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಸಿಜೆಐ, ‘ಗೌರಿ ಅವರು ಮಾಡಿದ ಭಾಷಣವನ್ನು ಕೊಲಿಜಿಯಂ ಬಹಳ ಸೂಕ್ಷ್ಮವಾಗಿ ಪರಿಶೀಲಿಸಿ, ಅನಿಸಿಕೆಗಳನ್ನು ಕೇಂದ್ರ ಸರ್ಕಾರ ಸೇರಿದಂತೆ ಸಂಬಂಧಪಟ್ಟ ಎಲ್ಲರ ಜೊತೆ ಹಂಚಿಕೊಳ್ಳಲಾಗಿತ್ತು’ ಎಂದು ವಿವರಿಸಿದ್ದಾರೆ.

‘ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯು ಸಾಕಷ್ಟು ಸಂಕೀರ್ಣವಾಗಿದೆ. ಇದರಲ್ಲಿ ಒಕ್ಕೂಟ ವ್ಯವಸ್ಥೆಯ ವಿವಿಧ ಹಂತಗಳಾದ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರದ ತನಿಖಾ ಸಂಸ್ಥೆಗಳು ಭಾಗಿಯಾಗಿರುತ್ತವೆ. ಇದು ಬಹಳ ವಿಸ್ತೃತ ನೆಲೆಯಲ್ಲಿ ನಡೆಯುವ ಸಮನ್ವಯದ ಕೆಲಸ. ಯಾವುದೇ ಒಂದು ವಿಭಾಗಕ್ಕೆ ಇಲ್ಲಿ ನಿರ್ಣಾಯಕ ಪಾತ್ರ ಇರುವುದಿಲ್ಲ’ ಎಂದು ಚಂದ್ರಚೂಡ್ ವಿವರಿಸಿದ್ದಾರೆ.

‘ನಮ್ಮ ಮಹಾನ್ ನ್ಯಾಯಮೂರ್ತಿಗಳ ಪೈಕಿ ಒಬ್ಬರಾದ ಕೃಷ್ಣ ಅಯ್ಯರ್ ಅವರಿಗೆ ರಾಜಕೀಯ ಹಿನ್ನೆಲೆ ಇತ್ತು. ವಿಭಿನ್ನ ರಾಜಕೀಯ ದೃಷ್ಟಿಕೋನಗಳ ಪೈಕಿ ಒಂದು ದೃಷ್ಟಿಕೋನದ ಪರವಾಗಿ ಹಾಜರಾದ ವಕೀಲರು ಅದ್ಭುತ ನ್ಯಾಯಮೂರ್ತಿಗಳಾಗಿದ್ದನ್ನು ಕಂಡಿದ್ದೇನೆ’ ಎಂದು ಅವರು ಹೇಳಿದ್ದಾರೆ.

‘ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಂಡ ನಂತರ ನಮ್ಮನ್ನು ರಾಗದ್ವೇಷಗಳಿಂದ ಅತೀತರನ್ನಾಗಿ ಮಾಡುವ ಏನೋ ಒಂದು ಅಂಶ ನ್ಯಾಯನಿರ್ಣಯಿಸುವ ನಮ್ಮ ವೃತ್ತಿಯಲ್ಲಿ ಇದೆ’ ಎಂದು ಸಿಜೆಐ ಅಭಿಪ್ರಾಯಪಟ್ಟಿದ್ದಾರೆ.

‘ತಮ್ಮ ಕಕ್ಷಿದಾರ ಯಾರಾಗಬೇಕು ಎಂಬುದನ್ನು ವಕೀಲರು ಆಯ್ಕೆ ಮಾಡಿಕೊಳ್ಳುವುದಿಲ್ಲ. ಕಾನೂನು ನೆರವು ಕೋರಿ ಬರುವ ಯಾವುದೇ ವ್ಯಕ್ತಿಯ ಪರವಾಗಿ ವಾದ ಮಂಡಿಸುವುದು ವಕೀಲರಾದವರ ಕರ್ತವ್ಯ. ಚಿಕಿತ್ಸೆ ಕೋರಿ ಯಾವುದೇ ವ್ಯಕ್ತಿ ತಮ್ಮಲ್ಲಿಗೆ ಬಂದಾಗ, ಆತನಿಗೆ ಚಿಕಿತ್ಸೆ, ಔಷಧ ನೀಡುವ ವೈದ್ಯ ವೃತ್ತಿಯಂತೆಯೇ ಇದು ಕೂಡ’ ಎಂದು ಅವರು ಹೇಳಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ

ಶ್ರೀ. ಬಿ.ವಿ. ಪದ್ಮನಾಭಯ್ಯ
(ಸ್ಟ್ಯಾಂಪ್ ವೆಂಡರ್ ಮತ್ತು ಪತ್ರ ಬರಹಗಾರರು)
ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಚ್ಚ ಹಸಿರು. ನಿಮ್ಮ ನಡೆ, ನುಡಿ ಮತ್ತು ತತ್ವಗಳು ನಮಗೆ ದಾರಿ ದೀಪ ಹಾಗೂ ಎಂದೆಂದಿಗೂ ಆದರ್ಶಪ್ರಾಯ.
ಪತ್ನಿ ಶ್ರೀಮತಿ ಶಾಂತಪದ್ಮನಾಭ ಮತ್ತು ಮಕ್ಕಳು.

ಸವಿನೆನಪು



ಜಿ.ಬಿ.ಮುನಿಕೃಷ್ಣಪ್ಪ ನಿಧನ: 1984
ಆರ್.ಶಾರದಮ್ಮ ನಿಧನ: 2004
ಆರ್.ಎಂ.ರಾಜಣ್ಣ ನಿಧನ: 1999
ನೀವು ನಡೆದ ದಾರಿಯೇ ನಮಗೆ ದಾರಿದೀಪ ಸದಾ ನಿಮ್ಮ ನೆನಪಿನಲ್ಲಿರುವ ಮತ್ತು ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ
ಆರ್.ಎಂ.ನಾಗರಾಜ್ ಮತ್ತು ಅಂಚೇಪುರದ ಕುಟುಂಬವರ್ಗ

ಅಂತರರಾಷ್ಟ್ರೀಯ ಕಾಯ್ದೆ ಪಾಲನೆ ನಿಲುವು ಪುನರುಚ್ಚರಿಸಿದ ಭಾರತ

ನವದೆಹಲಿ: ‘ನಿರ್ದಿಷ್ಟ ವಾಯು ಪ್ರದೇಶದಲ್ಲಿ ವಿಮಾನಯಾನ, ಅಂತರರಾಷ್ಟ್ರೀಯ ನೀರಿನ ವಿಷಯದಲ್ಲಿ ತಡೆಯಿಲ್ಲದ ಕಾನೂನುಬದ್ಧ ವಹಿವಾಟು ಕುರಿತ ನಿಲುವಿಗೆ ಭಾರತ ಬದ್ಧವಾಗಿದೆ’ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಹೇಳಿದರು.

ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾ ಅತಿಕ್ರಮಣ ಮುಂದುವರಿಸಿದೆ ಎಂಬುದಕ್ಕೆ ಪ್ರತಿಯಾಗಿ ಕಮ್ಯುನಿಸ್ಟ್ ಪಕ್ಷದ ಹೆಸರು ಉಲ್ಲೇಖಿಸದೇ ಈ ಮಾತು ಹೇಳಿದರು. ಜಕಾರ್ತಾದಲ್ಲಿ ನಡೆದ 10ನೇ ಏಷಿಯನ್ ರಾಷ್ಟ್ರಗಳ ರಕ್ಷಣಾ ಸಚಿವರ ಸಭೆಯಲ್ಲಿ ಅವರು ಮಾತನಾಡಿದರು.

ಸಮುದ್ರಗಡಿಯ ವಿವಾದಗಳನ್ನು ಇತ್ಯರ್ಥಪಡಿಸುವುದು ಹಾಗೂ ಅಂತರರಾಷ್ಟ್ರೀಯ ಕಾನೂನಿಗೆ ಬದ್ಧವಾಗಿರುವ ಕುರಿತ ಸಹಮತ ಮೂಡಿಸಲು ರಾಷ್ಟ್ರಗಳ ನಡುವೆ ಮಾತುಕತೆಗೆ ಉತ್ತೇಜನ ನೀಡುವುದು ಅಗತ್ಯ ಎಂದು ಸಿಂಗ್ ಒತ್ತಿಹೇಳಿದರು.

ಸಮುದ್ರ ಕಾಯ್ದೆಗೆ ಸಂಬಂಧಿಸಿದ ವಿಶ್ವಸಂಸ್ಥೆ ಸಮಾವೇಶದ ನಿರ್ಣಯ (ಯುಎನ್‌ಸಿಎಲ್‌ಒಎಸ್) , ಅಂತರರಾಷ್ಟ್ರೀಯ ಕಾಯ್ದೆಗಳ ಪಾಲನೆಗೆ ಭಾರತ ಬದ್ಧವಾಗಿದೆ ಎಂದೂ ಹೇಳಿದರು. ದಕ್ಷಿಣ ಚೀನಾ ಸಮುದ್ರದಲ್ಲಿ ಗಡಿ ಕುರಿತ ಚೀನಾದ ಹಕ್ಕು ಪ್ರತಿಪಾದನೆ ಕುರಿತು ಹಲವು ಸದಸ್ಯ ರಾಷ್ಟ್ರಗಳು ಸಭೆಯಲ್ಲಿ ಆಕ್ಷೇಪ ವ್ಯಕ್ತಪಡಿಸಿದ ಹಿಂದೆಯೇ ಭಾರತವು ತನ್ನ ನಿಲುವು ಸ್ಪಷ್ಟಪಡಿಸಿದೆ.

ಒಳನುಸುಳುವಿಕೆಗೆ ಉತ್ತೇಜನ ನೀಡುತ್ತಿದ್ದ ಉಗ್ರನ ಹತ್ಯೆ

ಶ್ರೀನಗರ (ಪಿಟಿಐ): ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಭಯೋತ್ಪಾದನೆ ಚಟುವಟಿಕೆ, ಒಳನುಸುಳುವಿಕೆಗೆ ಉತ್ತೇಜನ ನೀಡುತ್ತಿದ್ದ ಕಮಾಂಡರ್ ಬಷೀರ್ ಅಹ್ಮದ್ ಮಲಿಕ್‌ನನ್ನು ಉರಿ ವಲಯದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಭದ್ರತಾ ಪಡೆಗಳು ಹತ್ಯೆ ಮಾಡಿವೆ.

ಬುಧವಾರ ಸೇನೆ ಹಾಗೂ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಜಂಟಿಯಾಗಿ ನಡೆಸಿದ ಜಂಟಿ ಕಾರ್ಯಾಚರಣೆಯಲ್ಲಿ ಮಲಿಕ್ ಮತ್ತು ಇನ್ನೊಬ್ಬ ಭಯೋತ್ಪಾದಕ ಹತರಾದರು ಎಂದು ಸೇನೆಯು ಗುರುವಾರ ತಿಳಿಸಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಉಗ್ರ ಚಟುವಟಿಕೆ ಜೊತೆಗೆ ಗಡಿಯಲ್ಲಿ ಒಳನುಸುಳುವಿಕೆ ಚಟುವಟಿಕೆಗೆ ಮಲಿಕ್ ಉತ್ತೇಜನ ನೀಡುತ್ತಿದ್ದ. ಉಗ್ರ ಸಂಘಟನೆಗಳ ಕಾರ್ಯಚಟುವಟಿಕೆಗೆ ಪ್ರಮುಖವಾಗಿ ಬೆಂಗಾವಲಾಗಿದ್ದ ಎಂದು ಸೇನೆಯ ಅಧಿಕಾರಿಯೊಬ್ಬರು ತಿಳಿಸಿದರು.

ಈ ವಲಯದಲ್ಲಿ 30 ವರ್ಷಗಳಿಂದ ಸಕ್ರಿಯನಾಗಿದ್ದ ಈಗ, ಹಲವು ಉಗ್ರರು ಗಡಿಯಲ್ಲಿ ಅಕ್ರಮವಾಗಿ ನುಸುಳಲು ಕಾರಣನಾಗಿದ್ದ. ಉಗ್ರರ ಕಾರ್ಯಚಟುವಟಿಕೆಯಿಂದಾಗಿ ಹಲವು ನಾಗರಿಕರು, ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದರು ಎಂದು ಅಧಿಕಾರಿ ವಿವರಿಸಿದರು.

ಈತನ ಹತ್ಯೆಯು ಉಗ್ರ ಚಟುವಟಿಕೆಯ ವಿರುದ್ಧ ನಡೆಸುತ್ತಿದ್ದ ಕಾರ್ಯಾಚರಣೆಗೆ ದೊಡ್ಡ ಗೆಲುವಾಗಿದೆ ಎಂದು ಹೇಳಿದರು.

ಸುರಂಗದಲ್ಲಿ ಸಿಲುಕಿದ ಕಾರ್ಮಿಕರು: ಸ್ಥಳಕ್ಕೆ ಕೇಂದ್ರ ಸಚಿವ ವಿ.ಕೆ. ಸಿಂಗ್

‘ರಕ್ಷಣಾ ಕಾರ್ಯ ಇನ್ನೂ ಮೂರು ದಿನ’

ಉತ್ತರಕಾಶಿ (ಪಿಟಿಐ): ‘ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿದ 40 ಕಾರ್ಮಿಕರನ್ನು ತ್ವರಿತವಾಗಿ ಹೊರಗೆ ಕರೆತರುವ ನಿಟ್ಟಿನಲ್ಲಿ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಆದರೆ, ರಕ್ಷಣಾ ಕಾರ್ಯಾಚರಣೆಗೆ ಇನ್ನೂ ಎರಡು ಅಥವಾ ಮೂರು ದಿನ ಅಗತ್ಯವಿದೆ’ ಎಂದು ಕೇಂದ್ರ ಸಚಿವ ವಿ.ಕೆ. ಸಿಂಗ್ ತಿಳಿಸಿದ್ದಾರೆ.

ಸುರಂಗ ಸ್ಥಳಕ್ಕೆ ಗುರುವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾರ್ಮಿಕರು ಸುರಕ್ಷಿತವಾಗಿರಬೇಕು ಮತ್ತು ಅವರನ್ನು ಆದಷ್ಟು ಬೇಗ ಹೊರಗೆ ಕರೆತರಬೇಕು ಎಂಬುದು ನಮ್ಮ ಆದ್ಯತೆಯಾಗಿದೆ. ಈ ನಿಟ್ಟಿನಲ್ಲಿ ಎಲ್ಲ ಪ್ರಯತ್ನಗಳನ್ನು ಮಾಡಲಾಗುತ್ತಿದೆ’ ಎಂದು ಹೇಳಿದರು.

’ಸುರಂಗದಲ್ಲಿರುವ ಕಾರ್ಮಿಕರ ಜತೆಗೆ ಮಾತನಾಡಿದ್ದು, ಅವರು ಸುರಕ್ಷಿತವಾಗಿದ್ದಾರೆ. ಅಲ್ಲದೆ, ಅವರಿಗೆ ಹೆಚ್ಚು ಧೈರ್ಯವಿದೆ. ಅವರಿಗೆ ನಿರಂತರವಾಗಿ ಆಮ್ಲಜನಕ, ವಿದ್ಯುತ್, ಆಹಾರ ಮತ್ತು ನೀರನ್ನು ಪೂರೈಸಲಾಗುತ್ತಿದೆ‘ ಎಂದು ಹೇಳಿದರು.

ಉತ್ತರಕಾಶಿಯಲ್ಲಿ ಕುಸಿದ ಸುರಂಗದೊಳಗೆ ಸಿಲುಕಿದ ಕಾರ್ಮಿಕರ ರಕ್ಷಣಾ ಕಾರ್ಯಾಚರಣೆ ಸ್ಥಳಕ್ಕೆ ಭೇಟಿ ನೀಡಿದ ಕೇಂದ್ರ ಸಚಿವ ವಿ.ಕೆ. ಸಿಂಗ್ ಅವರು, ಅಧಿಕಾರಿಗಳಿಂದ ಮಾಹಿತಿ ಪಡೆದರು

ಸುರಂಗ ಕುಸಿತದ ಕುರಿತು ಉನ್ನತ ಮಟ್ಟದ ತನಿಖೆ ಕೈಗೊಳ್ಳಲಾಗುತ್ತದೆಯೇ ಎಂಬ ಪ್ರಶ್ನೆಗೆ, ’ಮೊದಲು ರಕ್ಷಣಾ ಕಾರ್ಯಾಚರಣೆ ಪೂರ್ಣಗೊಳ್ಳಲಿ. ನಂತರ, ಈ ವಿಷಯದ ಬಗ್ಗೆ ನಿರ್ಧರಿಸಲಾಗುತ್ತದೆ‘ ಎಂದು ಪ್ರತಿಕ್ರಿಯಿಸಿದರು.

ಕಾರ್ಮಿಕರ ರಕ್ಷಣೆಗೆ ಅಮೆರಿಕದ ಯಂತ್ರ: ಸುರಂಗದಲ್ಲಿ ಕಳೆದ ಐದು ದಿನಗಳಿಂದ ಸಿಲುಕಿದ 40 ಕಾರ್ಮಿಕರ ರಕ್ಷಣೆಗಾಗಿ ವಾಯುಪಡೆ ಮೂಲಕ ದೆಹಲಿಯಿಂದ ರಂಧ್ರ ಕೊರೆಯುವ ವಿಶೇಷ ಯಂತ್ರವನ್ನು ಗುರುವಾರ ತರಲಾಗಿದೆ.

ಈ ಯಂತ್ರದ ಮೂಲಕ ಸುರಂಗದಲ್ಲಿ ರಂಧ್ರ ಕೊರೆಯುವ ಕಾರ್ಯಾಚರಣೆಗೆ ಚಾಲನೆ ನೀಡಲಾಗಿದೆ.

ಸಣ್ಣ ಯಂತ್ರದ ಮೂಲಕ ಅವಶೇಷಗಳಡಿ ಸ್ಟೀಲ್ ಪೈಪ್‌ಗಳನ್ನು ಬಿಟ್ಟು ಕಾರ್ಮಿಕರ ರಕ್ಷಣಾ ಕಾರ್ಯಾಚರಣೆ ವಿಫಲವಾಗಿದ್ದರಿಂದ ಭಾರತೀಯ ವಾಯುಪಡೆಯು ಗುರುವಾರ ಸಿ–130 ಹರ್ಕ್ಯುಲಸ್ ಸಾಗಣೆ ವಿಮಾನಗಳ ಮೂಲಕ ಹೊಸ ಯಂತ್ರವನ್ನು ದೆಹಲಿಯಿಂದ ಉತ್ತರಕಾಶಿಗೆ ಸಾಗಿಸಿತ್ತು. ಈ ಯಂತ್ರ ಅಮೆರಿಕದಲ್ಲಿ ತಯಾರಾಗಿದೆ.

ಈ ಕುರಿತು ಪ್ರತಿಕ್ರಿಯಿಸಿದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ‘ದೆಹಲಿಯಿಂದ ತರಿಸಿಕೊಳ್ಳಲಾದ ಹೊಸ ಯಂತ್ರದ ಮೂಲಕ ಈಗ ಕುಸಿತವಾಗಿರುವ ಸ್ಥಳದ ಮೂಲಕ 5–7 ಮೀಟರ್‌ವರೆಗೆ ಕೊರೆಯಲಾಗಿದೆ. ಪ್ರತಿ ಗಂಟೆಗೆ 5–10 ಮೀಟರ್‌ನಷ್ಟು ಕೊರೆಯುತ್ತಿರುವ ಈ ಯಂತ್ರವು ಒಳಗೆ ಸಿಲುಕಿದ ಕಾರ್ಮಿಕರು ಇರುವ ಸ್ಥಳಕ್ಕೆ ಶೀಘ್ರವೇ ತಲುಪಲಿದೆ ಎಂಬ ಭರವಸೆಯಿದೆ’ ಎಂದು ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Multiple Vacancy

IMMEDIATE PLACEMENT for Banking Collection process Fresher Welcome. Collection Executive, Qualification : Min 10th Pass & 2 Wheeler Must. Salary: Upto 20,000+ Incentives. 8867443657/ 8762900934, Telecallers :Language to Speak Kannada. Salary: Upto 15,000+ incentives. PG accommodation for 3 months for outside Bangalore people. 9791121135. 119/1, 2nd Floor,Srinidhi Complex, 11th Cross, Malleshwaram, Bangalore 560003

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ,ತಿಂಗಳಿಗೆ 18,000 ರಿಂದ 22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

Wanted

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ 12,000-17,000. 8951315839, 9141634619

General

ಶ್ರೀ ಶಕ್ತಿ ಹೆಲ್ತ್ ಕೇರಿನಲ್ಲಿ ಯುವಕ ಯುವತಿಯರು ಬೇಕಾಗಿದ್ದಾರೆ. ಆಶಾ ವರ್ಕರ್ ಮತ್ತು ಹೆಲ್ಪರ್ ಕೆಲಸಕೆ. ವಿದ್ಯಾರ್ಹತೆ SSLC/ PUC ಮತ್ತು ಪದವಿ ಆದವರು. ವೇತನ ತಿಂಗಳಿಗೆ 20000/- ರಿಂದ 25000/-. ಸುಮಾರು 500 ಜನಕ್ಕೆ ಕೆಲಸ ಖಾಲಿ ಇದೆ ಬೆಂಗಳೂರು. ಸಂಪರ್ಕಿಸಿ: 7349494852.

ತಕ್ಷಣ ಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ,ಬ್ರಿಟಾನಿಯಾ, ಟಿ.ವಿ.ಎಸ್, MNCಗಳಿಗೆ SSLC, PUC, Degree, Diplomaದವರು 18,000- 56,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ವಿಕೇರ್ ಹೋಮ್ ನರ್ಸಿಂಗ್: ಉಡುಪಿಯಲ್ಲಿ ರೋಗಿಯ ಆರೈಕೆಗೆ ಮಹಿಳಾ ಹೋಮ್ ನರ್ಸ್ ಬೇಕಾಗಿದ್ದಾರೆ. ವೇತನ 16,000–23,000/–. ಸಂಪರ್ಕಿಸಿ: 8792127333/ 9035727798.

ಪ್ರವಾಸ

Travel

29.11.2023 ರಿಂದ ರೈಲು ಹಾಗೂ A/C ಬಸ್ಸಿನಲ್ಲಿ 10 ದಿನಗಳು ವಿಜಯವಾಡ ಅನ್ನಾವರಂ, ವಿಶಾಖಪಟ್ಟಣಂ ವಾಸವಿಪೆನುಗೊಂಡ, ಭದ್ರಾಚಲಂ ಇತ್ಯಾದಿ. 18.12.2023 ರಿಂದ ವಿಮಾನ ಹಾಗೂ A/C ಬಸ್ಸಿನಲ್ಲಿ ಅಂಡಮಾನ್ ಸಂಪರ್ಕಿಸಿ: ಅನಿತಾ ಟ್ರಾವಲ್ಸ್, ಶೇಷಾದ್ರಿಪುರ ಬೆಂಗಳೂರು.20. 9448602641 9740679845

★23.11.2023 9ದಿನಗಳು★ ಆಂಧ್ರ ಪ್ರವಾಸ,04.12.2023 5ದಿನಗಳು ಶ್ರೀಶೈಲಂ,ಅಹೋಬಲಂ, 12.12.2023 10ದಿನಗಳು ಗುಜರಾತ್,ಉಜ್ಜೈನ್ ಯಾತ್ರಾ, 03.01.2024 11ದಿನಗಳು ರಾಯಲ್ ರಾಜಸ್ಥಾನ, 10.01.2024 4ದಿನಗಳು ಉಜ್ಜೈನ್,ಓಂಕಾರ ಪ್ರವಾಸ, 16.01.2024 12ದಿನಗಳು ಕಾಶಿ-ಯಾತ್ರಾ.ಆರ್.ಗಾಂಧಿ ಟೂರ್ಸ್. 9945445809/ 9902433500

ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸಗಳು: 2024 ದುಬೈ,ಅಬುದಾಬಿ ವಿಯೆಟ್ನಾಂ,ಕಾಂಬೋಡಿಯ ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ ನೇಪಾಳ,ಮುಕ್ತಿನಾಥ ಯುಕೆ,ಯುರೋಪ್ ಪ್ರವಾಸಗಳು. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9900080793 9900080796

Pilgrimage Tours

ನೇಪಾಳ ಪ್ರವಾಸ 9ದಿನಗಳು30/11/23 ಮುಕ್ತಿನಾಥ, ಪಶುಪತಿನಾಥ, ಕಠ್ಮಂಡು, ಮನೋಕಾಮನ, ಲುಂಬಿನಿ, ಪೂಕ್ರ, ಜನಕಪುರ. ಭೂತಾನ್ ಪ್ರವಾಸ 7ದಿನಗಳು 23/12/23 ಥಿಂಪು, ಪಾರು, ಪೂನಕ. ಸುವರ್ಣ ಯಾತ್ರ 8660233673, 9008381022

ಭವಿಷ್ಯ

Astrology

ಓಂ ಶ್ರೀ.ಮಹಾಗಣಪತಿ ಜ್ಯೋತಿಷ್ಯಾಲಯ, ಮಹಾರಾಷ್ಟ್ರದ ಪ್ರಖ್ಯಾತ ಜ್ಯೋತಿಷ್ಯರು, ಕನ್ನಡ,ಹಿಂದಿ, ಮರಾಠಿ ಭಾಷೆಯಲ್ಲಿ ಭವಿಷ್ಯವನ್ನು ಹೇಳುತ್ತಾರೆ, ಸ್ತ್ರೀ/ ಪುರುಷ ವಶೀಕರಣ,ಕೆಲವೇ ದಿನಗಳಲ್ಲಿ ಪರಿಹಾರ, ನಿಮ್ಮ ಹಲವಾರು ಸಮಸ್ಯೆಗಳಿಗೆ ಪರಿಹಾರ,ಕೆಲಸ ಆಗದಿದ್ದಲ್ಲಿ ಹಣ ವಾಪಸ್ಸ. ಗಣೇಶರಾವ್ ಶಾಸ್ತ್ರಿಜಿ: 9226506660/ 9960147770

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD Classifieds More value, more impact
ಪ್ರಜಾವಾಣಿ
REAL ESTATE
The 1st thing to do when Selling/Buying your Property
#1 PLACE YOUR AD HERE
www.dhclassifieds.com BOOK NOW
Book your ad with us now!
For more details contact:
+91 9731810277 | +91 9900428036 | +91 9845114560 | +91 9901641752 | | +91 9886213331 | 080- 45557163/164

ಷೇರುಪೇಟೆ ವಹಿವಾಟು ▲306



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,675
ಇಂದಿನ ಅಂತ್ಯ	19,765
▲	90
ದಿನದ ಗರಿಷ್ಠ	19,875

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹595
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹595

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1580 (1580)
ಸೋಯಾ (ರಿಫೈನ್ಡ್)	₹970 (975)
ಸೂರ್ಯಕಾಂತಿ (ರಿಫೈನ್ಡ್)	₹975 (975)
ಪಾಮೋಲಿನ್	₹852 (860)

ವಿನಿಮಯ ದರ

$ ಡಾಲರ್	83.23
£ ಪೌಂಡ್	103.22
€ ಯುರೊ	90.32
¥ ಯೆನ್ (100ಕ್ಕೆ)	55

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹4500-5200
ಮಧ್ಯಮ	₹3500-4200
ಸಣ್ಣ	₹2500-3500

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ತಿಪಟೂರು	₹7500-8500
ತುಮಕೂರು	₹3950-4800
ತುರುವೇಕೆರೆ	₹8200-8200

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹151
ಆರ್‌ಎಸ್‌ಎಸ್-5	₹147
ಗುಡ್ ಲಾಟ್	₹132

ವೈಯಕ್ತಿಕ ಸಾಲ: ನಿಯಮ ಬಿಗಿ

ಬ್ಯಾಂಕ್‌ಗಳು, ಎನ್‌ಬಿಎಫ್‌ಸಿಗೆ ಆರ್‌ಬಿಐ ನಿರ್ದೇಶನ

ಮುಂಬೈ (ಪಿಟಿಐ): ಬ್ಯಾಂಕ್‌ಗಳು ಮತ್ತು ಬ್ಯಾಂಕೇತರ ಹಣಕಾಸು ಕಂಪನಿಗಳು (ಎನ್‌ಬಿಎಫ್‌ಸಿ) ನೀಡುವ ಅಡಮಾನರಹಿತ ವೈಯಕ್ತಿಕ ಸಾಲದ ನಿಯಮಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಇನ್ನಷ್ಟು ಬಿಗಿಗೊಳಿಸಿದೆ.

ಸಾಲ ನೀಡುವುದರಿಂದ ಬ್ಯಾಂಕ್‌ಗಳಿಗೆ ಆಗಬಹುದಾದ ನಷ್ಟವನ್ನು ಭರಿಸಲು ತೆಗೆದಿರಿಸುವ ಮೊತ್ತದ ಪ್ರಮಾಣವನ್ನು (ರಿಸ್ಕ್ ವೇಯ್ಟ್) ಈಗಿರುವ ಶೇ 100ರಿಂದ ಶೇ 125ಕ್ಕೆ ಹೆಚ್ಚಿಸಿದೆ. ಬ್ಯಾಂಕ್‌ಗಳು ಅಡಮಾನರಹಿತ ವೈಯಕ್ತಿಕ ಸಾಲ ನೀಡುವಾಗ ಅದರಿಂದ ಬ್ಯಾಂಕ್‌ಗೆ ನಷ್ಟವಾಗುವ ಸಾಧ್ಯತೆಯು ಯಾವ ಮಟ್ಟದಲ್ಲಿ ಇದೆ ಎನ್ನವುದನ್ನು ಗಮನದಲ್ಲಿ ಇಟ್ಟುಕೊಂಡು ಹಣವನ್ನು ತೆಗೆದಿರಿಸಬೇಕಾಗುತ್ತದೆ. ಸಾಲ

ನೀಡುವುದರಿಂದ ಬ್ಯಾಂಕ್‌ಗಳಿಗೆ ನಷ್ಟವಾಗುವ ಸಾಧ್ಯತೆ ಹೆಚ್ಚಿಗೆ ಇದ್ದರೆ ಅದು ಬ್ಯಾಂಕ್‌ಗಳ ಸಾಲ ನೀಡಿಕೆ ಸಾಮರ್ಥ್ಯವನ್ನು ನಿರ್ಬಂಧಿಸುತ್ತದೆ.

ಅಡಮಾನರಹಿತ ವೈಯಕ್ತಿಕ ಸಾಲ ನೀಡಿಕೆ ಹೆಚ್ಚಾಗುತ್ತಿರುವ ಬಗ್ಗೆ ಆರ್‌ಬಿಐ ಗವರ್ನರ್ ಈಚೆಗಷ್ಟೇ ಕಳವಳ ವ್ಯಕ್ತಪಡಿಸಿದ್ದರು. ಇದನ್ನು ಗಮನದಲ್ಲಿ ಇಟ್ಟುಕೊಂಡು ಆರ್‌ಬಿಐ ಈ ಬದಲಾವಣೆ ಮಾಡಿದೆ. ಅದರಂತೆ, ಗೃಹ ಸಾಲ, ಶಿಕ್ಷಣ ಸಾಲ, ವಾಹನ ಸಾಲವನ್ನು ಹೊರತುಪಡಿಸಿ ಉಳಿದ ವೈಯಕ್ತಿಕ ಸಾಲಗಳಿಗೆ ಬ್ಯಾಂಕ್‌ಗಳು ತೆಗೆದಿರಿಸುವ ಮೊತ್ತದ ಪ್ರಮಾಣವು ಶೇ 125ರಷ್ಟು ಇರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಆದರೆ, ಚಿನ್ನ ಮತ್ತು ಚಿನ್ನಾಭರಣ ಅಡಮಾನ ಇಟ್ಟು ಪಡೆಯುವ ಸಾಲಕ್ಕೆ ಇದು ಅನ್ವಯಿಸುವುದಿಲ್ಲ. ಈ ಸಾಲಗಳಿಗೆ ರಿಸ್ಕ್ ವೇಯ್ಟ್ ಈಗಿರುವ ಶೇ 100ರಷ್ಟೇ ಮುಂದುವರಿಯಲಿದೆ ಎಂದು ಆರ್‌ಬಿಐ ತಿಳಿಸಿದೆ.

ಬ್ಯಾಂಕ್‌ಗಳ ವೈಯಕ್ತಿಕ ಸಾಲದ ಮೊತ್ತವು 2023ರ ಸೆಪ್ಟೆಂಬರ್ ಅಂತ್ಯಕ್ಕೆ ₹48.26 ಲಕ್ಷ ಕೋಟಿಯಷ್ಟು ಇದೆ. 2022ರ ಸೆಪ್ಟೆಂಬರ್ ಅಂತ್ಯಕ್ಕೆ ಹೋಲಿಸಿದರೆ ಶೇ 30ರಷ್ಟು ಏರಿಕೆ ಕಂಡಿದೆ.

ನವೆಂಬರ್ ತಿಂಗಳ ಆರ್ಥಿಕ ಪರಿಶೀಲನಾ ವರದಿ ಬಿಡುಗಡೆ ಮಾಡಿದ ರಿಸರ್ವ್ ಬ್ಯಾಂಕ್

‘ಹಣದುಬ್ಬರದ ಸಮಸ್ಯೆ ಬಗೆಹರಿದಿಲ್ಲ’

ಮುಂಬೈ (ಪಿಟಿಐ): ಕಳೆದ ಎರಡು ತಿಂಗಳಿನಿಂದ ಚಿಲ್ಲರೆ ಹಣದುಬ್ಬರವು ಇಳಿಮುಖ ಆಗಿದೆ. ಆಧರೆ, ಹಣದುಬ್ಬರವನ್ನು ನಿರ್ವಹಿಸುವ ಸಮಸ್ಯೆಯಿಂದ ನಾವಿನ್ನೂ ಹೊರಬಂದಿಲ್ಲ. ಇನ್ನೂ ಬಹಳಷ್ಟು ದೂರ ಸಾಗಬೇಕಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ವರದಿ ಹೇಳಿದೆ.

ಹಣಕಾಸು ನೀತಿ ಮತ್ತು ಪೂರೈಕೆ ವ್ಯವಸ್ಥೆಯಲ್ಲಿ ಮಧ್ಯಪ್ರವೇಶ ಮಾಡಿರುವುದೇ ಹಣದುಬ್ಬರವು ಇಳಿಮುಖ ಆಗಿದೆ ಎಂದು ಗುರುವಾರ ಬಿಡುಗಡೆ ಮಾಡಿರುವ ನವೆಂಬರ್ ತಿಂಗಳ ಆರ್ಥಿಕ ಪರಿಶೀಲನಾ ವರದಿಯಲ್ಲಿ ತಿಳಿಸಿದೆ. ಆರ್‌ಬಿಐ ಡೆಪ್ಯುಟಿ ಗವರ್ನರ್ ಮೈಕಲ್ ಅವರ ನೇತೃತ್ವದ ತಂಡವು ಈ ವರದಿ

ಸಿದ್ಧಪಡಿಸಿದೆ.

ಚಿಲ್ಲರೆ ಹಣದುಬ್ಬರವು 2022–23ರಲ್ಲಿ ಸರಾಸರಿ ಶೇ 6.7 ಮತ್ತು 2023ರ ಜುಲೈ-ಆಗಸ್ಟ್‌ನಲ್ಲಿ ಶೇ 7.1ರಷ್ಟು ಇತ್ತು. ಇದಕ್ಕೆ ಹೋಲಿಸಿದರೆ ಸೆಪ್ಟೆಂಬರ್‌ನಲ್ಲಿ ಶೇ 5.02ಕ್ಕೆ ಇಳಿಕೆ ಕಂಡಿದೆ. ಅಕ್ಟೋಬರ್‌ನಲ್ಲಿ ನಾಲ್ಕು ತಿಂಗಳ ಕನಿಷ್ಠ ಮಟ್ಟವಾದ ಶೇ 4.87ಕ್ಕೆ ಇಳಿಕೆ ಕಂಡಿದೆ. ಇದು ತುಸು ನೆಮ್ಮದಿ ತಂದಿದೆ. ಹೀಗಿದ್ದರೂ ಹಣದುಬ್ಬರದ ಸಮಸ್ಯೆಯು ಸಂಪೂರ್ಣವಾಗಿ ಬಗೆಹರಿದಿಲ್ಲ ಎಂದು ತಿಳಿಸಿದೆ.

ಹಣಕಾಸು ನೀತಿ ಸಮಿತಿಯು (ಎಂಪಿಸಿ) ಅಕ್ಟೋಬರ್ ಸಭೆಯಲ್ಲಿ 2023–24ರಲ್ಲಿ ಚಿಲ್ಲರೆ ಹಣದುಬ್ಬರವು ಶೇ 5.4ರಷ್ಟು ಇರುವ ಅಂದಾಜು ಮಾಡಿದೆ. ಆದರೆ, ಆಹಾರ ದರ ಏರಿಕೆಯಿಂದ ಒಟ್ಟಾರೆ ಹಣದುಬ್ಬರದ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಹೀಗಾಗಿ ಹಣದುಬ್ಬರವನ್ನು ಗುರಿಯೊಳಗೆ ನಿಯಂತ್ರಿಸಲು ಮತ್ತು ಆರ್ಥಿಕ ಬೆಳವಣಿಗೆಗೆ ಬೆಂಬಲ ನೀಡುವುದರತ್ತ ಹೆಚ್ಚು ಗಮನ ಹರಿಸಬೇಕಾಗಿದೆ.

ಹಬ್ಬದ ಬೇಡಿಕೆಯು ಉತ್ತಮವಾಗಿ ಇರುವುದರಿಂದ ಭಾರತದಲ್ಲಿ ಜಿಡಿಪಿ ಬೆಳವಣಿಗೆಯು 2023–24ರ ಮೂರನೇ ತ್ರೈಮಾಸಿಕದಲ್ಲಿ ಹೆಚ್ಚಿಗೆ ಇರುವ ನಿರೀಕ್ಷೆ ಇದೆ.

ತಯಾರಿಕಾ ವಲಯದ ನಿಧಾನಗತಿಯ ಬೆಳವಣಿಗೆಯು ಜಾಗತಿಕ ಆರ್ಥಿಕತೆ ಬೆಳವಣಿಗೆಯು ಇಳಿಮುಖ ಆಗುವ ಸೂಚನೆಯನ್ನು ನೀಡುತ್ತಿದೆ. ಆದರೆ, ಸೇವಾ ವಲಯದ ಚಟುವಟಿಕೆಯು ಕೋವಿಡ್‌ಗೂ ಮುಂಚಿನ ಮಟ್ಟವನ್ನು ತಲುಪಿರುವಂತೆ ಕಾಣುತ್ತಿದೆ ಎಂದು ವರದಿಯಲ್ಲಿ ಹೇಳಲಾಗಿದೆ.

‘ಜಿಡಿಪಿ ಬೆಳವಣಿಗೆ ಮುನ್ನೋಟ ಬಲಿಷ್ಠ’

ನವದೆಹಲಿ: ಭಾರತದ ಜಿಡಿಪಿ ಬೆಳವಣಿಗೆ ಮುನ್ನೋಟವು ಅಲ್ಪಾವಧಿಯಲ್ಲಿ ಬಲಿಷ್ಠವಾಗಿದ್ದು, 2024–25ಮತ್ತು 2025–26ನೇ ಹಣಕಾಸು ವರ್ಷಗಳಲ್ಲಿ ಜಿಡಿಪಿಯು ಶೇ 6–71ರಷ್ಟು ಬೆಳಣಿಗೆ ಕಾಣಲಿದೆ ಎಂದು ರೇಟಿಂಗ್ಸ್ ಸಂಸ್ಥೆ ಎಸ್ ಆ್ಯಂಡ್ ಪಿ ಗುರುವಾರ ಹೇಳಿದೆ.

2024ರ ಮುನ್ನೋಟದ ವರದಿ ಬಿಡುಗಡೆ ಮಾಡಿರುವ ಸಂಸ್ಥೆಯು, ಬ್ಯಾಂಕಿಂಗ್ ವಲಯದ ವಸೂಲಾಗದ ಸಾಲದ ಪ್ರಮಾಣವು 2025ರ ಮಾರ್ಚ್ ಅಂತ್ಯದ ವೇಳೆಗೆ ಶೇ 3.–3.5ಕ್ಕೆ ಇಳಿಕೆ ಆಗಲಿದೆ. ಕಂಪನಿಗಳ ಆರ್ಥಿಕ ಸ್ಥಿತಿ ಉತ್ತಮವಾಗಿ ಇರುವುದು ಮತ್ತು ಬ್ಯಾಂಕ್‌ಗಳು ನಷ್ಟವನ್ನು ನಿರ್ವಹಿಸುವ ಸಾಮರ್ಥ್ಯ ಸುಧಾರಿಸುವುದರಿಂದ ಇದು ಸಾಧ್ಯವಾಗಲಿದೆ ಎಂದು ತಿಳಿಸಿದೆ.

ದೇಶದ ಷೇರುಪೇಟೆಗಳಲ್ಲಿ ನಡೆದ ಸಕಾರಾತ್ಮಕ ವಹಿವಾಟಿನ ಪ್ರಭಾವ

ಎಫ್‌ಪಿಐ ಹೂಡಿಕೆ ಶೇ 15 ಏರಿಕೆ

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಗಳಲ್ಲಿ ಮಾಡಿರುವ ಹೂಡಿಕೆಯ ಒಟ್ಟು ಮೊತ್ತವು ಸೆಪ್ಟೆಂಬರ್ ತ್ರೈಮಾಸಿಕದ ಅಂತ್ಯಕ್ಕೆ ₹54.03 ಲಕ್ಷ ಕೋಟಿಯಷ್ಟು ಆಗಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಆಗಿದ್ದ ಹೂಡಿಕೆಗೆ ಹೋಲಿಸಿದರೆ ಶೇ 15ರಷ್ಟು ಏರಿದೆ.

ಮಾರ್ನಿಂಗ್‌ಸ್ಟಾರ್ ಸಂಸ್ಥೆಯ ವರದಿಯ ಪ್ರಕಾರ, 2022ರ ಸೆಪ್ಟೆಂಬರ್ ತ್ರೈಮಾಸಿಕದ ಅಂತ್ಯದಲ್ಲಿ ಭಾರತದ ಷೇರುಗಳಲ್ಲಿ ಎಫ್‌ಪಿಐ ಹೂಡಿಕೆಯು ₹46.97 ಲಕ್ಷ ಕೋಟಿಯಷ್ಟು ಇತ್ತು. ದೇಶಿ ಷೇರುಪೇಟೆಗಳಲ್ಲಿ ನಡೆದ ಉತ್ತಮ ವಹಿವಾಟು ಮತ್ತು ವಿದೇಶಿ ಬಂಡವಾಳ ಒಳಹರಿವಿನಿಂದ ಈ ಪ್ರಮಾಣದ ಬೆಳವಣಿಗೆ ಆಗಿದೆ ಎಂದು ಅದು ತಿಳಿಸಿದೆ.

ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಹೂಡಿಕೆಯು ಶೇ 4ರಷ್ಟು ಏರಿಕೆ ಕಂಡಿದೆ. ಜೂನ್ ತ್ರೈಮಾಸಿಕದಲ್ಲಿ ₹51.95 ಲಕ್ಷ ಕೋಟಿಯಷ್ಟು ಹೂಡಿಕೆ ಆಗಿತ್ತು.

ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಗಳ ಗಳಿಕೆ ಉತ್ತಮ ಆಗಿರುವುದು, ಆರ್ಥಿಕ ಚಟುವಟಿಕೆಗಳ ಬೆಳವಣಿಗೆ ಸ್ಥಿರವಾಗಿರುವುದು ಮತ್ತು ಚೀನಾದ ಆರ್ಥಿಕತೆ ಎದುರಿಸಿದ ಸವಾಲುಗಳಿಂದಾಗಿ ವಿದೇಶಿ ಹೂಡಿಕೆದಾರರು ಭಾರತದ ಷೇರುಗಳಲ್ಲಿ ಜುಲೈನಲ್ಲಿ ₹47,144 ಕೋಟಿ ಹೂಡಿಕೆ ಮಾಡಿದರು. ಆದರೆ, ಆಗಸ್ಟ್‌ನಲ್ಲಿ ಹೂಡಿಕೆ ಪ್ರಮಾಣವು ₹12,284 ಕೋಟಿಗೆ ಇಳಿಕೆ ಕಂಡಿತು. ಕಚ್ಚಾ ತೈಲ ದರ ಏರಿಕೆ ಮತ್ತು ಹಣದುಬ್ಬರದ ಆತಂಕದಿಂದಾಗಿ ಜಾಗತಿಕ ಆರ್ಥಿಕ ಬೆಳವಣಿಗೆ ಇನ್ನಷ್ಟು ಕಡಿಮೆ ಆಗುವ ಕಳವಳ ವ್ಯಕ್ತವಾಗಿದ್ದೇ ಆಗಸ್ಟ್‌ನಲ್ಲಿ ಹೂಡಿಕೆ ತಗ್ಗಲು ಕಾರಣ ಎಂದು ಅದು ಹೇಳಿದೆ.

ಹೂಡಿಕೆ ವಿವರ

₹54.03 ಲಕ್ಷ ಕೋಟಿ
2023ರ ಸೆಪ್ಟೆಂಬರ್ ತ್ರೈಮಾಸಿಕ

₹46.97 ಲಕ್ಷ ಕೋಟಿ
2022ರ ಸೆಪ್ಟೆಂಬರ್ ತ್ರೈಮಾಸಿಕ

‘ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆ ಹೆಚ್ಚಳ’

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಚಿಲ್ಲರೆ ಹೂಡಿಕೆದಾರರ ಭಾಗವಹಿಸುವಿಕೆಯು ಹೆಚ್ಚಾಗುತ್ತಿದೆ. ಚಿಲ್ಲರೆ ಹೂಡಿಕೆದಾರರ ಈ ಸಮೂಹವು ಒಂದು ಅಗಾಧವಾದ ಶಕ್ತಿಯಾಗಿ ಮಾರ್ಪಟ್ಟಿದೆ ಎಂದು ಎಂದು ರಾಷ್ಟ್ರೀಯ ಷೇರು ವಿನಿಮಯ ಕೇಂದ್ರದ (ಎನ್‌ಎಸ್‌ಇ) ವ್ಯವಸ್ಥಾಪಕ ನಿರ್ದೇಶಕ ಆಶಿಶ್‌ಕುಮಾರ್ ಚೌಹಾಣ್ ಹೇಳಿದ್ದಾರೆ.

ಚಿಲ್ಲರೆ ಹೂಡಿಕೆದಾರರು, 2023ರಲ್ಲಿ ಈವರೆಗೆ ₹28 ಲಕ್ಷ ಕೋಟಿ ಹೂಡಿಕೆ ಮಾಡಿದ್ದಾರೆ. ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಮಾಡುವವರಿಗಿಂತಲೂ ಹೆಚ್ಚಿನ ಮೊತ್ತ ಇದಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಚಿಲ್ಲರೆ ಹೂಡಿಕೆದಾರರು ₹60 ಲಕ್ಷ ಕೋಟಿ ಮೌಲ್ಯದ ಸಂಪತ್ತು ಹೊಂದಿದ್ದಾರೆ. ಷೇರುಪೇಟೆಯಲ್ಲಿನ ಹೂಡಿಕೆದಾರರ ಒಟ್ಟು ಸಂಪತ್ತಿನ ಐದನೇ ಒಂದು ಭಾಗ ಇದಾಗಿದೆ ಎಂದು ಅವರು ತಿಳಿಸಿದ್ದಾರೆ.

ಆಕಸ್ಮಿಕ ಲಾಭ ತೆರಿಗೆ ಇಳಿಕೆ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಗುರುವಾರದಿಂದ ಜಾರಿಗೆ ಬರುವಂತೆ ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆ ತಗ್ಗಿಸಿದೆ. ಇದೇ ವೇಳೆ, ಡೀಸೆಲ್ ಮೇಲಿನ ತೆರಿಗೆಯನ್ನು ಸಹ ಇಳಿಕೆ ಮಾಡಿದೆ.

ಸರ್ಕಾರ ಹೊರಡಿಸಿರುವ ಅಧಿಸೂಚನೆಯ ಪ್ರಕಾರ, ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯು ಪ್ರತಿ ಟನ್‌ಗೆ ₹9,050 ಇದ್ದಿದ್ದು ₹6,300ಕ್ಕೆ ಇಳಿಕೆ ಆಗಿದೆ.

ಡೀಸೆಲ್ ರಫ್ತು ಮೇಲಿನ ತೆರಿಗೆಯನ್ನು ಪ್ರತಿ ಲೀಟರಿಗೆ ₹2 ರಿಂದ ₹1ಕ್ಕೆ ಇಳಿಕೆ ಮಾಡಲಾಗಿದೆ. ವಿಮಾನ ಇಂಧನ (ಎಟಿಎಫ್) ಮತ್ತು ಪೆಟ್ರೋಲ್ ಮೇಲಿನ ಶೂನ್ಯ ತೆರಿಗೆಯನ್ನು ಮುಂದುವರಿಸಲಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರ ಇಳಿಕೆ ಆಗಿರುವುದರಿಂದ ಈ ಬದಲಾವಣೆ ಮಾಡಿರುವುದಾಗಿ ಸರ್ಕಾರ ತಿಳಿಸಿದೆ.

ಟಾಟಾ ಟೆಕ್ನಾಲಜೀಸ್ ಐಪಿಒ ಷೇರು ಬೆಲೆ ₹ 475–500

ಮುಂಬೈ (ಪಿಟಿಐ): ಟಾಟಾ ಟೆಕ್ನಾಲಜೀಸ್ ಕಂಪನಿಯು ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ₹3,042 ಕೋಟಿ ಬಂಡವಾಳ ಸಂಗ್ರಹಿಸಲು ಮುಂದಾಗಿದೆ. ಕಂಪನಿಯು ಪ್ರತಿ ಷೇರಿಗೆ ₹475–500 ಬೆಲೆ ನಿಗದಿ ಮಾಡಿದೆ.

ನವೆಂಬರ್ 22 ರಿಂದ 24ರವರೆಗೆ ಬಿಡ್ ಸಲ್ಲಿಸಲು ಅವಕಾಶ ಇರಲಿದೆ. ಆ್ಯಂಕರ್ ಇನ್‌ವೆಸ್ಟರ್ಸ್ ಒಂದು ದಿನ ಮುಂಚಿತವಾಗಿಯೇ ಅಂದರೆ ನ. 21ರಂದು ಬಿಡ್ ಸಲ್ಲಿಸಬಹುದಾಗಿದೆ ಎಂದು ಕಂಪನಿಯು ತಿಳಿಸಿದೆ.

ಸರಿ ಸುಮಾರು ಎರಡು ದಶಕಗಳಲ್ಲಿ ಐಪಿಒಗೆ ಬರುತ್ತಿರುವ ಟಾಟಾ ಸಮೂಹದ ಮೊದಲ ಕಂಪನಿ ಇದಾಗಿದೆ. ಈ ಹಿಂದೆ 2004ರಲ್ಲಿ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ ಐಪಿಒಗೆ ಬಂದಿತ್ತು.

ಆಫರ್ ಫಾರ್ ಸೇಲ್ (ಒಎಫ್‌ಎಸ್) ಮೂಲಕ ಒಟ್ಟು 6.08 ಕೋಟಿ ಷೇರುಗಳನ್ನು ಮಾರಾಟ ಮಾಡಲು ಕಂಪನಿ ಉದ್ದೇಶಿಸಿದೆ. ಇದರಲ್ಲಿ 20.28 ಲಕ್ಷ ಷೇರುಗಳನ್ನು ಉದ್ಯೋಗಿಗಳಿಗೆ ಮತ್ತು60.85 ಲಕ್ಷ ಷೇರುಗಳನ್ನು ಟಾಟಾ ಮೋಟರ್ಸ್‌ನ ಷೇರುದಾರರಿಗೆ ಮೀಸಲಿಡಲಾಗಿದೆ. ಹೂಡಿಕೆದಾರರು ಕನಿಷ್ಠ 30 ಈಕ್ವಿಟಿ ಷೇರುಗಳಿಗೆ ಬಿಡ್ ಸಲ್ಲಿಸಬಹುದು ಎಂದು ಕಂಪನಿ ಮಾಹಿತಿ ನೀಡಿದೆ.

ನ. 30 ಅಥವಾ ಡಿ.1ರಂದು ಬಿಎಸ್‌ಇ ಮತ್ತು ಎನ್‌ಎಸ್‌ಇನಲ್ಲಿ ಕಂಪನಿಯ ಷೇರುಗಳು ವಹಿವಾಟಿಗೆ ಮುಕ್ತವಾಗುವ ನಿರೀಕ್ಷೆ ಇದೆ.

ಮುಂದುವರಿದ ಸೆನ್ಸೆಕ್ಸ್ ಓಟ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಎರಡನೇ ದಿನವೂ ಸೂಚ್ಯಂಕಗಳ ಓಟ ಮುಂದುವರಿಯಿತು.

ಐ.ಟಿ, ಟೆಕ್ ಮತ್ತು ಗ್ರಾಹಕ ಬಳಕೆ ವಸ್ತುಗಳ ಷೇರುಗಳನ್ನು ಹೂಡಿಕೆದಾರರು ಹೆಚ್ಚಾಗಿ ಖರೀದಿಸಿದ್ದರಿಂದ ಗುರುವಾರವೂ ಸಕಾರಾತ್ಮಕ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 306 ಅಂಶ ಏರಿಕೆ ಕಂಡು 65,982 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 90 ಅಂಶ ಏರಿಕೆ ಕಂಡು 19,765 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಅಮೆರಿಕದಲ್ಲಿ ಹಣದುಬ್ಬರ ಇಳಿಕೆ ಆಗಿರುವುದು ಮತ್ತು ಅಮೆರಿಕದ ಬಾಂಡ್ ಗಳಿಕೆ ಪ್ರಮಾಣ ಕಡಿಮೆ ಆಗಿರುವುದರಿಂದ ಭಾರತದಲ್ಲಿ ಹೂಡಿಕೆದಾರರು ಉತ್ಸಾಹದಿಂದ ವಹಿವಾಟು ನಡೆಸುವಂತಾಯಿತು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	850-900
ನಡುಗೋಲು	1000-1100
ರಾಶಿ	1200-1250
ರಾಶಿ ಉತ್ತಮ	1300-1350
ಹೆರಕಿದ್ದು	2000-2100
ಹಸಿರು ಸಾಧಾರಣ	1350-1450
ಹಸಿರು ಉತ್ತಮ	1500-1600
ಹಸಿರು ಅತಿ ಉತ್ತಮ	2000-2100
ಕಾಳು ಮೆಣಸು	600
ಬಂಟ್ವಾಳ	
ಕೋಕ	15000-27500
ಹೊಸತು	27500-36500
ಹಳತು	43500-48500
ಬೆಳ್ತಂಗಡಿ	
ಹೊಸತು	30500-43000
ಚನ್ನಗಿರಿ	
ರಾಶಿ	46099-47389
ಕಾರ್ಕಳ	
ಹಳತು	30000-48500
ಕುಮಟ	
ಹಳೆಚಾಲಿ	37369-39399

ಹೊಸಚಾಲಿ	29111-33779
ಚಿಪ್ಪು	28001-36099
ಕೋಕ	17099-31889
ಪುತ್ತೂರು	
ಹೊಸತು	27000-36500
ಸಾಗರ	
ಬಿಳಿಗೋಟು	23989-32299
ಚಾಲಿ	33899-38649
ಕೋಕ	22119-34909
ಕೆಂಪುಗೋಟು	27611-34599
ರಾಶಿ	40009-46849
ಸಿಪ್ಪೆಗೋಟು	8719-21195
ಶಿವಮೊಗ್ಗ	
ರಾಶಿ	40069-47169

ಶಿರಸಿ	
ಬೆಟ್ಟೆ	27199-41299
ಬಿಳಿಗೋಟು	29609-35505
ಚಾಲಿ	36171-40899
ರಾಶಿ	39699-46899
ಯಲ್ಲಾಪುರ	
ಅಪಿ	64779-64779
ಬಿಳಿಗೋಟು	26299-36480
ಚಾಲಿ	37499-40599
ಕೋಕ	18899-32699
ಕೆಂಪುಗೋಟು	32399-35099
ರಾಶಿ	44950-54879
ತಟ್ಟಿಬೆಟ್ಟೆ	37969-44799

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	11600	-	180.80 ಸೆಂಟ್ಸ್
ಎಸಿ	-	6500	-	
ಆರ್‌ಪಿ	-	10000	-	ಲಂಡನ್
ಆರ್‌ಸಿ	-	244 on OT	-	2549 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

16-11-2023

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1590 (1590)
ಒಂದು ವಾರದ ಡೆಲಿವರಿ	1585 (1585)
ಸೋಯಾ ಕಚ್ಚಾ	950 (950)
ಪಾಮ್ ವಾರದ ಡೆಲಿವರಿ	850 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ	915 (915)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	60,350 (60,300)
ಬೆಳ್ಳಿ ಕೆ.ಜಿ	73,000 (72,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಜ್ಯ ಸರ್ಕಾರಿ ಪಿಂಚಣಿದಾರರ ಮನೆ ಬಾಗಿಲಿಗೆ ಡಿಜಿಟಲ್ ಜೀವಿತ ಪ್ರಮಾಣ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ಪಿಂಚಣಿದಾರರಿಗೆ ಅಥವಾ ಕುಟುಂಬದ ಪಿಂಚಣಿದಾರರಿಗೆ ಡಿಜಿಟಲ್ ಜೀವಿತ ಪ್ರಮಾಣಪತ್ರವನ್ನು ಮನೆ ಬಾಗಿಲಿಗೆ ತಲುಪಿಸಲು ರಾಜ್ಯದ ಖಜಾನೆ ಆಯುಕ್ತರೊಂದಿಗೆ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ ಒಪ್ಪಂದ ಮಾಡಿಕೊಂಡಿದೆ.

5.4 ಲಕ್ಷಕ್ಕೂ ಅಧಿಕ ಪಿಂಚಣಿದಾರರಿಗೆ ಮನೆ ಬಾಗಿಲಿಗೆ ಈ ಪ್ರಮಾಣಪತ್ರವು ತಲುಪಲಿದೆ. ಪೋಸ್ಟ್‌ಮ್ಯಾನ್ ಮೂಲಕ ಆಧಾರ್, ಮೊಬೈಲ್ ಸಂಖ್ಯೆ, ಪಿಂಚಣಿದಾರರ ಬ್ಯಾಂಕ್ ಖಾತೆಯ ವಿವರಗಳೊಂದಿಗೆ ತಮ್ಮ ಬಯೋಮೆಟ್ರಿಕ್ ದೃಢೀಕರಣ ನೀಡಿ, ಪ್ರಮಾಣಪತ್ರ ಪಡೆಯಬಹುದು ಎಂದು ಅಂಚೆ ಇಲಾಖೆಯ ಕರ್ನಾಟಕ ವೃತ್ತವು ಪ್ರಕಟಣೆಯಲ್ಲಿ ತಿಳಿಸಿದೆ.

ಪಿಂಚಣಿದಾರರು ತಮ್ಮ ಹತ್ತಿರದ ಅಂಚೆ ಕಚೇರಿ ಅಥವಾ ಪೋಸ್ಟ್‌ಮ್ಯಾನ್ ಮೂಲಕ ₹70 ಶುಲ್ಕ ನೀಡಿ ಈ ಸೌಲಭ್ಯ ಪಡೆಯಬಹುದಾಗಿದೆ ಎಂದು ಹೇಳಿದೆ.

ಸಂಕ್ಷಿಪ್ತ ಸುದ್ದಿ

ರಾಜ್ಯದೆಲ್ಲೆಡೆ ಏರ್‌ಟೆಲ್ 5ಜಿ

ಬೆಂಗಳೂರು: ಏರ್‌ಟೆಲ್ 5ಜಿ ಪ್ಲಸ್ ಸೇವೆಯನ್ನು ಆರಂಭಿಸಿದ ಒಂದು ವರ್ಷದ ಒಳಗಾಗಿಯೇ ರಾಜ್ಯದ 31 ಜಿಲ್ಲೆಗಳಲ್ಲಿ 5ಜಿ ಸಂಪರ್ಕ ಕಲ್ಪಿಸಲಾಗಿದೆ. ಒಟ್ಟು 51 ಲಕ್ಷ ಗ್ರಾಹಕರು 5ಜಿ ಬಳಸುತ್ತಿದ್ದಾರೆ ಎಂದು ಭಾರ್ತಿ ಏರ್‌ಟೆಲ್ ಕಂಪನಿಯು ಗುರುವಾರ ಹೇಳಿದೆ.

‘ರಾಜ್ಯದಲ್ಲಿ ಗರಿಷ್ಠ ವೇಗದ 5ಜಿ ತಂತ್ರಜ್ಞಾನವನ್ನು ನೀಡಿದ ಮೊದಲ ದೂರಸಂಪರ್ಕ ಕಂಪನಿ ನಮ್ಮದು. ಏರ್‌ಟೆಲ್ 5ಜಿ ಪ್ಲಸ್ ನೆಟ್‌ವರ್ಕ್ ಆಯ್ಕೆ ಮಾಡಿಕೊಂಡಿರುವ ರಾಜ್ಯದ 51 ಲಕ್ಷ ಗ್ರಾಹಕರಿಗೆ ಧನ್ಯವಾದ ಹೇಳಲು ಬಯಸುತ್ತೇವೆ. ಅತ್ಯಾಧುನಿಕ 5ಜಿ ತಂತ್ರಜ್ಞಾನಗಳನ್ನು ನೀಡುವ ಮೂಲಕ ನಮ್ಮ ಗ್ರಾಹಕರನ್ನು ತೃಪ್ತಿಪಡಿಸುವುದೇ ಕಂಪನಿಯ ಆದ್ಯತೆ’ ಎಂದು ಭಾರ್ತಿ ಏರ್‌ಟೆಲ್‌ನ ಕರ್ನಾಟಕದ ಸಿಇಒ ವಿವೇಕ್ ಮಹೆಂದೀರತ್ತ್ ಹೇಳಿದ್ದಾರೆ.

ಇಶಾ ಅಂಬಾನಿ ನೇಮಕಕ್ಕೆ ಒಪ್ಪಿಗೆ

ನವದೆಹಲಿ (ಪಿಟಿಐ): ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಕಂಪನಿಗೆ ಇಶಾ ಅಂಬಾನಿ ಒಳಗೊಂಡು ಒಟ್ಟು ಮೂವರು ನಿರ್ದೇಶಕರನ್ನು ನೇಮಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಒಪ್ಪಿಗೆ ನೀಡಿದೆ ಎಂದು ಕಂಪನಿಯು ಗುರುವಾರ ತಿಳಿಸಿದೆ.

ಆರ್‌ಬಿಐ ಬುಧವಾರ ಹೊರಡಿಸಿರುವ ಪ್ರಕಟಣೆಯಲ್ಲಿ, ಇಶಾ ಅಂಬಾನಿ, ಅನ್ಶುಮನ್ ಠಾಕೂರ್ ಮತ್ತು ಹಿತೇಶ್ ಕುಮಾರ್ ಸೇಥಿಯಾ ಅವರನ್ನು ನಿರ್ದೇಶಕರನ್ನಾಗಿ ನೇಮಿಸಲು ಒಪ್ಪಿಗೆ ನೀಡಿದೆ ಎಂದು ಜಿಯೊ ಫೈನಾನ್ಶಿಯಲ್ ಷೇರುಪೇಟೆಗೆ ಮಾಹಿತಿ ನೀಡಿದೆ.

ಅಲ್ ಶಿಫಾ ಆಸ್ಪತ್ರೆಯಲ್ಲಿ ರೈಫಲ್, ಗ್ರೆನೇಡ್ ಪತ್ತೆ: ಇಸ್ರೇಲ್ ಸೇನೆ ವಶಕ್ಕೆ ಗಾಜಾ ಬಂದರು

ಗಾಜಾ: ಹಮಾಸ್ ನೆಲೆಗೆ ಶೋಧ ಅಬಾಧಿತ

ಖಾನ್ ಯೂನಿಸ್/ ಜೆರುಸಲೇಂ (ಎಪಿ/ ಎಎಫ್‌ಪಿ/ರಾಯಿಟರ್ಸ್): ಗಾಜಾ ಪಟ್ಟಿಯ ಅಲ್ ಶಿಫಾ ಆಸ್ಪತ್ರೆಯಲ್ಲಿ ಎರಡನೇ ದಿನವಾದ ಗುರುವಾರವೂ ಹಮಾಸ್ ಬಂಡುಕೋರರ ನೆಲೆಯ ಪತ್ತೆಗಾಗಿ, ಇಸ್ರೇಲ್ ಸೇನಾಯೋಧರಿಂದ ದಾಳಿ ಮುಂದುವರಿಯಿತು.

ಆದರೆ, ಆಸ್ಪತ್ರೆಯಲ್ಲಿ ಹಮಾಸ್‌ನ ಕಮಾಂಡೊ ನೆಲೆ ಇದೆ ಎಂಬ ಬಗ್ಗೆ ಸೇನೆಯು ಯಾವುದೇ ಪುರಾವೆಯನ್ನು ಬಹಿರಂಗಪಡಿಸಿಲ್ಲ.

ಯೋಧರ ಈ ಕಾರ್ಯಾಚರಣೆಯಿಂದ ವಿದ್ಯುತ್ ಸೇರಿದಂತೆ ಅಗತ್ಯ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಇಲ್ಲದೆ ತೊಂದರೆ ಅನುಭವಿಸುತ್ತಿರುವ ನವಜಾತ ಶಿಶುಗಳು ಸೇರಿದಂತೆ ನೂರಾರು ರೋಗಿಗಳು ಮತ್ತಷ್ಟು ನರಳುವಂತಾಗಿದೆ.

ಆಸ್ಪತ್ರೆಯ ನೆಲಮಾಳಿಗೆಯಲ್ಲಿ ಯೋಧರು ಶೋಧ ಕಾರ್ಯ ನಡೆಸಿದರು. ವೈದ್ಯಕೀಯ ಯಂತ್ರೋಪಕರಣಗಳ ಉಸ್ತುವಾರಿ ಹೊತ್ತಿರುವ ಸಿಬ್ಬಂದಿಯನ್ನೂ ವಿಚಾರಣೆ ನಡೆಸಿದ್ದಾರೆ ಎಂದು ಗಾಜಾ ಪಟ್ಟಿಯ ಆರೋಗ್ಯ ಸಚಿವಾಲಯ ಹೇಳಿದೆ.

‘ತುರ್ತು ಚಿಕಿತ್ಸೆ, ಶಸ್ತ್ರಚಿಕಿತ್ಸೆ ವಿಭಾಗದಲ್ಲಿ ಕೆಲವು ಗಂಟೆಗಳ ಕಾಲ ಶೋಧ ನಡೆಸಿದರು. ರೋಗಿಗಳು, ವೈದ್ಯಕೀಯ ಸಿಬ್ಬಂದಿ ಹಾಗೂ ಆಶ್ರಯ ಪಡೆದಿರುವ ಜನರನ್ನು ವಿಚಾರಣೆ ನಡೆಸಿದರು’ ಎಂದು ಆರೋಗ್ಯ ಸಚಿವಾಲಯದ ಹಿರಿಯ ಅಧಿಕಾರಿ ಮುನೀರ್ ಅಲ್ ಬೋರ್ಷ್ ತಿಳಿಸಿದ್ದಾರೆ.

ಆದರೆ, ದಾಳಿ ವೇಳೆ ಇಸ್ರೇಲ್ ಆರೋಪಿಸಿದಂತೆ ಹಮಾಸ್ ನಿರ್ಮಿಸಿಕೊಂಡಿರುವ ಸುರಂಗ ಇರುವುದು ಪತ್ತೆಯಾಗಿಲ್ಲ. ಆದರೆ, ಎಂಆರ್‌ಐ ಪ್ರಯೋಗಾಲಯದಲ್ಲಿ ಮೂರು ಚೀಲಗಳು ದೊರೆತಿರುವುದಾಗಿ ಸೇನೆಯು ಬಿಡುಗಡೆ ಮಾಡಿರುವ ವಿಡಿಯೊದಲ್ಲಿ ಹೇಳಲಾಗಿದೆ.

ಈ ಚೀಲಗಳಲ್ಲಿ ರೈಫಲ್‌ಗಳು, ಗ್ರೆನೇಡ್‌ಗಳು ಹಾಗೂ ಬಂಡುಕೋರರ ಸಮವಸ್ತ್ರಗಳು ಇರುವುದು ಪತ್ತೆಯಾಗಿದೆ ಎಂದು ಹೇಳಿದೆ. ಆದರೆ, ಈ ಆರೋಪವನ್ನು ಖುದ್ದಾಗಿ ಪರಿಶೀಲನೆ ನಡೆಸಲು ಸಾಧ್ಯವಾಗಿಲ್ಲ ಎಂದು ಎಪಿ ಸುದ್ದಿಸಂಸ್ಥೆ ಸ್ಪಷ್ಟಪಡಿಸಿದೆ.

ಶಿಫಾಆಸ್ಪತ್ರೆಯನ್ನುಬಂಡುಕೋರರು ತಮ್ಮ ಕಾರ್ಯಾಚರಣೆಗೆ ಬಳಸಿಕೊಂಡಿದ್ದಾರೆ ಎಂದು ಆರೋಪವನ್ನು ಆರೋಗ್ಯ ಸಚಿವಾಲಯ ಅಲ್ಲಗಳೆದಿದೆ. 500 ಹಾಸಿಗೆ ಸಾಮರ್ಥ್ಯದ ಈ ಆಸ್ಪತ್ರೆಯಲ್ಲಿ 1,500 ವೈದ್ಯಕೀಯ ಸಿಬ್ಬಂದಿ ಇದ್ದಾರೆ.

ಬೇರೆಡೆ ತೆರಳಲು ಸೂಚನೆ: ಈ ನಡುವೆಯೇ ದಕ್ಷಿಣ ಗಾಜಾ ಪಟ್ಟಿಯಲ್ಲಿ ನೆಲೆಸಿರುವ ಜನರನ್ನು ಬೇರೆಡೆಗೆ ತೆರಳುವಂತೆ ಸೇನೆಯು ಕರಪತ್ರಗಳ ಮೂಲಕ ಎಚ್ಚರಿಕೆಯ ಸಂದೇಶ ನೀಡಿದೆ. ಹಾಗಾಗಿ, ವಿಶ್ವಸಂಸ್ಥೆಯ ಶಿಬಿರಗಳು ಮತ್ತು ಮನೆಗಳಲ್ಲಿ ನೆಲೆಸಿರುವ ನೂರಾರು ಜನರು ಆತಂಕಗೊಂಡಿದ್ದಾರೆ.

ಯುದ್ಧದಲ್ಲಿ 51 ಯೋಧರು ಮೃತಪಟ್ಟಿದ್ದಾರೆಎಂದುಇಸ್ರೇಲ್‌ಹೇಳಿದೆ. ಇಲ್ಲಿಯವರೆಗೆ 11,500 ಪ್ಯಾಲೆಸ್ಟೀನ್ ನಾಗರಿಕರು ಮೃತಪಟ್ಟಿದ್ದಾರೆ.

ಗಾಜಾ ಬಂದರನ್ನು ನಿಯಂತ್ರಣಕ್ಕೆ ಪಡೆದಿರುವ ತನ್ನ ಯೋಧರು ನಡೆಸುತ್ತಿರುವ ಕಾರ್ಯಾಚರಣೆಯ ಚಿತ್ರವನ್ನು ಇಸ್ರೇಲ್ ಸೇನೆಯು ಗುರುವಾರ ಬಿಡುಗಡೆ ಮಾಡಿದೆ –ಎಎಫ್‌ಪಿ ಚಿತ್ರ

ಗಾಜಾ ಬಂದರು ಮೇಲೆ ನಿಯಂತ್ರಣ

ಇಸ್ರೇಲ್ ಸೇನೆಯು ಗಾಜಾದಲ್ಲಿ ಮತ್ತಷ್ಟು ದಾಳಿಯನ್ನು ಮುಂದುವರಿಸಿದೆ. ಅಲ್ಲದೇ, ಗಾಜಾ ಬಂದರನ್ನು ನಿಯಂತ್ರಣಕ್ಕೆ ಪಡೆದಿದೆ. ಇದು ಪ್ಯಾಲೆಸ್ಟೀನ್ ಭೂ ಪ್ರದೇಶದಲ್ಲಿ ಇರುವ ಪ್ರಮುಖ ಮೂಲ ಸೌಕರ್ಯದ ನೆಲೆಯಾಗಿದೆ.

‘ಈ ಬಂದರು ಪ್ರದೇಶವು ಹಮಾಸ್ ಆಡಳಿತ ನಿಯಂತ್ರಣದಲ್ಲಿತ್ತು. ಬಂದರಿನಲ್ಲಿ ಇರುವ ಎಲ್ಲಾ ಕಟ್ಟಡಗಳನ್ನು ತೆರವುಗೊಳಿಸಲಾಗಿದೆ’ ಎಂದು ಸೇನೆ ಹೇಳಿದೆ.

ಹಮಾಸ್ ನಾಯಕನ ಮನೆ ಧ್ವಂಸ

ಗಾಜಾದಲ್ಲಿ ಇರುವ ಹಮಾಸ್ ನಾಯಕ ಇಸ್ಮಾಯಿಲ್ ಹನಿಯೆಹ್‌ಗೆ ಸೇರಿದ ಮನೆಯು ವಾಯುದಾಳಿಗೆ ಧ್ವಂಸಗೊಂಡಿದೆ.

‘ಈ ಮನೆಯನ್ನು ಬಂಡುಕೋರರಿಗೆ ಮೂಲ ಸೌಕರ್ಯ ಕಲ್ಪಿಸಲು ಬಳಸಿಕೊಳ್ಳಲಾಗುತ್ತಿತ್ತು. ಇಸ್ರೇಲ್ ನಾಗರಿಕರು ಮತ್ತು ಸೇನೆ ಮೇಲೆ ದಾಳಿ ನಡೆಸುವುದಕ್ಕೂ ಮೊದಲು ಹಮಾಸ್‌ನ ಅತ್ಯುನ್ನತ ನಾಯಕರು ಇಲ್ಲಿಯೇ ಸಭೆ ನಡೆಸುತ್ತಿದ್ದರು’ ಎಂದು ಸೇನೆ ಆರೋಪಿಸಿದೆ.

ಮಾನವೀಯ ವಿರಾಮಕ್ಕೆ ಭದ್ರತಾ ಮಂಡಳಿ ನಿರ್ಣಯ

ಜೆರುಸಲೇಂ (ಎಪಿ): ಮಾನವೀಯ ದೃಷ್ಟಿಯಿಂದ ಯುದ್ಧಕ್ಕೆ ವಿರಾಮ ನೀಡುವ ಸಂಬಂಧ ಒತ್ತಡ ಹೇರಲು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಬುಧವಾರ ಮಂಡಿಸಿದ ನಿರ್ಣಯದ ಪರ 12 ದೇಶಗಳು ಮತ ಚಲಾಯಿಸಿವೆ.

‘ತುರ್ತಾಗಿ ಮಾನವೀಯ ವಿರಾಮದ ವಿಸ್ತರಣೆ ಹಾಗೂ ಸೌಕರ್ಯ ಕಲ್ಪಿಸಲು ಕಾರಿಡಾರ್ ನಿರ್ಮಾಣ’ ಎಂಬ ಶೀರ್ಷಿಕೆಯಡಿ ಕರಡು ನಿರ್ಣಯ ಮಂಡಿಸಲಾಗಿತ್ತು. ನಾಲ್ಕನೇ ಬಾರಿ ಮಂಡಿಸಿರುವ ಈ ನಿರ್ಣಯಕ್ಕೆ ಬಹುಮತ ದೊರೆತಿದೆ. ಆದರೆ, ಈ ನಿರ್ಣಯದಿಂದ ಅಮೆರಿಕ, ಬ್ರಿಟನ್ ಹಾಗೂ ರಷ್ಯಾ ದೂರ ಉಳಿದಿವೆ.

ಹಮಾಸ್ ಸೇರಿದಂತೆ ಇತರೆ ಸಂಘಟನೆಗಳ ನಿಯಂತ್ರಣದಲ್ಲಿರುವ ಒತ್ತೆಯಾಳುಗಳನ್ನು ತಕ್ಷಣವೇ ಬಿಡುಗಡೆಗೊಳಿಸಬೇಕು ಎಂದು ನಿರ್ಣಯದಲ್ಲಿ ಹೇಳಲಾಗಿದೆ. ಆದರೆ, ಯುದ್ಧ ವಿರಾಮ ಅಥವಾ ಇಸ್ರೇಲ್ ಮೇಲೆ ಹಮಾಸ್ ನಡೆಸಿದ ದಾಳಿ ಬಗ್ಗೆ ಎಲ್ಲಿಯೂ ಉಲ್ಲೇಖಿಸಿಲ್ಲ.ಭದ್ರತಾ ಮಂಡಳಿ ಕೈಗೊಳ್ಳುವ ನಿರ್ಣಯವು ಕಾನೂನುಬದ್ಧವಾಗಿರುತ್ತದೆ. ಆದರೆ, ಬಹಳಷ್ಟು ದೇಶಗಳು ಮಂಡಳಿಯ ನಿರ್ಣಯವನ್ನು ಅಲಕ್ಷ್ಯ ಮಾಡುತ್ತವೆ.

ಕಾಶ್ಮೀರ ಮಹಿಳೆ ಸುರಕ್ಷಿತ ಸ್ಥಳಾಂತರ

ಜೆರುಸಲೇಂ/ ಕೈರೊ (ಪಿಟಿಐ): ಯುದ್ಧ ಪೀಡಿತ ಗಾಜಾ ಪಟ್ಟಿಯಲ್ಲಿ ಸಿಲುಕಿದ್ದ ಕಾಶ್ಮೀರದ ಮಹಿಳೆಯನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗಿದೆ.

ಭಾರತದ ರಾಜತಾಂತ್ರಿಕ ತಂಡದ ಸಹಾಯದಿಂದ ರಕ್ಷಿಸಿರುವ ಲುಬ್ನಾ ನಜೀರ್ ಶಾಬೂ ಅವರು ತಾಯ್ನಾಡಿಗೆ ಮರಳಲು ಎದುರು ನೋಡುತ್ತಿದ್ದಾರೆ. ಲುಬ್ನಾ ಹಾಗೂ ಆಕೆಯ ಪುತ್ರಿ ಕರಿಮಾ ಅವರು, ರಫಾ ಗಡಿಯ ಮೂಲಕ ಈಜಿಪ್ಟ್‌ನ ರಾಜಧಾನಿ ಕೈರೊಗೆ ತಲುಪಿದ್ದಾರೆ.

‘ನಾನು ಸುರಕ್ಷಿತವಾಗಿದ್ದೇನೆ. ಕಾಶ್ಮೀರಕ್ಕೆ ವಾಪಸ್ ಮರಳಲು ಸಿದ್ಧಳಾಗಿದ್ದೇನೆ’ ಎಂದು ಲುಬ್ನಾ ಅವರು, ಪಿಟಿಐ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮುಖ್ಯಾಂಶಗಳು

- ವೈದ್ಯಕೀಯ ಸೌಲಭ್ಯ ಇಲ್ಲದೆ ನವಜಾತ ಶಿಶುಗಳು, ರೋಗಿಗಳ ಪರದಾಟ
- ಯಂತ್ರೋಪಕರಣಗಳ ಉಸ್ತುವಾರಿ ಹೊತ್ತ ಸಿಬ್ಬಂದಿ ವಿಚಾರಣೆ
- ಹಮಾಸ್‌ನ ಕಮಾಂಡೊ ನೆಲೆ ಇರುವ ಬಗ್ಗೆ ಪುರಾವೆ ನೀಡದ ಇಸ್ರೇಲ್



ಏಕದಿನ ಕ್ರಿಕೆಟ್ ವಿಶ್ವಕಪ್ – 2023

'ಚೋಕರ್ಸ್' ಪಟ್ಟದಿಂದ ಹೊರಬರದ ದಕ್ಷಿಣ ಆಫ್ರಿಕಾ • ಮಿಲ್ಲರ್ ಶತಕ • ಕಮಿನ್ಸ್, ಹ್ಯಾಜಲ್‌ವುಡ್ ಅಮೋಘ ಬೌಲಿಂಗ್

ಫೈನಲ್‌ನಲ್ಲಿ ಭಾರತ-ಆಸ್ಟ್ರೇಲಿಯಾ ಸೆಣಸು

ಪ್ರಜಾವಾಣಿ ವಾರ್ತೆ

ಕೋಲ್ಕತ್ತ: ಐದು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾ ತಂಡವು ಭಾನುವಾರ ಅಹಮದಾಬಾದಿನಲ್ಲಿ ನಡೆಯಲಿರುವ ಈ ಬಾರಿಯ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಭಾರತ ತಂಡವನ್ನು ಎದುರಿಸಲಿದೆ.

ಈಡನ್ ಗಾರ್ಡನ್ಸ್‌ನಲ್ಲಿ ಗುರುವಾರ ನಡೆದ ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾದ ಎದುರು 3 ವಿಕೆಟ್‌ಗಳಿಂದ ಸೋತ ದಕ್ಷಿಣ ಆಫ್ರಿಕಾ ತಂಡವು ತನ್ನ 'ಚೋಕರ್ಸ್' ಪಟ್ಟ ಉಳಿಸಿಕೊಂಡಿತು!

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ದಕ್ಷಿಣ ಆಫ್ರಿಕಾ ತಂಡದ ಅಗ್ರಕ್ರಮಾಂಕದ ಬ್ಯಾಟರ್‌ಗಳು ಇಲ್ಲಿ ವೈಫಲ್ಯ ಅನುಭವಿಸಿದರು. ಟೂರ್ನಿಯುದ್ದಕ್ಕೂ ರನ್‌ಗಳ ಹೊಳೆ ಹರಿಸಿದ್ದವರೆಲ್ಲರೂ ಪ್ಯಾಟ್ ಕಮಿನ್ಸ್ ಮತ್ತು ಜೋಷ್ ಹ್ಯಾಜಲ್‌ವುಡ್ ಅವರ ವೇಗದ ದಾಳಿಗೆ ಶರಣಾದರು. 12 ಓವರ್‌ಗಳಲ್ಲಿ 24 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡ ತಂಡವು ಅಲ್ಪಮೊತ್ತಕ್ಕೆ ಕುಸಿಯುವ ಆತಂಕ ಎದುರಿಸಿತು.

ಆದರೆ ಡೇವಿಡ್ ಮಿಲ್ಲರ್ (101; 116ಎ) ಶತಕದ ನೆರವಿನಿಂದ ತಂಡವು 49.4 ಓವರ್‌ಗಳಲ್ಲಿ 212 ರನ್‌ಗಳ ಮೊತ್ತ ಗಳಿಸಿತು. ಈ ಮೊತ್ತವನ್ನು ರಕ್ಷಿಸಿಕೊಂಡು ತಮ್ಮ ತಂಡವನ್ನು ಮೊದಲ ಬಾರಿಗೆ ವಿಶ್ವಕಪ್ ಫೈನಲ್‌ಗೆ ತೆಗೆದುಕೊಂಡು ಹೋಗಲು ದಕ್ಷಿಣ ಆಫ್ರಿಕಾ ಬೌಲರ್‌ಗಳು ಮಾಡಿದ ಪ್ರಯತ್ನಕ್ಕೆ ಗೆಲುವಿನ ಗೌರವ ದೊರೆಯಲಿಲ್ಲ. ಇದರಿಂದಾಗಿ ಎಚ್ಚರಿಕೆಯಿಂದ ಆಡಿದ ಆಸ್ಟ್ರೇಲಿಯಾ ತಂಡವು 47.2 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 215 ರನ್ ಗಳಿಸಿತು.

ಆರಂಭಿಕ ಬ್ಯಾಟರ್ ಟ್ರಾವಿಸ್ ಹೆಡ್ (62; 48ಎ, 4X9, 6X2) ಮತ್ತು ಡೇವಿಡ್ ವಾರ್ನರ್ (29; 18ಎ) ಮೊದಲ ವಿಕೆಟ್‌ಗೆ 60 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಈ ರನ್‌ಗಳು ಆರು ಓವರ್‌ಗಳಲ್ಲಿ ಬಂದವು.

ಆದರೆ ದಕ್ಷಿಣ ಆಫ್ರಿಕಾದ ಸ್ಪಿನ್ನರ್‌ಗಳಾದ ಕೇಶವ ಮಹಾರಾಜ್, ತಬ್ರೇಜ್ ಶಂಸಿ, ಏಡನ್ ಮರ್ಕರಂ ಮತ್ತು ವೇಗಿ ಜೆರಾಲ್ಡ್ ಕೋಜಿ ಅವರ ಶಿಸ್ತಿನ ದಾಳಿಯಿಂದಾಗಿ ಆಸ್ಟ್ರೇಲಿಯಾ ವಿಕೆಟ್‌ಗಳು ಪತನವಾಗತೊಡಗಿದವು. ಆಗ ಬ್ಯಾಟರ್‌ಗಳು ರನ್ ಗಳಿಕೆಯ ವೇಗಕ್ಕೆ ಕಡಿವಾಣ ಹಾಕಿದರು.

ಇದರಿಂದಾಗಿ 23.4 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 137 ರನ್ ಗಳಿಸಿದ್ದ ಆಸ್ಟ್ರೇಲಿಯಾ ತಂಡದ ಬ್ಯಾಟರ್‌ಗಳು ನಂತರದ 78 ರನ್ ಸೇರಿಸಲು ಅಷ್ಟೇ ಓವರ್‌ಗಳನ್ನು ಆಡಬೇಕಾಯಿತು.

ಡೇವಿಡ್ ಮಿಲ್ಲರ್ ಶತಕ: ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ ಮತ್ತು ಜೋಷ್ ಹ್ಯಾಜಲ್‌ವುಡ್ ಅವರ ದಾಳಿಯ ಮುಂದೆ ದಕ್ಷಿಣ ಆಫ್ರಿಕಾದ ಅಗ್ರ ಬ್ಯಾಟರ್‌ಗಳಾದ ಕ್ವಿಂಟನ್ ಡಿ ಕಾಕ್ (3 ರನ್), ರೆಸಿ ವ್ಯಾನ್ ಡೆರ್ ಡಸೆ (6 ರನ್), ಏಡನ್ ಮರ್ಕರಂ (10) ಬೇಗನೆ ಔಟಾದರು. ನಾಯಕ ತೆಂಬಾ ಬವುಮಾ ಈ ಪಂದ್ಯದಲ್ಲಿಯೂ ಫಾರ್ಮ್ ಕಂಡುಕೊಳ್ಳಲಿಲ್ಲ. ಖಾತೆಯನ್ನೂ ತೆರೆಯಲಿಲ್ಲ.

ಇಂತಹ ಪರಿಸ್ಥಿತಿಯಲ್ಲಿಯೂ ಮಿಲ್ಲರ್ ಬ್ಯಾಟ್ ಬೀಸಿದರು. ಹ್ಯಾಜಲ್‌ವುಡ್ ಬೌಲಿಂಗ್‌ನಲ್ಲಿ ಕೈಬೆರಳಿಗೆ ಚೆಂಡು ಅಪ್ಪಳಿಸಿ ನೋವು ಅನುಭವಿಸಿದರೂ ಮಿಲ್ಲರ್ ಜಗ್ಗಲಿಲ್ಲ. ಏಕದಿನ ಕ್ರಿಕೆಟ್‌ನಲ್ಲಿ ಆರನೇ ಶತಕ ದಾಖಲಿಸಿದರು.

ಅದರಲ್ಲೂ ಆಸ್ಟ್ರೇಲಿಯಾದ ಯಶಸ್ವಿ ಸ್ಪಿನ್ನರ್ ಆ್ಯಡಂ ಜಂಪಾ ಅವರನ್ನು ಹೆಚ್ಚು ದಂಡಿಸಿದರು. ಪ್ಯಾಟ್ ಕಮಿನ್ಸ್ ಎಸೆತದಲ್ಲಿ 94 ಮೀಟರ್ ಎತ್ತರದ ಸಿಕ್ಸರ್ ಎತ್ತಿದರು. ಹೆನ್ರಿಚ್ ಕ್ಲಾಸನ್ (47 ರನ್) ಅವರೊಂದಿಗಿನ ಜೊತೆಯಾಟದಲ್ಲಿ 95 ರನ್ ಸೇರಿಸಿದರು. ಮಿಲ್ಲರ್ 48ನೇ ಓವರ್‌ನಲ್ಲಿ ಪ್ಯಾಟ್ ಕಮಿನ್ಸ್ ಎಸೆತದಲ್ಲಿ ಔಟಾದರು.

ಮಳೆಯಿಂದಾಗಿ 40 ನಿಮಿಷಗಳ ಕಾಲ ಆಟ ಸ್ಥಗಿತವಾಗಿತ್ತು.

ವಿಕೆಟ್ ಪಡೆದ ಆಸ್ಟ್ರೇಲಿಯಾದ ಮಿಚೆಲ್ ಸ್ಟಾರ್ಕ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪಿಟಿಐ ಚಿತ್ರ

ಅಗ್ರ ಐವರು

ಬ್ಯಾಟಿಂಗ್

ವಿರಾಟ್ ಕೊಹ್ಲಿ (ಭಾರತ)	711
ಕ್ವಿಂಟನ್ ಡಿ ಕಾಕ್ (ದಕ್ಷಿಣ ಆಫ್ರಿಕಾ)	594
ರಚಿನ್ ರವೀಂದ್ರ (ನ್ಯೂಜಿಲೆಂಡ್)	578
ಡೇರಿಲ್ ಮಿಚೆಲ್ (ನ್ಯೂಜಿಲೆಂಡ್)	552
ರೋಹಿತ್ ಶರ್ಮಾ (ಭಾರತ)	550

ಬೌಲಿಂಗ್

ಮೊಹಮ್ಮದ್ ಶಮಿ (ಭಾರತ)	23
ಆ್ಯಡಮ್ ಜಂಪಾ (ಆಸ್ಟ್ರೇಲಿಯಾ)	22
ದಿಲ್ಶಾನ್ ಮಧುಶಂಕ (ಶ್ರೀಲಂಕಾ)	21
ಜೆರಾಲ್ಡ್ ಕೋಜಿ (ದಕ್ಷಿಣ ಆಫ್ರಿಕಾ)	20
ಜಸ್‌ಪ್ರೀತ್ ಬೂಮ್ರಾ (ಭಾರತ)	18

ಸ್ಕೋರ್ ಕಾರ್ಡ್

ದಕ್ಷಿಣ ಆಫ್ರಿಕಾ 212 (49.4 ಓವರ್)

ಡಿ ಕಾಕ್ ಸಿ ಕಮಿನ್ಸ್ ಬಿ ಹ್ಯಾಜಲ್‌ವುಡ್ 3 (14 ಎ)
ಬವುಮಾ ಸಿ ಇಂಗ್ಲಿಸ್ ಬಿ ಸ್ಟಾರ್ಕ್ 0 (4 ಎ)
ಡಸೆ ಸಿ ಸ್ಮಿತ್ ಬಿ ಹ್ಯಾಜಲ್‌ವುಡ್ 6 (31 ಎ)
ಮರ್ಕರಂ ಸಿ ವಾರ್ನರ್ ಬಿ ಸ್ಟಾರ್ಕ್ 10 (20 ಎ., 4X2)
ಕ್ಲಾಸನ್ ಬಿ ಹೆಡ್ 47 (48 ಎ., 4X4, 6X2)
ಮಿಲ್ಲರ್ ಸಿ ಹೆಡ್ ಬಿ ಕಮಿನ್ಸ್ 101 (116 ಎ., 4X8, 6X5)
ಯಾನ್ಸನ್ ಎಲ್‌ಬಿಡಬ್ಲ್ಯು ಬಿ ಹೆಡ್ 0 (1 ಎ)
ಕೋಜಿ ಸಿ ಇಂಗ್ಲಿಸ್ ಬಿ ಕಮಿನ್ಸ್ 19 (39 ಎ., 4X2)
ಕೇಶವ್ ಸಿ ಸ್ಮಿತ್ ಬಿ ಸ್ಟಾರ್ಕ್ 4 (8 ಎ)
ರಬಾಡ ಸಿ ಮ್ಯಾಕ್ಸ್‌ವೆಲ್ ಬಿ 10 (12 ಎ., 6X1)
ಶಮ್ಸಿ ಔಟಾಗದೆ 1 (5 ಎ)
ಇತರೆ: 11 (ಲೆಗ್‌ಬೈ 4, ವೈಡ್ 7)
ವಿಕೆಟ್ ಪತನ: 1–1 (ತೆಂಬಾ ಬವುಮಾ; 0.6), 2–8 (ಕ್ವಿಂಟನ್ ಡಿ ಕಾಕ್; 5.4), 3–22 (ಏಡನ್ ಮರ್ಕರಂ; 10.5), 4–24 (ರಸಿ ವ್ಯಾನ್ ಡೆರ್ ಡಸೆ; 11.5), 5–119 (ಹೆನ್ರಿಚ್ ಕ್ಲಾಸೆನ್; 30.4), 6–119 (ಮಾರ್ಕೊ ಯಾನ್ಸನ್; 30.5), 7–172 (ಜೆರಾಲ್ಡ್ ಕೋಜಿ; 43.3), 8–191 (ಕೇಶವ್ ಮಹಾರಾಜ್; 46.2), 9–203 (ಡೇವಿಡ್ ಮಿಲ್ಲರ್; 47.2), 10–212 (ಕಗಿಸೊ ರಬಾಡ; 49.4)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 10–1–34–3, ಜೋಶ್ ಹ್ಯಾಜಲ್‌ವುಡ್ 8–3–12–2, ಪ್ಯಾಟ್ ಕಮಿನ್ಸ್ 9.4–0–51–3, ಆ್ಯಡಮ್ ಜಂಪಾ 7–0–55–0, ಗ್ಲೆನ್ ಮ್ಯಾಕ್ಸ್‌ವೆಲ್ 10–0–35–0, ಟ್ರಾವಿಸ್ ಹೆಡ್ 5–0–21–2

ಆಸ್ಟ್ರೇಲಿಯಾ 7ಕ್ಕೆ 215 (47.2 ಓವರ್)

ಹೆಡ್ ಬಿ ಮಹಾರಾಜ್ 62 (48 ಎ., 4X9, 6X2)
ವಾರ್ನರ್ ಬಿ ಮರ್ಕರಂ 29 (18 ಎ., 4X1, 6X4)
ಮಾರ್ಷ್ ಸಿ ಡಸೆ ಬಿ ರಬಾಡ 0 (6 ಎ)
ಸ್ಮಿತ್ ಸಿ ಡಿ ಕಾಕ್ ಬಿ ಕೋಜಿ 30 (62 ಎ., 4X2)
ಲಾಬುಷೇನ್ ಎಲ್‌ಬಿಡಬ್ಲ್ಯು ಬಿ ಶಮ್ಸಿ 18 (31 ಎ., 4X2)
ಮ್ಯಾಕ್ಸ್‌ವೆಲ್ ಬಿ ಶಮ್ಸಿ 1 (5 ಎ)
ಇಂಗ್ಲಿಸ್ ಬಿ ಕೋಜಿ 28 (49 ಎ., 4X3)
ಸ್ಟಾರ್ಕ್ ಔಟಾಗದೆ 16 (38 ಎ., 4X2)
ಕಮಿನ್ಸ್ ಔಟಾಗದೆ 14 (29 ಎ., 4X2)
ಇತರೆ: 17 (ಲೆಗ್ ಬೈ 3, ನೋಬಾಲ್ 2, ವೈಡ್ 12)
ವಿಕೆಟ್ ಪತನ: 1–60 (ಡೇವಿಡ್ ವಾರ್ನರ್; 6.1), 2–61 (ಮಿಚೆಲ್ ಮಾರ್ಷ್; 7.4), 3–106 (ಟ್ರಾವಿಸ್ ಹೆಡ್; 14.1), 4–133 (ಮಾರ್ನಸ್ ಲಾಬುಷೇನ್; 21.5), 5–137 (ಗ್ಲೆನ್ ಮ್ಯಾಕ್ಸ್‌ವೆಲ್; 23.4), 6–174 (ಸ್ಟೀವನ್ ಸ್ಮಿತ್; 33.3), 7–193 (ಜೋಶ್ ಇಂಗ್ಲಿಸ್; 39.5)
ಬೌಲಿಂಗ್: ಮಾರ್ಕೊ ಯಾನ್ಸನ್ 4.2–0–35–0, ಕಗಿಸೊ ರಬಾಡ 6–0–41–1, ಏಡನ್ ಮರ್ಕರಂ 8–1–23–1, ಜೆರಾಲ್ಡ್ ಕೋಜಿ 9–0–47–2, ತಬ್ರೇಜ್ ಶಮ್ಸಿ 10–0–42–2, ಕೇಶವ್ ಮಹಾರಾಜ್ 10–0–24–1
ಪಂದ್ಯಶ್ರೇಷ್ಠ: ಟ್ರಾವಿಸ್ ಹೆಡ್

ಫಲಿತಾಂಶ: ಆಸ್ಟ್ರೇಲಿಯಾಕ್ಕೆ 3 ವಿಕೆಟ್ ಜಯ

ಎರಡನೇ ಬಾರಿ ಮುಖಾಮುಖಿ

ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳು ಎರಡನೇ ಬಾರಿ ಎದುರಾಗಲಿವೆ.

2003 ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಟೂರ್ನಿಯ ಫೈನಲ್‌ನಲ್ಲಿ ಉಭಯ ತಂಡಗಳು ಹಣಾಹಣಿ ನಡೆಸಿದ್ದವು. ಜೊಹಾನೆಸ್‌ಬರ್ಗ್‌ನ ವಾಂಡರರ್ಸ್ ಕ್ರೀಡಾಂಗಣದಲ್ಲಿ ಅಂದು ನಡೆದಿದ್ದ ಫೈನಲ್‌ನಲ್ಲಿ ರಿಕಿ ಪಾಂಟಿಂಗ್ ನೇತೃತ್ವದ ಆಸ್ಟ್ರೇಲಿಯಾ, ಸೌರವ್ ಗಂಗೂಲಿ ಸಾರಥ್ಯದ ಭಾರತ ತಂಡವನ್ನು 125 ರನ್‌ಗಳಿಂದ ಮಣಿಸಿ ಚಾಂಪಿಯನ್ ಆಗಿತ್ತು.

ಮೊದಲು ಬ್ಯಾಟ್ ಮಾಡಿದ್ದ ಆಸ್ಟ್ರೇಲಿಯಾ 2 ವಿಕೆಟ್‌ಗಳಿಗೆ 359 ರನ್ ಗಳಿಸಿದ್ದರೆ, ಭಾರತ 39.2 ಓವರ್‌ಗಳಲ್ಲಿ 234 ರನ್‌ಗಳಿಗೆ ಆಲೌಟಾಗಿತ್ತು.

ಎರಡು ದಶಕಗಳ ಹಿಂದೆ ಪ್ರಶಸ್ತಿ ಸುತ್ತಿನ ಹಣಾಹಣಿಯಲ್ಲಿ ಎದುರಾಗಿದ್ದ ಸೋಲಿಗೆ ಮುಯ್ಯಿ ತೀರಿಸುವ ಅವಕಾಶ ಭಾರತಕ್ಕೆ ಈ ಬಾರಿ ಲಭಿಸಿದೆ.

'ತೆಂಡೂಲ್ಕರ್ ಶತಕಗಳ ದಾಖಲೆ ಮುರಿಯಲೂ ಕೊಹ್ಲಿ ಸಮರ್ಥ'



ರವಿಶಾಸ್ತ್ರಿ

ಮುಂಬೈ (ಪಿಟಿಐ): ಭಾರತದ ವಿರಾಟ್ ಕೊಹ್ಲಿ ಅವರು ಏಕದಿನ ಕ್ರಿಕೆಟ್ ನಲ್ಲಿ ಅತಿ ಹೆಚ್ಚು ಶತಕ ಗಳನ್ನು ಹೊಡೆದ ದಾಖಲೆಯನ್ನು ಈಗ ಹೊಂದಿರಬಹುದು. ಆದರೆ, ಅವರು ಸಚಿನ್ ತೆಂಡೂಲ್ಕರ್ ಹೆಸರಿನಲ್ಲಿರುವ ಇನ್ನೊಂದು ಮೈಲಿಗಲ್ಲನ್ನೂ (ನೂರು ಅಂತರರಾಷ್ಟ್ರೀಯ ಶತಕಗಳ ದಾಖಲೆ) ಮುರಿಯುವ ಹಾದಿಯಲ್ಲಿದ್ದಾರೆ.....

– ಇದು ಭಾರತ ತಂಡದ ಮಾಜಿ ಕೋಚ್ ರವಿಶಾಸ್ತ್ರಿ ಅವರ ದೃಢನಂಬಿಕೆ.

ಏಕದಿನ ಕ್ರಿಕೆಟ್‌ನಲ್ಲಿ 50 ಶತಕ ಗಳನ್ನು ಬಾರಿಸಿರುವ ಕೊಹ್ಲಿ, ಟೆಸ್ಟ್‌ನಲ್ಲಿ 29 ಶತಕಗಳನ್ನು ಹೊಡೆದಿದ್ದಾರೆ. ಟಿ–20ಯಲ್ಲಿ ಒಂದು ಶತಕ ಅವರ ಹೆಸರಿನಲ್ಲಿದೆ. 35 ವರ್ಷದ ಕೊಹ್ಲಿ, ಬುಧವಾರ ವಿಶ್ವಕಪ್ ಕ್ರಿಕೆಟ್ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಶತಕ ಬಾರಿಸಿ ತೆಂಡೂಲ್ಕರ್ ಅವರ ಹೆಸರಿನಲ್ಲಿದ್ದ 49 ಶತಕಗಳ ದಾಖಲೆ ಮುರಿದಿದ್ದರು.

'ಸಚಿನ್ ನೂರನೇ ಶತಕ ಬಾರಿಸಿದಾಗ, ಯಾರಾದರೂ ಅದರ ಸಮೀಪ ಸುಳಿಯಬಹುದೆಂಬ ಯೋಚನೆ ಮಾಡಲು ಸಾಧ್ಯವಿತ್ತೇ? ವಿರಾಟ್ ಈಗ (ಒಟ್ಟು) 80 ಶತಕಗಳನ್ನು ಬಾರಿಸಿದ್ದಾರೆ. ಇದರಲ್ಲಿ 50 ಏಕದಿನ ಕ್ರಿಕೆಟ್‌ನಲ್ಲೇ ಬಂದಿವೆ. ನಂಬಲಸಾಧ್ಯ' ಎಂದು ಶಾಸ್ತ್ರಿ ಅವರು 'ಐಸಿಸಿ ರಿವ್ಯೂ' ಕಾರ್ಯಕ್ರಮದ ಸಂದರ್ಭದಲ್ಲಿ ಶ್ಲಾಘಿಸಿದರು.

ಹಾಕಿ: ರಾಜ್ಯ ತಂಡಕ್ಕೆ ಶೇಷೇಗೌಡ ಸಾರಥ್ಯ

ಬೆಂಗಳೂರು: ಬಿ.ಎಂ. ಶೇಷೇಗೌಡ ಅವರು ಇದೇ 17ರಿಂದ 28ರವರೆಗೆ ಚೆನ್ನೈನಲ್ಲಿ ನಡೆಯಲಿರುವ 13ನೇ ಹಾಕಿ ಇಂಡಿಯಾ ಪುರುಷರ ರಾಷ್ಟ್ರೀಯ ಚಾಂಪಿಯನ್‌ಶಿಪ್ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಮುನ್ನಡೆಸಲಿದ್ದಾರೆ.

ಕರ್ನಾಟಕ ತಂಡವು 'ಸಿ' ಗುಂಪಿನಲ್ಲಿದೆ. ಬಿಹಾರ, ದಾದ್ರಾ–ನಗರ ಹವೇಲಿ ಮತ್ತು ಡಾಮನ್ –ಡಿಯು ಈ ಗುಂಪಿನಲ್ಲಿರುವ ಇತರ ತಂಡಗಳು

ತಂಡ ಹೀಗಿದೆ: ಎ.ಎಚ್. ದೀಕ್ಷಿತ್ ಶೇಷೇಗೌಡ ಬಿ.ಎಂ (ನಾಯಕ), ಮೊಹಮ್ಮದ್ ರಹೀಲ್ (ಉಪನಾಯಕ), ಎಂ. ಹರೀಶ್, ಎಂ.ಕೆ. ಭರತ್, ಬಿ. ಆಭರನ್ ಸುದೇವ್, ಮಜ್ಜಿ ಗಣೇಶ್, ಎನ್.ಎಂ. ಸೂರ್ಯ, ಎಂ.ಎ. ಜಗದೀಪ್ ದಯಾಳಶಾನ್ ಮೋನಪ್ಪ, ಐ.ಆರ್. ನಾಚಪ್ಪ, ಕೆ.ಎಂ.ಅದ್ವೈತ್ ನಾಚಪ್ಪ, ಬಿ.ಎಂ. ಲಿಖಿತ್, ಎನ್.ಜಿ. ಸೋಮಯ್ಯ, ಎಚ್.ಆರ್. ಸಾತ್ವಿಕ್, ಬಿ.ಎನ್. ಚೆಲ್ಸಿಯಾ ಮೇದಪ್ಪ, ಬಿ. ಯತೀಶ್ ಕುಮಾರ್, ಎಂ.ಕೆ. ಚೇತನ್. ಕೆ.ಕೆ. ಪೂಣಚ್ಚ, ಕೆ.ಸಿ. ಗಣಪತಿ (ಕೋಚ್‌ಗಳು), ಆರ್.ಡಿ. ಬಸವರಾಜ್ (ಫಿಟ್‌ನೆಸ್ ತರಬೇತುದಾರ), ಮಾಯಾನಕ್ ಭೋಯಿ (ಫಿಜಿಯೊ)

ಮೊಹಮ್ಮದ್ ಶಮಿ ವೃತ್ತಿಜೀವನದ 100ನೇ ಏಕದಿನ ಪಂದ್ಯಕ್ಕೆ ಶ್ರೇಷ್ಠ ಪಟ್ಟ

ದುಃಖ, ದುಮ್ಮಾನಗಳ ಬೆಂಕಿಯಲ್ಲಿ ಅರಳಿದ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಮುಂಬೈ: ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ಆಟಗಾರ ಕೇನ್ ವಿಲಿಯಮ್ಸನ್ ಅವರ ಕ್ಯಾಚ್ ಕೈಚೆಲ್ಲಿದ ಮೊಹಮ್ಮದ್ ಶಮಿ ಭಾರತದ ಕೈಯಿಂದ ಗೆಲುವು ಕೈಜಾರದಂತೆ ನೋಡಿಕೊಂಡರು. ಅಲ್ಲದೇ ತಮ್ಮ ವೃತ್ತಿಜೀವನದ ನೂರನೇ ಏಕದಿನ ಕ್ರಿಕೆಟ್ ಪಂದ್ಯವನ್ನೂ ಅವಿಸ್ಮರಣೀಯಗೊಳಿಸಿಕೊಂಡರು.

ಈ ಪಂದ್ಯದಲ್ಲಿ ಅವರು ಒಟ್ಟು ಏಳು ವಿಕೆಟ್ ಗಳಿಸಿ (9.5–0–57–7) ಶ್ರೇಷ್ಠ ಆಟಗಾರ ಗೌರವಕ್ಕೆ ಪಾತ್ರರಾದರು. ಅಲ್ಲದೇ ಇದು ಅವರ ಏಕದಿನ ಕ್ರಿಕೆಟ್‌ನ ವೈಯಕ್ತಿಕ ಶ್ರೇಷ್ಠ ಬೌಲಿಂಗ್ ಸಾಧನೆಯೂ ಆಗಿದೆ. ವಿಶ್ವಕಪ್ ಸೆಮಿಫೈನಲ್‌ನಂತಹ ದೊಡ್ಡ ವೇದಿಕೆಯಲ್ಲಿ ಈ ಸಾಧನೆ ಮೂಡಿಬಂದಿದ್ದು ವಿಶೇಷ.

ಶಮಿ ಇನಿಂಗ್ಸ್‌ನ ಆರನೇ ಓವರ್ ಬೌಲಿಂಗ್ ಮಾಡಲು ಬರುವ ಮುನ್ನ ಡೆವೊನ್ ಕಾನ್ವೆ ಮತ್ತು ರಚಿನ್ ರವೀಂದ್ರ ಉತ್ತಮ ಆರಂಭ ನೀಡುವತ್ತ ದಿಟ್ಟ ಹೆಜ್ಜೆ ಇಟ್ಟಿದ್ದರು. 398 ರನ್‌ಗಳ ಬೃಹತ್ ಗುರಿಯೊಡ್ಡಿಯೂ ಆರಂಭಿಕ ವಿಕೆಟ್ ಪಡೆಯಲು ಸಾಧ್ಯವಾಗದ ನಿರಾಸೆ ನಾಯಕ ರೋಹಿತ್ ಶರ್ಮಾ ಅವರ ಮುಖದಲ್ಲಿ ಕಾಣುತ್ತಿತ್ತು. ಏಕೆಂದರೆ ಜಸ್‌ಪ್ರೀತ್ ಬೂಮ್ರಾ ಮತ್ತು ಸಿರಾಜ್ ತುಟ್ಟಿಯಾಗಿದ್ದರು. ವೈಡ್‌ಗಳು, ಓವರ್‌ಥ್ರೋಗಳಿಂದಲೂ ಯಥೇಚ್ಛ ರನ್‌ಗಳು ಹರಿದುಹೋಗಿದ್ದವು. ಈ ಹೊತ್ತಿನಲ್ಲಿ ಶಮಿ ಎಸೆತಗಳು ಎದುರಾಳಿ ಬ್ಯಾಟರ್‌ಗಳನ್ನು ನಿಖರವಾಗಿ ಬೇಟೆಯಾಡಿದವು. ತಮ್ಮ ನಾಯಕನಷ್ಟೇ ಅಲ್ಲ. ಭಾರತ ಕ್ರಿಕೆಟ್ ತಂಡದ ಕೋಟ್ಯಂತರ ಅಭಿಮಾನಿಗಳೂ ಸಂತಸದ ಹೊನಲಲ್ಲಿ ತೇಲುವಂತೆ ಮಾಡಿದರು.

ಈ ವಿಶ್ವಕಪ್ ಟೂರ್ನಿಯಲ್ಲಿ ಅವರು ಆಡಿದ ಆರು ಪಂದ್ಯಗಳಿಂದ 23 ವಿಕೆಟ್ ಗಳಿಸಿ ಬೌಲರ್‌ಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ. ಟೂರ್ನಿಯ ಮೊದಲ ನಾಲ್ಕು ಪಂದ್ಯಗಳಲ್ಲಿ ಶಮಿ ಅಂತಿಮ ಹನ್ನೊಂದರ ಬಳಗದಲ್ಲಿ ಸ್ಥಾನವನ್ನೇ ಪಡೆದಿರಲಿಲ್ಲ. ಎಂಟನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ಅವರನ್ನು ಆಡಿಸಲಾಗಿತ್ತು. ಅದಕ್ಕಾಗಿ ಶಮಿ ಬೆಂಚ್ ಕಾದಿದ್ದರು.

ಆದರೆ, ಲೀಗ್ ಹಂತದಲ್ಲಿ ಬಾಂಗ್ಲಾದೇಶ ಎದುರಿನ ಪಂದ್ಯದಲ್ಲಿ ಹಾರ್ದಿಕ್ ಕಾಲಿಗೆ ಗಾಯವಾಗಿ ಹೊರಬಿದ್ದಾಗ ಶಮಿಗೆ ತಂಡದ ಬಾಗಿಲು ತೆರೆಯಿತು. ಠಾಕೂರ್ ಮತ್ತು ಆರ್. ಅಶ್ವಿನ್ ಅವರನ್ನು ಆಯ್ಕೆಗೆ ಪರಿಗಣಿಸದೇ ಶಮಿಗೆ ಅವಕಾಶ ನೀಡಲು ನಾಯಕ ರೋಹಿತ್, ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಮಾಡಿದ ನಿರ್ಧಾರವು ಫಲ ನೀಡಿತು.

ಅವರೆಲ್ಲರ ನಿರೀಕ್ಷೆಗೂ ಮೀರಿದ ಆಟವನ್ನು ಶಮಿ ಆಡುತ್ತಿದ್ದಾರೆ. ಅವರು ಅಪ್ಪಟ ಮಧ್ಯಮವೇಗಿ. ಬ್ಯಾಟ್ಸ್‌ಮನ್ ಅಲ್ಲ. ಆದರೆ, ವಿಕೆಟ್‌ಗಳನ್ನು ಉರುಳಿಸುವ ಮೂಲಕ ಎದುರಾಳಿ ಬ್ಯಾಟರ್‌ಗಳಿಗೆ ಸಿಂಹಸ್ವಪ್ನರಾಗಿದ್ದಾರೆ.

'ಶಮಿ ಗಳಿಸಿದ ಪ್ರತಿಯೊಂದು ವಿಕೆಟ್‌ಗಳನ್ನು ನೋಡಿ. ಅವರ ಎಸೆತಗಳ ನಿಖರತೆ ಅರ್ಥವಾಗುತ್ತದೆ. ಅವರ ಕೈಯಿಂದ ಹೊರಟ ಚೆಂಡಿನ ಸೀಮ್ ಒಂದಿಷ್ಟೂ ಲಯ ತಪ್ಪುವುದಿಲ್ಲ. ಪಿಚ್‌ಗೆ ಬಿರುಸಾಗಿ ಚೆಂಡನ್ನೂ ಅಪ್ಪಳಿಸುವುದಿಲ್ಲ. ಡೆವೊನ್ ಕಾನ್ವೆ ವಿಕೆಟ್ ಪಡೆದ ಎಸೆತವನ್ನು ನೋಡಿ' ಎಂದು ಶಮಿ ಅವರ ಬಾಲ್ಯದ ಕೋಚ್ ಮೊಹಮ್ಮದ್ ಬದರುದ್ದೀನ್ ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

2013ರಲ್ಲಿ ದೆಹಲಿಯಲ್ಲಿ ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ಏಕದಿನ ಕ್ರಿಕೆಟ್‌ಗೆ ಶಮಿ ಪದಾರ್ಪಣೆ ಮಾಡಿದ್ದರು. ಕಳೆದ ಒಂದು ದಶಕದಲ್ಲಿ ಅವರು ವೃತ್ತಿ ಮತ್ತು ವೈಯಕ್ತಿಕ ಬದುಕಿನಲ್ಲಿ ಹತ್ತಾರು ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ.

ಫಾರ್ಮ್ ಕಳೆದುಕೊಂಡು ಸ್ಥಾನ ಕಳೆದುಕೊಂಡಿದ್ದು, ಗಾಯದಿಂದ ಸ್ಥಾನ ಕಳೆದುಕೊಂಡಿದ್ದು ಮತ್ತು ಅಪಘಾತದ ಗಾಯವೂ ಕಾಡಿತು. ಸಾಲದ್ದಕ್ಕೆ ಪತ್ನಿಯೊಂದಿಗಿನ ಕಲಹವು ಸಾಮಾಜಿಕ ಮಾಧ್ಯಮಗಳಲ್ಲಿ ದೊಡ್ಡದಾಗಿ ಸುದ್ದಿ ಮಾಡಿತು. ಬೆಟ್ಟಿಂಗ್ ಆರೋಪಗಳೂ ಕಾಡಿದವು. ಇವೆಲ್ಲದರಿಂದ ಬೇಸತ್ತು ಆತ್ಮಹತ್ಯೆಗೂ ಯತ್ನಿಸಿದ್ದಾಗಿ ಸ್ವತಃ ಶಮಿ ಅವರೇ ಮೂರು ವರ್ಷಗಳ ಹಿಂದೆ ವಿಡಿಯೋವೊಂದರಲ್ಲಿ ಹೇಳಿಕೊಂಡಿದ್ದರು. ಅವರ ಕುಟುಂಬ, ಬಂಧು ಬಳಗ ಮತ್ತು ಸ್ನೇಹಿತರ ಬೆಂಬಲದಿಂದ ಗಟ್ಟಿಯಾಗಿ ನಿಂತು ಎಲ್ಲವನ್ನೂ ಎದುರಿಸಿದರು. ವಿಶ್ವಕಪ್ ಕ್ರಿಕೆಟ್‌ನಲ್ಲಿ ಅತಿ ವೇಗವಾಗಿ 50 ವಿಕೆಟ್ ಗಳಿಸಿದ ಸಾಧನೆಯನ್ನೂ ಮಾಡಿದರು.

ಇದೀಗ ಅವರು ಈ ದುಃಖ ದುಮ್ಮಾನಗಳ ಬೆಂಕಿಯಲ್ಲಿ ಹಾದು ಬಂದ ಅಪ್ಪಟ ಚಿನ್ನದಂತೆ ಕಂಗೊಳಿಸುತ್ತಿದ್ದಾರೆ. ಅವರ ಪ್ರಖರ ಬೆಳಕು ಎದುರಾಳಿ ಬ್ಯಾಟರ್‌ಗಳ ಕಣ್ಣುಗಳನ್ನು ಕುಕ್ಕುತ್ತಿವೆ.

ಮುಂಬೈನಲ್ಲಿ ನ್ಯೂಜಿಲೆಂಡ್ ಎದುರಿನ ಸೆಮಿಫೈನಲ್ ಪಂದ್ಯದಲ್ಲಿ ವಿಕೆಟ್ ಪಡೆದಾಗ ಮೊಹಮ್ಮದ್ ಶಮಿ ಅವರ ಸಂಭ್ರಮ–ಪಿಟಿಐ ಚಿತ್ರ

ಎಚ್‌ಎಎಲ್ ತಂಡ ಜಯಭೇರಿ

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಎಚ್‌ಎಎಲ್ ತಂಡದ ಆಟಗಾರರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4–0ಯಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿದರು.

ಗುರುವಾರ ನಡೆದ ಪಂದ್ಯದಲ್ಲಿ ವರೀಸ್ ಅಹಮ್ಮದ್ ಭಟ್ (16ನೇ ನಿ), ಲಕ್ಪಾ ನಾರ್ಬು ಶೆರ್ಪಾ (50ನೇ), ಎ. ದಿವಾಕರ್ (67, 87ನೇ) ಅವರು ಎಚ್‌ಎಎಲ್ ಪರ ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು 1–0ಯಿಂದ ಎಫ್‌ಸಿ ಡೆಕ್ಕನ್ ತಂಡದ ವಿರುದ್ಧ ಗೆಲುವು ಸಾಧಿಸಿತು. ಚೆಸ್ಟರ್ ಪೌಲ್ ಲಿಂಗ್ಡೋ (76ನೇ) ಯುನೈಟೆಡ್ ಪರ ಗೆಲುವಿನ ಗೋಲು ಗಳಿಸಿದರು.

ಫುಟ್‌ಬಾಲ್: ಭಾರತಕ್ಕೆ ಗೆಲುವು

ಕುವೈತ್ ಸಿಟಿ (ಪಿಟಿಐ): ಭಾರತ ತಂಡವು ಫಿಫಾ ವಿಶ್ವಕಪ್ ಕ್ವಾಲಿಫೈಯರ್ಸ್ ಎರಡನೇ ಸುತ್ತಿನ 'ಎ' ಗುಂಪಿನ ಪಂದ್ಯದಲ್ಲಿ ಗುರುವಾರ 1–0 ಗೋಲಿನಿಂದ ಕುವೈತ್ ತಂಡವನ್ನು ಮಣಿಸಿತು.

ಮನ್ವೀರ್ ಸಿಂಗ್ 75ನೇ ನಿಮಿಷದಲ್ಲಿ ಗೆಲುವಿನ ಗೋಲು ತಂದಿತ್ತರು. ಭಾರತ ತಂಡ ತನ್ನ ಮುಂದಿನ ಪಂದ್ಯದಲ್ಲಿ ನ.21 ರಂದು ಭುವನೇಶ್ವರದಲ್ಲಿ ಕತಾರ್ ವಿರುದ್ಧ ಹಣಾಹಣಿ ನಡೆಸಲಿದೆ.

ಪಾಕ್ ತಂಡಕ್ಕೆ ಹಫೀಜ್ ನಿರ್ದೇಶಕ

ಕರಾಚಿ (ಪಿಟಿಐ): ಪಾಕ್ ಟೆಸ್ಟ್ ತಂಡದ ಮಾಜಿ ನಾಯಕ ಮೊಹಮ್ಮದ್ ಹಫೀಜ್ ಅವರನ್ನು ಪಾಕಿಸ್ತಾನ ತಂಡದ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದೆ. ತಮ್ಮ ನೇಮಕಕ್ಕೆ ಸಂತಸ ವ್ಯಕ್ತಪಡಿಸಿರುವ ಹಫೀಜ್ ಎಲ್ಲರ ಜೊತೆಗೂಡಿ ತಂಡದ ಯಶಸ್ಸಿಗೆ ಶ್ರಮಿಸುವುದಾಗಿ ಹೇಳಿದ್ದಾರೆ.

ಏಕದಿನ ವಿಶ್ವಕಪ್ ಲೀಗ್ ಹಂತದಲ್ಲೇ ತಂಡದ ನಿರ್ಗಮನದ ನಂತರ ತಂಡವನ್ನು ಪುನರ್‌ರೂಪಿಸುವ ಹೊಣೆಯನ್ನು ಹಫೀಜ್ ಹೆಗಲಿಗೆ ವಹಿಸಲಾಗಿದೆ.

ಪಿಸಿಬಿ ಅಧ್ಯಕ್ಷ ಝಕಾ ಅಶ್ರಫ್ ಅವರು ಲಾಹೋರ್‌ನಲ್ಲಿ ತಂಡದ ನಿರ್ಗಮಿತ ನಾಯಕ ಬಾಬರ್ ಆಜಂ ಅವರನ್ನು ಬುಧವಾರ ಭೇಟಿ ಮಾಡಿ ವಿಶ್ವಕಪ್‌ನಲ್ಲಿ ತಂಡದ ಹಿನ್ನಡೆಗೆ ವಿವರಣೆ ಕೇಳಿದ ಬಳಿಕ ಹಫೀಜ್ ನೇಮಕ ನಿರ್ಧಾರ ಹೊರಬಿದ್ದಿದೆ. ಈ ಭೇಟಿಯ ಬೆನ್ನಲ್ಲೇ, ಮೂರೂ ಮಾದರಿಗಳಲ್ಲಿ ತಂಡದ ನಾಯಕ ಸ್ಥಾನ ತೊರೆಯುವುದಾಗಿ ಬಾಬರ್ ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪ್ರಕಟಿಸಿದ್ದರು.

ಟೆಸ್ಟ್ ತಂಡಕ್ಕೆ ಶಾನ್ ಮಸೂದ್ ಅವರನ್ನು ನಾಯಕನನ್ನಾಗಿ ನೇಮಕ ಮಾಡಲಾಗಿದೆ. ಟಿ–20 ಕ್ರಿಕೆಟ್ ತಂಡಕ್ಕೆ ಶಹೀನ್ ಶಾ ಅಫ್ರಿದಿ ಅವರಿಗೆ ನಾಯಕತ್ವದ ಹೊಣೆ ವಹಿಸಲಾಗಿದೆ.

ಜಪಾನ್ ಮಾಸ್ಟರ್ಸ್: ಪ್ರಣಯ್‌ಗೆ ನಿರಾಸೆ

ಕುಮಾಮೊಟೊ, ಜಪಾನ್ (ಪಿಟಿಐ): ಭಾರತದ ಬ್ಯಾಡ್ಮಿಂಟನ್‌ಪಟು ಎಚ್.ಎಸ್. ಪ್ರಣಯ್ ಜಪಾನ್ ಮಾಸ್ಟರ್ಸ್ ಸೂಪರ್ 500 ಟೂರ್ನಿಯ ಪುರುಷರ ಸಿಂಗಲ್ಸ್‌ನ ಎರಡನೇ ಸುತ್ತಿನಲ್ಲಿ ನಿರ್ಗಮಿಸುವುದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲು ಅಂತ್ಯಗೊಂಡಿದೆ.

ಗುರುವಾರ ನಡೆದ ಪಂದ್ಯದಲ್ಲಿ ಏಷ್ಯನ್ ಕ್ರೀಡಾಕೂಟದ ಕಂಚಿನ ಪದಕ ವಿಜೇತ ಪ್ರಣಯ್ 21-19, 16-21, 19-21ರಿಂದ ಚೀನಾ ತೈಪೆಯ ಚೌ ಟಿಯೆನ್ ಚೆನ್ ವಿರುದ್ಧ ನಿರಾಸೆ ಅನುಭವಿಸಿದರು.

ಟಿಟಿ: ರಕ್ಷಿತ್, ಯಶಸ್ವಿನಿಗೆ ಪ್ರಶಸ್ತಿ

ಬೆಂಗಳೂರು: ರಕ್ಷಿತ್ ಆರ್.ಬಿ ಮತ್ತು ಯಶಸ್ವಿನಿ ಡಿ. ಘೋರ್ಪಡೆ ಅವರು ಮಲ್ಲೇಶ್ವರಂ ಅಸೋಸಿಯೇಷನ್‌ನಲ್ಲಿ ನಡೆಯುತ್ತಿರುವ ಸಿವಿಎಲ್ ಶಾಸ್ತ್ರಿ ಸ್ಮರಣಾರ್ಥ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.



ಟ್ರೋಫಿಯೊಂದಿಗೆ ಯಶಸ್ವಿನಿ ಮತ್ತು ರಕ್ಷಿತ್ ಆರ್.ಬಿ

ಗುರುವಾರ ನಡೆದ ಪುರುಷರ ಫೈನಲ್‌ನಲ್ಲಿ ರಕ್ಷಿತ್ 11-9, 11-5, 11-6, 11-9ರಿಂದ ಸೌಮ್ಯಾದ್ರಿ ಭಟ್ಟಾಚಾರ್ಯ ಅವರನ್ನು ಮಣಿಸಿದರು.

ಯಶಸ್ವಿನಿ 11-6, 9-11, 11-3, 11-13, 6-11, 11-7, 11-1ರಿಂದ ದೇಶ್ನಾ ಎಂ. ವಂಶಿಕಾ ಅವರನ್ನು ಸೋಲಿಸಿದರು.

ಶೂಟಿಂಗ್: ಆಯ್ಕೆ ನೀತಿ ಮಾರ್ಪಾಡು

ನವದೆಹಲಿ (ಪಿಟಿಐ): ಪ್ಯಾರಿಸ್ ಒಲಿಂಪಿಕ್ ಕ್ರೀಡೆಗಳಿಗೆ ಆಯ್ಕೆ ನೀತಿಯಲ್ಲಿ ಮಹತ್ವದ ಬದಲಾವಣೆ ತಂದಿರುವ ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆಯು (ಎನ್‌ಆರ್‌ಎಐ) 'ಫೈರ್ ಆರ್ಮ್ಸ್' ವಿಭಾಗದಲ್ಲಿ ಒಲಿಂಪಿಕ್ ಕೋಟಾ ವಿಜೇತರಿಗೆ ಕೇವಲ ಎರಡು ಬೋನಸ್ ಪಾಯಿಂಟ್‌ಗಳನ್ನು ಮತ್ತು 'ಏರ್ ವೆಪನ್ಸ್' ವಿಭಾಗದ ಕೋಟಾ ವಿಜೇತರಿಗೆ ಬರೇ ಒಂದು ಬೋನಸ್ ಪಾಯಿಂಟ್ ನೀಡಲಿದೆ.

ಈ ಹಿಂದೆ ಒಲಿಂಪಿಕ್ ಕೋಟಾ ವಿಜೇತ ಶೂಟರ್, ವಿಶ್ವ ಚಾಂಪಿಯನ್‌ಷಿಪ್ ಚಿನ್ನ ಗೆದ್ದಲ್ಲಿ 10 ಬೋನಸ್ ಪಾಯಿಂಟ್ ಗಳಿಸುತ್ತಿದ್ದರು. ನಾಲ್ಕನೇ ಸ್ಥಾನ ಪಡೆದವ ಶೂಟರ್ ಐದು ಪಾಯಿಂಟ್ ಪಡೆಯುತ್ತಿದ್ದರು. ವಿಶ್ವಕಪ್‌ನಲ್ಲಿ ಚಿನ್ನ ಗೆದ್ದಲ್ಲಿ ಆರು ಬೋನಸ್ ಪಾಯಿಂಟ್ಸ್, ಬೆಳ್ಳಿ ಗೆದ್ದಲ್ಲಿ ನಾಲ್ಕು ಮತ್ತು ಕಂಚಿನ ಪದಕ ಗೆದ್ದಲ್ಲಿ ಎರಡು ಪಾಯಿಂಟ್ಸ್ ಸಂಪಾದಿಸುತ್ತಿದ್ದರು. ಒಲಿಂಪಿಕ್ ಕೋಟಾ ಪಡೆದ ಶೂಟರ್‌ಗಳು, ವಿಶ್ವ ಕಪ್‌ಗಳು, ವಿಶ್ವ ಚಾಂಪಿಯನ್‌ಷಿಪ್‌ಗಳು ಮತ್ತು ಏಷ್ಯನ್ ಕೂಟಗಳಲ್ಲಿ ಗಳಿಸಿದ ಈ ಬೋನಸ್ ಪಾಯಿಂಟ್ಸ್‌ಗಳಿಂದಾಗಿ, ಒಲಿಂಪಿಕ್ ಆಕಾಂಕ್ಷಿ ಶೂಟರ್‌ಗಳಿಗಿಂತ ಬಹಳ ಅನುಕೂಲ ಪಡೆಯುತ್ತಿದ್ದರು. ಹೆಚ್ಚಿನ ಬೋನಸ್ ಪಾಯಿಂಟ್‌ಗಳ ಕಾರಣ ಒಲಿಂಪಿಕ್ಸ್‌ಗೆ ತಂಡದ ಟ್ರಯಲ್ಸ್ ವೇಳೆ ಕೋಟಾ ವಿಜೇತರ ಮತ್ತು ಇತರ ಆಕಾಂಕ್ಷಿ ಶೂಟರ್‌ಗಳ ನಡುವೆ ಹೆಚ್ಚು ಅಂತರ ಇರುತಿತ್ತು.

ತನ್ನದೇ ನಿಯಮಾವಳಿಯ ಪರಿಣಾಮ ಫೆಡರೇಷನ್ ಕೂಡ ಟ್ರಯಲ್ಸ್ ವೇಳೆ ಅಸಹಾಯಕವಾಗಿದ್ದು, ಹೆಚ್ಚು ಪಾಯಿಂಟ್ಸ್ ಪಡೆಯುವ ಶೂಟರ್‌ಗೆ ಅವಕಾಶ ನೀಡಬೇಕಾಗುತಿತ್ತು. ಒಲಿಂಪಿಕ್ಸ್ ತಂಡಕ್ಕೆ ಆಯ್ಕೆಯಾಗಲು ಬಯಸಿದ್ದ ಶೂಟಿಂಗ್ ಸ್ಪರ್ಧಿ ಒಳ್ಳೆಯ ಫಾರ್ಮ್ (ಲಯ)ನಲ್ಲಿದರೂ ಅವಕಾಶವಂಚಿತರಾಗುತ್ತಿದ್ದರು. ಆದರೆ ಶೂಟರ್‌ಗಳು ಹಿಂದಿನ ಎರಡು ಒಲಿಂಪಿಕ್ಸ್‌ಗಳಲ್ಲಿ (2016ರ ರಿಯೊ ಒಲಿಂಪಿಕ್ಸ್ ಮತ್ತು 2020ರ ಟೋಕಿಯೊ ಒಲಿಂಪಿಕ್ಸ್) ಒಂದೂ ಪದಕ ಗೆಲ್ಲಲಾಗದ ಕಾರಣ ರೈಫಲ್ ಅಸೋಸಿಯೇಷನ್ ತನ್ನ ನಿಯಮಾವಳಿ ಬದಲಿಸಿದೆ.